ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಭಾನುವಾರ, 29 ಮಾರ್ಚ್ 2026

ಸಂಪುಟ 48, ಸಂಚಿಕೆ 10, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com


Hosadigantha Digital



ಎಸ್-400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ವಿಸ್ತರಣೆ

| 02

ನಕ್ಸಲ್ ಪಿಡುಗು ನಿರ್ನಾಮದ ಬಗ್ಗೆ ನಾಳೆ ಲೋಕ ಚರ್ಚೆ



| 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ಕೃಷಿಕನಿಗೆ ದುರ್ಭಿಕ್ಷವಿಲ್ಲ. ಮೌನವಾಗಿರುವವನಿಗೆ ಕಲಹವಿಲ್ಲ. ಜಾಗೃತನಾಗಿರುವವನಿಗೆ ಭಯವಿಲ್ಲ.

▲ಸುಭಾಷಿತ

ರಂಗಭೂಮಿ; ಎಡವಟ್ಟಿನಲ್ಲಿಯೂ ರಸ!

ವಕ್ರದೃಷ್ಟಿ

• ಎಸ್.ರಾಮನಾಥ್

• ಪುಟ ೬

ಕಿರುಸುದ್ದಿ

ಮೈಸೂರು: 12 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆ

• **ಮೈಸೂರು:** ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಪೊಲೀಸರು 12 ಕೋಟಿ ರೂಪಾಯಿ ಮೌಲ್ಯದ ಡ್ರಗ್ ದಾಸ್ತಾನು ಪತ್ತೆ ಮಾಡಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರ ಗ್ರಾಮದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೈಸೂರು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ. ಮೈಸೂರು ಸಿದ್ಧಿಖಿ ಮೊಹಲ್ಲಾ ನಿವಾಸಿ ಮೊಹಮ್ಮದ್ ಇರ್ಫಾನ್ ಮತ್ತು ಹುಣಸೂರಿನ ಮೊಹಮ್ಮದ್ ಇರ್ಫಾನ್ ಬಂಧಿತ ಆರೋಪಿಗಳು.

• ಪುಟ ೫

ಹುಸಿ ಬಾಂಬ್ ಬೆದರಿಕೆ: ಮೈಸೂರಲ್ಲಿ ಆರೋಪಿ ಸೆರೆ

• **ಮೈಸೂರು:** ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶಗಳನ್ನು ಕಳುಹಿಸಿ ರಾಜ್ಯದಲ್ಲಿ ಆತಂಕ ಸೃಷ್ಟಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದಿಲ್ಲಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ. ಮೈಸೂರಿನ ಬೃಂದಾವನ ಬಡಾವಣೆಯ 2ನೇ ಹಂತ, 6ನೇ ಕ್ರಾಸ್‌ನಲ್ಲಿರುವ ಮನೆಯೊಂದರಿಂದ ಕಾರ್ಯಾಚರಣೆ ನಡೆಸುತ್ತಿದ್ದ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ ಆರೋಪಿ. ಈತ ದೇಶದ ನಾನಾ ಭಾಗಗಳಿಗೆ ಒಟ್ಟು 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇಮೇಲ್ ಮಾಡಿ ಆತಂಕ ಸೃಷ್ಟಿಸಿದ್ದ.

• ಪುಟ ೪

ಕಾಂಗ್ರೆಸ್ ತಲೆಯಲ್ಲಿ ಮಾತ್ರ ಮನುವಾದ: ಛಲವಾದಿ

• ಪುಟ ೫

ಖಾಸಗಿ ಆಸ್ಪತ್ರೆಗಳಲ್ಲಿ ಒಪಿಡಿ ಚಿಕಿತ್ಸೆಗೆ ಮಾತ್ರ ಅವಕಾಶ

• ಪುಟ ೫

ಎರಡೂ ಕಡೆ ಗೆಲುವು: ಸಿಎಂ ಸಿದ್ದರಾಮಯ್ಯ

• ಪುಟ ೫

ರಾಮನವಮಿ ಮೆರವಣಿಗೆ ಮೇಲೆ ಕಿಡಿಗೇಡಿಗಳ ಕಲ್ಲು

• ಪುಟ ೭

ಛತ್ತೀಸ್‌ಗಢ: ಮೂವರು ಮಾವೋಗಳ ಶರಣಾಗತಿ

• ಪುಟ ೭

ಭಯೋತ್ಪಾದಕರಿಗೆ ಆಶ್ರಯ ಮುಂದುವರಿಕೆ: ಅಮೆರಿಕ ಎಚ್ಚರಿಕೆ

ಪಾಕ್ ಉಗ್ರರ ತಾಣ

• **ಹೊಸದಿಲ್ಲಿ:** ಪ್ರಮುಖವಾಗಿ ಜಮ್ಮು-ಕಾಶ್ಮೀರ ಸೇರಿ ಭಾರತವನ್ನು ಗುರಿಯಾಗಿಸಿಕೊಂಡಿರುವ ಪಾಕಿಸ್ತಾನ, ಭಯೋತ್ಪಾದಕ ಸಂಘಟನೆಗಳ ನಿರಂತರ ಚಟುವಟಿಕೆಯ ಕೇಂದ್ರವಾಗಿ ಮುಂದುವರಿದಿದೆ ಎಂದು ಅಮೆರಿಕ ಕಾಂಗ್ರೆಸ್‌ನ ಸಂಶೋಧನಾ ಸೇವೆ(ಸಿಆರ್‌ಎಸ್) ವರದಿ ಎಚ್ಚರಿಕೆ ನೀಡಿದೆ.


ಪಾಕಿಸ್ತಾನದ ಮಣ್ಣಿನಿಂದ ಕಾರ್ಯನಿರ್ವಹಿಸುತ್ತಿರುವ 15 ಸಂಘಟನೆಗಳನ್ನು ಗುರುತಿಸಿರುವ ಈ ವರದಿ ಮಾ.25ರಂದು ಬಿಡುಗಡೆಯಾಗಿದ್ದು, ಇವುಗಳಲ್ಲಿ ಹೆಚ್ಚಿನವುಗಳನ್ನು ಅಮೆರಿಕ ವಿದೇಶಿ ಭಯೋತ್ಪಾದಕ ಸಂಘಟನೆಗಳು ಎಂದು ಘೋಷಿಸಿದೆ. ಇದರಲ್ಲಿ ಲಷ್ಕರ್ -ಎ-ತೈಬಾ, ಜೈಶ್-ಎ-ಮೊಹಮ್ಮದ್, ಹರಕತ್ -ಉಲ್ ಜಿಹಾದ್ ಇಸ್ಲಾಮಿ, ಹರಕತ್ ಉಲ್-ಮುಜಾಹಿದ್ದೀನ್ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ನಂತಹ ಭಾರತ ಮತ್ತು ಕಾಶ್ಮೀರ ಕೇಂದ್ರಿತ ಗುಂಪುಗಳು ಸೇರಿವೆ. ಈ ಹಿಂದೆ ಹಲವು ಮಿಲಿಟರಿ ಕಾರ್ಯಾಚರಣೆಗಳು ಮತ್ತು 2014ರ ರಾಷ್ಟ್ರೀಯ ಕ್ರಿಯಾ ಯೋಜನೆ(ಎನ್‌ಎಪಿ) ನಡೆದಿದ್ದರೂ, ಈ ಗುಂಪುಗಳು ಕಾರ್ಯಾಚರಣೆ ಮುಂದುವರಿಸಿವೆ.



ಲಷ್ಕರ್-ಎ-ತೈಬಾ ಚಟುವಟಿಕೆಗಳು: 1980ರ ದಶಕದ ಕೊನೆಯಲ್ಲಿ ರಚನೆಯಾದ ಮತ್ತು ಹಫೀಜ್ ಸಯೀದ್ ನೇತೃತ್ವದ ಲಷ್ಕ ರ್-ಎ-ತೈಬಾ, ಪಂಜಾಬ್ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನೆಲೆಗಳನ್ನು ಹೊಂದಿದೆ.

166 ಜನರ ಸಾವಿಗೆ ಕಾರಣವಾದ 2008ರ ಮುಂಬೈ ದಾಳಿಯನ್ನು ಸಂಘಟಿಸಿದ್ದ ಈ ಗುಂಪು, ನಿರ್ಬಂಧಗಳಿಂದ ತಪ್ಪಿಸಿಕೊಳ್ಳಲು ತನ್ನ ಹೆಸರನ್ನು ಜಮಾತ್-ಉದ್-ದವಾ ಎಂದು ಬದಲಾಯಿಸಿಕೊಂಡಿದೆ. ಇದು ಪ್ರಸ್ತುತ ಸಾವಿರಾರು ಉಗ್ರರನ್ನು ಹೊಂದಿದ್ದು, 2001ರಿಂದ ವಿದೇಶಿ ಭಯೋತ್ಪಾದಕ ಸಂಘಟನೆ ಎಂದು ಗುರುತಿಸಲ್ಪಟ್ಟಿದೆ.

ಜೈಶ್-ಎ-ಮೊಹಮ್ಮದ್ ಕಾರ್ಯಾಚರಣೆ: 2000ರಲ್ಲಿ ಮಸೂದ್ ಅಜರ್‌ನಿಂದ ಸ್ಥಾಪಿಸಲ್ಪಟ್ಟ ಜೈಶ್-ಎ-ಮೊಹಮ್ಮದ್, ಭಾರತದ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸುವ ಗುರಿ ಹೊಂದಿದೆ. ಈ ಗುಂಪು ಭಾರತ, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಾದ್ಯಂತ ಸುಮಾರು 500 ಸಶಸ್ತ್ರ ಬೆಂಬಲಿಗರನ್ನು ಹೊಂದಿದೆ. ಇದು 2001ರ ಭಾರತೀಯ ಸಂಸತ್ತಿನ ಮೇಲಿನ ದಾಳಿಯಲ್ಲಿ ಭಾಗಿಯಾಗಿತ್ತು ಮತ್ತು ಅಮೆರಿಕದ ವಿರುದ್ಧ ಯುದ್ಧ ಘೋಷಿಸಿದೆ.



ಆಂತರಿಕ ಭದ್ರತೆಗೆ ಸವಾಲು

ದಕ್ಷಿಣ ಏಷ್ಯಾ ತಜ್ಞ ಕೆ. ಅಲನ್ ಕ್ರಾನ್‌ಸ್ಟಾಡ್ ಸಿದ್ಧಪಡಿಸಿದ ಈ ವರದಿ, ಪಾಕಿಸ್ತಾನದ ಗುಂಪುಗಳನ್ನು 5 ವಿಧಗಳಾಗಿ ವರ್ಗೀಕರಿಸಿದೆ. ಪಾಕಿಸ್ತಾನ, ಬಲೂಚಿಸ್ತಾನ ಮತ್ತು ಖೈಬರ್ ಪಖ್ತುನ್ವಾದಲ್ಲಿ ಆಂತರಿಕ ಹಿಂಸಾಚಾರವನ್ನು ಎದುರಿಸುತ್ತಿದ್ದರೂ, ಅಲ್ಲಿನ ಮದ್ರಸಾಗಳು ಉಗ್ರಗಾಮಿ ಸಿದ್ಧಾಂತವನ್ನು ಪೋಷಿಸುವ ಬೋಧನೆಗಳನ್ನು ಮುಂದುವರಿಸಿವೆ ಎಂದು ವರದಿ ತಿಳಿಸಿದೆ.

ಕಾಶ್ಮೀರ ಕೇಂದ್ರಿತ ಉಗ್ರಗಾಮಿತ್ವ



1989ರಲ್ಲಿ ಸ್ಥಾಪನೆಯಾದ ಮತ್ತು 2017ರಲ್ಲಿ ಅಮೆರಿಕದಿಂದ ಭಯೋತ್ಪಾದಕ ಗುಂಪು ಎಂದು ಘೋಷಿಸಲ್ಪಟ್ಟ ಹಿಜ್ಬುಲ್ ಮುಜಾಹಿದ್ದೀನ್, 1,500 ಸದಸ್ಯರ ಕೇಡರ್ ಹೊಂದಿದೆ. ಈ ಗುಂಪು ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರ್ಪಡೆಗೊಳಿಸಲು ಪ್ರಯತ್ನಿಸುತ್ತಿದೆ. ಈ ಪ್ರಾದೇಶಿಕ ಗುಂಪುಗಳು ಅಲ್ ಖೈದಾದಂತಹ ಜಾಗತಿಕ ಸಂಘಟನೆಗಳ ಜತೆಗೂಡಿ ಕಾರ್ಯನಿರ್ವಹಿಸುತ್ತಿವೆ.

ಪ್ರಾದೇಶಿಕ ಭದ್ರತೆಯ ಮೇಲೆ ಪರಿಣಾಮ

ಭಯೋತ್ಪಾದಕ ಚಟುವಟಿಕೆಗಳನ್ನು ತಡೆಗಟ್ಟಲು ಪಾಕಿಸ್ತಾನ 2023ರಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ. ಆದರೂ ಭಯೋತ್ಪಾದಕ ಮೂಲಸೌಕರ್ಯಗಳು ಇನ್ನೂ ಅಸ್ತಿತ್ವದಲ್ಲಿವೆ. ಪ್ರಾದೇಶಿಕ ಶಾಂತಿಗಾಗಿ ಈ ಗಡಿಯಾಚೆಗಿನ ಭಯೋತ್ಪಾದನೆಯನ್ನು ಹತ್ತಿಕ್ಕುವುದು ಅತ್ಯಗತ್ಯ ಎಂದು ಭಾರತ ಪ್ರತಿಪಾದಿಸಿದೆ. ಪಾಕಿಸ್ತಾನ ಈ ಜಾಲಗಳನ್ನು ನಿಯಂತ್ರಿಸಲು ವಿಫಲವಾಗಿರುವುದು, ನೆರೆಹೊರೆಯ ರಾಷ್ಟ್ರಗಳೊಂದಿಗೆ ಉದ್ವಿಗ್ನತೆ ಹೆಚ್ಚಿಸುತ್ತಿದೆ ಎಂದು ವರದಿಯಲ್ಲಿ ತೀರ್ಮಾನಕ್ಕೆ ಬರಲಾಗಿದೆ.

ಮಸ್ಕ್ ಇದ್ದರೆಂಬ ವರದಿ ತಳ್ಳಿಹಾಕಿದ ಜೈಸ್ವಾಲ್

ಮೋದಿ-ಟ್ರಂಪ್ ಮಧ್ಯೆ ಮಾತ್ರ ಮಾತು: ಎಂಇಎ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ದೂರವಾಣಿ ಕರೆಯಲ್ಲಿ ಬಿಲಿಯನೇರ್ ಉದ್ಯಮಿ ಎಲಾನ್ ಮಸ್ಕ್ ಇದ್ದರೆಂಬ ನ್ಯೂಯಾರ್ಕ್ ಟೈಮ್ಸ್ ವರದಿಯನ್ನು ಶನಿವಾರ ತಳ್ಳಿಹಾಕಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ), ದೂರವಾಣಿ ಕರೆಯಲ್ಲಿ ಇಬ್ಬರು ನಾಯಕರಷ್ಟೇ ಮಾತುಕತೆ ನಡೆಸಿದ್ದಾರೆಂದು ಸ್ಪಷ್ಟಪಡಿಸಿದೆ.



ಮಂಗಳವಾರದ ದೂರವಾಣಿ ಕರೆಯಲ್ಲಿ ಇಬ್ಬರು ನಾಯಕರ ನಡುವೆಯಷ್ಟೇ ಮಾತುಕತೆ ನಡೆದಿದೆ ಎಂದು ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಶನಿವಾರ ಸ್ಪಷ್ಟಪಡಿಸಿದ್ದಾರೆ.

ಟ್ರಂಪ್ ಜತೆಗಷ್ಟೇ ಮಾತುಕತೆ: ನಾವು (ನ್ಯೂಯಾರ್ಕ್ ಟೈಮ್ಸ್) ವರದಿಯನ್ನು ನೋಡಿದ್ದೇವೆ. ಮಾ.24ರ ದೂರವಾಣಿ ಸಂಭಾಷಣೆಯಲ್ಲಿ ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ಅವರ ನಡುವೆಯಷ್ಟೇ ನಡೆದಿದೆ. ಈ ಹಿಂದೆಯೇ ಹೇಳಿದಂತೆ ಮಧ್ಯಪ್ರಾಚ್ಯದ ಪರಿಸ್ಥಿತಿಯ ಕುರಿತು ಉಭಯ ನಾಯಕರು ಪರಸ್ಪರ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದೇವೆ ಎಂದು ಜೈಸ್ವಾಲ್ ತಿಳಿಸಿದ್ದಾರೆ.

ವಾಷಿಂಗ್ಟನ್ ಸ್ಪಷ್ಟನೆ ನೀಡಲಿ: ನಮ್ಮ ಪ್ರಧಾನಿ ಟ್ರಂಪ್ ಅವರೊಂದಿಗಷ್ಟೇ ಮಾತನಾಡಿದ್ದಾರೆ. ಪ್ರಧಾನಿ ಜತೆ ಇನ್ಯಾರೂ ಮಾತುಕತೆ ನಡೆಸಿಲ್ಲ. ಕೊಠಡಿಯಲ್ಲಿ ಇನ್ಯಾರಾದರೂ ಇದ್ದರೇ ಅಥವಾ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದರೇ ಎಂಬ ಕುರಿತು ವಾಷಿಂಗ್ಟನ್ ಸ್ಪಷ್ಟನೆ ನೀಡಬೇಕಿದೆ ಎಂದು ಜೈಸ್ವಾಲ್ ಹೇಳಿದ್ದಾರೆ.

➡ಪುಟ ೪

ಯುಎಇಯಲ್ಲಿ ಐವರು ಭಾರತೀಯರಿಗೆ ಗಾಯ

ಸಮರಕ್ಕೆ ಹೌತಿ ಬಂಡುಕೋರರ ಸೇರ್ಪಡೆ

• ಪುಟ ೭



ಮೋದಿ, ಟ್ರಂಪ್ ಮಾತುಕತೆ ಫಲಪ್ರದ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಮಂಗಳವಾರ ಫಲಪ್ರದ ಮಾತುಕತೆ ನಡೆಸಿದ್ದಾರೆ ಎಂದು ಅಮೆರಿಕದ ಶ್ವೇತಭವನ ಶುಕ್ರವಾರ ತಡರಾತ್ರಿ ತಿಳಿಸಿದೆ. ಪ್ರಧಾನಿ ಮೋದಿ ಅವರೊಂದಿಗೆ ಅಧ್ಯಕ್ಷ ಟ್ರಂಪ್ ಅತ್ಯುತ್ತಮ ಬಾಂಧವ್ಯ ಹೊಂದಿದ್ದಾರೆ. ಇದು ಫಲಪ್ರದ ಮಾತುಕತೆ ಆಗಿತ್ತು ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕ್ಯಾರೊಲಿನ್ ಲೆವಿಟ್ ಹೇಳಿದ್ದಾರೆ. ಫೆ.28ರಂದು ಇಸ್ರೇಲ್ ಮತ್ತು ಅಮೆರಿಕ ಸೇನೆಗಳು ಇರಾನ್ ಮೇಲೆ ಜಂಟಿ ಬಾಂಬ್ ದಾಳಿ ಆರಂಭಿಸಿದ ಬಳಿಕ ಉಭಯ ನಾಯಕರು ಮೊದಲ ಬಾರಿಗೆ ಮಾತುಕತೆ ನಡೆಸಿದ್ದಾರೆ.

ಸೌದಿ ರಾಜಕುಮಾರನ ಜತೆ ಮೋದಿ ಚರ್ಚೆ

ಪ್ರಧಾನಿ ಮೋದಿಯವರು ಶನಿವಾರ ಸೌದಿ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್‌ರೊಂದಿಗೆ ದೂರವಾಣಿ ಮಾತುಕತೆ ನಡೆಸಿದ್ದು, ಪ್ರಾದೇಶಿಕ ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿ ಖಂಡಿಸಿದ್ದಾರೆ.

➡ಪುಟ ೪

ಸಭಾಭವನ ಉದ್ಘಾಟನೆ, ತುಲಾಭಾರದಲ್ಲಿ ಡಾ.ಭಾಗ್ವತ್ ಹೇಳಿಕೆ

ಭಾರತದಿಂದ ವಿಶ್ವ ಗೆಲ್ಲುವ ಕಾರ್ಯ

• **ಚಿಕ್ಕೋಡಿ:** ಸಮಾಜ ಕೇವಲ ಕಾನೂನಿನ ಆಧಾರದ ಮೇಲೆ ನಡೆಯುವುದಿಲ್ಲ. ಪರಸ್ಪರ ನಂಬಿಕೆ, ಸಹಾನುಭೂತಿ ಮತ್ತು ಆಪ್ತಭಾವದ ಮೇಲೆ ನಿಂತಿದೆ. ಇಂತಹ ನಂಬಿಕೆಯಿಂದ ಭಾರತ ವಿಶ್ವವನ್ನು ಗೆಲ್ಲುವ ಕೆಲಸ ಮಾಡುತ್ತಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದರು.

ತಾಲೂಕಿನ ಯಡೂರ ಗ್ರಾಮದ ವೀರಭದ್ರೇಶ್ವರ ದೇವಸ್ಥಾನ ಹಾಗೂ ಕಾಡದೇವರ ಮಠದ ವತಿಯಿಂದ ನಿರ್ಮಿಸಿದ ಗುರುಕುಲದ ಸಭಾಭವನ ಕಟ್ಟಡವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಜಗತ್ತಿಗೆ ಆಪ್ತಭಾವದ ಮಾರ್ಗ ತೋರಿಸಿದಾಗ ಮಾತ್ರ ನಿಜವಾದ 'ವಿಶ್ವಗುರು'ವಾಗಲು ಸಾಧ್ಯವಿದೆ. ಭಾರತೀಯ ಪರಂಪರೆಯ ಬ್ರಹ್ಮ ಮತ್ತು ಈಶ್ವರ ಪರಿಕಲ್ಪನೆ ಹಾಗೂ ಯೂನಿವರ್ಸಲ್ ಕಾನ್ಷಿಯಸ್‌ನೆಸ್ ನಡುವೆ ಸಾಮ್ಯತೆ ಇದೆ.

➡ಪುಟ ೪



ಟಿಎಂಸಿ ಸರ್ಕಾರದ ವಿರುದ್ಧ ಆರೋಪ ಪಟ್ಟಿ ಬಿಡುಗಡೆ ಮಾಡಿದ ಶಾ


ಭದ್ರತೆಗೆ ಸಂಬಂಧಿತ ಚುನಾವಣೆ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಬಂಗಾಳಕ್ಕೆ ಸೀಮಿತ ಹೋರಾಟವಲ್ಲ, ಬದಲಾಗಿ ದೇಶದ ಭದ್ರತೆಗಾಗಿ ನಡೆಯುವ ಹೋರಾಟವೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಟಿಎಂಸಿ ಸರಕಾರದ ವಿರುದ್ಧ ಆರೋಪ ಪಟ್ಟಿ ಬಿಡುಗಡೆ ಮಾಡುವ ಮೂಲಕ ಬಂಗಾಳದಲ್ಲಿ ಬಿಜೆಪಿ ಪರ ಚುನಾವಣಾ ಪ್ರಚಾರಕ್ಕೆ ಸಚಿವ ಶಾ ರಂಗು ನೀಡಿದ್ದಾರೆ.

ಟಿಎಂಸಿಯ ತುಷ್ಟೀಕರಣ ರಾಜನೀತಿ, ಭ್ರಷ್ಟಾಚಾರ ಮತ್ತು ರಾಜಕೀಯ ಹಿಂಸಾಚಾರಗಳಿಂದಾಗಿ ಕಳೆದ 15 ವರ್ಷಗಳಲ್ಲಿ ಪಶ್ಚಿಮ ಬಂಗಾಳವು ಅಕ್ರಮ ನುಸುಳುವಿಕೆಗೆ ದೇಶದ ಪ್ರಧಾನ ಕಾರಿಡಾರ್ ಆಗಿ ಪರಿವರ್ತಿತವಾಗಿದೆ ಎಂದು ಆರೋಪಿಸುವ ಮೂಲಕ, ತಾನು ಪ.ಬಂಗಾಳದ ಜನಸಾಮಾನ್ಯರ ಪರ ಹೋರಾಟಗಾರ್ತಿ ಎಂದು ಬಿಂಬಿಸಿಕೊಂಡು ಬಂದಿರುವ ಮಮತಾ ಬ್ಯಾನರ್ಜಿ ಇಮೇಜ್‌ಗೆ ಬಂಗಾಳದಲ್ಲೇ ಸಚಿವರು ಹೊಡೆತ ನೀಡಿದ್ದಾರೆ.

➡ಪುಟ ೪



ಗಡಿಗೆ ಬೇಲಿ ಹಾಕಲೂ ಬಿಡದ ಮಮತಾ

ಟಿಎಂಸಿ ಸರ್ಕಾರ ಅಕ್ರಮ ನುಸುಳುಕೋರರ ಮತ ಬ್ಯಾಂಕ್ ಸೃಷ್ಟಿಸುವ ದುರುದ್ದೇಶ ಹೊಂದಿದೆ. ಹಾಗಾಗಿಯೇ ಕೇಂದ್ರದ ಸತತ ಮನವಿ ಹೊರತೂ ಬಾಂಗ್ಲಾದೇಶ ಗಡಿಯುದ್ದಕ್ಕೂ ಭಾರತದ ಗಡಿಗೆ ತಂತಿಬೇಲಿ ಬಿಗಿಯಲು ಅಗತ್ಯವಿರುವ ಜಮೀನನ್ನು ಕೇಂದ್ರಕ್ಕೆ ನೀಡಿಲ್ಲ.

➡ಪುಟ ೪

ವೈರಮುಡಿ ಉತ್ಸವ ಅದ್ದೂರಿ



• **ಮೇಲುಕೋಟೆ:** ಶ್ರೀ ಚೆಲುವನಾರಾಯಣ ಸ್ವಾಮಿಯವರ ವಿಶ್ವವಿಖ್ಯಾತ ವೈರಮುಡಿ ಕಿರೀಟಧಾರಣ ಮಹೋತ್ಸವ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನವಾದ ಶನಿವಾರ ರಾತ್ರಿ ಲಕ್ಷಾಂತರ ಭಕ್ತರ ಜಯಘೋಷದೊಂದಿಗೆ ಅದ್ದೂರಿಯಾಗಿ ನೆರವೇರಿತು. ಪರಾಭವನಾಮ ಸಂವತ್ಸರದ ಮೀನ-ಚೈತ್ರಮಾಸದ ಪುಷ್ಯ ನಕ್ಷತ್ರದ ಶುಭದಿನಕೂಡಿದ ಬ್ರಹ್ಮೋತ್ಸವದ ನಾಲ್ಕನೇ ತಿರುನಾಳ್ ದಿನದಂದು ಸಾಕ್ಷಾತ್ ಭಗವಂತನದ್ದೆಂದೇ ಪ್ರತೀತಿಯಿರುವ ವೈರಮುಡಿ ಕಿರೀಟವನ್ನು ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢನಾದ ಶ್ರೀಚೆಲುವನಾರಾಯಣಸ್ವಾಮಿಗೆ ರಾತ್ರಿ 8 ಗಂಟೆಗೆ ತೊಡಿಸಲಾಯಿತು. ಇದಕ್ಕೂ ಮುನ್ನ ಗರುಡದೇವನ ಉತ್ಸವ ನಡೆದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಸಮಕ್ಷಮದಲ್ಲಿ ಮಹಾಮಂಗಳಾರತಿ ನೆರವೇರಿಸಿ, ಭಕ್ತರ ಗೋವಿಂದ ನಾಮ ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು.

• ವಿವರ ಪುಟ ೫

ಏಕತೆಯಿಂದ ಬಿಕ್ಕಟ್ಟು ಎದುರಿಸಿ: ಮೋದಿ



ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿದ ಪ್ರಧಾನಿ ಮೋದಿ.

• **ನೋಯ್ಡಾ:** ಜಾಗತಿಕ ಸವಾಲುಗಳನ್ನು ಎದುರಿಸಿ ಕೊಂಡು ವಿಕಸಿತ ಭಾರತ ಸಾಕಾರಗೊಳಿಸಲು 140 ಕೋಟಿ ಭಾರತೀಯರೊಳಗೆ ಏಕತೆ ಮತ್ತು ಸಾಮೂಹಿಕ ಪ್ರಯತ್ನಗಳ ಅಗತ್ಯವಿದೆ. ಸವಾಲುಗಳ ನಿಭಾಯಿಸಲು ಸಮರ್ಪಣಾ ಭಾವ ಮತ್ತು ಏಕತೆಯಿಂದ ದುಡಿಯುವಂತೆ ದೇಶವಾಸಿಗಳಿಗೆ ಕರೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಇದೇ ನಮ್ಮ ಬಲವೆಂದು ಹೇಳಿದ್ದಾರೆ.

ಪ.ಏಷ್ಯಾ ಬಿಕ್ಕಟ್ಟನ್ನು ಉಲ್ಲೇಖಿಸಿ, ಸರಕಾರ ಭಾರತದ ಹಿತಾಸಕ್ತಿ ಮತ್ತು ದೇಶದ ಕುಟುಂಬಗಳು ಹಾಗೂ ರೈತರ ಹಿತ ಕಾಯಲು ಪ್ರಾಧಾನ್ಯತೆ ನೀಡಿದೆ ಎಂದು ನುಡಿದರು.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ:2,39,500(2,31,500) ಅಪರಂಜಿ ಚಿನ್ನ 14,620(14,360) ಆಭರಣ ಚಿನ್ನ: 13,465(13,265) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1=₹93.97

ಆರೋಪಿಗಳ ಲೋಕದಲ್ಲಿ ಪೊಲೀಸರ ಕಾರುಬಾರು

ಶಿಸ್ತಿನ ಇಲಾಖೆಯ ಅಶಿಸ್ತಿನ ಸ್ಥಿತಿ



ಸಮಾಜದಲ್ಲಿ ಕಳ್ಳತನ ಮಾಡುವವರನ್ನು ಸೆರೆಹಿಡಿಯ ಬೇಕಿದ್ದ ಪೊಲೀಸರೇ ಇಂತಹ ಕೃತ್ಯದಲ್ಲಿ ಭಾಗಿಯಾಗುತ್ತಿರುವುದು ಕಳವಳದ ಸಂಗತಿ. ರಾಜ್ಯದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಅನೇಕ ಪೊಲೀಸರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಲಾಗಿದೆ. ಇದರ ನಡುವೆಯೂ ಲಂಚ ಪಡೆದು ಲೋಕಾಯುಕ್ತಕ್ಕೆ ಟ್ರ್ಯಾಪ್ ಆಗಿ ಇಲಾಖೆ ಗೌರವಕ್ಕೆ ಕುಂದುತರುತ್ತಿದ್ದಾರೆ. ದೇಶದಲ್ಲೇ ಕರ್ನಾಟಕ ಪೊಲೀಸರಿಗೆ ಉತ್ತಮ ಗೌರವ ಇತ್ತು. ಇಂತಹ ಪೊಲೀಸರಿಂದ ರಾಜ್ಯಕ್ಕೆ ಹಾಗೂ ಪೊಲೀಸ್ ಇಲಾಖೆಯೂ ತಲೆತಗ್ಗಿಸುವ ಸ್ಥಿತಿ ನಿರ್ಮಾಣವಾಗಿದೆ.

ಒಂದು ವರ್ಷದಲ್ಲಿ ಸುಮಾರು 88 ಕ್ರಿಮಿನಲ್ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ನೇರವಾಗಿ ಶಾಮೀಲು

ಪಿಎಸ್‌ಐ ಹುದ್ದೆ ಆಮಿಷ, ಲಂಚಕ್ಕಾಗಿ ಬೇಡಿಕೆ

ದರೋಡೆ ಪ್ರಕರಣದಲ್ಲೂ ಸ್ವತಃ ಸಿಬ್ಬಂದಿಯೇ ಭಾಗಿ

▸ಚಂದನ್ ಲಕ್ಕೂರು

ಕಳೆದ ವರ್ಷ ದಿಸೆಂಬರ್‌ನಲ್ಲಿ ನಡೆದ ವಾರ್ಷಿಕ ಪೊಲೀಸ್ ಅಧಿಕಾರಿಗಳ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ವರ್ಷದಲ್ಲಿ ಸುಮಾರು 88 ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ನೇರವಾಗಿ ಶಾಮೀಲಾಗಿದ್ದಾರೆ ಎಂದು ತಿಳಿಸಿದ್ದರು.

ಸಮಾಜದಲ್ಲಿ ಕಳ್ಳತನ ಮಾಡುವವರನ್ನು ಸರೆಹಿಡಿಯ ಬೇಕಿದ್ದ ಪೊಲೀಸರೇ ಇಂತಹ ಕೃತ್ಯದಲ್ಲಿ ಭಾಗಿಯಗುತ್ತಿರುವುದು ಕಳವಳದ ಸಂಗತಿ. ರಾಜ್ಯದಲ್ಲಿ ಕೆಳದ ಒಂದು ವರ್ಷದ ಅವಧಿಯಲ್ಲಿ ಅನೇಕ ಪೊಲೀಸರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಲಾಗಿದೆ. ಇದರ ನಡುವೆಯೂ ಲಂಚ ಪಡೆದು ಲೋಕಾಯುಕ್ತಕ್ಕೆ ಟ್ರ್ಯಾಪ್ ಆಗಿ ಇಲಾಖೆ ಗೌರವಕ್ಕೆ ಕುಂದುತರುತ್ತಿದ್ದಾರೆ. ದೇಶದಲ್ಲೇ ಕರ್ನಾಟಕ ಪೊಲೀಸರಿಗೆ ಉತ್ತಮ ಗೌರವ ಇತ್ತು. ಇಂತಹ ಪೊಲೀಸರಿಂದ ರಾಜ್ಯಕ್ಕೆ ಹಾಗೂ ಪೊಲೀಸ್ ಇಲಾಖೆಯೂ ತಲೆತಗ್ಗಿಸುವ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಪ್ರಕರಣಗಳು ಪೊಲೀಸ್ ಇಲಾಖೆಯಲ್ಲಿ ಹೆಚ್ಚಾಗುತ್ತಿರುವುದಕ್ಕೆ ನೇರ ಕಾರಣ ಅವರ ವರ್ಗಾವಣೆ ನಡೆದಿಲ್ಲ ಎನ್ನುವ ಆರೋಪವೂ ಇದೆ.



ಪಿಎಸ್‌ಐ ಹಗರಣ: ಮಾಜಿ ಎಡಿಜಿಪಿ ಅಮೃತ್ ಪಾಲ್ ಭಾಗಿ

ರಾಜ್ಯವನ್ನೇ ತಲ್ಲಣಗೊಳಿಸಿದ್ದ 545 ಪಿಎಸ್‌ಐ ನೇಮಕಾತಿ ಹಗರಣದ ತನಿಖೆ ಈಗ ನಿರ್ಣಾಯಕ ಹಂತಕ್ಕೆ ತಲುಪಿದೆ. ಓಎಂಆರ್ ಶೀಟ್ ತಿದ್ದುಪಡಿ ಮಾಡಲು ಸ್ಟ್ರಾಂಗ್ ರೂಮ್ ಕೀಯನ್ನು ದುರುಪಯೋಗಪಡಿಸಿಕೊಂಡು ಅನರ್ಹ ಅಭ್ಯರ್ಥಿಗಳ ಆಯ್ಕೆಗೆ ಅವಕಾಶ ಮಾಡಿಕೊಡಲಾಗಿತ್ತು. ಪ್ರತಿ ಅಭ್ಯರ್ಥಿಯಿಂದ 30 ರಿಂದ 70 ಲಕ್ಷ ರೂಪಾಯಿ ಲಂಚ ಪಡೆಯಲಾಗಿತ್ತು ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ. ನಿವೃತ್ತ ನ್ಯಾ.ಬಿ.ವೀರಪ್ಪ ನೇತೃತ್ವದ ಸಮಿತಿಯ ವರದಿ ಆಧರಿಸಿ, ಅಕ್ರಮದಲ್ಲಿ ಭಾಗಿಯಾದ 52 ಅಭ್ಯರ್ಥಿಗಳನ್ನು ಪರೀಕ್ಷೆಯಿಂದ ಶಾಶ್ವತವಾಗಿ ಡಿಬಾರ್ ಮಾಡಲಾಗಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಬಿಗುವಿನ ಕ್ರಮ ಕೈಗೊಂಡಿದೆ. ಈ ಹಗರಣದ ಪ್ರಮುಖ ಸೂತ್ರಧಾರಿ ಎನ್ನಲಾದ ಮಾಜಿ ಎಡಿಜಿಪಿ ಅಮೃತ್ ಪಾಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ಶ್ರೀಧರ್ ಅವರಿಗೆ ಸೇರಿದ 1.53 ಕೋಟಿ ರೂ. ಮೌಲ್ಯದ ಸ್ಥಿರ ಆಸ್ತಿಯನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

ಚಿನ್ನಾಭರಣ ತಯಾರಕನಿಂದಲೂ ದರೋಡೆ ಮಾಡಿದ ಪಿಎಸ್‌ಐ

ದಾವಣಗೆರೆ ನಗರದಲ್ಲಿ ರಕ್ಷಕರೇ ಭಕ್ಷಕರಾದ ಘಟನೆಯೊಂದು ನಡೆದಿತ್ತು. ಚಿನ್ನಾಭರಣ ತಯಾರಕನ ಬಳಿ ಇದ್ದ 76 ಗ್ರಾಂ ಬಂಗಾರವನ್ನು ದರೋಡೆ ಮಾಡಿದ ಇಬ್ಬರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಸೇರಿದಂತೆ ಒಟ್ಟು ಏಳು ಮಂದಿ ಆರೋಪಿಗಳನ್ನು ಜಿಲ್ಲಾ ಪೊಲೀಸರು ಬಂಧಿಸಿದ್ದರು. ಕಾರವಾರದ ನಿವಾಸಿ ಎಂ.ವಿಶ್ವನಾಥ ಅವರು ದಾವಣಗೆರೆಯ ಮಂಡಿಪೇಟೆಯ ವಿವಿಧ ಜ್ಯುವೆಲರ್ಸ್‌ಗಳಿಂದ ಆಭರಣ ತಯಾರಿಸಲು ಸುಮಾರು 76 ಗ್ರಾಂ ಬಂಗಾರವನ್ನು ಪಡೆದುಕೊಂಡಿದ್ದರು. ರಾತ್ರಿ 12.30ರ ಸುಮಾರಿಗೆ ಊರಿಗೆ ಮರಳಲು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದು ಬಸ್ ಹತ್ತುತ್ತಿದ್ದಾಗ, ಹಿಂಬದಿಯಿಂದ ಬಂದ ವ್ಯಕ್ತಿಯೊಬ್ಬರು ನಾನು ಪೊಲೀಸ್ ಅಧಿಕಾರಿ ಎಂದು ಬೆದರಿಸಿ ಬಸ್ಸಿನಿಂದ ಕೆಳಕ್ಕೆ ಇಳಿಸಿದ್ದಾರೆ. ಬಳಿಕ ವಿಶ್ವನಾಥ ಅವರನ್ನು 112ಪೊಲೀಸ್ ಜೀಪಿನಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆಯ ಬಳಿ ಕರೆದೊಯ್ದು, ಅಲ್ಲಿಂದ ಮತ್ತೊಂದು ಕಾರಿಗೆ ವರ್ಗಾಯಿಸಿದ್ದಾರೆ. ಬಿಎಸ್‌ಎನ್‌ಎಲ್ ಕಚೇರಿ ಸಮೀಪ ಕರೆದೊಯ್ದ ಆರೋಪಿಗಳು, ನೀನು ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದೀಯಾ ಎಂದು ಬೆದರಿಸಿ, ಹಲ್ಲೆ ನಡೆಸಿ ಅವರ ಬಳಿಯಿದ್ದ 8 ಲಕ್ಷ ರೂ. ಮೌಲ್ಯದ ಚಿನ್ನವನ್ನು ಕಸಿದುಕೊಂಡು ಮತ್ತೆ ಬಸ್ ನಿಲ್ದಾಣಕ್ಕೆ ಬಿಟ್ಟು ಪರಾರಿಯಾಗಿದ್ದರು. ಹಾವೇರಿ ಜಿಲ್ಲೆ ಹಂಸಭಾವಿ ಠಾಣೆಯ ಪಿಎಸ್‌ಐ ಮಾಳಪ್ಪ, ರಾಣೆಬೆನ್ನೂರು ಸಂಚಾರ ಠಾಣೆಯ ಪಿಎಸ್‌ಐ ಪ್ರವೀಣ್, ಸೇರಿದಂತೆ ಇತರೆ ಆರೋಪಿಗಳನ್ನು ಪೊಲೀಸರು ಬಂಧಿಸಿ, ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದರು.

ನ್ಯಾಯ ಕೇಳಲು ಬಂದವರನ್ನೇ ಮಂಚಕ್ಕೆ ಕರೆದ ಪಿಐ

ಮೂಡುಬಿದಿರೆ ಪೊಲೀಸ್ ಇನ್ಸ್‌ಪೆಕ್ಟರ್ ಸಂದೇಶ್ ವಿರುದ್ಧ ಕೇಳಿಬಂದಿರುವ ಲೈಂಗಿಕ ಕಿರುಕುಳದ ಆರೋಪದ ಹಿನ್ನೆಲೆಯಲ್ಲಿ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಇಲಾಖೆ ಹೊರಡಿಸಿದೆ. ಕೌಟುಂಬಿಕ ಕಲಹ ಹಾಗೂ ಇತರ ವೈಯಕ್ತಿಕ ಸಮಸ್ಯೆಗಳ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗೆ ಬರುತ್ತಿದ್ದ ಮಹಿಳೆಯರಿಗೆ ಸಂದೇಶ್ ಲೈಂಗಿಕ ಕಿರುಕುಳ ನೀಡುತ್ತಿದ್ದರು ಎಂಬ ಗಂಭೀರ ಆರೋಪಗಳು ಕೇಳಿಬಂದಿದ್ದವು. ನ್ಯಾಯ ಕೇಳಲು ಹೋದ ಮಹಿಳೆಯರನ್ನು ಅಸಭ್ಯವಾಗಿ ನಡೆಸಿಕೊಳ್ಳುವುದು ಮಾತ್ರವಲ್ಲದೆ, ಅವರಿಗೆ ಲೈಂಗಿಕ ಸುಖಕ್ಕೆ ಬೇಡಿಕೆ ಇಡುತ್ತಿದ್ದರು ಎಂದು ಸಂತ್ರಸ್ತೆಯರು ದೂರಿದ್ದಾರೆ.





ಆಯುಕ್ತರ ಕಚೇರಿಯ ಆವರಣದಲ್ಲೇ ಹಣ ಕಳ್ಳತನ

ಸೈಬರ್ ಕ್ರೈಂ ಪ್ರಕರಣವೊಂದರಲ್ಲಿ ಆರೋಪಿಯೊಬ್ಬನನ್ನು ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದರು. ಆತ ಜಾಮೀನಿನ ಮೇಲೆ ಹೊರಬಂದ ನಂತರ, ತನ್ನ ಕಾರಿನಲ್ಲಿ 11ಲಕ್ಷ ರೂ. ಹಣವಿದ್ದ ಬ್ಯಾಗ್ ನಾಪತ್ತೆಯಾಗಿದೆ. ಆ ಹಣವನ್ನು ಯಾರೋ ಕಳ್ಳತನ ಮಾಡಿದ್ದಾರೆ ಎಂದು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದನು. ಈ ಬಗ್ಗೆ ಪೊಲೀಸ್ ಅಧಿಕಾರಿಗಳು ತನಿಖೆ ನಡೆಸಿದ್ದರು. ಜಪ್ತಿ ಮಾಡಿದ್ದ ಕಾರನ್ನು ಆಯುಕ್ತರ ಕಚೇರಿ ಹಿಂದಿನ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಲಾಗಿತ್ತು. ಸಿಸಿ ಕ್ಯಾಮೆರಾ ಪರಿಶೀಲಿಸಿದಾಗ 11 ಲಕ್ಷ ರೂ. ಇದ್ದ ಬ್ಯಾಗ್ ಅನ್ನು ಅದೇ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಜಬೀವುಲ್ಲಾ ತೆಗೆದುಕೊಂಡು ಹೋಗಿರುವುದು ಪತ್ತೆಯಾಗಿತ್ತು. ಜಬೀವುಲ್ಲಾನ ಮನೆ ಪರಿಶೀಲನೆ ನಡೆಸಿದಾಗ ಹಾಸಿಗೆ ಕೆಳಗೆ ಹಣವನ್ನು ಜೋಡಿಸಿಟ್ಟಿರುವುದು ಪತ್ತೆಯಾಗಿತ್ತು.

> ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಪಿಐ, ಡಿವೈಎಸ್‌ಪಿ, ಎಸಿಪಿ ಇವರಿಗೆ ಗೊತ್ತಿಲ್ಲದೆ ಯಾವ ಅಪರಾಧವೂ ನಡೆಯಲು ಸಾಧ್ಯವಿಲ್ಲ. ಪೊಲೀಸರು ಜಾಗರೂಕತೆಯಿಂದ ಕೆಲಸ ಮಾಡಬೇಕು. ವಿಶೇಷವಾಗಿ ದುರ್ಬಲರಿಗೆ ರಕ್ಷಣೆ ನೀಡಬೇಕು. ಬಲಾಢ್ಯರ ಕೈಗೊಂಬೆಗಳಂತೆ ಕೆಲಸ ಮಾಡಬಾರದು.
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ



> ಪೊಲೀಸ್ ವಾರ್ಷಿಕ ಸಮ್ಮೇಳನದಲ್ಲಿ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಕೂಡದು ಎಂದು ಎಚ್ಚರಿಸಲಾಗಿತ್ತು. ಪದೇ ಪದೆ ಇಂತಹ ಘಟನೆಯಾದಾಗ ಸರ್ಕಾರಕ್ಕೆ ಹಾಗೂ ವೈಯುಕ್ತಿಕವಾಗಿ ನನಗೂ ಮುಜುಗರವಾಗಲಿದೆ. ಆಗಾಗ ಇಂತಹ ಘಟನೆಗಳು ಯಾಕೆ ನಡೆಯುತ್ತದೆ ಎಂಬುದರ ಬಗ್ಗೆ ಅಧ್ಯಯನ ಮಾಡಬೇಕಿದೆ. ನನ್ನ ಹಂತದಲ್ಲಿ ಭ್ರಷ್ಟಾಚಾರ ನಡೆಸುವುದಕ್ಕೆ ಬಿಡುವುದಿಲ್ಲ. ನಮಗೆ ಜವಾಬ್ದಾರಿ ಇದೆ. ಜನರಿಗೆ ನಾವು ಉತ್ತರ ಕೊಡಬೇಕು. ಜನ ನಮ್ಮನ್ನು ಗೆಲ್ಲಿಸಿದ್ದಾರೆ. ಆದಷ್ಟು ಈ ತರಹದ ಘಟನೆ ಆಗದ ರೀತಿ ನೋಡಿಕೊಳ್ಳುತ್ತೇವೆ.
>
> ■ ಡಾ.ಜಿ.ಪರಮೇಶ್ವರ, ಗೃಹ ಸಚಿವ

> ಇಂಟೆಗ್ರಿಟಿ ಚೆಕ್ ಎಲ್ಲಾ ಹಂತದ ಸಿಬ್ಬಂದಿಗಳ ಹಿನ್ನೆಲೆ ಮತ್ತು ನಡತೆಯ ಬಗ್ಗೆ ನಿಯಮಿತವಾಗಿ ಪರಿಶೀಲನೆ ನಡೆಸಲು ಆದೇಶಿಸಲಾಗಿದೆ. ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾದವರನ್ನು ಕೇವಲ ಅಮಾನತು ಮಾಡದೆ, ಸೇವೆಯಿಂದ ವಜಾಗೊಳಿಸುವ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. ಕೆಲಸದ ಒತ್ತಡ ಮತ್ತು ನೈತಿಕ ದಾರಿ ತಪ್ಪದಂತೆ ಸಿಬ್ಬಂದಿಗೆ ಕೌನ್ಸೆಲಿಂಗ್ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.
>
> ■ ಡಾ.ಎಂ.ಎ. ಸಲೀಂ. ಡಿಜಿ, ಐಜಿಪಿ



ಹಾಡಹಗಲೇ ಎಟಿಎಂ ವಾಹನ ಅಡ್ಡಗಟ್ಟಿ ದರೋಡೆ

ಬೆಂಗಳೂರಿನ ಹೃದಯಭಾಗದಲ್ಲಿ ನವೆಂಬರ್ ತಿಂಗಳಲ್ಲಿ ಹಾಡುಹಗಲೇ ಸಿನಿಮೀಯ ಮಾದರಿಯಲ್ಲಿ ಎಟಿಎಂ ಹಣ ಸಾಗಿಸುವ ವಾಹನವನ್ನು ದರೋಡೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಕಾನ್ಸ್‌ಟೇಬಲ್ ಅಣ್ಣಪ್ಪ ನಾಯಕ್ ದರೋಡೆಕೋರರಾರ ಜತೆಗೆ ಸೇರಿ ಕೃತ್ಯ ಎಸಗಲು ಪ್ರಮುಖ ಪಾತ್ರವಹಿಸಿದ್ದನು. ಭಾರತ ಸರ್ಕಾರ ಎಂಬ ಬೋರ್ಡ್ ಹಾಕಿಕೊಂಡಿದ್ದ ಕಾರಿನಲ್ಲಿ ಬಂದ 7-8 ಜನರ ತಂಡ, ಬರೋಬ್ಬರಿ 7.11 ಕೋಟಿ ರೂ. ಹಣದೊಂದಿಗೆ ಪರಾರಿಯಾಗಿದ್ದರು. ಜಯನಗರದ ಅಶೋಕ ಪಿಲ್ಲರ್ ಬಳಿ ಕೃತ್ಯ ಆರಂಭಿಸಿ, ಡೈರಿ ಸರ್ಕಲ್ ಫ್ಲೈ ಓವರ್ ಮೇಲೆ ದರೋಡೆ ಮಾಡಲಾಗಿತ್ತು. ಆರ್‌ಬಿಐ ಅಧಿಕಾರಿಗಳು ಎಂದು ಹೇಳಿ ವಾಹನವನ್ನು ತಡೆದ ದರೋಡೆಕೋರರು, ಗನ್‌ಮ್ಯಾನ್ ಸೇರಿದಂತೆ ಸಿಬ್ಬಂದಿಯನ್ನು ಕೆಳಗಿಳಿಸಿದ್ದಾರೆ. ಬಳಿಕ ಚಾಲಕನೊಬ್ಬನನ್ನು ಮಾತ್ರ ವಾಹನದಲ್ಲೇ ಇರಿಸಿಕೊಂಡು ಡೈರಿ ಸರ್ಕಲ್‌ಗೆ ಕರೆದೊಯ್ದಿದ್ದಾರೆ. ಫ್ಲೈಓವರ್ ಮೇಲೆ ವಾಹನ ನಿಲ್ಲಿಸಿ, ಅದರಲ್ಲಿದ್ದ ಹಣವನ್ನು ತಮ್ಮ ಇನ್ನೋವಾ ಕಾರಿಗೆ ವರ್ಗಾಯಿಸಿಕೊಂಡು ಕ್ಷಣಾರ್ಧದಲ್ಲಿ ಮರೆಯಾಗಿದ್ದರು.

ಎಸಿಪಿ ಲಂಚ ಪಡೆಯುವಾಗ ಲೋಕ ಟ್ರ್ಯಾಪ್

ಅವಧಿ ಮೀರಿ ಹೊಟೇಲ್ ಕಾರ್ಯನಿರ್ವಹಣೆಗೆ ಅನುಮತಿ ನೀಡಲು ವ್ಯವಸ್ಥಾಪಕರಿಂದ ಲಂಚ ಸ್ವೀಕರಿಸುತ್ತಿದ್ದ ಮಲ್ಲೇಶ್ವರಂ ಉಪವಿಭಾಗದ ಎಸಿಪಿ ಕೃಷ್ಣಮೂರ್ತಿ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಟ್ರ್ಯಾಪ್ ಮಾಡಿ ವಶಕ್ಕೆ ಪಡೆದಿದ್ದರು. ರಾಜಾಜಿನಗರದ ಸಾಗರ್ ಹೊಟೇಲ್ ವ್ಯವಸ್ಥಾಪಕ ಸಂಜಯ್ ಕುಮಾರ್ ನೀಡಿದ್ದ ದೂರಿನನ್ವಯ ಲೋಕಾಯುಕ್ತ ಅಧಿಕಾರಿಗಳು ಟ್ರ್ಯಾಪ್ ಮಾಡಿದ್ದರು. ಅವಧಿ ಮೀರಿದ ಬಳಿಕವೂ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಆರೋಪದಡಿ ಸಾಗರ್ ಹೊಟೇಲ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ್ದ ಎಸಿಪಿ ಕೃಷ್ಣಮೂರ್ತಿ ಅವರು ಅನುಮತಿ ನೀಡಲು 50 ಸಾವಿರ ರೂ. ಲಂಚಕ್ಕೆ ಬೇಡಿಕೆಯಿಟ್ಟಿರುವುದಾಗಿ ಹೋಟೆಲ್ ವ್ಯವಸ್ಥಾಪಕ ಸಂಜಯ್ ಕುಮಾರ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಲೋಕಾಯುಕ್ತ ಅಧಿಕಾರಿಗಳು ಬುಧವಾರ ಕಚೇರಿಯಲ್ಲಿ 30 ಸಾವಿರ ಲಂಚದ ಹಣ ಸ್ವೀಕರಿಸುತ್ತಿದ್ದಾಗಲೇ ಎಸಿಪಿ ಕೃಷ್ಣಮೂರ್ತಿ ಅವರನ್ನು ವಶಕ್ಕೆ ಪಡೆದಿದ್ದಾರೆ.



ಲಂಚ ಸ್ವೀಕರಿಸುವಾಗ ಲೋಕ ಬಲೆಗೆ ಪಿಐ

ಚೀಟಿ ವ್ಯವಹಾರ ಪ್ರಕರಣವೊಂದರಲ್ಲಿ ಹೆಸರು ಸೇರಿಸದಿರಲು ರಿಯಲ್ ಎಸ್ಟೇಟ್ ಉದ್ಯಮಿಯಿಂದ ಲಂಚ ಸ್ವೀಕರಿಸುತ್ತಿದ್ದ ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಗೋವಿಂದರಾಜು ಅವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. 2025ರಲ್ಲಿ ಕೆ.ಪಿ.ಅಗ್ರಹಾರ ಠಾಣೆಯಲ್ಲಿ ದಾಖಲಾಗಿದ್ದ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ, ರಿಯಲ್ ಎಸ್ಟೇಟ್ ಉದ್ಯಮಿ ಮೊಹಮ್ಮದ್ ಅಕ್ತರ್ ಅವರ ಹೆಸರನ್ನು ಆರೋಪಿಗಳ ಪಟ್ಟಿಗೆ ಸೇರಿಸುವುದಾಗಿ ಇನ್ಸ್‌ಪೆಕ್ಟರ್ ಗೋವಿಂದರಾಜು ಬೆದರಿಕೆ ಹಾಕಿದ್ದರು. ಈ ಹೆಸರನ್ನು ಕೈಬಿಡಲು 5 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರ ಪ್ರಕಾರ ಮುಂಗಡ ಹಣ ಒಂದು ಲಕ್ಷ ರೂ.ವನ್ನು ಗೋವಿಂದರಾಜು ಪಡೆದುಕೊಂಡಿದ್ದರು. ಬಾಕಿ ಉಳಿದ 4 ಲಕ್ಷ ಹಣವನ್ನು ಮೈಸೂರು ರಸ್ತೆಯ ಶಿರಸಿ ಸರ್ಕಲ್ ಸಮೀಪವಿರುವ ಸಿಎಆರ್ ಗ್ರೌಂಡ್ ಬಳಿ ಪಡೆಯುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ಜ.29ರಂದು ದಾಳಿ ನಡೆಸಿ ಬಂಧಿಸಿದ್ದಾರೆ. ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆಯುತ್ತಿದ್ದಂತೆ ಇನ್ಸ್‌ಪೆಕ್ಟರ್ ಗೋವಿಂದರಾಜು ಏಯ್.. ಏಯ್.. ಎಂದು ಬೊಬ್ಬಿಡುತ್ತಾ ಸ್ಥಳದಲ್ಲಿ ಕೆಲಕಾಲ ಹೈಡ್ರಾಮಾ ಸೃಷ್ಟಿಸಿದ್ದಾರೆ. ಈ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ತುಮಕೂರಿನಲ್ಲಿ ಲೋಕಾ ಬಲೆಗೆ ಪಿಎಸ್‌ಐ



ಕಾರು ಬಿಡುಗಡೆ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಚೇತನ್ ಕುಮಾರ್ ಅವರನ್ನು ಸಾಕ್ಷ್ಯಾಧಾರ ಸಮೇತ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಬೆಂಗಳೂರು ಮೂಲದ ವಕೀಲ ನಾಗೇಶ್ ಅವರಿಗೆ ಸೇರಿದ ಕಾರನ್ನು ಜ.17ರಂದು ಕೆಸರುಮಡು ಸಮೀಪ ಪಿಎಸ್‌ಐ ವಶಕ್ಕೆ ಪಡೆದಿದ್ದರು.ಯಾವುದೇ ಅಧಿಕೃತ ಪ್ರಕರಣ ದಾಖಲಿಸದೆ ಕಾರನ್ನು ಬಿಡುಗಡೆ ಮಾಡಲು ಹಣದ ಬೇಡಿಕೆ ಇಟ್ಟಿದ್ದರು. ಆರಂಭದಲ್ಲಿ ಕಾರಿನ ಮಾಲೀಕರಿಂದ 5 ಲಕ್ಷ ರೂ. ಲಂಚ ಕೇಳಿದ್ದ ಪಿಎಸ್‌ಐ, ನಂತರ ಸುದೀರ್ಘ ಮಾತುಕತೆಯ ಬಳಿಕ 40 ಸಾವಿರ ರೂ.ಗೆ ಒಪ್ಪಂದ ಮಾಡಿಕೊಂಡಿದ್ದರು ಎನ್ನಲಾಗಿದೆ. ಇದರಿಂದ ಬೇಸತ್ತ ವಕೀಲ ನಾಗೇಶ್ ಅವರು ತುಮಕೂರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಇನ್ಸ್‌ಪೆಕ್ಟರ್ ವಿರುದ್ಧ ರಾಜ್ಯಪಾಲರಿಗೆ ಸಿಬ್ಬಂದಿ ದೂರು

ಬೆಂಗಳೂರಿನ ಪುಟ್ಟೇನಹಳ್ಳಿ ಠಾಣೆಯ ಇನ್ಸ್‌ಪೆಕ್ಟರ್ ಎಚ್.ಕೆ. ರವಿಕುಮಾರ್ ವಿರುದ್ಧ ಅದೇ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ಒಗ್ಗೂಡಿ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಕಳೆದ ಎರಡೂವರೆ ವರ್ಷಗಳಲ್ಲಿ ಇನ್ಸ್‌ಪೆಕ್ಟರ್ ಸುಮಾರು 15 ಕೋಟಿ ರೂ.ಗೂ ಅಧಿಕ ಅಕ್ರಮ ಆಸ್ತಿ ಸಂಪಾದಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಬಾರ್, ಪಬ್, ಸ್ಪಾ ಮತ್ತು ಬೀದಿ ಬದಿ ವ್ಯಾಪಾರಿಗಳಿಂದಲೇ ತಿಂಗಳಿಗೆ 25 ಲಕ್ಷ ರೂ. ಹಫ್ತಾ ವಸೂಲಿ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ, ರೇಪ್ ಕೇಸ್, ವೀಸಾ ವೆರಿಫಿಕೇಶನ್ ಮತ್ತು ವಂಚನೆ ಪ್ರಕರಣಗಳನ್ನು ಮುಚ್ಚಿಹಾಕಲು ಆರೋಪಿಗಳಿಂದ ಲಕ್ಷಾಂತರ ರೂಪಾಯಿ ಲಂಚ ಪಡೆಯುತ್ತಿದ್ದಾರೆ. ರೌಡಿ ಪಟ್ಟಿಯಿಂದ ಹೆಸರು ತೆಗೆಯಲು ಒಬ್ಬೊಬ್ಬರಿಂದ 20 ರಿಂದ 25 ಲಕ್ಷ ಹಣಕ್ಕೆ ಬೇಡಿಕೆ ಇಡುತ್ತಿದ್ದು, ಇವರ ಕಿರುಕುಳದಿಂದ ಬೇಸತ್ತ ಸಿಬ್ಬಂದಿ ಈಗ ರಾಜ್ಯಪಾಲರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಪತ್ರ ಬರೆದು ಸಮಗ್ರ ತನಿಖೆಗೆ ಆಗ್ರಹಿಸಿದ್ದಾರೆ.





ಹವಾಲಾ ಹಣ ಪಡೆದ ಆರೋಪ: ಪಿಐ ಅಮಾನತು

ಕರ್ತವ್ಯಲೋಪದ ಹಿನ್ನೆಲೆಯಲ್ಲಿ ಅಮಾನತುಗೊಂಡಿದ್ದ ಜ್ಞಾನಭಾರತಿ ಠಾಣೆಯ ಇನ್ಸ್‌ಪೆಕ್ಟರ್ ಎಂ.ಎಸ್. ರವಿ ಅವರ ವಿರುದ್ಧ ಈಗ ಕೋಟ್ಯಂತರ ರೂಪಾಯಿ ಹವಾಲಾ ಹಣ ಎಗರಿಸಿದ ಗಂಭೀರ ಆರೋಪ ಕೇಳಿಬಂದಿದೆ. ಜ.15ರಂದು ನಾಗರಬಾವಿ ಬಳಿ ಹವಾಲಾ ಹಣ ಸಾಗಾಟವಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಇನ್ಸ್‌ಪೆಕ್ಟರ್ ನೇತೃತ್ವದ ತಂಡ ದಾಳಿ ನಡೆಸಿತ್ತು. ಪೊಲೀಸರನ್ನು ಕಂಡು ಪರಾರಿಯಾಗಲು ಯತ್ನಿಸಿದ ಆರೋಪಿಗಳನ್ನು ಇಲೆಕ್ಟ್ರಾನಿಕ್ ಸಿಟಿ ಬಳಿ ಸಿನಿಮೀಯ ಶೈಲಿಯಲ್ಲಿ ಬೆನ್ನಟ್ಟಿ ವಶಕ್ಕೆ ಪಡೆಯಲಾಗಿತ್ತು. ಆದರೆ, ಈ ಕಾರ್ಯಾಚರಣೆಯ ವೇಳೆ ಜಪ್ತಿ ಮಾಡಲಾದ ಸುಮಾರು 1.5 ಕೋಟಿ ರೂ. ಹವಾಲಾ ಹಣವನ್ನು ಇನ್ಸ್‌ಪೆಕ್ಟರ್ ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಗುಮಾನಿ ವ್ಯಕ್ತವಾಗಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸ್ ಆಯುಕ್ತರು ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಇಲೆಕ್ಟ್ರಾನಿಕ್ ಸಿಟಿ ವಿಭಾಗದ ಡಿಸಿಪಿಗೆ ಸೂಚಿಸಿದ್ದಾರೆ.

ಪಿಎಸ್‌ಐಯಿಂದ ಬಿ-ರಿಪೋರ್ಟ್‌ಗಾಗಿ ಲಂಚಕ್ಕೆ ಬೇಡಿಕೆ

ವಂಚನೆ ಪ್ರಕರಣವೊಂದರಲ್ಲಿ ಬಿ-ರಿಪೋರ್ಟ್ ಸಲ್ಲಿಸಲು 3ಲಕ್ಷ ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದ ಚಿಕ್ಕಜಾಲ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶಿವಣ್ಣ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಸ್ಥಳೀಯ ನಿವಾಸಿ ರವಿಕುಮಾರ್ ಎಂಬುವರ ವಿರುದ್ಧ ಅದೇ ಠಾಣೆಯಲ್ಲಿ ವಂಚನೆ ಪ್ರಕರಣವೊಂದು ದಾಖಲಾಗಿತ್ತು. ಈ ಪ್ರಕರಣವನ್ನು ಮುಕ್ತಾಯಗೊಳಿಸಿ ನ್ಯಾಯಾಲಯಕ್ಕೆ ಬಿ-ರಿಪೋರ್ಟ್ ಸಲ್ಲಿಸಲು ಪಿಎಸ್‌ಐ ಶಿವಣ್ಣ ಅವರು 3ಲಕ್ಷ ಹಣ ನೀಡುವಂತೆ ರವಿಕುಮಾರ್ ಅವರಿಗೆ ಒತ್ತಾಯಿಸಿದ್ದರು ಎನ್ನಲಾಗಿದೆ. ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿದ ಲೋಕಯುಕ್ತ ಅಧಿಕಾರಿಗಳು, ರಾತ್ರಿ ಸುಮಾರು 8:30ರ ವೇಳೆಗೆ ಠಾಣೆಯ ಸಮೀಪವೇ ಶಿವಣ್ಣ ಅವರ ದ್ವಿಚಕ್ರ ವಾಹನದ ಬಳಿ 2 ಲಕ್ಷ ನಗದು ಹಣವನ್ನು ಇಡಲಾಗಿತ್ತು. ಲಂಚದ ಹಣವನ್ನು ಎತ್ತಿಕೊಳ್ಳಲು ಮುಂದಾದ ಕ್ಷಣದಲ್ಲೇ ದಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು, ಸಾಕ್ಷಿ ಸಮೇತ ಅವರನ್ನು ವಶಕ್ಕೆ ಪಡೆದಿದ್ದಾರೆ.

ಪೊಲೀಸರಿಗೆ ಗೊತ್ತಾಗದ ಡ್ರಗ್ಸ್ ಫ್ಯಾಕ್ಟರಿ

ಕರ್ನಾಟಕವು ಈಗ ಕೇವಲ ಡ್ರಗ್ಸ್ ಸೇವನೆಯ ತಾಣವಲ್ಲದೆ, ಉತ್ಪಾದನೆಯ ಕೇಂದ್ರವಾಗಿಯೂ ಬದಲಾಗುತ್ತಿರುವುದು ಆತಂಕಕಾರಿ ವಿಚಾರ. ನೆರೆ ರಾಜ್ಯದ ಪೊಲೀಸರು ಬಂದು ಇಲ್ಲಿನ ಜಾಲಗಳನ್ನು ಪತ್ತೆ ಹಚ್ಚುತ್ತಿರುವುದು ಕಳವಳ ತಂದಿದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ದೇಶವನ್ನೇ ಬೆಚ್ಚಿಬೀಳಿಸುವಂತಹ ಬೃಹತ್ ಡ್ರಗ್ಸ್ ಜಾಲವೊಂದನ್ನು ಜುಲೈ ತಿಂಗಳಲ್ಲಿ ಮಹಾರಾಷ್ಟ್ರ ಪೊಲೀಸರು ಭೇದಿಸಿದ್ದರು. ಹೆಸರಿಗೆ ಮಾತ್ರ ಕಾರ್ ಗ್ಯಾರೇಜ್ ನಡೆಸುತ್ತಿದ್ದ ಆರೋಪಿಗಳು. ಅದೇ ಜಾಗದಲ್ಲಿ ಗುಟ್ಟಾಗಿ ನಡೆಯುತ್ತಿದ್ದ ಸಿಂಥೆಟಿಕ್ ಡ್ರಗ್ಸ್ ತಯಾರಿಕಾ ಘಟಕದ ಮೇಲೆ ದಾಳಿ ಮಾಡಿರುವ ಪೊಲೀಸರು, ಬರೋಬ್ಬರಿ 390 ಕೋಟಿ ರೂ. ಮೌಲ್ಯದ ಮಾದಕ ವಸ್ತುವನ್ನು ಜಪ್ತಿ ಮಾಡಿದ್ದರು. ಅಜ್ಮಲ್ ಎಂಬಾತ 20 ಸಾವಿರ ರೂ.ಗೆ ಬಾಡಿಗೆ ಪಡೆದಿದ್ದ ಜಾಗವನ್ನು, ಡ್ರಗ್ಸ್ ತಯಾರಿಕೆಗಾಗಿ ಬೇರೆಯವರಿಗೆ 1 ಲಕ್ಷ ರೂ.ಗೆ ಬಾಡಿಗೆಗೆ ನೀಡಿದ್ದನು. ಮುಂಭಾಗದಲ್ಲಿ ಕಾರು ಗ್ಯಾರೇಜ್ ಎಂಬಂತೆ ಬಿಂಬಿಸಿ, ಒಳಭಾಗದಲ್ಲಿ ಮೆಫೆಡ್ರೋನ್ ತಯಾರಿಸಲಾಗುತ್ತಿತ್ತು. ಮೈಸೂರಿನಿಂದ ಮಹಾರಾಷ್ಟ್ರಕ್ಕೆ ಈ ಮಾದಕ ವಸ್ತುಗಳು ಸರಬರಾಜಾಗುತ್ತಿದ್ದವು. ಬೃಹತ್ ಪ್ರಮಾಣದ ಮಾದಕ ವಸ್ತು ಪತ್ತೆಯಾಗಿರುವುದು ಒಂದು ಕಡೆ ಯಶಸ್ವಾಗಿದ್ದರೂ, ಮೈಸೂರು ಪೊಲೀಸರ ವೈಫಲ್ಯದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಟೀಕೆಗಳು ವ್ಯಕ್ತವಾಗಿವೆ. ಮಹಾರಾಷ್ಟ್ರ ಪೊಲೀಸರು ಸುಳಿವು ನೀಡುವವರೆಗೆ ನಮ್ಮ ಪೊಲೀಸರು ಏನು ಮಾಡುತ್ತಿದ್ದರು ಎನ್ನುವ ಪ್ರಶ್ನೆಗಳು ಜನರಲ್ಲಿ ಹಲವು ಅನುಮಾನಗಳಿಗೆ ಎಡಮಾಡಿದೆ.

ರೌಡಿ ಬೇಬಿಗೆ ಪೋಲಿ ಪಾಪು ಕಿರುಕುಳ



ಕೋಣನಕುಂಟೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪಾಪಣ್ಣ ಅವರು ಲೇಡಿ ರೌಡಿಶೀಟರ್ ಯಶಸ್ವಿನಿ ಗೌಡ ಅವರಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿತ್ತು. ಇನ್ಸ್‌ಪೆಕ್ಟರ್ ಪಾಪಣ್ಣ ಕೆಲವು ದಿನಗಳಿಂದ ಲೈಂಗಿಕ ಕಿರುಕುಳ ನೀಡುತ್ತಿದ್ದರು ಎಂದು ಆರೋಪಿಸಿ, ಸಂತ್ರಸ್ತೆ ನಗರ ಪೊಲೀಸ್ ಆಯುಕ್ತರಿಗೆ ಈ ಸಂಬಂಧ ದೂರು ನೀಡಿದ್ದು, ಇನ್ಸ್‌ಪೆಕ್ಟರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಈ ಸಂಬಂಧ ಇನ್ಸ್‌ಪೆಕ್ಟರ್ ವಿರುದ್ಧ ಇಲಾಖೆ ತನಿಖೆ ನಡೆಸಿ ವರದಿ ನೀಡಲು ಡಿಸಿಪಿಗೆ ನಗರ ಪೊಲೀಸ್ ಆಯುಕ್ತರು ಸೂಚನೆ ನೀಡಿದ್ದಾರೆ.

ಬೆಂಗಳೂರಿನಲ್ಲೂ ಡ್ರಗ್ಸ್ ಫ್ಯಾಕ್ಟರಿ ಶಂಕೆ?

ಬೆಂಗಳೂರಿನ ಮೂರು ಡ್ರಗ್ಸ್ ಫ್ಯಾಕ್ಟರಿಗಳ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿ, ಅಂದಾಜು 56 ಕೋಟಿ ರೂ. ಮೌಲ್ಯದ ಮೆಫೆಡೋನ್ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ಈ ಕಾರ್ಯಾಚರಣೆಯು ರಾಜ್ಯ ಪೊಲೀಸ್ ಇಲಾಖೆಯ ಗುಪ್ತಚರ ವೈಫಲ್ಯವನ್ನು ಎತ್ತಿ ತೋರಿಸುವಂತಿದೆ. ಡಿ.21ರಂದು ಮುಂಬೈನಲ್ಲಿ ಮಹಾರಾಷ್ಟ್ರದ ಮಾದಕ ದ್ರವ್ಯ ನಿಗ್ರಹ ಕಾರ್ಯಪಡೆ ಅಬ್ದುಲ್ ಖಾದಿರ್ ಶೇಖ್ ಎಂಬಾತನನ್ನು ಬಂಧಿಸಿ 1.5 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿತ್ತು. ಆತನ ವಿಚಾರಣೆ ವೇಳೆ ಬೆಳಗಾವಿಯ ಪ್ರಶಾಂತ್‌ಪಾಟೀಲ್ ಎಂಬಾತನ ಹೆಸರು ಹೊರಬಂದಿತು. ಈ ಕೊಂಡಿಯನ್ನು ಹಿಡಿದು ತನಿಖೆ ನಡೆಸಿದಾಗ ಬೆಂಗಳೂರಿನಲ್ಲಿ ಕಾರ್ಯಾಚರಿಸುತ್ತಿದ್ದ ಮೂರು ರಹಸ್ಯ ಡ್ರಗ್ಸ್ ಫ್ಯಾಕ್ಟರಿಗಳ ಸುಳಿವು ಸಿಕ್ಕಿದೆ. ಇದರ ಪರಿಣಾಮ ಸ್ಥಳೀಯ ಮೂರು ಠಾಣೆಯ ಇನ್ಸ್‌ಪೆಕ್ಟರ್‌ಗಳಾದ ಶಬರೀಶ್, ಚೇತನ್ ಕುಮಾರ್, ರಾಮಕೃಷ್ಣ ರೆಡ್ಡಿಯನ್ನು ಕರ್ತವ್ಯ ಲೋಪದ ಮೇಲೆ ಅಮಾನತು ಮಾಡಲಾಗಿದೆ.

ಕಿರುಸುದ್ದಿ

ಮುಖ್ಯಮಂತ್ರಿ ಪದಕಕ್ಕೆ ಆಯ್ಕೆ




ಬಂಟ್ವಾಳ: ಕರ್ನಾಟಕ ಸರಕಾರದ 2025-26ನೇ ಸಾಲಿನ ಮುಖ್ಯಮಂತ್ರಿ ಚಿನ್ನದ ಪದಕ ಪುರಸ್ಕಾರಕ್ಕೆ ಬಂಟ್ವಾಳ ನಗರ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಇರ್ಷಾದ್ ಪಡಂಗಡಿ ಅವರು ಆಯ್ಕೆಯಾಗಿದ್ದಾರೆ. ಬೆಳ್ತಂಗಡಿ ತಾ.ನ ಪಡಂಗಡಿ ನಿವಾಸಿಯಾದ ಇರ್ಷಾದ್ 2008 ರಲ್ಲಿ ಪೊಲೀಸ್ ಇಲಾಖೆಗೆ ನಿಯುಕ್ತರಾಗಿದ್ದರು. ಮಂಗಳೂರು ವಿಶೇಷ ಘಟಕ, ಉಪ್ಪಿನಂಗಡಿ ಇದೀಗ ಬಂಟ್ವಾಳ ನಗರ ಠಾಣೆಯಲ್ಲಿ ಗುಪ್ತವಾರ್ತೆ ವಿಭಾಗದಲ್ಲಿ ಹಲವು ಸಮಯದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿವಿಧ ಪ್ರಕರಣಗಳನ್ನು ಪತ್ತೆಹಚ್ಚುವಲ್ಲಿ ಮಾಡಿರುವ ಸಾಧನೆಗಾಗಿ ಇವರಿಗೆ ಮುಖ್ಯಮಂತ್ರಿ ಪದಕ ಲಭಿಸಿದೆಯೆಂದು ತಿಳಿದು ಬಂದಿದೆ.

ಸಹಕಾರ ತರಬೇತಿ: ಚರಿಷ್ಮಾ ಬಿ.ಎನ್.ಗೆ 5ನೇ ರ‍್ಯಾಂಕ್



ಮಡಿಕೇರಿ: ಮಡಿಕೇರಿಯ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆದ ಜುಲೈ-ಡಿಸೆಂಬರ್-2025ನೇ ರೆಗ್ಯುಲರ್ ಡಿಸಿಎಂ ಅಧಿವೇಶನದ ಅಂತಿಮ ಪರೀಕ್ಷೆಯಲ್ಲಿ ಚರಿಷ್ಮಾ ಬಿ.ಎನ್ ಅವರು ಐದನೇ ರ‍್ಯಾಂಕ್ ಪಡೆದಿದ್ದಾರೆ.

ಸಂಗೀತ, ನೃತ್ಯ ಅಕಾಡೆಮಿಯ ಶಿಷ್ಯವೇತನಕ್ಕೆ ಮೇಧಾ ಭಟ್ ಆಯ್ಕೆ



ಪುತ್ತೂರು: ನಾಟ್ಯರಂಗದ ಕಲಾನಿರ್ದೇಶಕಿ ಗುರು ವಿದುಷಿ ಮಂಜುಳಾ ಸುಬ್ರಹ್ಮಣ್ಯ ಅವರ ಶಿಷ್ಯೆ ಮೇಧಾ ಭಟ್ ಕರ್ನಾಟಕ ಸರಕಾರದ ಸಂಗೀತ ನೃತ್ಯ ಅಕಾಡೆಮಿ ಕೊಡಮಾಡುವ ಶಿಷ್ಯವೇತನಕ್ಕೆ ಆಯ್ಕೆ ಆಗಿದ್ದಾರೆ. ಮುರಳಿ ಶ್ಯಾಮ ಮೇರ್ಲ ಹಾಗೂ ಮಾಯಾ ಮುರಳಿ ದಂಪತಿಯ ಪುತ್ರಿಯಾಗಿರುವ ಮೇಧಾ ಅಂಬಿಕಾ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿಯಾಗಿದ್ದು ಕೇಕ್ ತಯಾರಿಕೆಯಲ್ಲಿ ಪರಿಣತಳಾಗಿದ್ದಾಳೆ.

ಉಡುಪಿ ಜಿಲ್ಲೆಯಲ್ಲಿ ಇಬ್ಬರ ಗಡಿಪಾರು

ಉಡುಪಿ: ಜಿಲ್ಲೆಯಲ್ಲಿ ನಿರಂತರವಾಗಿ ಅಪರಾಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದ ಇಬ್ಬರು ಸಕ್ರಿಯ ಆರೋಪಿಗಳನ್ನು ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ವಿಶೇಷ ಕಾರ್ಯಾಂಗ ದಂಡಾಧಿಕಾರಿಗಳ ಆದೇಶದಂತೆ ಮಾರ್ಚ್ 26ರಂದು ಜಿಲ್ಲೆಯಿಂದ ಗಡಿಪಾರು ಮಾಡಲಾಗಿದೆ.



ಶಿರ್ವ ಪೊಲೀಸ್ ಠಾಣಾ ವ್ಯಾಪ್ತಿಯ ಮಹಮ್ಮದ್ ನೌಫಿಲ್ ಹಾಗೂ ಮಲ್ಪೆ ಪೊಲೀಸ್ ಠಾಣಾ ವ್ಯಾಪ್ತಿಯ ಸುಹಾನ್ ಪೂಜಾರಿ ಎಂಬವರೇ ಗಡಿಪಾರು ಶಿಕ್ಷೆಗೆ ಒಳಗಾದ ಆರೋಪಿಗಳು. ಕಾಪು ತಾಲೂಕಿನ ಕಳತ್ತೂರು ಗ್ರಾಮದ ಸೂರ್ಯಗುಡ್ಡೆ ನಿವಾಸಿಯಾಗಿರುವ ಮಹಮ್ಮದ್ ನೌಫಿಲ್ ವಿರುದ್ಧ ಶಿರ್ವ ಪೊಲೀಸ್ ಠಾಣೆಯಲ್ಲಿ ಒಟ್ಟು ಐದು ಗಂಭೀರ ಪ್ರಕರಣಗಳು ದಾಖಲಾಗಿದ್ದು, ಈತನ ಹೆಸರಿನಲ್ಲಿ ಈಗಾಗಲೇ ರೌಡಿ ಹಾಳೆಯನ್ನು ತೆರೆಯಲಾಗಿತ್ತು. ಈತನನ್ನು ಹಾವೇರಿ ಜಿಲ್ಲೆಯ ಶಿಗ್ಗಾಂವ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಿ ಆದೇಶಿಸಲಾಗಿದೆ. ಅದೇ ರೀತಿ ಮಲ್ಪೆಯ ಕೊಡವೂರು ಗ್ರಾಮದ ನಿವಾಸಿಯಾಗಿರುವ ಸುಹಾನ್ ಪೂಜಾರಿ ವಿರುದ್ಧ ಮಲ್ಪೆ ಠಾಣೆಯಲ್ಲಿ ನಾಲ್ಕು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಈತನನ್ನು ಯಾದಗಿರಿ ಜಿಲ್ಲೆಯ ಯಾದಗಿರಿ ನಗರ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ. ಸರಣಿ ಅಪರಾಧ ಕೃತ್ಯಗಳನ್ನು ಎಸಗುತ್ತಾ ಸಾರ್ವಜನಿಕ ವಲಯದಲ್ಲಿ ಭೀತಿ ಹುಟ್ಟಿಸುತ್ತಿದ್ದ ಇವರ ಚಟುವಟಿಕೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಈ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಶಕ್ತಿನಗರ: ಇಂದು ಉಚಿತ ರೇಬಿಸ್ ಲಸಿಕೆ ಶಿಬಿರ

ಮಂಗಳೂರು : ಇಲ್ಲಿನ ಶಕ್ತಿನಗರದ ಎನಿಮಲ್ ಕೇರ್ ಟ್ರಸ್ಟ್ ನ ಸಹಯೋಗದಲ್ಲಿ ಲಯನ್ಸ್ ಕ್ಲಬ್ ಕದ್ರಿಹಿಲ್ಸ್, ಸೇವಾ ಪ್ರಕಲ್ಪ ಚಾರಿಟೇಬಲ್ ಟ್ರಸ್ಟ್, ಪದವಿನಂಗಡಿ ಯೂತ್ ಕ್ಲಬ್‌ಗಳ ಜಂಟಿ ಆಶ್ರಯದಲ್ಲಿ ಭಾನುವಾರ (ಇಂದು) ಬೆಳಗ್ಗೆ 9.30ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಉಚಿತ ರೇಬಿಸ್ ನಿಯಂತ್ರಣ ಲಸಿಕಾ ಶಿಬಿರ ಮತ್ತು ಉಚಿತ ದೇಶೀ ನಾಯಿ ಮತ್ತು ಬೆಕ್ಕಿನ ಮರಿಗಳ ದತ್ತು ಕೊಡುವ ಶಿಬಿರ ಪದವಿನಂಗಡಿ ಯೂತ್‌ಕ್ಲಬ್‌ನಲ್ಲಿ ನಡೆಯಲಿದೆ.



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ನಟ ಶಿವರಾಜ್ ಕುಮಾರ್ ಭೇಟಿ ನೀಡಿ ದೇವರ ದರ್ಶನ ಪಡೆದರು. ಕಮಲಾದೇವಿಪ್ರಸಾದ ಆಸ್ರಣ್ಣರು ದೇವರ ಶೇಷವಸ್ತ್ರ, ಪ್ರಸಾದ ನೀಡಿದರು. ದೇವಳದ ಅರ್ಚಕ ಶ್ರೀ ಹರಿನಾರಾಯಣದಾಸ ಆಸ್ರಣ್ಣ, ಶ್ರೀಕರ ಆಸ್ರಣ್ಣ, ವಿವೇಕ್ ಆಳ್ವ ಉಪಸ್ಥಿತರಿದ್ದರು.

ಇಸ್ರೋ ಯುವಿಕ- 2026 ಶಿಬಿರಕ್ಕೆ ವಿವೇಕಾನಂದದ ಪಿ.ಕೆ.ಶುಭನ್ ಆಯ್ಕೆ

ಪುತ್ತೂರು: ಪ್ರೌಢಶಾಲಾ ವಿಭಾಗದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ವಿಜ್ಞಾನ ಪರಿಚಯಿಸುವ ಸಲುವಾಗಿ ಬಾಹ್ಯಾಕಾಶ ಸಂಸ್ಥೆ ಇಸ್ರೋ ಆಯೋಜಿಸಿರುವಂತಹ 'ಯುವಿಕ-2026 (ಯುವ ವಿಜ್ಞಾನಿ ಕಾರ್ಯಕ್ರಮ)' ಶಿಬಿರಕ್ಕೆ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 9ನೇ ತರಗತಿಯ ವಿದ್ಯಾರ್ಥಿ ಪಿ.ಕೆ. ಶುಭನ್ (ಪದ್ಮನಾಭ ಕೆ.-ರೇಖಾ ಪಿ. ನಾಯ್ಕ್ ದಂಪತಿ ಪುತ್ರ) ಆಯ್ಕೆಯಾಗಿದ್ದಾರೆ. ಮುಂಬರುವ ಮೇ 11ರಿಂದ ಮೇ 22ರವರೆಗೆ ನಡೆಯುವ ಯುವಿಕ ಶಿಬಿರವು ಇಸ್ರೋ ಕೇಂದ್ರದಲ್ಲಿ ನಡೆಯಲಿದೆ. ಕೇಂದ್ರ ಸರಕಾರದಿಂದ ಪ್ರಾಯೋಜಿತವಾಗಿರುವ ಈ ಶಿಬಿರವು ಸನಿವಾಸ ಶಿಬಿರವಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳ ಸಂಪೂರ್ಣ ಖರ್ಚು ವೆಚ್ಚವನ್ನು ಕೇಂದ್ರ ಸರಕಾರವೇ ಭರಿಸಲಿರುವುದು. ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಬಾಹ್ಯಾಕಾಶದ ಬಗ್ಗೆ ಆಸಕ್ತಿ ಮತ್ತು ಕುತೂಹಲವನ್ನು ಹೆಚ್ಚಿಸಲು ತಜ್ಞ ವಿಜ್ಞಾನಿಗಳೊಂದಿಗೆ ಸಂವಾದ,



'ಇಸ್ರೋ ಪ್ರಯೋಗಾಲಯದ ಭೇಟಿ, ರಾಕೆಟ್ ತಯಾರಿಕೆ ಮುಂತಾದ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತದೆ. ಎನ್‌ಸಿಸಿ, ಕ್ರೀಡೆ ವಿಜ್ಞಾನ ಮಾದರಿ ತಯಾರಿ ರಸಪ್ರಶ್ನೆ ಕಲಿಕೆ ಮುಂತಾದ ಶೈಕ್ಷಣಿಕ ಚಟುವಟಿಕೆಗಳಲ್ಲಿ ವಿಶೇಷ ಸಾಧನೆಯನ್ನು ಮಾಡಿರುವ ಪಿ.ಕೆ. ಶುಭನ್ ಆಯ್ಕೆಯ ವಿವಿಧ ಹಂತಗಳ ಪ್ರಕ್ರಿಯೆಗಳನ್ನು ಯಶಸ್ವಿಯಾಗಿ ಪೂರೈಸಿ, ಯುವಿಕ-2026 ಶಿಬಿರಕ್ಕೆ ಆಯ್ಕೆಯಾಗಿದ್ದಾರೆ ಎಂದು ಶಾಲಾ ಮುಖ್ಯೋಪಾಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಳ್ವಾಸ್ ಸಂಪ್ರದಾಯ ದಿನದ ಕಳೆ ಹೆಚ್ಚಿಸಿದ ಶಿವಣ್ಣ ದಂಪತಿ

ನಿಜ, ನಾನೇ ಪುಣ್ಯವಂತ

ಮೂಡುಬಿದಿರೆ: ಕರುನಾಡ ಚಕ್ರವರ್ತಿ, ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಮತ್ತು ಗೀತಾ ದಂಪತಿ ಸಮ್ಮುಖದಲ್ಲಿ ಸಮಗ್ರ ಭಾರತದ ಸಾಂಸ್ಕೃತಿಕ ವೈಭವ ಶನಿವಾರ ವಿದ್ಯಾಗಿರಿಯಲ್ಲಿ ಅನಾವರಣಗೊಂಡಿತು. 23 ಸಹಸ್ರ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ಬೃಹತ್ ಸಾಂಸ್ಕೃತಿಕ ಸಂಪ್ರದಾಯ ದಿನಾಚರಣೆ ಮಾಡಿರುವುದು ಶ್ಲಾಘನೀಯ ಎಂದು ಚಲನಚಿತ್ರ ನಟ ಶಿವರಾಜ್ ಕುಮಾರ್ ಪ್ರಶಂಸಿದರು.

ವಿದ್ಯಾಗಿರಿಯ ಮುಂಡ್ರೆದಗುತ್ತು ಕೆ. ಅಮರನಾಥ ಶೆಟ್ಟಿ (ಕೃಷಿ ಸಿರಿ) ಆವರಣದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ 'ಆಳ್ವಾಸ್ ಸಂಪ್ರದಾಯ ದಿನ- 2026' ನ್ನು ವೈಭವದಿಂದ ಆಚರಿಸಿತು. ಶಿವರಾಜ್ ಕುಮಾರ್ ದಂಪತಿ ಕಾರ್ಯಕ್ರಮವನ್ನು ಸಾಂಪ್ರದಾಯಿಕ ದೀಪ ಬೆಳಗಿ ಉದ್ಘಾಟಿಸಿ, ಡೋಲು ಬಡಿದು ಚಾಲನೆ ನೀಡಿದರು.

ಸಾಧನೆಗೆ ಬೇಕಾಗಿರುವುದು ಉದಾರತನ, ಧಾರಾಳತನ. ಇದನ್ನು ಆಳ್ವಾಸ್ ಸಂಸ್ಥೆ ನಿಜಕ್ಕೂ ಮಾಡುತ್ತಿದೆ. ಎಲ್ಲರನ್ನೂ ಒಳಗೊಳ್ಳುವುದೇ ಕನ್ನಡ ಕರ್ನಾಟಕದ ಸಂಸ್ಕೃತಿಯಾಗಿದೆ. ವಿದ್ಯಾಗಿರಿಯ ನೆಲದಲ್ಲಿ ಸಮಗ್ರ ಭಾರತೀಯ ಸಂಸ್ಕೃತಿಯನ್ನು ಒಂದುಗೂಡಿಸುವ ಕಾರ್ಯ ಆಗಿದೆ, ಮುಂದೆಯೂ ಇದು ಬೆಳೆಯಲಿ ಎಂದು ಹಾರೈಸಿದರು.

ಇದು ಎರಡನೇ ಭೇಟಿ

ಈ ಹಿಂದೆ 'ಸ್ಟೈಲ್' ಸಿನಿಮಾಕ್ಕಾಗಿ ಬಂದಿದ್ದೆವು. ಇದೀಗ ಮತ್ತೆ ಬಂದಿದ್ದೇನೆ. ಸುದೀರ್ಘ ವರ್ಷದ ಬಳಿಕವೂ ನನ್ನ ಮೇಲೆ ಅದೇ ಪ್ರೀತಿ ತೋರುತ್ತಿದ್ದೀರಲ್ಲಾ. ನಾನೇ ಪುಣ್ಯವಂತ' ಎಂದು ಕೃತಜ್ಞರಾದರು. ಇಂತಹ ಅದ್ಭುತ ಕಾರ್ಯಕ್ರಮಕ್ಕೆ ನಾವು ಬಾರದಿದ್ದರೆ ತಪ್ಪಾಗುತ್ತಿತ್ತು. ಎಲ್ಲ ಸಂಸ್ಕೃತಿ ಒಂದೆಡೆ ನೋಡುವುದೇ ನಮ್ಮ ಪುಣ್ಯ ಎಂದು ಗೀತಾ ಶಿವರಾಜ್ ಕುಮಾರ್ ಹೇಳಿದರು.

ಕುಣಿದು ಕುಪ್ಪಳಿಸಿದ ಶಿವರಾಜ್ ಕುಮಾರ್

ನೆರೆದ ಜನಸ್ತೋಮವನ್ನು ಕಂಡು ರೋಮಾಂಚನಗೊಂಡ ಶಿವರಾಜ್ ಕುಮಾರ್ ಹಾಡು ಹಾಡಿ, ಕುಣಿದು ಕುಪ್ಪಳಿಸಿದರು. ತಾಳ ಹಿಡಿದು, 'ಕೋಲು ಮಂಡೆ ಜಂಗಮ ದೇವರು...' ಹಾಡಿ, ಹೆಜ್ಜೆ ಹಾಕಿದರು. ತಮ್ಮ ಆರಂಭಿಕ 'ಆನಂದ್' ಸಿನಿಮಾದ 'ಟುವ್ವಿ ಟುವ್ವಿ' ಹಾಡಿನಿಂದ ಹಿಡಿದು ಪುನೀತ್ ರಾಜ್ ಕುಮಾರ್ ಅವರ 'ಬೊಂಬೆ ಹೇಳುತೈತೆ.... ನೀನೆ ರಾಜಕುಮಾರ...' ವರೆಗಿನ ಹಾಡುಗಳನ್ನು ಹಾಡಿದರು. ಕಿಕ್ಕಿರಿದ ವಿದ್ಯಾರ್ಥಿ ಸಾಗರವು ಶಿಳ್ಳೆ, ಚಪ್ಪಾಳೆಗಳನ್ನು ನೀಡಿ ಪ್ರೋತ್ಸಾಹಿಸಿದರು.

ಶಿವರಾಜ್ ದಂಪತಿಯ ರೇಖಾ ಚಿತ್ರ ಹಸ್ತಾಂತರ

ವಿದ್ಯಾರ್ಥಿ ಕೌಶಿಕ್ ರಚಿಸಿದ ಶಿವರಾಜ್ ದಂಪತಿಯ ರೇಖಾ ಚಿತ್ರವನ್ನು ಹಸ್ತಾಂತರಿಸಲಾಯಿತು.

ದಿನದ ಸ್ಪರ್ಧೆಗಳ ನಿರ್ಣಾಯಕರಾಗಿ ಬಂದ ಚಿತ್ರರಂಗದ ಪ್ರಮುಖರಾದ ನಟ ರಾಹುಲ್ ಅಮೀನ್, ಶೈಲಶ್ರೀ ಮೂಲ್ಕಿ, ದಿಶಾ ಶೆಟ್ಟಿ ಹಾಗೂ ಸಾಹಿಲ್ ರೈ, ಮಾಜಿ ಸಚಿವ ಅಭಯಚಂದ್ರ ಜೈನ್, ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ, ಆಳ್ವಾಸ್ ಸಮೂಹ ಸಂಸ್ಥೆಗಳ ಪ್ರಾಂಶುಪಾಲರುಗಳು ವೇದಿಕೆಯಲ್ಲಿದ್ದರು. ನಿತೇಶ್ ಮಾರ್ನಾಡ್ ಕಾರ್ಯಕ್ರಮ ನಿರೂಪಿಸಿದರು.



ಆಹಾರ ವೈಭವ

ಕೇರಳ, ಮಹಾರಾಷ್ಟ್ರ, ಕರ್ನಾಟಕ, ಗುಜರಾತ್ ಮತ್ತು ದೇಶದ ವಿವಿಧ ಭಾಗಗಳ ಆಹಾರ ಸವಿಯುವ ಸದಾವಕಾಶವು ವಿದ್ಯಾರ್ಥಿಗಳಿಗೆ ದೊರೆಯಿತು. ಕೇರಳ ಶೈಲಿಯ ಕಪ್ಪಾ ಮತ್ತು ಮೀನು ಸಾರು, ಇಡಿಯಪ್ಪಂ, ಪರಂಪುರಿ, ಕಟ್ಟನ್ ಚಾಯ, ಮಲಬಾರ ಬಿರಿಯಾನಿ, ತುಳುನಾಡಿನ ಕೋರಿ ರೊಟ್ಟಿ, ಕೋಳಿ ಸುಕ್ಕ, ಮೀನು ಪುಳಿಮುಂಚಿ, ಮೂಡೆ, ಗುಂಡ, ಹೋಳಿಗೆ ರಸಾ ಯನ, ಈಶಾನ್ಯ ಭಾರತದ ಪೈಕಿ ವಿಶೇಷವಾಗಿ ಮಣಿಪುರಿಯ ಸಿಂಗ್ಜು, ಕೆಲಿಚ್ಚನ್, ಇಮ್ಲಿ ಜ್ಯೂಸ್, ಮ್ಯಾಮೋಸ್, ಇತರ ಭಾರತದ ಹೈದರಾಬಾದ್ ಬಿರಿಯಾನಿ, ಮೊಹಬತ್ ಕಿ ಶರಬತ್, ಚೋಲೆ ಭತುರೆ - ಆಮ್ ರಾಸ್, ಕಚೋರಿ, ಮೊಮೊಸ್ ಮಹಾರಾಷ್ಟ್ರ ಮತ್ತು ಗುಜರಾತಿನ ಪಾನಿಪುರಿ, ಸೇವ್ ಪುರಿ, ಮಸಾಲಾ ಪುರಿ, ದಹಿ ಕಚೋರಿ ಮತ್ತಿತರ ಆಹಾರ ಖಾದ್ಯಗಳು ಬಾಯಿ ನೀರೂರಿಸಿದವು.

ಕಲಾ ಪ್ರದರ್ಶನ

ಮಹಾರಾಷ್ಟ್ರ, ಗುಜರಾತ್, ಈಶಾನ್ಯ ಭಾರತ, ಕೇರಳ, ಕರಾವಳಿ ಕರ್ನಾಟಕ, ಇತರೆ ಭಾರತ ಸೇರಿದಂತೆ ಆರು ತಂಡಗಳು ತಮ್ಮ ತವರೂರಿನ ಕಲಾ ಪ್ರಕಾರವನ್ನು ಪ್ರದರ್ಶಿಸಿದರು. ಸಾಂಸ್ಕೃತಿಕ ಕಲಾಕೃತಿಗಳಿಂದ ಸಿಂಗರಿಸಲ್ಪಟ್ಟ ಆವರಣದಲ್ಲಿ ಸಾಂಪ್ರದಾಯಿಕ ಉಡುಗೆ-ತೊಡುಗೆ ತೊಟ್ಟ ವಿದ್ಯಾರ್ಥಿಗಳೇ ಪ್ರಮುಖ ಆಕರ್ಷಣೆ ಆಗಿದ್ದರು.

ಡಾ. ಎಂಎನ್‌ಆರ್‌ಗೆ 'ಅತ್ಯುತ್ತಮ ವ್ಯವಸ್ಥಾಪಕ' ಪ್ರಶಸ್ತಿ ಪ್ರದಾನ



ಮಂಗಳೂರು : ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರಿಗೆ ಮಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಶನ್ (ಎಂಎಂಎ) ವತಿಯಿಂದ ನೀಡಲಾಗುವ ಪ್ರತಿಷ್ಠಿತ 27ನೇ 'ಎಂಎಂಎ-ಕೆವಿಕೆ ಅತ್ಯುತ್ತಮ ವ್ಯವಸ್ಥಾಪಕ ಪ್ರಶಸ್ತಿ-2025'ನ್ನು ಶನಿವಾರ ನಗರದ ಎಸ್.ಡಿ.ಎಂ ಕಾಲೇಜಿನ ಸಭಾಂಗಣದಲ್ಲಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ, ನಾನೊಬ್ಬನೇ ಬೆಳೆಯುವುದಲ್ಲ, ಜೊತೆಗೆ ಇನ್ನೊಬ್ಬರನ್ನು ಬೆಳೆಸುವಂತಹ ಕೆಲಸ ಮಾಡುವುದು ನನ್ನ ಉದ್ದೇಶ. ಮಹಿಳೆಯರು ಕೂಡಾ ಸ್ವಾವಲಂಬಿಗಳಾಗ ಬೇಕೆಂದು ನಾನು ಸಹಕಾರಿ ಸಂಸ್ಥೆಯನ್ನು ಪ್ರಾರಂಭಿಸಿರುವುದು. ಯಾವುದೇ ಸಂಸ್ಥೆಯು ಬೆಳೆಯಲು ನಾನಾ ಕ್ಷೇತ್ರದವರ ಪ್ರಮುಖ ಪಾತ್ರ ವಹಿಸುತ್ತಾರೆ. ದೇಶ- ವಿದೇಶಗಳ ಅನೇಕ ಸನ್ಮಾನ, ಪ್ರಶಸ್ತಿಗಳನ್ನು ನಾನು ಸ್ವೀಕರಿಸಿದ್ದೇನೆ. ಮಂಗಳೂರು ಮ್ಯಾನೇಜ್‌ಮೆಂಟ್ ಎಸೋಸಿಯೇಶನ್ ನೀಡಿದ ಸನ್ಮಾನ ತಾಯ್ನಾಡಿನ ಗೌರವವೆಂದು ಭಾವಿಸುತ್ತೇನೆ ಎಂದು ಹೇಳಿದರು.

ಮುಖ್ಯ ಅತಿಥಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಮಾತನಾಡಿ, ಡಾ. ಎಂಎನ್‌ಆರ್ ಗ್ರಾಮೀಣ ಭಾಗದವರನ್ನು ಅಭಿವೃದ್ಧಿಯತ್ತ ಮುನ್ನಡೆಯುವತ್ತ ಮಾಡಿದ್ದಾರೆ. ಅವರ ಸ್ಪಷ್ಟ ನುಡಿ, ತಾಳ್ಮೆ, ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳುವ ಗುಣಗಳನ್ನು ನಾವೂ ಪಾಲಿಸಬಹುದು. ಕೇವಲ ಜಿಲ್ಲೆಯಲ್ಲದೆ ಇಡೀ ರಾಜ್ಯದಲ್ಲೇ ಎಲ್ಲ ಅಡೆತಡೆಗಳನ್ನು ಮೀರಿ ಸಹಕಾರಿ ಕ್ಷೇತ್ರವನ್ನು ಮುನ್ನಡೆಸಿದ್ದಾರೆ. ಸಹಕಾರಿ ಸಂಸ್ಥೆಯನ್ನು ದೇಶದಲ್ಲೇ ನಂ.1 ಸ್ಥಾನಕ್ಕೆ ಕೊಂಡೊಯ್ದದ್ದು ಮಹತ್ತರ ಸಾಧನೆ. ಇವರಿಗೆ ಪ್ರಶಸ್ತಿ ನೀಡಿದ್ದು ಎಂ.ಎಂ.ಎ ಸಂಸ್ಥೆಯ ಗೌರವವನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು.

ಅಸೋಸಿಯೇಶನ್ ಅಧ್ಯಕ್ಷ ಎಡ್ವರ್ಡ್ ಜೆ. ಕೊಯೆಲ್ಹೋ, ಉಪಾಧ್ಯಕ್ಷ ಕೃಷ್ಣ ಶೆಟ್ಟಿ, ಡಾ. ಅರುಣ್ ಕುಮಾರ್ ಶೆಟ್ಟಿ , ವಿನ್ಸೆಂಟ್ ಡಿಸೋಜಾ, ಮಾಜಿ ಅಧ್ಯಕ್ಷ ಕೆ. ಜಯರಾಜ್ ಬಿ. ರೈ, ಕಾರ್ಯದರ್ಶಿ ಡಾ. ರಮ್ಯಾ ಶೆಟ್ಟಿ, ಸದಸ್ಯೆ ಡಾ. ಪ್ರಮೀಳಾ ಎಸ್. ಶೆಟ್ಟಿ ಮೊದಲಾದವರಿದ್ದರು.

ಲೈನ್‌ಮನ್ ಮನೆಮಂದಿಗೆ 1.20 ಕೋ. ವಿಮಾ ಪರಿಹಾರ ಹಸ್ತಾಂತರ



ಮಂಗಳೂರು: ಕರ್ತವ್ಯ ನಿರ್ವಹಿಸುವ ವೇಳೆ ಸಂಭವಿಸಿದ ಆಕಸ್ಮಿಕ ದುರ್ಘಟನೆಯಲ್ಲಿ ಮೃತಪಟ್ಟ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ) ಲೈನ್‌ಮನ್ ಶಿವಾನಂದ್ ಅವರ ಕುಟುಂಬಿಕರಿಗೆ 1.20 ಕೋಟಿ ರೂ. ಮೊತ್ತದ ವಿಮಾ ಪರಿಹಾರವನ್ನು ವಿತರಿಸಲಾಯಿತು.

ಮೃತ ಶಿವಾನಂದ್ ಅವರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಕಾವೂರು ಶಾಖೆಯಲ್ಲಿ ತಮ್ಮ ವೇತನ ಉಳಿತಾಯ ಖಾತೆಯನ್ನು ಹೊಂದಿದ್ದು, ಆ ಖಾತೆಗೆ ಸಂಬಂಧಿಸಿದ ವಿಮಾ ಸೌಲಭ್ಯಗಳ ಅನ್ವಯ ಅವರ ಕುಟುಂಬಕ್ಕೆ 1.20 ಕೋಟಿ ರೂ. ಮೊತ್ತದ ವಿಮಾ ಪರಿಹಾರವನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮಂಗಳೂರು ವಲಯ ಮುಖ್ಯಸ್ಥ ರಾಜೇಂದ್ರ ಕುಮಾರ್ ಅವರ ಮಾರ್ಗದರ್ಶನದಲ್ಲಿ ಬ್ಯಾಂಕಿನ ಪ್ರಾದೇಶಿಕ ಮುಖ್ಯಸ್ಥೆ ತೇಜಸ್ವಿನಿ ವಿ.ಸಿ. ಅವರು ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಆರ್. ಜಯಕುಮಾರ್ ಅವರ ಸಮ್ಮುಖದಲ್ಲಿ ಹಸ್ತಾಂತರಿಸಿದರು. ಒಟ್ಟು ಪರಿಹಾರ ಮೊತ್ತದಲ್ಲಿ 1.15 ಕೋಟಿ ವೈಯಕ್ತಿಕ ಅಪಘಾತ ವಿಮೆ ಹಾಗೂ 5 ಲಕ್ಷ ರೂ. ಜೀವ ವಿಮೆ ಒಳಗೊಂಡಿತ್ತು.

ಮೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ನಡೆದ ಚೆಕ್ ಹಸ್ತಾಂತರ ಕಾರ್ಯಕ್ರಮದಲ್ಲಿ ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಆರ್. ಜಯಕುಮಾರ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪ್ರಾದೇಶಿಕ ಮುಖ್ಯಸ್ಥೆ ತೇಜಸ್ವಿನಿ ವಿ.ಸಿ., ಉಪ ಪ್ರಾದೇಶಿಕ ಮುಖ್ಯಸ್ಥ ಶಶಿಕುಮಾರ್ ಸೇರಿದಂತೆ ಮೆಸ್ಕಾಂ ಅಧಿಕಾರಿ ಗಳಾದ ಹರೀಶ್, ಮುರಳೀಧರ ನಾಯಕ್, ಗಿರೀಶ್ ಕುಮಾರ್ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೇರಿಹಿಲ್ ಟ್ಯಾಂಕ್‌ನಿಂದ ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆ

ಐದು ತಿಂಗಳಿನಿಂದ ನೀರಿನ ಸಮಸ್ಯೆ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಮೇರಿಹಿಲ್‌ನಿಂದ ಕೊಂಚಾಡಿ- ಕೊಟ್ಟಾರಚೌಕಿವರೆಗೆ ವ್ಯಾಪಿಸಿರುವ ದೇರೆಬೈಲು ಪೂರ್ವ ವಾರ್ಡ್‌ನ ಅಲ್ಲಲ್ಲಿ ನೀರಿನ ಸಮರ್ಪಕವಾಗಿ ಪೂರೈಕೆಯಾಗದೆ ಜನತೆ ತೊಂದರೆ ಅನುಭವಿಸುತ್ತಿದ್ದಾರೆ. ಲ್ಯಾಂಡ್‌ಲಿಂಕ್ಸ್‌ನಂತಹ ಸಂಪೂರ್ಣ ಜನವಸತಿ ಪ್ರದೇಶ, ಫ್ಲ್ಯಾಟ್ ಒಳಗೊಂಡ ಈ ವಾರ್ಡ್‌ನಲ್ಲಿ ಕಳೆದ ಒಂದೆರಡು ದಶಕದಲ್ಲಿ ಮನೆಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆ ಆಗಿದೆ. ನೀರಿನ ಸಂಪರ್ಕಗಳು ಅಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಆದರೆ, ನೀರಿನ ಪೂರೈಕೆ ಈ ಹಿಂದಿನಷ್ಟೇ ಇದೆ. ಇದರಿಂದಾಗಿ ವಾರ್ಡ್‌ನ ಹಲವು ಪ್ರದೇಶಗಳು ಪಾಲಿಕೆ ನೀರು ಹೊರತಾದ ನೀರಿನ ಸರಬರಾಜು ಮೂಲವನ್ನು ಹೊಂದುವುದು ಇಲ್ಲಿ ಅನಿವಾರ್ಯ.

ದೇರೆಬೈಲು ಪೂರ್ವ ವಾರ್ಡ್‌ನ ಮಂದಾರಬೈಲು, ಮಲ್ಲಿಕಾಡು, ಬೋರುಗುಡ್ಡೆ, ಕಾರ್ಜಹಿತ್ತಿಲು, ಮೂಕಾಂಬಿಕಾ ದೇವಸ್ಥಾನ ಬಳಿ, ನಾಗಕನ್ನಿಕಾ ದೇವಸ್ಥಾನ ಬಳಿ, ಲೋಲಾಕ್ಷಿ ಕಂಪೌಂಡ್, ಪರಪಾದೆ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ.

'ದೇರೆಬೈಲ್ ಪೂರ್ವ ವಾರ್ಡ್‌ನ ವಿವಿಧ ಕಡೆಯ ನೀರಿನ ಸಮಸ್ಯೆ ಬಗ್ಗೆ ಶಾಸಕರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ತುಂಬೆಯಿಂದ ಮೇರಿಹಿಲ್ ಟ್ಯಾಂಕ್‌ಗೆ ಪೂರೈಕೆಯಾಗುವ ನೀರಿನ ಪ್ರಮಾಣವನ್ನು ಹೆಚ್ಚಿಸಿ ಮುಂಜಾನೆ 4ಕ್ಕೆ ಟ್ಯಾಂಕ್ ಭರ್ತಿಯಾದರೆ ಉತ್ತಮ ಪ್ರೆಶರ್‌ನೊಂದಿಗೆ ವಾರ್ಡ್‌ನ ಎಲ್ಲ ಕಡೆ ನೀರು ಪೂರೈಕೆ ಆಗುತ್ತದೆ. ಈ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂಬುದು ನಿಕಟಪೂರ್ವ ಕಾರ್ಪೊರೇಟರ್ ರಂಜಿನಿ ಕೋಟ್ಯಾನ್ ಅವರ ಅಭಿಪ್ರಾಯ.

ಇಡೀ ವಾರ್ಡಿಗೆ ನೀರು ಪೂರೈಕೆಯಲ್ಲಿ ವ್ಯತ್ಯಯ

ದೇರೆಬೈಲು ಪೂರ್ವ ವಾರ್ಡ್‌ಗೆ ಮೇರಿಹಿಲ್ ಟ್ಯಾಂಕ್‌ನಿಂದ ನೀರು ಪೂರೈಸಲಾಗುತ್ತಿದೆ. ತುಂಬೆಯಿಂದ ಮೇರಿಹಿಲ್ ಟ್ಯಾಂಕ್‌ಗೆ ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆಯಾದ ಕಾರಣ ಈ ವಾರ್ಡ್‌ನ ಎಲ್ಲ ಕಡೆಗೆ ಹಂಚಿಕೆಯಾಗುವಂತೆ ಎರಡು ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದೆ. ಆದರೂ, ಪ್ರೆಶರ್ ಕಡಿಮೆಯಾದ ಕಾರಣ ಪರಪಾದೆ ಮುಂತಾದ ಸ್ಥಳಗಳಿಗೆ ನೀರು ತಲುಪುತ್ತಿಲ್ಲ. ಒಟ್ಟಾರೆಯಾಗಿ ಇಡೀ ವಾರ್ಡ್‌ಗೆ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದೆ ಎಂಬುದು ಸ್ಥಳೀಯರ ಆರೋಪ.



ದೇರೆಬೈಲು ಪೂರ್ವ ವಾರ್ಡ್‌ನ ಲ್ಯಾಂಡ್‌ಲಿಂಕ್ಸ್‌ನಲ್ಲಿ ನೀರಿಗಾಗಿ ಕೊಳವೆಬಾವಿ ಕೊರೆಯಿಸಲಾಗಿದೆ



ದೇರೆಬೈಲು ಪೂರ್ವ ವಾರ್ಡ್‌ಗೆ ಮೇರಿಹಿಲ್ ಟ್ಯಾಂಕ್‌ನಿಂದ ನೀರು ಬಿಡಲಾಗುತ್ತಿದೆ. ಈ ಹಿಂದೆ ಮೇರಿಹಿಲ್ ಟ್ಯಾಂಕ್ ಬೆಳಗ್ಗೆ ನಾಲ್ಕರ ವೇಳೆಗೆ ಭರ್ತಿಯಾಗಿ ವಾರ್ಡ್‌ನ ಪ್ರದೇಶಗಳಿಗೆ ನೀರು ಪೂರೈಕೆ ಮಾಡಲಾಗುತ್ತಿತ್ತು. ಈಗ ಟ್ಯಾಂಕ್ ಭರ್ತಿಯಾಗುವಾಗಲೇ ಬೆಳಗ್ಗೆ 6-7 ಗಂಟೆ ಆಗುತ್ತಿದೆ. ಇದರಿಂದಾಗಿ ಎಲ್ಲ ಸ್ಥಳಗಳಿಗೆ ನೀರು ಸರಬರಾಜು ಆಗುತ್ತಿಲ್ಲ. ಕಳೆದ ಐದು ತಿಂಗಳಿನಿಂದ ಈ ಸಮಸ್ಯೆ ಇದೆ. ಮೇರಿಹಿಲ್ ಪಂಪ್‌ಹೌಸ್‌ಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ನೀಡಿದರೆ ನಮ್ಮ ವಾರ್ಡ್‌ನ ನೀರಿನ ಸಮಸ್ಯೆ ಬಹುತೇಕ ಬಗೆಹರಿಯುತ್ತದೆ. ಪಾಲಿಕೆ ನೀರು ಪೂರೈಕೆಯಾಗದ ಕಡೆಯಲ್ಲಿ ಮನಪಾ ಅಧಿಕಾರಿಗಳ ಗಮನಕ್ಕೆ ತಂದು ಟ್ಯಾಂಕರ್ ಮೂಲಕ ನೀರು ನೀಡಲಾಗುತ್ತಿದೆ. ಲ್ಯಾಂಡ್‌ಲಿಂಕ್ಸ್‌ನಲ್ಲಿ ಹೊಸ ಬೋರ್ ವೆಲ್ ಕೊರೆಯಿಸಲಾಗಿದ್ದು, ನೀರು ಬಳಕೆ ಇನ್ನಷ್ಟೇ ಆರಂಭಗೊಳ್ಳಬೇಕಿದೆ. ಕೊಂಚಾಡಿ, ಪರಪಾದೆ ಸಹಿತ ಮೂರು ಕಡೆಯಲ್ಲಿ ಕೊಳವೆಬಾವಿ ನಿರ್ಮಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಲಾಗಿದ್ದು, ಜನತೆಯ ಬೇಡಿಕೆಗೆ ಅಧಿಕಾರಿಗಳು ಸ್ಪಂದಿಸಬೇಕಿದೆ.

■ **ರಂಜಿನಿ ಕೋಟ್ಯಾನ್,** ದೇರೆಬೈಲು ಪೂರ್ವ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ನಮ್ಮಲ್ಲಿ ಕಳೆದ ಡಿಸೆಂಬರ್‌ನಿಂದ ನೀರಿನ ಸಮಸ್ಯೆಯಿದೆ. ಪೈಪ್ ಲೈನ್‌ನಲ್ಲಿ ಬರುವ ನೀರಿನ ಪ್ರಮಾಣವೇ ಕಡಿಮೆಯಾಗಿದೆ. ಪಾಲಿಕೆ ವತಿಯಿಂದ ಎರಡು ದಿನಕ್ಕೊಮ್ಮೆ ನೀರು ಪೂರೈಸುತ್ತಿದ್ದಾರೆ. ನೀರು ಬಂದರೂ ಪ್ರೆಶರ್ ಇಲ್ಲ. ಕೆಲವೊಮ್ಮೆ ಹನಿಹನಿಯಾಗಿ ಮಾತ್ರ ಬರುತ್ತಿದೆ. ಇನ್ನೂ ಕೆಲವು ದಿನಗಳಲ್ಲಿ ನಮ್ಮಲ್ಲಿಗೆ ನೀರು ತಲುಪುವುದೇ ಇಲ್ಲ. ನಮ್ಮ ವಾರ್ಡ್‌ನ ನಿಕಟಪೂರ್ವ ಕಾರ್ಪೊರೇಟರ್ ನೀರಿನ ಸಮಸ್ಯೆಗೆ ಸ್ಪಂದಿಸುತ್ತಿದ್ದಾರೆ. ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಸಿಗುತ್ತಿದೆ. ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕು, ಪೈಪ್‌ಲೈನ್ ಮೂಲಕ ಹೆಚ್ಚು ನೀರು ಸರಬರಾಜು ಮಾಡಬೇಕು ಎಂದು ಒತ್ತಾಯಿಸಿ ಮಂಗಳೂರು ಮಹಾನಗರ ಪಾಲಿಕೆಗೆ ತಿಂಗಳ ಹಿಂದೆ ಮನವಿ ನೀಡಿದ್ದೇವೆ. ಅಧಿಕಾರಿಗಳು ಸಮರ್ಪಕವಾಗಿ ನೀರು ಒದಗಿಸಬೇಕು.

■ **ಪೂರ್ಣಿಮಾ ಶೆಟ್ಟಿ,** ದೇರೆಬೈಲು ಕೊಂಚಾಡಿ ಕಾರ್ಜಹಿತ್ತಿಲು ನಿವಾಸಿ

ಬೋರ್‌ವೆಲ್ ನಿರ್ಮಾಣ

ನೀರಿನ ಸಮಸ್ಯೆ ಇರುವ ಕಡೆಗೆ ಮನಪಾ ಟ್ಯಾಂಕರ್ ಮೂಲಕ ನೀರು ಪೂರೈಕೆಯಾಗುತ್ತಿದೆ. ಕೆಲವರು ಖಾಸಗಿ ಟ್ಯಾಂಕರ್‌ಗಳ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ಲ್ಯಾಂಡ್‌ಲಿಂಕ್ಸ್, ಗಿರಿನಗರದಲ್ಲಿ ಬೋರ್‌ವೆಲ್ ನೀರು ಬಳಸಲಾಗುತ್ತಿದೆ. ಕಾರ್ಜಹಿತ್ತಿಲುವಿನಲ್ಲಿ ಕೊಳವೆಬಾವಿ ಹಾಳಾಗಿದೆ. ನವನಗರದಲ್ಲಿ ಹೊಸ ಬೋರ್‌ವೆಲ್ ನಿರ್ಮಿಸಲಾಗಿದೆ.

ನಾಳೆ ವಾರ್ಡ್ -24
ದೇರೆಬೈಲು ದಕ್ಷಿಣ ಪರಿಸರದ ಸ್ಥಿತಿಗತಿ

ಅಂತಾರಾಷ್ಟ್ರೀಯ ಒಲಿಂಪಿಯಾಡ್ ಪರೀಕ್ಷೆ । ವಿವಿಧ ವಿಷಯಗಳ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ

ವಿವೇಕಾನಂದದ ವಿದ್ಯಾರ್ಥಿಗಳು 2ನೇ ಹಂತಕ್ಕೆ



ಪುತ್ತೂರು: ಸೈನ್ಸ್ ಒಲಿಂಪಿಯಾಡ್ ಫೌಂಡೇಶನ್ ವತಿಯಿಂದ ಆಯೋಜಿಸಲ್ಪಡುವ ಒಲಿಂಪಿಯಾಡ್ ಪರೀಕ್ಷೆಗಳಲ್ಲಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 948 ವಿದ್ಯಾರ್ಥಿಗಳು ವಿವಿಧ ವಿಷಯಗಳ ಪರೀಕ್ಷೆಗಳಲ್ಲಿ ಭಾಗವಹಿಸಿ ಉತ್ತಮ ಫಲಿತಾಂಶ ಗಳಿಸಿದ್ದಾರೆ.

ಎಸ್.ಒ.ಎಫ್. ಅಂತಾರಾಷ್ಟ್ರೀಯ ಸಾಮಾನ್ಯ ಜ್ಞಾನ ಒಲಿಂಪಿಯಾಡ್ ಪರೀಕ್ಷೆಯ ವಲಯ ಮಟ್ಟದಲ್ಲಿ 9ನೇ ತರಗತಿಯ ಅನನ್ಯ ಎನ್. ಗೌಡ ಚಿನ್ನದ ಪದಕ ಹಾಗೂ ಬೆಳ್ಳಿಯ ಪದಕ ಮತ್ತು ರೂ.1000 ಬೆಲೆಯ ಬಹುಮಾನ ಕೂಪನ್, 1ನೇ ತರಗತಿಯ ಚತುರ್ವಿ ಎನ್.ಎಸ್. ಚಿನ್ನದ ಪದಕ ಹಾಗೂ ಬೆಳ್ಳಿಯ ಪದಕ ಮತ್ತು ರೂ.500 ಬೆಲೆಯ ಬಹುಮಾನ ಕೂಪನ್, ಚಾರ್ವಿಕ್ ಎನ್. ಚಿನ್ನದ ಪದಕವನ್ನು ಪಡೆದಿದ್ದಾರೆ. ಒಟ್ಟು 10 ವಿದ್ಯಾರ್ಥಿಗಳು 2ನೇ ಹಂತದ ಒಲಿಂಪಿಯಾಡ್ ಪರೀಕ್ಷೆಗೆ ಆಯ್ಕೆಯಾಗಿದ್ದಾರೆ.

ಗಣಿತ ವಿಷಯದಲ್ಲಿ 3ನೇ ತರಗತಿಯ ಆರುಷ್ ಶೆಟ್ಟಿ, 4ನೇ ತರಗತಿಯ ಶೌರಿ ಹಿಳ್ಳೇಮನೆ, 5ನೇ ತರಗತಿಯ ಉದ್ಯಾನ್ ಎಂ., 6ನೇ ತರಗತಿಯ ಆರ್ವಿ ರೈ, ಇಂಗ್ಲೀಷ್ ವಿಷಯದಲ್ಲಿ ದೃಶ್ಯಾ ಆರ್.ಜಿ., 5ನೇ ತರಗತಿಯ ಆರ್ಯನ್ ಎ., 8ನೇ ತರಗತಿಯ ಪ್ರತೀಕ್ಷಾ ದೀಪ್ತಿ ಯು., ವಿಜ್ಞಾನ ವಿಷಯದಲ್ಲಿ 6ನೇ ತರಗತಿಯ ಮಹೀಮಾ ಎ., 8ನೇ ತರಗತಿಯ ಆರಾಧ್ಯ ಭಟ್ ಕೆ., 9ನೇ ತರಗತಿಯ ಸಿರಿ ಹಿಳ್ಳೇಮನೆ ಅವರು ಮಂಗಳೂರಿನ ಕೆನರಾ ಪ್ರೌಢ ಶಾಲೆಯಲ್ಲಿ ನಡೆದ 2ನೇ ಹಂತದ ಪರೀಕ್ಷೆಯನ್ನು ಬರೆದಿದ್ದು, ಅವರಲ್ಲಿ ಮಹಿಮಾ ಎ. ಮತ್ತು ಆರುಷ್ ಶೆಟ್ಟಿ 'ಸರ್ಟಿಫಿಕೇಟ್ ಆಫ್ ಝೋನಲ್ ಎಕ್ಸಲೆನ್ಸ್ ಅವಾರ್ಡ್' ಪಡೆದಿದ್ದಾರೆ.



ಶಾಲಾ ಮಟ್ಟದ ಅಂತಾರಾಷ್ಟ್ರೀಯ ಸಾಮಾನ್ಯ ಜ್ಞಾನ ಒಲಿಂಪಿಯಾಡ್ ಪರೀಕ್ಷೆಯಲ್ಲಿ ಒಟ್ಟು 81 ವಿದ್ಯಾರ್ಥಿಗಳು, ಇಂಗ್ಲೀಷ್ ಒಲಿಂಪಿಯಾಡ್ ಪರೀಕ್ಷೆಯಲ್ಲಿ 17, ವಿಜ್ಞಾನ ಒಲಿಂಪಿಯಾಡ್ ಪರೀಕ್ಷೆಯಲ್ಲಿ 16, ಗಣಿತ ಒಲಿಂಪಿಯಾಡ್ ಪರೀಕ್ಷೆಯಲ್ಲಿ 22 ಚಿನ್ನದ ಪದಕಗಳನ್ನು ಗಳಿಸಿದ್ದಾರೆ ಎಂದು ಶಾಲಾ ಮುಖ್ಯ ಗುರುಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ರಾಜ್ಯದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ: ಬೊಮ್ಮಾಯಿ

ಬಾಗಲಕೋಟೆ: ರಾಜ್ಯದ ಜನರು ಸರ್ಕಾರದ ಮೇಲೆ ಇಟ್ಟ ಭರವಸೆ ಹುಸಿಯಾಗಿದೆ. ರಾಜ್ಯದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ. ಕೋವಿಡ್ ಸಂದರ್ಭದಲ್ಲಿ ಕೂಡ ಬಿಜೆಪಿ ಸರ್ಕಾರ ಆರ್ಥಿಕ ವ್ಯವಸ್ಥೆಯನ್ನು ಸರಿಯಾಗಿಟ್ಟುಕೊಂಡಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಅವಧಿ ಮುಗಿಯುತ್ತಿದ್ದಂತೆ 6ರಿಂದ 7 ಲಕ್ಷ ಕೋಟಿ ರೂ.ಸಾಲವನ್ನು ರಾಜ್ಯದ ಜನರ ಮೇಲೆ ಹೊರೆಸಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ನವನಗರದ ಬಿಜೆಪಿ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಮಾತನಾಡಿ, ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ ಎನ್ನುವ ಸಿದ್ದರಾಮಯ್ಯನವರು ಯುಪಿಎ ಸರ್ಕಾರವಿದ್ದಾಗ 700 ಕೋಟಿ ರೂ. ರೈಲ್ವೆ ಇಲಾಖೆಗೆ ನೀಡುತ್ತಿತ್ತು. ಈಗಿನ ನರೇಂದ್ರ ಮೋದಿ ಸರ್ಕಾರ ರಾಜ್ಯಕ್ಕೆ 7 ಸಾವಿರ ಕೋಟಿ ರೂ. ಅನುದಾನ ರೈಲ್ವೆ ಯೋಜನೆಗೆ ನೀಡುತ್ತಿದೆ ಎಂದು ಹೇಳಿದರು. ದೇಶಕ್ಕೆ ದೊಡ್ಡ ಸಮಸ್ಯೆ ಎದುರಾದಾಗ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯದ ಎಲ್ಲ ಮುಖ್ಯಮಂತ್ರಿಗಳ ಸಭೆ ನಡೆಸಿದರೆ ರಾಜ್ಯದ ಸಿಎಂ ಮಾತ್ರ ಗೈರು ಉಳಿಯುತ್ತಾರೆ. ನೀತಿ ಆಯೋಗದ ಸಭೆಗೂ ಹೋಗುವುದಿಲ್ಲ. ಕರ್ತವ್ಯ ಲೋಪವನ್ನು ರಾಜ್ಯದ ಸಿಎಂ ಎಸಗುವ ಮೂಲಕ ಉದ್ಧಟತನ ಪ್ರದರ್ಶನ ಮಾಡುತ್ತಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿವರ್ಷ 18 ಸಾವಿರ ಕೋಟಿ ರೂ.ಯುಕೆಪಿ ಯೋಜನೆಗೆ ಮೀಸಲಿಟ್ಟು ಯೋಜನೆಯನ್ನು ಮುಗಿಸುತ್ತೇವೆ ಎಂದು ಭರವಸೆ ನೀಡಿದವರು ಇತ್ತೀಚಿಗೆ ಬಜೆಟ್ ಮಂಡಿಸಿದಾಗ ಕೇವಲ 3 ಸಾವಿರ ಕೋಟಿ ಮೀಸಲಿಟ್ಟಿದ್ದಾರೆ. ಜನರ ಕಣ್ಣಿಗೆ ಮಣ್ಣು ಎರಚುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ. ಕ್ಷಮೆಗೆ ಅರ್ಹವಿಲ್ಲದ ಅಪರಾಧವನ್ನು ಈ ಸರ್ಕಾರ ಮಾಡಿದೆ ಎಂದು ದೂರಿದರು.

ಬಸವೇಶ್ವರ ಜಾತ್ರೆ



ಕಲಬುರಗಿ ಜಿಲ್ಲೆಯ ಯಡ್ರಾಮಿಯ ಬಸವೇಶ್ವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ಶನಿವಾರ ನೆರವೇರಿತು.

ಕೈ ಅಭ್ಯರ್ಥಿ ಪರ ಮತಯಾಚನೆ

ಬಾಗಲಕೋಟೆ: ದಿ.ಎಚ್.ವೈ.ಮೇಟಿ ಅವರ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಉಮೇಶ ಮೇಟಿ ಅವರನ್ನು ಬೆಂಬಲಿಸಿ ಕಾಂಗ್ರೆಸ್ ಗೆಲ್ಲಿಸಬೇಕು ಎಂದು ಮಾಜಿ ಸಚಿವ ಅಜಯಕುಮಾರ ಸರನಾಯಕ ಹೇಳಿದರು.



ತಾಲೂಕಿನ ಬೇವೂರಗ್ರಾಮದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಪಕ್ಷದ ಚುನಾವಣೆ ಸಭೆಯಲ್ಲಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ಬಡಜನತೆಯ ಅನುಕೂಲಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಳ್ಳಿ ಹಳ್ಳಿಗಳಲ್ಲಿ ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೇಟಿ ಅವರ ಜನಪರ ಕಾರ್ಯಗಳನ್ನು ಗಮನಿಸಿ ಗ್ರಾಮೀಣ ಜನತೆ ಮತ್ತೊಮ್ಮೆ ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕರ್ನಾಟಕ ಪ್ರದೇಶಯುವಕಾಂಗ್ರೆಸ್‌ರಾಜ್ಯ ಪ್ರಧಾನ ಕಾರ್ಯದರ್ಶಿರಾಹುಲ್ ಜಾರಕಿಹೊಳಿ ಮಾತನಾಡಿ, ಎಚ್.ವೈ.ಮೇಟಿಅವರು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ತಮ್ಮ ಅವಧಿಯಲ್ಲಿ ಈ ಭಾಗದಲ್ಲಿ ನಿರಂತರ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಅವರ ಪುತ್ರ ಉಮೇಶ ಅವರನ್ನು ಎಲ್ಲರೂ ಬೆಂಬಲಿಸಬೇಕು ಎಂದು ಕೋರಿದರು. ಅಭ್ಯರ್ಥಿ ಉಮೇಶ ಮೇಟಿ, ಸಂಯಕ್ತಾ ಪಾಟೀಲ ಮಾತನಾಡಿದರು. ಸರಳ ಸ್ವಭಾವ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಳಕಳಿಯಿಂದ ಎಚ್.ವೈ. ಮೇಟಿ ಅವರು ಅಪಾರ ಜನರ ಪ್ರೀತಿ ಗಳಿಸಿದ್ದಾರೆ. ನಗರದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಆಗಬೇಕೆಂಬ ಅವರ ಕನಸು ಕೂಡ ನನಸಾಗಲಿದೆ ಎಂದು ಹೇಳಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಪ್ರತಿಪಕ್ಷದವರು ಆಯವ್ಯಯವನ್ನು ಎಷ್ಟೇ ಟೀಕಿಸಿದರೂ ಮಾವಿನ ಹಣ್ಣು ಬೇವಿನ ಹಣ್ಣು ಆಗಲು ಸಾಧ್ಯವಿಲ್ಲ - ಸಿದ್ದರಾಮಯ್ಯ

- ಆಳುವ ಪಕ್ಷದವರು ಎಷ್ಟೇ ಹೊಗಳಿದರೂ ಬೇವಿನ ಹಣ್ಣು ಮಾವಿನ ಹಣ್ಣು ಆಗಲು ಸಾಧ್ಯವಿಲ್ಲ ಅಂತಲೂ ವಾದಮಾಡಬಹುದು!

ದಿನ ಭವಿಷ್ಯ

ಮೇಷ
ಕಹಿಸಿಹಿ ನೆನಪುಗಳ ಮಿಶ್ರಣ ಈ ದಿನ. ಹೆಚ್ಚಿದ ಖರ್ಚು ಚಿಂತೆಗೆ ಕಾರಣವಾಗಲಿದೆ. ಆತ್ಮೀಯರ ಜತೆಗಿನ ಭೇಟಿಯಿಂದ ಸಂತೋಷ.

ವೃಷಭ
ಪ್ರಗತಿಗೆ ಬೇಕಾದ ಹಾದಿ ನಿಮ್ಮ ಮುಂದಿದೆ. ಸರಿಯಾದ ರೀತಿಯಲ್ಲಿ ಅದರ ಬಳಕೆ ಮಾಡಿಕೊಳ್ಳಿ. ಅನವಶ್ಯ ದ್ವೇಷ ಭಾವನೆ ಮುಂದುವರಿಸಬೇಡಿ.

ಮಿಥುನ
ಆದಾಯ– ವೆಚ್ಚದ ಮಧ್ಯೆ ಸಮತೋಲನ ಇರಲಿ. ಖರ್ಚು ಹೆಚ್ಚಾಗಿ ತಾಪತ್ರಯ ಪಡುವಿರಿ. ಮಾನಸಿಕ ಶಾಂತಿಗೆ ಹಾತೊರೆಯುವಿರಿ.

ಕಟಕ
ಉದ್ಯೋಗ ಅವಕಾಶ ಹೆಚ್ಚಲಿದೆ. ಕೆರಿಯರ್ ಉನ್ನತಿಗೆ ಆದ್ಯತೆ ಕೊಡಿ. ನಿಮ್ಮನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಕೊಡಬೇಡಿ.

ಸಿಂಹ
ಕೆಲಸದ ಮೇಲೆ ಉತ್ಸಾಹ ಕಳಕೊಳ್ಳುವಿರಿ. ಕೆಲವರ ಮೇಲೆ ಅಸಹನೆ ಹೆಚ್ಚಲಿದೆ. ಶಾಂತ ಮನಸ್ಥಿತಿಯಿಂದ ಯೋಚಿಸಿ ಕಾರ್ಯವೆಸಗಿ.

ಕನ್ಯಾ
ಅಶಾಂತ ಮನಸ್ಥಿತಿ. ಆಪ್ತರ ಜತೆಗೆ ಭಿನ್ನಮತ ಉಂಟಾದೀತು. ನಿಮಗೆ ಸಂಬಂಧಿಸದ ವಿಚಾರದಲ್ಲಿ ತಲೆಕೆಡಿಸಿಕೊಳ್ಳದಿರಿ. ವೆಚ್ಚ ಹೆಚ್ಚಲಿದೆ.

ತುಲಾ
ನೆಗೆಟಿವ್ ಚಿಂತನೆಯ ವ್ಯಕ್ತಿಗಳನ್ನು ದೂರವಿಡಿ. ಅವರ ಪ್ರಭಾವಕ್ಕೆ ಸಿಲುಕದಿರಿ. ಹಳೆಯ ಸ್ನೇಹಿತರ ಭೇಟಿ. ಕೌಟುಂಬಿಕ ಸಮಾಧಾನ.

ವೃಶ್ಚಿಕ
ಕುಟುಂಬ ಸದಸ್ಯರ ಜತೆ ಆತ್ಮೀಯ ಕಾಲಕ್ಷೇಪ. ಸಣ್ಣಪುಟ್ಟ ವಿಷಯಗಳು ಮನಸ್ಸು ಕೆಡಿಸಲು ಅವಕಾಶ ಕಲ್ಪಿಸಬೇಡಿ. ಸಹನೆಯಿಂದ ವರ್ತಿಸಿ.

ಧನು
ಪ್ರಮುಖ ಕೆಲಸಕ್ಕೆ ನೆರವು ಪಡಕೊಳ್ಳಿ. ಏಕಾಂಗಿ ಪ್ರಯತ್ನ ಫಲ ನೀಡದು. ಹೊಟ್ಟೆ ಸಮಸ್ಯೆ ಕಾಡಬಹುದು. ಆಪ್ತರ ಸಂಗದಲ್ಲಿ ಆನಂದ.

ಮಕರ
ನಿಮ್ಮ ವ್ಯವಹಾರ ಉನ್ನತಿಗೆ ಹೊಸ ಚಿಂತನೆ ಅಳವಡಿಸಿ. ಹಳೆಯ ದಾರಿ ಫಲ ನೀಡದು. ಎಲ್ಲರನ್ನು ನಂಬಿ ಕೆಡಬೇಡಿ. ಕೌಟುಂಬಿಕ ಸಹಕಾರ.

ಕುಂಭ
ಹಣಕ್ಕೆ ಸಂಬಂಧಿಸಿದ ಬಿಕ್ಕಟ್ಟು ಪರಿಹಾರ. ಸೂಕ್ತ ನೆರವು ಲಭ್ಯ. ಸಂಬಂಧದಲ್ಲಿ ಅನುಮಾನಕ್ಕೆ ಆಸ್ಪದ ನೀಡಬೇಡಿ. ವಸ್ತು ಖರೀದಿ, ಧನವ್ಯಯ.

ಮೀನ
ಬಿಡುವಿಲ್ಲದ ದಿನ. ಕೆಲವು ಹೊಣೆಗಾರಿಕೆ ಪೂರೈಸಬೇಕಾದ ಬದ್ಧತೆ. ಆಪ್ತರ ಜತೆ ಪ್ರವಾಸ ಸಂಭವ. ಭಾವನಾತ್ಮಕ ಏರುಪೇರು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 9,0,2,6

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಕಿಡಿ

ತೆರಿಗೆ ಲೂಟಿ ನಿಲ್ಲಿಸಿ: ಅಶೋಕ್

ಬೆಂಗಳೂರು: ಮೊದಲು ನಿಮ್ಮ ಸರ್ಕಾರದ ತೆರಿಗೆ ಲೂಟಿಯನ್ನು ನಿಲ್ಲಿಸಿ, ನಂತರ ಬೇರೆಯವರಿಗೆ ಬುದ್ಧಿ ಹೇಳಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಿಪಕ್ಷ ನಾಯಕ ಆರ್.ಅಶೋಕ್ ತಿರುಗೇಟು ನೀಡಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಬಗ್ಗೆ ಶಿವಕುಮಾರ್ ಅವರು ನೀಡಿರುವ ಹೇಳಿಕೆಗಳು ಅತ್ಯಂತ ಹಾಸ್ಯಾಸ್ಪದ ಮತ್ತು ವಿಪರ್ಯಾಸದಿಂದ ಕೂಡಿವೆ ಎಂದು ಟೀಕಿಸಿದ್ದಾರೆ. ಕೇಂದ್ರ ಸರ್ಕಾರದತ್ತ ಬೆರಳು ತೋರಿಸುವ ಮುನ್ನ ತಮ್ಮದೇ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಜೇಬಿಗೆ ಹೇಗೆ ಕತ್ತರಿ ಹಾಕುತ್ತಿದೆ ಎಂಬುದಕ್ಕೆ ಅವರು ಮೊದಲು ಉತ್ತರಿಸಬೇಕು. ಮೇ 2023ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಸಿಎಂ, ಡಿಸಿಎಂ ಜೋಡಿ ಜನ ಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆದು ತಮ್ಮ ಗ್ಯಾರಂಟಿಗಳ ವೈಫಲ್ಯವನ್ನು ಮುಚ್ಚಿ ಹಾಕಲು ಪೆಟ್ರೋಲ್ ಮತ್ತು ಡೀಸೆಲ್ ಅನ್ನು ತಮ್ಮ ಪಾಲಿನ ಎಟಿಎಂ ಮಾಡಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಜನರಿಗೆ ದೊಡ್ಡ ಮಟ್ಟದ ನೆರವು

ಕೇಂದ್ರ ಸರ್ಕಾರ ಕೇಂದ್ರ ತೆರಿಗೆಯನ್ನು 10 ರೂ. ನಷ್ಟು ಕಡಿತಗೊಳಿಸಿ ಜನರಿಗೆ ದೊಡ್ಡ ಮಟ್ಟದ ನೆರವು ನೀಡಿದೆ. ಆದರೆ ನೀವು ಕೇವಲ 10 ಪೈಸೆಯನ್ನೂ ಕಡಿಮೆ ಮಾಡುವ ಮನಸ್ಸು ಮಾಡಿಲ್ಲ. ನಿಮಗೆ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇದ್ದರೆ, ಮೊದಲು ನೀವು ಏರಿಸಿರುವ ಈ 5.5 ರೂ. ದರವನ್ನು ವಾಪಸ್ ಪಡೆಯಿರಿ. ಕೇವಲ ಪತ್ರಿಕಾಗೋಷ್ಠಿ ನಡೆಸಿ ಸುಳ್ಳು ಹೇಳುವುದು ನಾಯಕತ್ವವಲ್ಲ. ಕರ್ನಾಟಕದ ಜನತೆಗೆ ನಿಮ್ಮ ಹಿಟ್ ಅಂಡ್ ರನ್ ರಾಜಕೀಯ ಚೆನ್ನಾಗಿ ಅರ್ಥವಾಗಿದೆ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.

ನಿಮ್ಮ ಕಾಂಗ್ರೆಸ್ ಸರ್ಕಾರದ ತೆರಿಗೆ ಲೂಟಿಯ ವರದಿ ಸ್ಪಷ್ಟವಾಗಿದೆ ಎಂದಿರುವ ಅವರು, 2024 ರ ಜೂನ್‌ನಲ್ಲಿ ಪೆಟ್ರೋಲ್ ಬೆಲೆಯನ್ನು ಸುಮಾರು 3 ರೂ. ಮತ್ತು ಡೀಸೆಲ್ ಬೆಲೆಯನ್ನು 3.5 ರೂ.ಗೆ ಹೆಚ್ಚಿಸಿದ ಕಾಂಗ್ರೆಸ್ ಸರ್ಕಾರ, ಏಪ್ರಿಲ್ 2025 ರಲ್ಲಿ ಮತ್ತೆ ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 2 ರೂ.ನಷ್ಟು ಹೆಚ್ಚಿಸಿದೆ. ಇದರ ಒಟ್ಟು ಪರಿಣಾಮವೆಂದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕದಲ್ಲಿ ಡೀಸೆಲ್ ಬೆಲೆ ಬರೋಬ್ಬರಿ 5.5 ರೂ.ಗಳಷ್ಟು ಹೆಚ್ಚಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಇದು ಅಂತರಾಷ್ಟ್ರೀಯ ಮಾರುಕಟ್ಟೆಯ ಏರಿಳಿತವಲ್ಲ, ಬದಲಿಗೆ ಕೇವಲ ರಾಜ್ಯ ಸರ್ಕಾರದ ತೆರಿಗೆ ದಾಹದಿಂದ ಆಗಿರುವ ಬೆಲೆ ಏರಿಕೆ. ಕೇಂದ್ರ ಸರ್ಕಾರದತ್ತ ಬೆರಳು ತೋರಿಸುವ ಶಿವಕುಮಾರ್ ಅವರೇ, ರಾಜ್ಯದ ರೈತರು, ವಾಹನ ಸವಾರರು ಮತ್ತು ಜನಸಾಮಾನ್ಯರಿಗೆ ನಿಮ್ಮ ಸರ್ಕಾರ ನೀಡುತ್ತಿರುವ ಈ ಶಿಕ್ಷೆಗೆ ನಿಮ್ಮ ಬಳಿ ಉತ್ತರವಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಕೇಂದ್ರ ಸರ್ಕಾರವು 2025 ರ ಏಪ್ರಿಲ್ ನಲ್ಲಿ ಅಬಕಾರಿ ಸುಂಕವನ್ನು ಮಾರ್ಪಾಡು ಮಾಡಿದಾಗ, ಅದರ ಹೊರೆ ಜನಸಾಮಾನ್ಯರ ಮೇಲೆ ಬೀಳದಂತೆ ತೈಲ ಕಂಪನಿಗಳೇ ಭರಿಸುವಂತೆ ನೋಡಿಕೊಂಡಿತು. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ತೆರಿಗೆ ಏರಿಸಿದಾಗಲೆಲ್ಲಾ ಅದರ ನೇರ ಹೊರೆ ಬಡವರ ಮೇಲೆ ಬೀಳುತ್ತಿದೆ ಎಂದು ಟೀಕಿಸಿದ್ದಾರೆ.

ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಬದ್ಧ: ಎಂಬಿಪಾ

ಬೆಂಗಳೂರು: ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆ, ನೀರಾವರಿ ಸೌಲಭ್ಯ, ಉತ್ಕೃಷ್ಟ ಸಂಸ್ಥೆಗಳ ಸ್ಥಾಪನೆ ವಿಚಾರದಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ. ರಾಜ್ಯಕ್ಕೆ ಬರುತ್ತಿರುವ ಸೆಮಿ ಕಂಡಕ್ಟರ್ ಯೋಜನಾ ಪ್ರಸ್ತಾವನೆಗಳಿಗೆ ಅದು ಆದ್ಯತೆಯ ಮೇರೆಗೆ ಒಪ್ಪಿಗೆ ಕೊಡು ತ್ತಿಲ್ಲ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕಳಕಳಿ ವ್ಯಕ್ತಪಡಿಸಿರುವ ಬಿಜೆಪಿ ನಾಯಕ ಅರವಿಂದ ಬೆಲ್ಲದ ಅವರು ಈ ಸಂಬಂಧ ಗಮನ ಹರಿಸಿದರೆ ಅದಕ್ಕೆ ನಮ್ಮ ಸಹಕಾರವೂ ಇರಲಿದೆ ಎಂದು ಬೃಹತ್, ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.



ಈ ಸಂಬಂಧ ವಿರೋಧ ಪಕ್ಷದ ಉಪ ನಾಯಕ ಬೆಲ್ಲದ ಅವರು ಮಾಡಿರುವ ಎಕ್ಸ್ ಪೋಸ್ಟ್‌ಗೆ ಪ್ರತಿಕ್ರಿಯಿಸಿದರುವ ಸಚಿವ ಪಾಟೀಲ, ರಾಜ್ಯದಲ್ಲಿ 59 ಅತೀ ಹಿಂದುಳಿದ ತಾಲ್ಲೂಕುಗಳಿದ್ದು, ಇಷ್ಟೂ ತಾಲ್ಲೂಕುಗಳು ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದಲ್ಲೇ ಇರುವುದು ವಾಸ್ತವವಾಗಿದೆ. ಇಲ್ಲೆಲ್ಲ ನೀರಾವರಿ ಸೌಲಭ್ಯ ಒದಗಿಸಲು ಎಲ್ಲ ಸರಕಾರಗಳೂ ಪ್ರಯತ್ನಿಸಿವೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಕೂಡ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಿದ್ದು, ಇನ್ನೂ ಹೆಚ್ಚಿನ ಸಂಸ್ಥೆಗಳಿಗೆ ಅವಕಾಶವಿದೆ ಎಂದರು.

ಕರ್ನಾಟಕ ಬಿಟ್ಟು ಬೇರೆಬೇರೆ ರಾಜ್ಯ ಗಳ ಪ್ರಸ್ತಾವನೆಗಳಿಗೆ ಒಪ್ಪಿಗೆ ನೀಡುತ್ತಿರುವ ಕೇಂದ್ರ ಸರಕಾರವು ಕರ್ನಾಟಕದ ಕಡೆಗೂ ಗಮನ ನೀಡಬೇಕು. ಇಡೀ ದೇಶದಲ್ಲೇ ಅತ್ಯುತ್ತಮ ತಂತ್ರಜ್ಞಾನ ಹೊಂದಿರುವ ನಮ್ಮ ರಾಜ್ಯಕ್ಕೆ ಇದರಿಂದ ತೀವ್ರ ಅನ್ಯಾಯವಾಗುತ್ತಿದೆ. ಬೆಲ್ಲದ ಅವರು ಇದರ ಬಗ್ಗೆಯೂ ದನಿ ಎತ್ತಬೇಕು ಎಂದು ಅವರು ಆಗ್ರಹಿಸಿದ್ದಾರೆ. ಈ ಸಂಬಂಧವಾಗಿ ಬೆಲ್ಲದ ಅವರು ತಮ್ಮ ಪಕ್ಷದ ಸಂಸದರ ಮತ್ತು ಹಿರಿಯ ನಾಯಕರ ನಿಯೋಗವನ್ನು ದೆಹಲಿಗೆ ಕೊಂಡೊಯ್ದು ಸಮಿಕಂಡಕ್ಟರ್ ಉದ್ಯಮ ಬರಲು ಸಹಕರಿಸಬೇಕು ಎಂದರು.

ಮೋದಿ-ಟ್ರಂಪ್ ಮಧ್ಯೆ ಮಾತ್ರ ಮಾತು:ಎಂಇಎ

ಪುಟ ೧➡ **ಜಾಗತಿಕ ಶಾಂತಿ ಪುನರುಚ್ಚರಿಸಿದ್ದ ಮೋದಿ:** ಸಂಭಾಷಣೆಯಲ್ಲಿ, ಜಾಗತಿಕ ಶಾಂತಿ, ಸ್ಥಿರತೆ ಮತ್ತು ಆರ್ಥಿಕ ಸಮೃದ್ಧಿ ನೆಲೆಗೊಳಿಸಲು ಹಾರ್ಮುಜ್ ಜಲಸಂಧಿಯನ್ನು ತೆರೆಯುವುದು ಮತ್ತು ಅದರ ಸುರಕ್ಷತೆ ಖಚಿತಪಡಿಸುವುದು ಮುಖ್ಯ ಎಂಬುದನ್ನು ಮೋದಿ ಪುನರುಚ್ಚರಿಸಿದ್ದಾರೆ.

ಮಸ್ಕ್ ಪಾತ್ರದ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ವರದಿ: ಮೋದಿ ಮತ್ತು ಟ್ರಂಪ್ ನಡುವಿನ ಮಂಗಳವಾರದ ದೂರವಾಣಿ ಕರೆಯಲ್ಲಿ ಎಲಾನ್ ಸೇರಿಕೊಂಡಿದ್ದರೆಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. ಯುದ್ಧ ಸಂಕಷ್ಟದ ಸಮಯದಲ್ಲಿ ಎರಡು ರಾಷ್ಟ್ರಾಧ್ಯಕ್ಷರ ನಡುವಿನ ಸಂಭಾಷಣೆಯಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಭಾಗವಹಿಸಿದ್ದು ಬಹಳ ಅಪರೂಪದ ಸಂಗತಿ. ಯುದ್ಧ ಸಂದರ್ಭದಲ್ಲಿ ಇಬ್ಬರು ನಾಯಕರ ದೂರವಾಣಿ ಕರೆಯಲ್ಲಿ ಒಬ್ಬ ಖಾಸಗಿ ವ್ಯಕ್ತಿಯೊಬ್ಬ ಭಾಗವಹಿಸಿದ್ದು ಅನಿರೀಕ್ಷಿತ ಬೆಳವಣಿಗೆಯೆಂದು ಹೆಸರು ಹೇಳಲು ಇಚ್ಚಿಸದ ಅಮೆರಿಕ ಅಧಿಕಾರಿಗಳು ಮಾಹಿತಿ ನೀಡಿರುವುದಾಗಿ ನ್ಯೂಯಾರ್ಕ್ ಟೈಮ್ಸ್ ಉಲ್ಲೇಖಿಸಿದೆ. ಮೋದಿ-ಟ್ರಂಪ್ ದೂರವಾಣಿ ಕರೆಯಲ್ಲಿ ಮಸ್ಕ್ ಭಾಗವಹಿಸಿದ್ದು, ಟ್ರಂಪ್ ಮತ್ತು ಮಸ್ಕ್ ನಡುವಿನ ಸಂಬಂಧ ಸುಧಾರಣೆಯ ಸೂಚಕವೆಂದೂ ವರದಿ ಮಾಡಿತ್ತು. ಕಳೆದ ವರ್ಷ ಟ್ರಂಪ್ ಟಾಸ್ಕ್‌ಫೋರ್ಸ್‌ನಿಂದ ಮಸ್ಕ್ ಹೊರನಡೆದಿದ್ದು, ಅವರಿಬ್ಬರ ನಡುವಿನ ಆತ್ಮೀಯತೆ ಹಳಸಿತ್ತು.

ಸೌದಿ ರಾಜಕುಮಾರನ ಜತೆ ಮೋದಿ ಚರ್ಚೆ

ಪುಟ ೧➡ ಮಧ್ಯಪ್ರಾಚ್ಯ ಯುದ್ಧ ಪರಿಸ್ಥಿತಿಯ ಕುರಿತು ಇಬ್ಬರು ನಾಯಕರು ಮಾತುಕತೆ ನಡೆಸಿದ್ದು, ಹಡಗುಗಳ ಮುಕ್ತ ಸಂಚಾರ ಖಚಿತಪಡಿಸಲು ಉಭಯ ನಾಯಕರು ಒಪ್ಪಿಕೊಂಡಿದ್ದಾರೆ. ಸೌದಿ ಅರೇಬಿಯಾ ರಾಜಕುಮಾರ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ಮಾತನಾಡಿದ್ದೇನೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬಿಕ್ಕಟ್ಟಿನ ಕುರಿತಾಗಿ ಚರ್ಚಿಸಿದ್ದೇವೆ ಎಂದು ಮೋದಿ ಎಕ್ಸ್ ನಲ್ಲಿ ತಿಳಿಸಿದ್ದಾರೆ. ಸೌದಿಯಲ್ಲಿ ಭಾರತೀಯ ಸಮುದಾಯದ ಅಭಿವೃದ್ಧಿಗೆ ನಿರಂತರ ಬೆಂಬಲ ನೀಡುತ್ತಿರುವ ಸಲ್ಮಾನ್ ಅವರಿಗೆ ಮೋದಿ ಕೃತಜ್ಞತೆ ಸಲ್ಲಿಸಿದ್ದಾರೆ. ಫೆ.28ರ ಬಳಿಕ ಇದು ಎರಡನೇ ಬಾರಿ ಉಭಯ ನಾಯಕರು ದೂರವಾಣಿ ಸಂಭಾಷಣೆ ನಡೆಸಿದ್ದಾರೆ.

ಭಾರತದಿಂದ ವಿಶ್ವ ಗೆಲ್ಲುವ ಕಾರ್ಯ

ಪುಟ ೧➡ ಪ್ರಾಚೀನ ಭಾರತೀಯ ಪರಂಪರೆಯು ಅಮೋಘವಾಗಿದೆ ಎಂಬುದಕ್ಕೆ ಇದುವೇ ನಿದರ್ಶನವಾಗಿದೆ ಎಂದರು.

ಸಂಘ ರಾಜಕೀಯ ಪಕ್ಷವಲ್ಲ. ಅದು ಸಮಾಜದ ಸಂಘಟನೆ. ಇದು ಯಾವುದೇ ಪ್ರಕ್ರಿಯೆಯಿಂದ ಹುಟ್ಟಿದುದಲ್ಲ. ಸಮಾಜದ ಅವಶ್ಯಕತೆಯನ್ನು ಪೂರೈಸಲು ಸಂಘ ಸ್ಥಾಪಿತವಾಗಿದೆ.

ಸಂಘ ಎಂದರೆ ಸಂಘಟಿತ ಹಿಂದು ಸಮಾಜವಾಗಿದೆ. ಜಗತ್ತಿನ ಅತ್ಯಂತ ವಿಶಿಷ್ಟ ಸಂಘಟನೆಯಾಗಿದೆ. ಅನೇಕ ದೇಶಗಳಲ್ಲಿ ಸಂಘ ಸಾಮಾಜಿಕ ಸೇವೆಯನ್ನು ನೆರವೇರಿಸುತ್ತಿ ರುವುದನ್ನು ಸ್ಮರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಶೈಲ-ಯಡೂರ ಪೀಠದ ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಇತರರ ಸುಖ-ದುಃಖಗಳಲ್ಲಿ ಪಾಲ್ಗೊಳ್ಳುವುದು ನಿಜವಾದ ಮಾನವ ಧರ್ಮವಾಗಿದೆ. ವಿದ್ಯಾರ್ಥಿ ಜೀವನದಲ್ಲಿಯೇ ಮಕ್ಕಳು ಸಮಾಜಸೇವೆಯ ವ್ರತವನ್ನು ಕೈಗೊಳ್ಳಬೇಕು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ ಭಾಗವತ್ ಅವರು ಮಠದಿಂದ ನಿರ್ಮಿಸಿದ ಗುರುಕುಲದ ಸಭಾಭವನ ಉದ್ಘಾಟನೆ, ಗೋಶಾಲೆಯ ಗೋ-ಆಹಾರ ತುಲಾಭಾರ ಹಾಗೂ ಪದವಿ ವಿದ್ಯಾರ್ಥಿಗಳ ಸಂವಾದ ಹಾಗೂ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂವಾದದಲ್ಲಿ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಡಾ.ಮೋಹನ ಭಾಗವತ್ ಅವರು ಸವಿವರವಾಗಿ ಉತ್ತರಿಸಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ಶಿವಾಚಾರ್ಯ ಸಂಸ್ಥೆಗಳ ರಾಷ್ಟ್ರೀಯ ಉಪಾಧ್ಯಕ್ಷ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ನೂಲದ ಸುರಗೀಶ್ವರ ಮಠದ ಗುರುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಶ್ರೀಕಾಂತ ಉಮರಾಣಿ, ಶಿವಲಿಂಗಯ್ಯ ಅಲ್ಲಾಯನವರ, ಶಿವಾನಂದ ಹಕಾರೆ ಸೇರಿದಂತೆ ಸಂಘದ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಭಾಗವಹಿಸಿದ್ದರು.

ನೇಪಾಳ ಮಾಜಿ ಪ್ರಧಾನಿ ಶರ್ಮಾ ಒಲಿ ಬಂಧನ

ಕಠ್ಮಂಡು: ತನಿಖಾ ಆಯೋಗದ ವರದಿಯನ್ನು ಜಾರಿಗೆ ತರುವ ಸರ್ಕಾರದ ನಿರ್ಧಾರದ ಬೆನ್ನಲ್ಲೇ ನೇಪಾಳದ ಪೊಲೀಸರು ಶನಿವಾರ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ಮಾಜಿ ಗೃಹ ಸಚಿವ ರಮೇಶ್ ಲೇಖಕ್ ಅವರನ್ನು ಬಂಧಿಸಿದ್ದಾರೆ.

ಕಳೆದ ವರ್ಷ ಸೆ.8 ಮತ್ತು 9ರಂದು ನಡೆದ ಜೆನ್‌ಝಿ ಚಳವಳಿಯನ್ನು ಹತ್ತಿಕ್ಕಿದ ಕ್ರಿಮಿನಲ್ ಆರೋಪಗಳನ್ನು ಒಲಿ ಮತ್ತು ಲೇಖಕ್ ಎದುರಿಸುತ್ತಿದ್ದಾರೆ. ಈ ಘಟನೆಯಲ್ಲಿ 76 ಜನರು ಮೃತಪಟ್ಟಿದ್ದರು. ಆರೋಪಿಗಳಿಗೆ ಮೂರರಿಂದ ಹತ್ತು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವಂತೆ ಆಯೋಗ ಶಿಫಾರಸು ಮಾಡಿದೆ. ಭಕ್ತಪುರದಲ್ಲಿ ಒಲಿ ಅವರನ್ನು ವಶಕ್ಕೆ ಪಡೆದ ಪೊಲೀಸರು, ನಂತರ ಹೃದಯ ಮತ್ತು ಮೂತ್ರಪಿಂಡದ ಸಮಸ್ಯೆಗಳ ಕಾರಣ ತ್ರಿಭುವನ್ ವಿಶ್ವವಿದ್ಯಾಲಯದ ಬೋಧನಾ ಆಸ್ಪತ್ರೆಗೆ ದಾಖಲಿಸಿದರು. ಲೇಖಕ್ ಅವರನ್ನು ಸೂರ್ಯವಿನಾಯಕದ ಅವರ ನಿವಾಸದಲ್ಲಿ ಬಂಧಿಸಲಾಯಿತು. ಇಬ್ಬರೂ ಪ್ರಸ್ತುತ ಕಠ್ಮಂಡು ಜಿಲ್ಲಾ ಪೊಲೀಸರ ವಶದಲ್ಲಿದ್ದಾರೆ.

3 ಇಂಜಿನಿಯರಿಂಗ್ ವಿದ್ಯಾರ್ಥಿಗಳ ಸಾವು

ಮಾಗಡಿ: ರಸ್ತೆ ಅಪಘಾತದಲ್ಲಿ ಮೂವರು ವಿದ್ಯಾರ್ಥಿಗಳು ಮೃತಪಟ್ಟಿರುವ ಘಟನೆ ತಾಲೂಕಿನ ಕುದೂರು ಪೊಲೀಸ್ ಠಾಣಾ ವ್ಯಾಪ್ತಿಯ ಮರೂರು ಹ್ಯಾಂಡ್ ಪೋಸ್ಟ್ ಬಳಿ ಶನಿವಾರ ಮುಂಜಾನೆ ಸಂಭವಿಸಿದೆ. ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳಾಗಿದ್ದ ಮನೋಜ್ (21) ಅಭಿಲಾಷ್ (21) ನವೀನ್ (21) ಮೃತಪಟ್ಟ ದುರ್ದೈವಿಗಳು. ಅಪಘಾತದ ತೀವ್ರತೆಗೆ ಮನೋಜ್ ಮತ್ತು ಅಭಿಲಾಷ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಜೋಡೆತ್ತಿನ ಗಾಡಿ ಓಟದ ಸ್ಪರ್ಧೆ

ಚಿಕ್ಕಮಗಳೂರು: ಕೊಲ್ಲಾಪುರದಮ್ಮನ ಜಾತ್ರಾ ಮಹೋತ್ಸವ ಪ್ರಯುಕ್ತ ನಗರದ ಕೋಟೆ ಸಮೀಪದ ಏರ್‌ಪೋರ್ಟ್ ಮೈದಾನದಲ್ಲಿ ಏಪ್ರಿಲ್ 3ರಂದು ಅಂತಾರಾಜ್ಯ ಮಟ್ಟದ ಜೋಡೆತ್ತಿನ ಗಾಡಿ ಓಟದ ಸ್ಪರ್ಧೆಯಲ್ಲಿ ಆಯೋಜಿಸಲಾಗಿದೆ. ವಿಜೇತ ತಂಡಕ್ಕೆ ಪ್ರಥಮ 2 ಲಕ್ಷ ರೂ., ದ್ವಿತೀಯ 1.50 ಲಕ್ಷ, ತೃತೀಯ 1 ಲಕ್ಷ ರೂ. ಹಾಗೂ ಚತುರ್ಥ ಸ್ಥಾನಕ್ಕೆ 50 ಸಾವಿರ ನಗದು ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್: 8217454263, 9632455504, 6363760026, 9591611297 ಸಂಪರ್ಕಿಸಬಹುದು.

ಹುಸಿ ಬಾಂಬ್ ಬೆದರಿಕೆ: ಆರೋಪಿ ಬಂಧನ

ಮೈಸೂರು: ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಸಂದೇಶಗಳನ್ನು ಕಳುಹಿಸಿ ರಾಜ್ಯದಲ್ಲಿ ಆತಂಕ ಸೃಷ್ಟಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ದೆಹಲಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ.

ಮೈಸೂರಿನ ಬೃಂದಾವನ ಬಡಾವಣೆಯ 2ನೇ ಹಂತ, 6ನೇ ಕ್ರಾಸ್‌ನಲ್ಲಿರುವ ಮನೆಯೊಂದರಿಂದ ಕಾರ್ಯಾಚರಣೆ ನಡೆಸುತ್ತಿದ್ದ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ ಆರೋಪಿ. ಈತ ದೇಶದ ನಾನಾ ಭಾಗಗಳಿಗೆ ಒಟ್ಟು 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇಮೇಲ್ ಮಾಡಿ, ವಿಧ್ವಂಸಕ ಕೃತ್ಯ ನಡೆಸುವ ಆತಂಕ ಸೃಷ್ಟಿಸಿದ್ದ. ನ್ಯಾಯಾಲಯಗಳು, ವಿವಿಧ ನಗರಗಳ ಪ್ರತಿಷ್ಠಿತ ಶಾಲೆ-ಕಾಲೇಜುಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ರೈಲು ನಿಲ್ದಾಣ, ವಿಮಾನ ನಿಲ್ದಾಣಕ್ಕೂ ಕೂಡ ಬಾಂಬ್ ಇಟ್ಟಿರುವ ಬಗ್ಗೆ ಕರೆ ಮಾಡುವುದು, ಇಮೇಲ್ ಮಾಡುವುದನ್ನು ಮಾಡಿದ್ದ.

ಬೆದರಿಕೆ ಸಂದೇಶಗಳನ್ನು ಕಳುಹಿಸಿ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದ್ದ. ಒಂದೇ ತಿಂಗಳಲ್ಲಿ ಹಲವು ಬಾರಿ ಇಂತಹ ಸಂದೇಶಗಳನ್ನು ರವಾನಿಸಿದ್ದ ಆರೋಪಿ ಈ ಕೃತ್ಯವನ್ನು ನಿಗೂಢವಾಗಿ ಮುಂದುವರಿಸುತ್ತಿದ್ದ. ಬಾಂಬ್ ಬೆದರಿಕೆಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ತೀವ್ರಗೊಳಿಸಲಾಗಿತ್ತು. ಖಚಿತ ಮಾಹಿತಿ ಮೇಲೆ ದೆಹಲಿ ಪೊಲೀಸ್ ತಂಡವು ಮೈಸೂರಿನ ವಿ.ವಿ ಪುರಂ ಪೊಲೀಸ್ ಠಾಣೆಯ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ.

ಭದ್ರತೆಗೆ ಸಂಬಂಧಿತ ಚುನಾವಣೆ


ಪುಟ ೧➡ ಮಮತಾ ಬ್ಯಾನರ್ಜಿ ಇದುವರೆಗೂ ಬಲಿಪಶು ಕಾರ್ಡ್ ರಾಜಕೀಯ ಮಾಡಿಕೊಂಡು ಬಂದವರು. ಕೆಲವೊಮ್ಮೆ ಈಕೆ ತನ್ನ ಗಾಯದ ಬಗ್ಗೆ ಮಾತನಾಡಿದರೆ, ಹಲವಾರು ಬಾರಿ ಚುನಾವಣಾ ಆಯೋಗವನ್ನು ನಿಂದಿಸುತ್ತಿದ್ದರು ಮತ್ತು ಹಲವು ಬಾರಿ ಇದೇ ರೀತಿಯ ಇನ್ನಿತರ ನೆಪ ಮುಂದಿಟ್ಟು ಸಾಂವಿಧಾನಿಕ ಸಂಸ್ಥೆಗಳನ್ನು ನಿಂದಿಸುತ್ತಿದ್ದರು. ಆದರೆ ಬಂಗಾಳದ ಜನರಿಗೀಗ ಮಮತಾ ದೀದಿಯ ಸಂತ್ರಸ್ತ-ಕಾರ್ಡ್ ರಾಜನೀತಿಯ ಮರ್ಮ ಚೆನ್ನಾಗಿ ಅರಿವಾಗಿದೆ ಎಂದರು.

ಮತಕ್ಕಾಗಿ ಎಸ್‌ಐಆರ್‌ಗೆ ವಿರೋಧ: ಚುನಾವಣಾ ಆಯೋಗದಿಂದ ಇತರ ರಾಜ್ಯಗಳಲ್ಲೂ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ನಡೆದಿದೆ. ಆದರೆ ಎಲ್ಲೂ ಪಶ್ಚಿಮ ಬಂಗಾಳದ ಸಿಎಂ ಮಮತಾ ಬ್ಯಾನರ್ಜಿಯಂತೆ ಅನಗತ್ಯ ವಿರೋಧ ವ್ಯಕ್ತಪಡಿಸಿದವರಿಲ್ಲ. ಮಮತಾ ಬ್ಯಾನರ್ಜಿ ಟಿಎಂಸಿಯ ಅಲ್ಪಸಂಖ್ಯಾತರ ವೋಟ್ ಬ್ಯಾಂಕ್ ಕಾಪಾಡುವ ಏಕೈಕ ಉದ್ದೇಶದಿಂದ ಎಸ್‌ಐಆರ್‌ಗೆ ವಿರೋಧಗಳನ್ನು ಸೃಷ್ಟಿಸಿದ್ದಾರೆ. ಮೇಲಾಗಿ ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳನ್ನು ನಿಂದಿಸುವುದು ಬಂಗಾಳಿ ಸಂಸ್ಕೃತಿಯಲ್ಲ ಎಂದು ಸಚಿವ ಶಾ ಗುಡುಗಿದರು.

ಅಕ್ರಮ ನುಸುಳುಕೋರರು ದೇಶಕ್ಕೆ ಅಪಾಯಕಾರಿ: ಅಸ್ಸಾಂ ಗಡಿ ಮುಖೇನ ದೇಶಕ್ಕೆ ಅಕ್ರಮವಾಗಿ ನುಸುಳುವ ನುಸುಳುಕೋರರ ಪಿಡುಗು ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಿಂತಿದೆ. ಅಕ್ರಮ ನುಸುಳುಕೋರರಿಗೆ ಇದೀಗ ಉಳಿದಿರುವ ಅಂತಿಮ ದಾರಿ ಪಶ್ಚಿಮ ಬಂಗಾಳ ಮಾತ್ರ. ಇಲ್ಲಿಂದಲೇ ಗಡಿ ನುಸುಳುವ ಅಕ್ರಮ ನುಸುಳುಕೋರರು ದೇಶಾದ್ಯಂತ ವಿವಿಧ ರಾಜ್ಯಗಳಲ್ಲಿ ಚದುರಿಬಿಡುತ್ತಾರೆ. ಹಾಗಾಗೇ ಬಂಗಾಳದ ಚುನಾವಣೆ ಬಂಗಾಳದ ಪಾಲಿಗೆ ಮಾತ್ರವಲ್ಲ ಇಡೀ ದೇಶದ ಪಾಲಿಗೆ ಮಹತ್ತ್ವದ ಚುನಾವಣೆಯಾಗಿದೆ. ಇಡೀ ದೇಶದ ಭದ್ರತೆಯು ಬಂಗಾಳದ ಚುನಾವಣೆ ಜತೆ ಲಿಂಕ್ ಹೊಂದಿದೆ. ಪಶ್ಚಿಮ ಬಂಗಾಳ ಗಡಿಗಳ ಮೂಲಕ ನಡೆಯುತ್ತಿರುವ ಅಕ್ರಮ ನುಸುಳುವಿಕೆಯು ರಾಷ್ಟ್ರೀಯ ಭದ್ರತೆಗೆ ಆತಂಕಕಾರಿಯಾಗಿದೆ. ಈಶಾನ್ಯ ವಲಯವನ್ನು ಭಾರತದ ಇತರ ಪ್ರದೇಶಗಳೊಂದಿಗೆ ಜೋಡಿಸುವ ನಿರ್ಣಾಯಕ ಸಿಲಿಗುರಿ ಕಾರಿಡಾರ್‌ನ ಭದ್ರತೆ ಕೂಡ ಟಿಎಂಸಿ ಸರಕಾರದ ತುಷ್ಟೀಕರಣ-ವೋಟ್‌ಬ್ಯಾಂಕ್ ರಾಜನೀತಿಯಿಂದಾಗಿ ಇಂದು ಗಂಡಾಂತರದಲ್ಲಿದೆ ಎಂದು ಸಚಿವ ಶಾ ಕಟು ಟೀಕಾಪ್ರಹಾರ ಮಾಡಿದರು.

ಗಡಿಗೆ ಬೇಲಿ ಹಾಕಲೂ ಬಿಡದ ಮಮತಾ

ಪುಟ ೧➡ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಬರೇ 45ದಿನಗಳೊಳಗೆ ಅಗತ್ಯ ಜಮೀನನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸಲಿದೆ ಎಂದು ಸಚಿವ ಶಾ ಭರವಸೆ ನೀಡಿದರು.



2026ರ ಚುನಾವಣೆಯು ಭಯ ಮತ್ತು ವಿಶ್ವಾಸ ನಡುವಣ ಆಯ್ಕೆಯಾಗಿದೆ. ಬಂಗಾಳದ ಜನತೆ ಇವರೆಡರಲ್ಲಿ ಒಂದನ್ನು ಆಯ್ಕೆ ಮಾಡಬೇಕು. ಕಳೆದ 15 ವರ್ಷಗಳಿಂದ ರಾಜ್ಯದಲ್ಲಿ ಭಯ, ಭ್ರಷ್ಟಾಚಾರ, ತುಷ್ಟೀಕರಣ ರಾಜನೀತಿಗಳೇ ಮೇಳೈಸಿವೆ. ಮಮತಾ ಬ್ಯಾನರ್ಜಿ ಸುಳ್ಳು ಮತ್ತು ಹಿಂಸಾಚಾರ ಆಧಾರಿತ ಹೊಸ ರೀತಿಯ ರಾಜನೀತಿಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಟಿಎಂಸಿ ಅಧಿಕಾರ ಹಿಡಿದದ್ದೂ ಸುಳ್ಳು, ಭಯ ಹುಟ್ಟಿಸುವಿಕೆ ಮತ್ತು ಹಿಂಸಾಚಾರಗಳ ಬಲದಿಂದಲೇ. 2011ರಿಂದ ಬಿಜೆಪಿ ಇದರ ವಿರುದ್ಧ ಹೋರಾಡುತ್ತಲೇ ಬಂದಿದೆ ಎಂದು ಅಮಿತ್ ಶಾ ವಿವರಿಸಿದರು.

ಏಕತೆಯಿಂದ ಬಿಕ್ಕಟ್ಟು ಎದುರಿಸಿ: ಮೋದಿ

ಪುಟ ೧➡ ಸಮಯದ ಉಳಿತಾಯ ಮತ್ತು ವೆಚ್ಚ ಕಡಿತ ಗಳಿಂದ ಜನರ ಬದುಕನ್ನು ಸುಗಮಗೊಳಿಸಲು ಸರಕಾರ ಆದ್ಯತೆ ನೀಡಿದೆ. ಪ.ಏಷ್ಯಾ ಸಂಘರ್ಷ ಜಾಗತಿಕ ಬಿಕ್ಕಟ್ಟು. ಆದರೆ ನಾವು ಭಾರತದ ಹಿತಾಸಕ್ತಿಗಳ ರಕ್ಷಣೆಗೆ ಪ್ರಾಧಾನ್ಯತೆ ಕೊಡಬೇಕು. ಜಾಗತಿಕ ಬಿಕ್ಕಟ್ಟನ್ನು ಆದಷ್ಟು ಮೌನವಾಗಿ, ಸಹನೆ ಮತ್ತು ಏಕತೆಯಿಂದ ಎದುರಿಸಬೇಕೆಂಬುದು ಜನರಲ್ಲಿ ನನ್ನ ಪುನರಪಿ ಮನವಿಯಾಗಿದೆ ಎಂದರು. ಜೇವರ್‌ನಲ್ಲಿ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿ ಪ್ರಧಾನಿ ಮೋದಿ ಮಾತನಾಡಿದರು. ಇಂದಿನ ಕಾರ್ಯಕ್ರಮವು ವಿಕಸಿತ ಉತ್ತರಪ್ರದೇಶ ಮತ್ತು ವಿಕಸಿತ ಭಾರತದತ್ತ ಯಾನದಲ್ಲಿ ಹೊಸ ಅಧ್ಯಾಯವೊಂದರ ಆರಂಭವನ್ನು ಸಾಂಕೇತಿಸಿದೆ ಎಂದು ನೆಮ್ಮದಿ ವ್ಯಕ್ತಪಡಿಸಿದರು.

ಧನಾತ್ಮಕ-ವ್ಯಾಪಕ ಚರ್ಚೆ: ಪಶ್ಚಿಮ ಏಷ್ಯಾ ಸನ್ನಿವೇಶ ಬಗ್ಗೆ ತಾನು ಸಂಸತ್ತಿನಲ್ಲಿ ವಿವರವಾಗಿ ಚರ್ಚಿಸಿದ್ದೇನೆ ಮತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ತೀರಾ ಧನಾತ್ಮಕ ಮತ್ತು ವ್ಯಾಪಕ ಚರ್ಚೆ ನಡೆಸಿದ್ದೇನೆ. ಇಂತಹ ಸನ್ನಿವೇಶದಲ್ಲಿ ರಾಜಕೀಯ ಪಕ್ಷಗಳು ಮುಖ್ಯವಾಗಿ ಉತ್ತರಪ್ರದೇಶದ ರಾಜಕೀಯ ಪಕ್ಷಗಳು ತೀರಾ ಬೇಜವಾಬ್ದಾರಿಯ ಹೇಳಿಕೆಗಳನ್ನು ನೀಡುವುದರಿಂದ ಹಿಂದೆ ಸರಿಯಬೇಕು ಎಂದು ಮನವಿ ಮಾಡಿದರು. ದೇಶಕ್ಕೆ ಘಾಸಿ ಮಾಡುವಂತಹ ಆರೋಪ ಮಾಡುವುದರಿಂದ ಸದರಿ ವ್ಯಕ್ತಿಗಳಿಗೆ ರಾಜಕೀಯ ಚರ್ಚೆಗಳಲ್ಲಿ ಕೆಲವು ಅಂಕಗಳು ಲಭಿಸಬಹುದು. ಆದರೆ ಇವರನ್ನು ದೇಶವಾಸಿ ಜನತೆ ಎಂದಿಗೂ ಕ್ಷಮಿಸುವುದಿಲ್ಲ ಎಂದು ಎಚ್ಚರಿಸಿದರು. ಕೋವಿಡ್ ಪಿಡುಗಿನ ಸಂದರ್ಭ ಪ್ರಚಾರ ಮಾಡಲಾಗಿದ್ದ ತಪ್ಪು ಮಾಹಿತಿಗಳನ್ನು ಮತದಾರರು ಒಗ್ಗಟ್ಟಿನಿಂದ ತಿರಸ್ಕರಿಸಿದ್ದಾರೆಂದು ಪ್ರಧಾನಿ ನೆನಪಿಸಿದರು.

ಜನರ ಸುರಕ್ಷೆಗೆ ಅಗತ್ಯ ಕ್ರಮ

ಪ.ಏಷ್ಯಾದಲ್ಲಿ ಸುಮಾರು ಒಂದು ತಿಂಗಳಿಂದ ಸಮರ ನಡೆಯುತ್ತಿದೆ. ಸಂಘರ್ಷದಿಂದ ಉದ್ಭವಿಸಿರುವ ಸವಾಲುಗಳನ್ನು ಭಾರತವು ಸಂಪೂರ್ಣ ಶಕ್ತಿಯುತವಾಗಿ ಎದುರಿಸುತ್ತಿದೆ. ದೇಶದ ಜನರ ಸುರಕ್ಷೆಗಾಗಿ ಸರಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಕಚ್ಚಾತೈಲ ಮತ್ತು ಅನಿಲಗಳಿಗೆ ಭಾರತವು ಸಂಘರ್ಷ ಸಂತ್ರಸ್ತ ವಲಯಗಳನ್ನು ಅವಲಂಬಿಸಿದೆ. ಈ ವಿಚಾರದಲ್ಲಿ ದೇಶದ ಕುಟುಂಬಗಳು ಮತ್ತು ರೈತರಿಗೆ ಹೊರೆಯಾಗಕೂಡದೆಂದು ಸರಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ.

ಆರ್ಥಿಕ ಚಟುವಟಿಕೆಗೆ ವೇಗ: ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ವಲಯದ ಆರ್ಥಿಕ ಚಟುವಟಿಕೆಗೆ ವೇಗ ನೀಡಲಿದೆ ಮತ್ತು ಪಶ್ಚಿಮ ಉತ್ತರಪ್ರದೇಶದ ರೈತರು, ಸಣ್ಣ ವ್ಯಾಪಾರಿಗಳು ಹಾಗೂ ಯುವಶಕ್ತಿಗೆ ಹೊಸ ಅವಕಾಶಗಳನ್ನೂ ಸೃಜಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಜನಸಾಮಾನ್ಯರಿಗೂ ಪೂರಕ ವಾಯುಯಾನ ನೀತಿ: ಸರಕಾರದ ವಿಮಾನಯಾನ ನೀತಿಯತ್ತ ಗಮನ ಸೆಳೆದ ಪ್ರಧಾನಿ, ಬಿಜೆಪಿ ನೇತೃತ್ವದ ಸರಕಾರ ಜನರಿಗೆ ಸುಗಮ ವಿಮಾನ ಪಯಣಕ್ಕೆ ಪೂರಕ ಅವಕಾಶ ಕಲ್ಪಿಸಿದೆ ಮತ್ತು ವಿಮಾನ ನಿಲ್ದಾಣಗಳ ಮೂಲಸೌಕರ್ಯ ವಿಸ್ತರಣೆಗೆ ಆದ್ಯತೆ ನೀಡಿದೆ. ವಿಮಾನ ಪಯಣವು ದೇಶದ ಜನಸಾಮಾನ್ಯ ಕುಟುಂಬಗಳಿಗೂ ಸುಗಮವಾಗಬೇಕೆಂಬ ಆಶಯದಿಂದಲೇ ಉಡಾನ್ ಸ್ಕೀಮ್‌ನ್ನು ಸರಕಾರ ಆರಂಭಿಸಿತ್ತು. ತತ್‌ಪರಿಣಾಮ ಕಳೆದ ಕೆಲವು ವರ್ಷಗಳಲ್ಲಿ ಈ ಸ್ಕೀಮ್‌ನಡಿ 1.6ಕೋಟಿ ಜನರು ಕೈಗೆಟಕುವ ದರದಲ್ಲಿ ವಿಮಾನ ಯಾನ ಕೈಗೊಂಡಿದ್ದಾರೆ.

ಮುಂಬರುವ ವರ್ಷಗಳಲ್ಲಿ ದೇಶದ ಸಣ್ಣ ಪುಟ್ಟ ನಗರಗಳಲ್ಲಿ ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ, 200 ಹೆಲಿಪ್ಯಾಡ್‌ಗಳ ನಿರ್ಮಾಣದ ಯೋಜನೆಗಳು ಸರಕಾರದ ಚಿಂತನೆಯಲ್ಲಿದ್ದು, ಸುಮಾರು 29ಸಾವಿರ ಕೋಟಿ ರೂ.ಅಂಗೀಕೃತ ಅಂದಾಜು ವೆಚ್ಚದಲ್ಲಿ ಈ ಸ್ಕೀಮ್‌ನ್ನು ಸರಕಾರ ವಿಸ್ತರಿಸಿದೆ ಎಂದು ಮಾಹಿತಿ ನೀಡಿದರು. ಉತ್ತರಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಯೋಗಿ, ನಾಗರಿಕ ವಿಮಾನಯಾನ ಸಚಿವ ಕಿಂಜರಪು ರಾಮ್ ಮೋಹನ್ ನಾಯ್ಡು ಮತ್ತಿತರ ಗಣ್ಯರು ಪ್ರಧಾನಿ ಜತೆಗಿದ್ದರು.

ವೈರಮುಡಿ ಕಿರೀಟಧಾರಣ ಮಹೋತ್ಸವ

ಮೇಲುಕೋಟೆ: ಶ್ರೀ ಚಲುವನಾರಾಯಣಸ್ವಾಮಿಯವರ ವಿಶ್ವ ವಿಖ್ಯಾತ ವೈರಮುಡಿ ಕಿರೀಟಧಾರಣ ಮಹೋತ್ಸವ ಮಹಾವಿಷ್ಣುವಿನ ಅನುಗ್ರಹಕ್ಕೆ ಪ್ರಮುಖ ದಿನವಾದ ಶನಿವಾರ ರಾತ್ರಿ ಲಕ್ಷಾಂತರಭಕ್ತರ ಜಯಘೋಷದೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಪರಾಭವನಾಮ ಸಂವತ್ಸರದ ಮೀನ-ಚೈತ್ರಮಾಸದ ಪುಷ್ಯ ನಕ್ಷತ್ರದ ಶುಭದಿನಕೂಡಿದ ಬ್ರಹ್ಮೋತ್ಸವದ ನಾಲ್ಕನೇತಿರುನಾಳ್ ದಿನದಂದು ಸಾಕ್ಷಾತ್ ಭಗವಂತನದ್ದೆಂದೇ ಪ್ರತೀತಿಯಿರುವ ವೈರಮುಡಿ ಕಿರೀಟವನ್ನು ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢನಾದ ಚಲುವನಾರಾಯಣ ಸ್ವಾಮಿಗೆ ರಾತ್ರಿ 8.40 ಗಂಟೆಗೆ ತೊಡಿಸಲಾಯಿತು.

ಇದಕ್ಕೂ ಮುನ್ನಗರುಡದೇವನ ಉತ್ಸವ ನಡೆದನಂತರ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಮಕ್ಷಮದಲ್ಲಿ ಮಹಾಮಂಗಳಾರತಿ ನೆರವೇರಿಸಿ, ಭಕ್ತರ ಗೋವಿಂದನಾಮ ಘೋಷಣೆಯೊಂದಿಗೆ ವೈರಮುಡಿ ಉತ್ಸವಕ್ಕೆ ಚಾಲನೆ ದೊರೆಯಿತು ವೈರಮುಡಿಧರಿಸಿ ಭವ್ಯತೋಮಾಲೆಗಳು ದಿವ್ಯಾಭರಣಗಳೊಂದಿಗೆ ಗಂಡಬೇರುಂಡರೂಪಿ ಪ್ರಭಾವಳಿಯೊಂದಿಗೆ ಅಲಂಕೃತನಾದ ಚಲುವನಾರಾಯಣಸ್ವಾಮಿಯ ವೈರಮುಡಿ ಉತ್ಸವ ಗಂಡುಬೇರುಂಡ ಸ್ವರೂಪಿಯಾದ ರಾಜಗೋಪುರದಬಳಿ ಬರುತ್ತಿದ್ದಂತೆ ಭಕ್ತರ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ಸುಶ್ರಾವ್ಯ ಮಂಗಳವಾದ್ಯ ದೊಂದಿಗೆ ಸಾಗಿದ ಸ್ವಾಮಿಯ ಉತ್ಸವವನ್ನು ಮೈಸೂರು ಮಹಾರಾಜರು ವೈರಮುಡಿ ತ್ಸವ ವೀಕ್ಷಿಸುತ್ತಿದ್ದ ಪುಷ್ಪಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ಮಹಾರಾಜರು ದರ್ಶನ ಮಾಡಿದ್ದಾರೆಂದು ಪರಿಭಾವಿಸಿ ಮತ್ತೆ ಉತ್ಸವಕ್ಕೆ ಚಾಲನೆ ನೀಡಲಾಯಿತು.

ರಾಜಮುಡಿ ಕಿರೀಟ ಹಸ್ತಾಂತರ

ಮೇಲುಕೋಟೆಗೆ ಬಂದ ವೈರಮುಡಿ-ರಾಜಮುಡಿ ತಿರುವಾಭರಣ ಪೆಟ್ಟಿಗೆಗಳನ್ನು ಚಿನ್ನದ ಪಲ್ಲಕ್ಕಿಯಲ್ಲಿ ಭವ್ಯಮೆರವಣಿಗೆಯಲ್ಲಿ ತರಲಾಯಿತು. ರಾತ್ರಿ 7ಗಂಟೆಯ ವೇಳೆಗೆ ಚೆಲುವನಾರಾಯಣಸ್ವಾಮಿ ಸನ್ನಿಧಿಯ ಮುಂಭಾಗ ನವರಂಗದ ಮಧ್ಯಭಾಗದಲ್ಲಿ ರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ತೆರೆದು ರಾಜಮುಡಿ ಕಿರೀಟ, ಗಂಡ ಬೇರುಂಡ ಪದಕ ಪದ್ಮಪಾದ ಶಂಖ,ಚಕ್ರ ಗದಾಂಗಿ ಸೇರಿದಂತೆ 16ವಿಧದ ವಜ್ರಾಭರಣಗಳನ್ನು ಜಿಲ್ಲಾಧಿಕಾರಿ ಕುಮಾರ ಸಮಕ್ಷಮ ಪರಿಶೀಲಿಸಿ ಸ್ಥಾನೀಕರು ಅರ್ಚಕರು ಪರಿಚಾರಕರಿಗೆ ಹಸ್ತಾಂತರ ಮಾಡಲಾಯಿತು. ವೈರಮುಡಿ ತಿರುವಾಭರಣ ಪೆಟ್ಟಿಗೆಯನ್ನು ನೇರವಾಗಿ ದೇವರ ಅಲಂಕಾರಕ್ಕೆ ನೀಡಲಾಯಿತು. ರಾಜಮುಡಿಕಿರೀಟ ಮತ್ತು ತಿರುವಾಭರಣಗಳು ಏ.2ರವರೆಗೆ ಬ್ರಹ್ಮೋತ್ಸವದಲ್ಲಿ ಚೆಲುವನಾರಾಯಣಸ್ವಾಮಿಯನ್ನು ಅಲಂಕರಿಸಲಿವೆ.



ವೈರಮುಡಿ ತಿರುವಾಭರಣ ಪೆಟ್ಟಿಗೆಗೆ ವಿಶೇಷ ಪೂಜೆ

ಮೇಲುಕೋಟೆಯ ಯತಿರಾಜದಾಸರ್ ಗುರುಪೀಠದಲ್ಲಿ ಕೊನೆಯ ಸಾಂಪ್ರದಾಯಿಕ ಪೂಜೆ ನೆರವೇರಿದ ನಂತರ ವೈರಮುಡಿ-ರಾಜಮುಡಿ ತಿರುವಾಭರಣಪೆಟ್ಟಿಗೆಗಳಿದ್ದ ಬಂಗಾರದ ಪಲ್ಲಕ್ಕಿ ದೇವಾಲಯ ಪ್ರವೇಶಿಸಿದರು. ಇದಕ್ಕೂ ಮೊದಲು ಪೇಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮೇಲುಕೋಟೆ ಒಕ್ಕಲಿಗ ಮುಖಂಡರು. ಆದಿಚುಂಚನಗಿರಿ ಶಾಖಾಮಠದ ಮುಂದೆ ಚುಂಚನಗಿರಿ ಶ್ರೀಗಳು ಪೂಜೆ ಸಲ್ಲಿಸಿದರು. ಪ್ರಥಮಪೂಜೆ ಮಂಡ್ಯದ ಲಕ್ಷ್ಮೀಜನಾರ್ಧನ ದೇಗುಲದಲ್ಲಿ ನಡೆದರೆ ಕೊನೆಯ ಪೂಜೆ ಯತಿರಾಜದಾಸರ್ ಗುರುಪೀಠದಿಂದ ಸಾಂಪ್ರದಾಯಿಕ ಪದ್ಧತಿಯಂತೆ ನೆರವೇರಿತು.



ಗಮನ ಸೆಳೆದ ಮಹಾರಾಜರ ದರ್ಶನ ಮಂಟಪ

ಈ ವರ್ಷ ಮಹಾರಾಜರು ವೈರಮುಡಿ ದರ್ಶನಮಾಡುತ್ತಿದ್ದ ಮಂಟಪವನ್ನು ವಿವಿದ ಪುಷ್ಪ ಹಾಗೂ ತಳಿರುತೋರಣದಿಂದ ನಿರ್ಮಿಸಿದ್ದು ಅರ್ಥಪೂರ್ಣವಾಗಿತ್ತು. ಕೇವಲ ನಡಚಪ್ಪರದಿಂದ ಮಾಡುತ್ತಿದ್ದ ಈ ವ್ಯವಸ್ಥೆ ಬಗ್ಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಳೆದ ವರ್ಷ ಆಕರ್ಷಕ ಮಂಟಪ ನಿರ್ಮಿಸಿ ಬದಲಾವಣೆ ತಂದಿದ್ದು ಈ ವರ್ಷ ಮತ್ತಷ್ಟು ಆಕರ್ಷಕವಾಗಿ ಮಂಟಪ ನಿರ್ಮಿಸಲಾಗಿತ್ತು ಇದೇ ಪ್ರಥಮವಾಗಿ ನರಸಿಂಹಸ್ವಾಮಿ ಬೆಟ್ಟ ದೇವಾಲಯದ ರಾಜಗೋಪುರ ಭುವನೇಶ್ವರಿ ಮಂಟಪ, ರಾಯಗೋಪುರ ಮಾದರಿಯಲ್ಲಿ ಸ್ವಾಗತಕಮಾನುಗಳನ್ನು ನಿರ್ಮಿಸಿದ್ದು ಭಕ್ತರ ಆಕರ್ಷಣೆಗೆ ಕಾರಣವಾಗಿತ್ತು.

ಭಕ್ತರ ಪ್ರಶಂಸೆಗೆ ಪಾತ್ರವಾದ ವ್ಯವಸ್ಥೆಗಳು

ದೇವಾಲಯದ ಪ್ರಾಂಗಣದಲ್ಲಿ ಸಾಮಾನ್ಯ ಭಕ್ತರು ವಿಶ್ರಾಂತಿಗಾಗಿ ಹಾಕಿದ್ದ ರೆಡ್ ಕಾರ್ಪೆಟ್ ಕುಡಿಯುವ ನೀರಿನ ವ್ಯವಸ್ಥೆ, ನಿರಂತರ ಸ್ವಚ್ಛತೆ, ಪೊಲೀಸ್ ಸಹಾಯಕೇಂದ್ರಗಳು, ವೈದ್ಯಕೀಯ ಸೇವೆ, ರಾಜ್ಯರಸ್ತೆಸಾರಿಗೆ ಸಂಸ್ಥೆಯ ಬಸ್ ಸೌಕರ್ಯ, ದೇವಾಲಯದ ಒಳಭಾಗದ ಧಾರ್ಮಿಕ ಕೈಂಕರ್ಯಗಳನ್ನು ಬಿತ್ತರಿಸಲು ಹಾಕಿದ್ದ ಎಲ್.ಇ.ಡ ಪರದೆಗಳು ಉತ್ಸವದ ಬೀದಿಗಳಲ್ಲಿದ್ದ ತೆರೆದ ಚರಂಡಿಗಳಲ್ಲಿ ಭಕ್ತರು ಬೀಳುವುದನ್ನು ತಪ್ಪಿಸಲು ಚರಂಡಿಮೇಲೆ ಹಲಗೆಗಳನ್ನು ಹಾಕಿದ ಸೇರಿದಂತೆ ಮಾಡಿದ ವ್ಯವಸ್ಥೆಗಳು ಭಕ್ತಸ್ನೇಹಿಯಾಗಿತ್ತು.



ಕಿರುಸುದ್ದಿ

ಅಸ್ಸಾಂ ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚು: ಡಿಕೆಶಿ



ಬೆಂಗಳೂರು: ಅಸ್ಸಾಂ ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು, ಜನರು ನರಳುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಕೊಟ್ಟ ಭರವಸೆಗಳು ಈಡೇರಿಲ್ಲ. ಹೀಗಾಗಿ ಅಸ್ಸಾಂನಲ್ಲಿ ಭಾರಿ ಬದಲಾವಣೆ ಆಗಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ ಮಾಧ್ಯಮಗಳಿಗೆ ಶನಿವಾರ ಪ್ರತಿಕ್ರಿಯೆ ನೀಡಿದರು. ನಾನು ಅಸ್ಸಾಂ ಚುನಾವಣಾ ಪ್ರಚಾರಕ್ಕೆ ತೆರಳುತ್ತಿದ್ದು, ಕೇರಳಕ್ಕೂ ಹೋಗಬೇಕು. ಹೀಗಾಗಿ ಕರ್ನಾಟಕದ ಉಪಚುನಾವಣೆಗಳನ್ನು ನೋಡಿಕೊಳ್ಳಬೇಕು. ಅಸ್ಸಾಂನಲ್ಲಿ ಆಡಳಿತ ಕುಸಿದಿದೆ. ಈ ಕಾರಣಕ್ಕೆ ಅಲ್ಲಿನ ಜನ ಬದಲಾವಣೆ ಬಯಸಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಜನರ ಪ್ರಗತಿ ಆಗಿಲ್ಲ ಎಂದರು. ಅಸ್ಸಾಂನಲ್ಲಿ ಸಚಿವ ಸಂಪುಟ ಪುನಾರಚನೆ ಬಳಿಕ ಅಸ್ಸಾಂ ಬಿಜೆಪಿಯಲ್ಲಿ ಆಂತರಿಕ ಕಲಹ ಹೆಚ್ಚಿದೆ. ಅವರ ಪಕ್ಷದಲ್ಲಿ ಯಾರೂ ಸಂತೋಷವಾಗಿಲ್ಲ. ಬಿಜೆಪಿಗರು ತುಷ್ಟವಾಗಿರಲು ಅವಕಾಶವಿಲ್ಲ ಎಂದು ಬೇಸರಗೊಂಡಿದ್ದಾರೆ ಎಂದರು.

ಖಾಸಗಿ ಆಸ್ಪತ್ರೆಗಳಲ್ಲಿ ಒಪಿಡಿ ಚಿಕಿತ್ಸೆಗೆ ಮಾತ್ರ ಅವಕಾಶ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳ ವೈದ್ಯರು ತಮ್ಮ ಕರ್ತವ್ಯದ ಅವಧಿ ಬಳಿಕ ಖಾಸಗಿ ಆಸ್ಪತ್ರೆಗಳಲ್ಲಿ ಒಳ ರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಕೇವಲ ಹೊರ ರೋಗಿಗಳಿಗೆ ಮಾತ್ರ ಚಿಕಿತ್ಸೆ ನೀಡಬಹುದಾಗಿದೆ ಎಂದು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಸರ್ಕಾರಿ ವೈದ್ಯರು ಮತ್ತು ಸರ್ಕಾರಿ ಅರೆ ವೈದ್ಯಕೀಯ ಸಿಬ್ಬಂದಿ ಖಾಸಗಿ ವೈದ್ಯಕೀಯ ವೃತ್ತಿ ಮಾಡುತ್ತಿರುವ ಬಗ್ಗೆ ಆಯಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಹಾಗೂ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರಿಗೆ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವ ಮುಖಾಂತರ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಿದ ಕುರಿತು ಖಾತರಿಪಡಿಸಬೇಕಾಗಿರುತ್ತದೆ. ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಕೇವಲ ಹೊರರೋಗಿಗಳಿಗೆ ಚಿಕಿತ್ಸೆ (ಒಪಿಡಿ) ನೀಡುತ್ತಿರುವ ಕುರಿತು ದೃಢಪಡಿಸಬೇಕಿದೆ.

ಕಾರು ಡಿಕ್ಕಿ: ಅಂಬುಲೆನ್ಸ್ ಪಲ್ಟಿ

ಬಾಗಲಕೋಟೆ: ನವನಗರದ ಬಸ್ ನಿಲ್ದಾಣ ಹತ್ತಿರ ಹಾಯ್ದು ಹೋಗುತ್ತಿದ್ದ ಅಂಬುಲೆನ್ಸ್‌ಗೆ ಇನೋವಾ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಅಂಬುಲೆನ್ಸ್ ಪಲ್ಟಿಯಾದ ಘಟನೆ ಶುಕ್ರವಾರ ಸಾಯಂಕಾಲ ನಡೆದಿದೆ. ನವನಗರದ ನಗರದ ಬಸ್ ನಿಲ್ದಾಣದ ಸರ್ಕಲ್ ಬಳಿಯ ಪೆಟ್ರೋಲ್ ಬಂಕ್ ಬಳಿ ರಭಸವಾಗಿ ಬಂದ ಇನ್ನೋವಾ ಕಾರು ಬಾಗಲಕೋಟೆಯ ಎಪಿಎಂಸಿ ಮಾರ್ಗದಿಂದ ನವನಗರದ ಜಿಲ್ಲಾ ಆಸ್ಪತ್ರೆ ಕಡೆಗೆ ಹೋಗುತ್ತಿದ್ದ ಅಂಬುಲೆನ್ಸ್ ಗೆ ಡಿಕ್ಕಿಯಿಂದ ತತಕ್ಷಣವೇ ಪಲ್ಟಿಯಾಗಿದೆ. ಜಿಲ್ಲಾಸ್ಪತ್ರೆ ಕಡೆಗೆ ಸಾಗುತ್ತಿದ್ದ ಅಂಬುಲೆನ್ಸ್ ಹಾಗೂ ಕಾಳಿದಾಸ ವೃತ್ತದ ದಿಕ್ಕಿಗೆ ತೆರಳುತ್ತಿದ್ದ ಕಾರಿನ ನಡುವೆ ಈ ಅಪಘಾತ ಸಂಭವಿಸಿದೆ. ಡಿಕ್ಕಿಯ ಪರಿಣಾಮ ಅಂಬುಲೆನ್ಸ್ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಘಟನೆಯ ವೇಳೆ ಅಂಬುಲೆನ್ಸ್‌ನಲ್ಲಿದ್ದ ಕೆಲ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ತಕ್ಷಣವೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಅಪಘಾತದ ಬಳಿಕ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಬಾಗಲಕೋಟೆ ಸಂಚಾರಿ ಪೊಲೀಸರು ಪರಿಶೀಲನೆ ನಡೆಸಿ, ವಾಹನಗಳನ್ನು ತೆರವುಗೊಳಿಸಿ ಸಂಚಾರವನ್ನು ಸುಗಮಗೊಳಿಸಿದರು.

ತಮಿಳುನಾಡು ಚುನಾವಣಾ ಪ್ರಚಾರಕ್ಕೆ ಹೋಗಲ್ಲ: ಸಿದ್ದರಾಮಯ್ಯ

ಎರಡೂ ಕಡೆ ಗೆಲುವು: ಸಿಎಂ

ಮೈಸೂರು: ವಿಧಾನಸಭೆಯ ಎರಡು ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲೂ ನಾವು ಗೆಲ್ಲುತ್ತೇವೆ. ಅಲ್ಲದೇ ಎಲ್ಲಾ ಚುನಾವಣೆಗಳಲ್ಲೂ ಕಠಿಣ ಸ್ಪರ್ಧೆ ಇರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರದ ಉಪಚುನಾವಣೆ ನಡೆಯುತ್ತಿದೆ.

ಎರಡು ಕ್ಷೇತ್ರಗಳಲ್ಲಿ ನಾವೇ ಗೆಲ್ಲುತ್ತೇವೆ. ದಾವಣಗೆರೆ ಕ್ಷೇತ್ರದಲ್ಲಿ ಯಾವ ಗೊಂದಲವೂ ಇಲ್ಲ. ಕಳೆದ ಮೂರು ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ನಾವೇ ಗೆದ್ದಿದ್ದೇವೆ. ಏ. 5ರಂದು ಕೇರಳಕ್ಕೆ ಪ್ರಚಾರಕ್ಕೆ ಹೋಗುತ್ತೇನೆ. ತಮಿಳುನಾಡು ಚುನಾವಣಾ ಪ್ರಚಾರಕ್ಕೆ ಹೋಗುವುದಿಲ್ಲ. ಕೇರಳದಿಂದ ಬಂದ ಮೇಲೆ ಬಾಗಲಕೋಟೆ,ದಾವಣಗೆರೆ ಕ್ಷೇತ್ರದಲ್ಲಿ ಪ್ರಚಾರ ಮಾಡುವೆ ಎಂದರು.

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶಕ್ಕೂ,ಸಿಎಂ ಕುರ್ಚಿಯ ವಿಚಾರಕ್ಕೂ ಸಂಬಂಧವೇ ಇಲ್ಲ. ನಮ್ಮದು ಹೈಕಮಾಂಡ್ ಪಕ್ಷ. ಹೈಕಮಾಂಡ್ ಹೇಳಿದರೆ ಉಳಿದ ಎರಡು ಬಜೆಟ್ ಮಂಡಿಸುತ್ತೇನೆ ಎಂದು ಅಧಿವೇಶನದಲ್ಲಿ ಹೇಳಿರುವೆ. ಈಗಲೂ ಅದನ್ನೇ ಹೇಳುತ್ತೇನೆ. ಫಲಿತಾಂಶಕ್ಕೂ, ಸಿಎಂ ಸ್ಥಾನದ ವಿಷಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದರು.



ಡ್ರಗ್ಸ್ ಮುಕ್ತ ಕರ್ನಾಟಕ

ಮೈಸೂರಿನಲ್ಲೂ ಡ್ರಗ್ಸ್ ತಯಾರಿಕೆ ಪತ್ತೆಯಾಗಿರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಕರ್ನಾಟಕ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಡ್ರಗ್ಸ್ ಜಾಲ ಪತ್ತೆ ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಕರ್ನಾಟಕವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಲು ನಾವು ಹೋರಾಡುತ್ತಿದ್ದೇವೆ. ಡ್ರಗ್ಸ್‌ಗೆ ಲಿಂಕ್ ಯಾವುದೇ ಆಗಿರಲಿ, ಏನೇ ಆಗಿದ್ದರೂ ಕೂಡ ನಾವು ಅದನ್ನು ತಡೆಯುತ್ತೇವೆ ಎಂದರು.

ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕ ಕೆ. ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತು, ಕಾಡಾ ಅಧ್ಯಕ್ಷ ಎಚ್.ಡಿ.ಗಣೇಶ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಮತ್ತಿತರರು ಹಾಜರಿದ್ದರು.

ಹಿಂದಿ ಕಡ್ಡಾಯ ಹೇರಿಕೆಯಿಲ್ಲ

ಶಿಕ್ಷಣದಲ್ಲಿ ದ್ವಿಭಾಷಾ ಸೂತ್ರ ಜಾರಿಯ ವಿಚಾರದಲ್ಲಿ ರಾಜ್ಯಸರ್ಕಾರ ಮಾಡಿರುವ ನಿರ್ಧಾರದಲ್ಲಿ ಅಚಲವಾಗಿದ್ದು, ಎಲ್ಲರೂ ಸರ್ಕಾರದ ತೀರ್ಮಾನವನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿದರು. ಶಿಕ್ಷಣದಲ್ಲಿ ತ್ರಿಭಾಷಾ ನೀತಿಯ ಬದಲಿಗೆ ದ್ವಿಭಾಷಾ ನೀತಿಯನ್ನು ಜಾರಿಗೆ ತರಲು ಸರ್ಕಾರ ತೀರ್ಮಾನಿಸಿದೆ. ಯಾರೋ ಕೆಲವರು ವಿರೋಧ ಮಾಡಿದರು ಎನ್ನುವ ಕಾರಣಕ್ಕಾಗಿ ನಾವು ಹಿಂದೆ ಸರಿಯುವುದಿಲ್ಲ. ಎಲ್ಲಾ ದೃಷ್ಟಿಕೋನದಿಂದಲೂ ಚರ್ಚಿಸಿ, ಸರ್ಕಾರ ನಿರ್ಧಾರ ಮಾಡಿದೆ ಎಂದು ಸಮರ್ಥಿಸಿಕೊಂಡರು. ಸರ್ಕಾರದ ನಿರ್ಧಾರವನ್ನು ಒಪ್ಪಿಕೊಳ್ಳಬೇಕಾಗಿದೆ ಎಂದರು.

ಕಾಂಗ್ರೆಸ್ ತಲೆಯಲ್ಲಿ ಮಾತ್ರ ಮನುವಾದ: ಛಲವಾದಿ

ಬೆಂಗಳೂರು: ಸರ್ವರಿಗೂ ಸಮಪಾಲು, ಸಮಬಾಳು ಕೊಡುವುದು ಬಿಜೆಪಿಯ ಕರ್ತವ್ಯ. ಮನುವಾದ ಬದುಕಿ ರುವುದು ಕಾಂಗ್ರೆಸ್ಸಿನ ತಲೆಯಲ್ಲಿ ಮಾತ್ರ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಶನಿವಾರ ಮಾಧ್ಯಮಗಳ ಜತೆ ಮಾತನಾಡಿ, ಮುಸಲ್ಮಾನ ಬಂಧುಗಳೆಲ್ಲ ನಮಗೆ ಮತ ಹಾಕುತ್ತಾರೆಂದು ನಾನು ಹೇಳಲಾರೆ. ಯಾಕೆಂದರೆ ಕಾಂಗ್ರೆಸ್ಸಿನವರು ಅವರ ತಲೆಗೆ ಬಿಟ್ಟ ಹುಳಗಳು ಸತ್ತಿಲ್ಲ, ಅವು ಬದುಕಿವೆ ಎಂದರು.

ಮುಸಲ್ಮಾನರು ಭಾರತದಲ್ಲಿ ಸುಭದ್ರವಾಗಿ ಬದುಕುತ್ತಿದ್ದಾರೆ. ಅವರನ್ನು ದಾರಿ ತಪ್ಪಿಸಿ ನಿಮ್ಮ ಮತಬ್ಯಾಂಕ್ ಮಾಡಿದ್ದೀರಿ. ಅವರೆಲ್ಲ ವಿರೋಧ ಮಾಡಿದರೂ ದೇಶ ಆಳುತ್ತಿದ್ದೇವೆ. ಅಂಬೇಡ್ಕರರ ಸಂವಿಧಾನ ಎಲ್ಲ ರೀತಿಯ ರಕ್ಷಣೆಯನ್ನು ಅವರಿಗೂ ಕೊಟ್ಟಿದೆ. ಆದ್ದರಿಂದ ಅವರು ಸುಭದ್ರತೆಯಿಂದ ಬದುಕುತ್ತಿದ್ದಾರೆ ಎಂದರು.

ಕಾಂಗ್ರೆಸ್ಸಿಗರೇ, ಬಿಜೆಪಿ ಗುಮ್ಮ ತೋರಿಸಿ ಎಷ್ಟು ದಿನ ನೀವು ಮುಸಲ್ಮಾನರನ್ನು ಇಟ್ಟುಕೊಳ್ಳಲು ಸಾಧ್ಯ. ಅವರಲ್ಲೂ ಯುವಕರು, ತಿಳಿದವರು ಇದ್ದು ಯೋಚನೆ ಮಾಡುತ್ತಾರೆ. ಕಾಂಗ್ರೆಸ್ ನಮಗೇನು ಮಾಡಿದೆ, ಮೋದಿಯವರು ನಮಗೇನಾದರೂ ಅನ್ಯಾಯ, ವಂಚನೆ ಮಾಡಿದ್ದಾರಾ ಎಂದು ಯೋಚಿಸುತ್ತಾರೆ. ಆ ಜನಾಂಗಗಳು ಯೋಚನೆ ಮಾಡಿ ಸ್ವಾಭಿಮಾನವನ್ನು ಉಳಿಸಿಕೊಳ್ಳಲಿ ಎಂದು ಹೇಳಿದರು.

ಖೋತಾ ಬಜೆಟ್

ರಾಜ್ಯದಲ್ಲಿ ಈ ಬಾರಿಯೂ ಖೋತಾ ಬಜೆಟ್ ಇದೆ. ಮುಖ್ಯಮಂತ್ರಿಗಳು 1 ಲಕ್ಷದ 32 ಸಾವಿರ 190 ಕೋಟಿ ಸಾಲ ಮಾಡಿದ್ದಾರೆ. ಇದಕ್ಕಾಗಿಯೇ ಅವರಿಗೆ ಸಾಲರಾಮಯ್ಯ ಎಂಬ ಬಿರುದು ಸಿಕ್ಕಿದೆ. ಸಾಲ ಮಾಡಿದ್ದನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ಬಾರಿಯ ರಾಜ್ಯ ಬಜೆಟ್ ಅಧಿವೇಶನವು 20 ದಿನಗಳ ಕಾಲ ನಡೆದರೂ ಉತ್ತರ ಸಿಕ್ಕಿದ್ದು ಮಾತ್ರ ಬಹಳ ಕಡಿಮೆ ಎಂದರು.ಮಹದೇವಪ್ಪ ಅವರು ಸಮಾಜ ಕಲ್ಯಾಣ ಸಚಿವರಾದ ಬಳಿಕ ದಲಿತರನ್ನು ಸರ್ವನಾಶ ಮಾಡಿದ್ದಾರೆ. ಟೆಂಡರ್ ಇಲ್ಲದೇ ಗುತ್ತಿಗೆ ನೀಡುತ್ತಾರೆ. ಎಸ್‌ಇಪಿ, ಟಿಎಸ್‌ಪಿ ಹಣದಲ್ಲಿ ಯಾರಿಂದಲೋ ಒಂದು ಪತ್ರ ಪಡೆದು 5 ಕೋಟಿ, 10 ಕೋಟಿ ಎಂದು ಬರೆದುಕೊಡುತ್ತಾರೆ ಎಂದು ಟೀಕಿಸಿದರು.

ಟಿಕೆಟ್ ನಿರಾಕರಿಸಿದ ಶಾಸಕ ಸುರೇಶ್ ಕುಮಾರ್

ಬೆಂಗಳೂರು: ಚನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಕ್ರಿಕೇಟ್ ಪಂದ್ಯ ವೀಕ್ಷಣೆಯ ಟಿಕೆಟ್ ಅನ್ನು ಶಾಸಕ ಸುರೇಶ್ ಕುಮಾರ್ ನಿರಾಕರಿಸಿದ್ದು, ಮುಂಬರುವ ಐಪಿಎಲ್ ಪಂದ್ಯಗಳಿಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿ ಯಾವುದೇ ಟಿಕೆಟ್ ಅಥವಾ ಪಾಸ್‌ಗಳನ್ನು ವಿತರಿಸಬಾರದೆಂದು ಸಭಾಧ್ಯಕ್ಷ ಯು.ಟಿ ಖಾದರ್‌ಗೆ ಪತ್ರ ಬರೆದಿದ್ದಾರೆ.



ಐಬಿಎ ವ್ಯಾಪ್ತಿಯಲ್ಲಿ ಜನಸಾಮಾನ್ಯರು ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತಿದ್ದಾಗ, ದಿಢೀರನೆ ಚಿನ್ನಸ್ವಾಮಿ ಸ್ಟೇಡಿಯಂನ ಐಪಿಎಲ್ ಪಂದ್ಯ, ಶಾಸಕರಿಗೆ ಟಿಕೆಟ್ ಹಂಚಿಕೆ ಹಾಗೂ ಶಾಸಕರ ಮರ್ಯಾದೆಯ ಕುರಿತು ಚರ್ಚೆಗಳು ಪ್ರಾರಂಭವಾದದ್ದು ತಮಗೆ ತಿಳಿದೇ ಇದೆ. ಜನರ ಪರವಾಗಿ ಧ್ವನಿ ಎತ್ತಬೇಕಾದ ಸದನದಲ್ಲಿ ಜನಸೇವಕರಾದ ನಮಗೆ ವಿಐಪಿ ಮರ್ಯಾದೆ ಸಿಗಬೇಕೆಂಬ ಆಗ್ರಹ ವ್ಯಕ್ತವಾಗುತ್ತಿರುವುದು ನಿಜಕ್ಕೂ ದುರಂತ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಜನಸಾಮಾನ್ಯರ ಅದೆಷ್ಟೋ ಗಂಭೀರ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ವರ್ಷಾನುಗಟ್ಟಲೆ ಪರಿಹಾರ ಸಿಗುವುದಿಲ್ಲ. ಆದರೆ ಶಾಸಕರ ಸೌಲಭ್ಯ ಟಿಕೆಟ್ ವಿಚಾರ ಬಂದಾಗ 24 ಗಂಟೆಯೊಳಗೆ ಸ್ಪಂದಿಸುವ ಉತ್ಸುಕತೆಯನ್ನು ಸರ್ಕಾರ ತೋರಿರುವುದು ಜನಸಾಮಾನ್ಯರಲ್ಲಿ ಆಶ್ಚರ್ಯ ಹಾಗೂ ಜನಪ್ರತಿನಿಧಿಗಳ ಬಗ್ಗೆ ತಿರಸ್ಕಾರ ಮೂಡುವಂತೆ ಮಾಡಿದೆ ಬೇಸರ ವ್ಯಕ್ತಪಡಿಸಿದ್ದಾರೆ.

ಮಾಧ್ಯಮಗಳ ವರದಿ ಪ್ರಕಾರ ಶಾಸಕರಿಗೆ ತಲಾ 2 ಹಾಗೂ ಮುಂದಿನ ದಿನಗಳಲ್ಲಿ 5 ಟಿಕೆಟ್, ಪಾಸ್ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿದುಬಂದಿದೆ. ಸಮಾಜವಾದಿ ಎಂದು ಹೇಳಿಕೊಳ್ಳುವ ಸರ್ಕಾರದ ಆಡಳಿತದಲ್ಲಿ ಈ ವಿಐಪಿ ಸಂಸ್ಕೃತಿಗೆ ಪುರಸ್ಕಾರ ಸಿಗುತ್ತಿರುವುದು ಅಘಾತಕಾರಿ ಎಂದಿದ್ದಾರೆ.

ಕಳೆದ ವರ್ಷ ಇದೇ ಐಪಿಎಲ್ ಪಂದ್ಯದ ಸಂದರ್ಭದಲ್ಲಿ ನಡೆದ ದುರಂತದಲ್ಲಿ 11 ಜನ ಅಮಾಯಕರು ಪ್ರಾಣ ಕಳೆದುಕೊಂಡ ಘಟನೆಯ ಆಕ್ರಂದನ ಇಂದಿಗೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ. ಆ ನೋವಿನ ನಡುವೆ ನಾವು ಐಪಿಎಲ್ ಟಿಕೆಟ್‌ಗಾಗಿ ಸದನದಲ್ಲಿ ಪಟ್ಟು ಹಿಡಿಯುವುದು ನಮ್ಮನ್ನು ಜನರ ದೃಷ್ಟಿಯಲ್ಲಿ ಇನ್ನಷ್ಟು ಕನಿಷ್ಠರನ್ನಾಗಿಸುತ್ತದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಹಾಗೂ ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ, ಸರ್ಕಾರ ಅಥವಾ ಕೆಎಸ್‌ಸಿಎ ವತಿಯಿಂದ ಶಾಸಕರಿಗೆ ನೀಡಲಾಗುವ ಐಪಿಎಲ್ ಪಂದ್ಯದ ಯಾವುದೇ ಪಾಸ್ ಅಥವಾ ಟಿಕೆಟ್‌ಗಳನ್ನು ನಾನು ಸವಿನಯವಾಗಿ ನಿರಾಕರಿಸುತ್ತಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಿಜೆಪಿಯವರಿಗೆ ನಿರಾಸೆ: ಎಂ.ಬಿ.ಪಾಟೀಲ್

ಬೆಂಗಳೂರು: ರಾಜ್ಯದ 2 ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿಯವರಿಗೆ ನಿರಾಸೆಯಾಗುವುದು ಮಾತ್ರವಲ್ಲ 2028ರ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲೂ ನಿರಾಸೆಯಾಗಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲುವುದು ಮಾತ್ರವಲ್ಲ, 2028ರ ವಿಧಾನಸಭೆಯಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಗೆದ್ದು ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಗೊಂದಲ ಬಗೆಹರಿದಿದೆ. ಬಂಡಾಯವಾಗಿ ಸ್ಪರ್ಧಿಸಿದ್ದ ಸಾಧಿಕ್ ಪೈಲ್ವಾನ್ ಅವರ ಮನವೊಲಿಸಲಾಗಿದೆ. ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರೂ ಸೇರಿದಂತೆ ನಾಯಕರು ಅವರ ಮನವೊಲಿಸಿದ್ದಾರೆ ಎಂದರು.

ಅಲ್ಪಸಂಖ್ಯಾತರಿಗೆ ನಾವು ಕೇವಲ ಭರವಸೆ ನೀಡುತ್ತಿಲ್ಲ. ಈಗಾಗಲೇ ಮೂರು ಬಾರಿ ಅಬ್ದುಲ್ ಜಬ್ಬಾರ್ ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದ್ದೇವೆ. ಮುಂದೆಯೂ ರಾಜ್ಯಸಭೆ ಸದಸ್ಯರನ್ನಾಗಿ ಮಾಡುವ ಅವಕಾಶ ಇದೆ ಎಂದು ತಿಳಿಸಿದರು. ಬಾಗಲಕೋಟೆಯಲ್ಲಿ ನಮ್ಮ ಪಕ್ಷದ ಸಾಕಷ್ಟು ಸ್ಥಳೀಯ ನಾಯಕರಿದ್ದು, ಮತದಾರರ ಮನಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ. ಶಾಸಕರಾಗಿದ್ದವರು ಮೃತಪಟ್ಟಾಗ ಅವರ ಕುಟುಂಬದವರಿಗೆ ಟಿಕೆಟ್ ಕೊಡುವ ಪದ್ಧತಿಯನ್ನು ಮುಂದುವರೆಸಿದ್ದೇವೆ. ಈ ವಿಚಾರದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಸಚಿವ ಜಮೀರ್ ಅಹಮ್ಮದ್ ಖಾನ್ ಕೂಡ ಉಪ ಚುನಾವಣೆಯ ಪ್ರಚಾರದಲ್ಲಿ ಭಾಗಿಯಾಗುತ್ತಾರೆ ಎಂದು ಹೇಳಿದರು.



ಮಾತೃಭಾಷೆಗೆ ಆದ್ಯತೆ

ಶಿಕ್ಷಣದಲ್ಲಿ ಮಾತೃಭಾಷೆಗೆ ಆದ್ಯತೆ ದೊರೆಯಬೇಕು. ಪ್ರಾಥಮಿಕ ಶಿಕ್ಷಣದಿಂದ ವೈದ್ಯಕೀಯ ಶಿಕ್ಷಣದವರೆಗೂ ಕನ್ನಡ ಭಾಷೆ ಕಲಿಕೆ ಇರಬೇಕು, ಕನ್ನಡದ ಜೊತೆಗೆ ಹಿಂದಿ ಕಲಿಕೆಯೂ ಆಗಬೇಕು. ಹಿಂದಿ ಭಾಷೆ ಕಲಿತರೆ ತಪ್ಪಿಲ್ಲ. ಆದರೆ ಹಿಂದಿಯನ್ನು ರಾಷ್ಟ್ರ ಭಾಷೆಯನ್ನಾಗಿ ಇನ್ನೂ ಒಪ್ಪಿಕೊಂಡಿಲ್ಲ. ಹೀಗಾಗಿ ಸರ್ಕಾರ ಈ ರೀತಿಯ ತೀರ್ಮಾನ ತೆಗೆದುಕೊಂಡಿರಬೇಕು ಎಂದು ಸಚಿವ ಪಾಟೀಲ್ ತಿಳಿಸಿದರು. ತೈಲ ಅಭಾವ ಪರಿಸ್ಥಿತಿಯು ಕೇವಲ ಕೈಗಾರಿಕಾ ಮಾತ್ರವಲ್ಲ ಎಲ್ಲಾ ಕ್ಷೇತ್ರಗಳ ಮೇಲೂ ವ್ಯತಿರಿಕ್ತ ಪರಿಣಾಮವಾಗುತ್ತದೆ. ಇದು ರಾಜ್ಯಕ್ಕೆ ಮಾತ್ರವಲ್ಲ ದೇಶ ಹಾಗೂ ಜಗತ್ತಿಗೂ ಅನ್ವಯ ಆಗುತ್ತದೆ ಎಂದು ಪಾಟೀಲ್ ಹೇಳಿದರು.

ನಾಳೆ ವಾಣಿಜ್ಯ ತೆರಿಗೆ ಕಚೇರಿಗಳ ಕಾರ್ಯಾಚರಣೆ

ಬೆಂಗಳೂರು: ಮಾ.30 ರ ಸೋಮವಾರ ಮಹಾವೀರ ಜಯಂತಿ ಪ್ರಯುಕ್ತ ಸಾರ್ವತ್ರಿಕ ರಜೆ ಇದ್ದರೂ ಸಹ ವಾಣಿಜ್ಯ ತೆರಿಗೆ ಇಲಾಖೆಯ ಎಲ್ಲಾ ಕಚೇರಿಗಳು ಅಂದು ಕಾರ್ಯನಿರ್ವಹಿಸಲಿವೆ. ಈ ಕುರಿತು ವಾಣಿಜ್ಯ ತೆರಿಗೆಗಳ ಆಯುಕ್ತರು ಆದೇಶ ಹೊರಡಿಸಿದ್ದಾರೆ. 2025-26ರ ಆರ್ಥಿಕ ವರ್ಷದ ಮುಕ್ತಾಯದ ಹಿನ್ನೆಲೆಯಲ್ಲಿ, ತೆರಿಗೆದಾರರ ಅನುಕೂಲಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಸಾರ್ವತ್ರಿಕ ರಜೆಯ ದಿನದಂದು ವಾಣಿಜ್ಯ ತೆರಿಗೆ ಕಚೇರಿಗಳ ಕಾರ್ಯಾಚರಣೆ ನಡೆಸಲಿವೆ.

ಮತ ಪ್ರಚಾರದ ವೇಳೆ ಪ್ರದೀಪ್ ಈಶ್ವರ್ ಹೈಡ್ರಾಮಾ!


ದಾವಣಗೆರೆ: ತಾಕತ್ತಿದ್ದರೆ ದಾವಣಗೆರೆಗೆ ಬಾ... ಎಂಬ ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್ ಸವಾಲು ಸ್ವೀಕರಿಸಿದ್ದ ಶಾಸಕ ಪ್ರದೀಪ್ ಈಶ್ವರ್ ಶನಿವಾರ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಎಂ.ಶಾಮನೂರು ಪರ ಪ್ರಚಾರಕ್ಕೆ ಆಗಮಿಸಿದ ವೇಳೆ ಹೈಡ್ರಾಮಾ ನಡೆಯಿತು. ನಗರದ ಕೆ.ಬಿ ಬಡಾವಣೆಯಲ್ಲಿ ರಾಘವೇಂದ್ರ ಸ್ವಾಮಿ ಮಠದಲ್ಲಿ ಪೂಜೆ ಸಲ್ಲಿಸಿದ ನಂತರ ತೆರೆದ ವಾಹನದಲ್ಲಿ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ರೋಡ್ ಶೋ ಆರಂಭಿಸಿದರು.

ಬಿಜೆಪಿ ಕಚೇರಿಗೆ ಸಾಗುವ ಮಾರ್ಗದಲ್ಲಿ ಪ್ರದೀಪ್ ಈಶ್ವರ್ ಕಾರಿನ ಮೇಲೆ ನಿಂತು ಬರುತ್ತಿದ್ದಂತೆ ಬಿಜೆಪಿ, ಕಾಂಗ್ರೆಸ್ ಗುಂಪುಗಳು ಮುಖಾಮುಖಿಯಾಗಿ, ಪರಸ್ಪರರ ವಿರುದ್ಧ ಘೋಷಣೆ ಕೂಗತೊಡಗಿದರು. ಶಾಸಕ ಪ್ರದೀಪ್ ಈಶ್ವರ್ ಕಾಂಗ್ರೆಸ್ ಬಾವುಟ ಹಿಡಿದು, ತೊಡೆ ತಟ್ಟುತ್ತಾ, ತಲೆಗೂದಲನ್ನು ಸವರಿಕೊಂಡವರಂತೆ ತಮ್ಮ ಕೂದಲನ್ನೂ ಅಲುಗಾಡಿಸಲು ನಿಮ್ಮಿಂದ ಆಗುವುದಿಲ್ಲವೆಂಬಂತೆ ವರ್ತಿಸಿದರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಮುಖಂಡರು, ಕಾರ್ಯಕರ್ತರು ಕೈಯಲ್ಲಿ ಚಪ್ಪಲಿ ಹಿಡಿದು ನಿಂದಿಸಿದರೆ, ಬಿಜೆಪಿ ಮಹಿಳಾ ಮೋರ್ಚಾದವರು ಕೈಯಲ್ಲಿ ಪೊರಕೆ ಹಿಡಿದು, ತಮ್ಮ ಕೈಯಲ್ಲಿದ್ದ ಬಳೆಗಳನ್ನು ಬಿಚ್ಚಿ ಪ್ರದೀಪ್ ಈಶ್ವರಗೆ ತೋರಿಸಿದರು.


ಓದುಗರ ವಿಭಾಗ



ಕುಂವೀ ಒಡನಾಡಿದ ಸೂರ್ಯನ ಚೂರುಗಳು
ಅಪೂರ್ವರಾಗಂಗಳ್
ಲೇ: ಕುಂ. ವೀರಭದ್ರಪ್ಪ
ಪ್ರ: ಅಂಕಿತ ಪುಸ್ತಕ ಪ್ರಕಾಶನ, ಬೆಂ.
ಮೊದಲ ಮುದ್ರಣ: 2026
ಪುಟ: 304 ರೂ. 350
ಸಂಪರ್ಕ: 080-26617100 / 9019190502



ಗ್ರಾಮಾಫೋನ್ ಪಿನ್ ರಹಸ್ಯ
ಬಂಗಾಳಿ ಮೂಲ: ಶರದೇಂದು ಬಂದೋಪಾಧ್ಯಾಯ
ಕನ್ನಡಕ್ಕೆ: ಎಂ.ಎ. ನಾಗರಾಜರಾವ್
ಪ್ರ: ಅಂಕಿತ ಪುಸ್ತಕ ಪ್ರಕಾಶನ, ಬೆಂ.
ಮೊದಲ ಮುದ್ರಣ: 2026
ಪುಟ: 200 ರೂ. 250
ಸಂಪರ್ಕ: 9019190502



ಅನಾಮಧೇಯ ಕರೆ
ರೋಚಕ ಪತ್ತೇದಾರಿ ಕಾದಂಬರಿ
ಲೇ: ರವಿರಾಜ ಬೈಕಂಪಾಡಿ
ಪ್ರ: ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
ಮೊದಲ ಮುದ್ರಣ: 2026
ಪುಟ: 206 ರೂ. 250
ಸಂಪರ್ಕ: 080-26617100

₹12 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ

ಮೈಸೂರು: ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಪೊಲೀಸರು 12 ಕೋಟಿ ರೂಪಾಯಿ ಮೌಲ್ಯದ ಡ್ರಗ್ಸ್ ದಾಸ್ತಾನು ಪತ್ತೆ ಮಾಡಿದ್ದಾರೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರ ಗ್ರಾಮದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೈಸೂರು ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.



ಮೈಸೂರು ಸಿದ್ಧಿಖಿ ಮೊಹಲ್ಲಾ ನಿವಾಸಿ ಮೊಹಮ್ಮದ್ ಇರ್ಫಾನ್ ಮತ್ತು ಹುಣಸೂರಿನ ಮೊಹಮ್ಮದ್ ಇರ್ಫಾನ್ ಆರೋಪಿಗಳಾಗಿದ್ದಾರೆ. ಹುಣಸೂರು ತಾಲೂಕಿನ ರತ್ನಪುರಿ-ದಾಸನಪುರ ಮಧ್ಯೆ ಇರುವ ಹುಣಸೂರು ನಗರದ ರಹಮತ್ ಮೊಹಲ್ಲಾದ ಇರ್ಫಾನ್ ಎಂಬುವವರಿಗೆ ಸೇರಿದ ತೋಟದ ಮನೆಯಲ್ಲಿ ಬಾರೀ ಪ್ರಮಾಣದ ಸಿಂತೆಟಿಕ್ಸ್ ಡ್ರಗ್ಸ್ ಪ್ಯಾಕೆಟ್ ಮಾಡುತ್ತಿದ್ದರು.

ತೋಟದ ಮಾಲೀಕ ಮೊಹಮ್ಮದ್ ಇರ್ಫಾನ್ ಮೈಸೂರಿನ ಇರ್ಫಾನ್ ಎಂಬಾತ ಸೇರಿಕೊಂಡು ಈ ಕೃತ್ಯ ನಡೆಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ ವೇಳೆ ಸ್ಥಳದಿಂದ ಪರಾರಿಯಾಗಲೆತ್ನಿಸಿದ ಆರೋಪಿಗಳನ್ನು ಸುಮಾರು 10 ಕಿ.ಮೀ.ವರೆಗೆ ಚೇಸ್ ಮಾಡಿ ಹುಣಸೂರು ನಗರಕ್ಕೆ ಸಮೀಪದ ಸಲೀಂ ಪ್ಯಾಲೆಸ್ ಬಳಿ ಬಂಧಿಸಿದ್ದಾರೆ.

ಇವರ ಜಮೀನಿನಲ್ಲಿ ಸಿಂಥೆಟಿಕ್ ಡ್ರಗ್ಸ್ ತಯಾರಿಕೆ ಮತ್ತು ಸಂಗ್ರಹಣೆ ನಡೆಸಲಾಗುತ್ತಿದ್ದುದನ್ನು ಪೊಲೀಸರು ಪತ್ತೆಹಚ್ಚಿದ್ದಾರೆ. ಹುಣಸೂರು ಟೌನ್ ರೆಹಮತ್ ಮೊಹಲ್ಲಾ ನಿವಾಸಿಯ ಶೆಡ್‌ನಲ್ಲಿ ಕಚ್ಚಾ ವಸ್ತುಗಳನ್ನು ಸಂಗ್ರಹಿಸಿಡಲಾಗಿತ್ತು ಎಂದು ತಿಳಿದುಬಂದಿದೆ ಎಂದು ಹೇಳಿದರು.

ಪೊಲೀಸರು ಜಪ್ತು ಮಾಡಿದ ವಸ್ತುಗಳು

ಪೊಲೀಸರು 7.35 ಕೆ.ಜಿ ತೂಕದ ಮೆಫೆಡ್ರೋನ್ ಮತ್ತು 41 ಕೆ.ಜಿ ತೂಕದ ಡ್ರಗ್ಸ್ ಪ್ರಿಕರ್ಸರ್ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಒಟ್ಟು 48 ಕೆ.ಜಿ ತೂಕದ ಡ್ರಗ್ಸ್ ಪದಾರ್ಥಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳು ಈ ರೀತಿಯಾಗಿ ಸಿಂಥೆಟಿಕ್ ಡ್ರಗ್ಸ್ ತಯಾರಣೆ ಮತ್ತು ವಿತರಣೆ ಮಾಡುತ್ತಿದ್ದರು. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಹಿಂದಿ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿ: ಕನ್ನಡ ಸಂಘಟನೆ ಸಂಭ್ರಮ

ಬೆಂಗಳೂರು: ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಮನೆಯ ಮುಂದೆ ಕನ್ನಡ ಪರ ಸಂಘಟನೆಗಳಿಂದ ಸಂಭ್ರಮಾಚರಣೆ ನಡೆಯಿತು.

ಕರವೇ ಅಧ್ಯಕ್ಷ ನಾರಾಯಣಗೌಡ ನೇತೃತ್ವದಲ್ಲಿ ಮುಖಂಡರು, ಕಾರ್ಯಕರ್ತರ ನಿಯೋಗ, ಸಚಿವರ ಮನೆಗೆ ಭೇಟಿ ನೀಡಿ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದ್ದಕ್ಕಾಗಿ ಸಚಿವರಿಗೆ ಅಭಿನಂದನೆ ಸಲ್ಲಿಸಿದರು. ಬಳಿಕ ಮಾತನಾಡಿದ ಕರವೇ ಅಧ್ಯಕ್ಷ ನಾರಾಯಣಗೌಡ ಅವರು, ಹಿಂದಿ ಭಾಷೆ ಪರೀಕ್ಷೆಯಲ್ಲಿ ಉತ್ತೀರ್ಣವಾಗಲೇಬೇಕು ಎಂಬ ಬಲವಂತದ ಹೇರಿಕೆಯಿಂದ ಮಕ್ಕಳಿಗೆ ತೊಂದರೆಯಾಗುತ್ತಿತ್ತು. ಭಾಷೆಯ ದಬ್ಬಾಳಿಕೆಯಿಂದಾಗಿ ಲಕ್ಷಾಂತರ ಮಕ್ಕಳ ಭವಿಷ್ಯ ತೊಂದರೆಗೆ ಒಳಗಾಗುವುದನ್ನು ಸರಕಾರದ ಈ ತೀರ್ಮಾನ ತಪ್ಪಿಸಿದೆ. ಶಾಪಗ್ರಸ್ತ ವ್ಯವಸ್ಥೆಯಿಂದ ವಿಮೋಚನೆಯಾಗಿದೆ. ಮಕ್ಕಳ ಭವಿಷ್ಯ ಉಜ್ವಲವಾಗಲಿದೆ ಎಂದಿದ್ದಾರೆ.

ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದನ್ನು ಅರ್ಥ ಮಾಡಿಕೊಳ್ಳಬೇಕು. ಮಹಾರಾಷ್ಟ್ರದಲ್ಲಿ ಬಿಜೆಪಿಯ ಆಡಳಿತವೇ ಇದ್ದರೂ ತ್ರಿಭಾಷಾ ಸೂತ್ರವನ್ನು ಕೈಬಿಟ್ಟಿದ್ದಾರೆ. ನಮ್ಮಲ್ಲಿ ಬಿಜೆಪಿಯವರು ಗ್ರೇಡಿಂಗ್ ಪದ್ಧತಿಗೆ ವಿರೋಧ ಮಾಡುತ್ತಿರುವುದು ಸರಿಯಲ್ಲ. ರಾಜಕೀಯ ಅಜೆಂಡಕ್ಕಾಗಿ ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡಬೇಡಿ ಎಂದು ಎಚ್ಚರಿಕೆ ನೀಡಿದರು.



ಪ್ರಶ್ನೋತ್ತರ ರತ್ನಮಾಲಿಕೆ

♦ ವಿದ್ವಾನ್ ನರಸಿಂಹ ಭಟ್

ಚಿಂತಿಸಬೇಕಾದ ವಿಷಯ ಯಾವುದು?

▸ವೈಭವವಿದ್ದರೂ ಮತ್ತೊಬ್ಬರಿಗೆ ಕೊಡದಿರುವ ಕೃಪಣತಾ

ಅತ್ಯಂತ ವಿಷಾದದ ಸಂಗತಿ ಯಾವುದು ಎಂಬುದು ಇಲ್ಲಿನ ಪ್ರಶ್ನೆ. ಇದಕ್ಕೆ ಉತ್ತರ, ಒಬ್ಬ ವ್ಯಕ್ತಿಯಲ್ಲಿ ಸಾಕಷ್ಟು ಸಂಪತ್ತು ಇದೆ; ಒಂದರ್ಥದಲ್ಲಿ ಧನಿಕ. ತಾನು ಮಾತ್ರ ಆ ಸಂಪತ್ತನ್ನು ಬಳಸಿದರೂ ಅದು ಖರ್ಚಾಗದ ರೀತಿಯಲ್ಲಿ ಇದೆ. ಹಾಗಾದರೆ, ಇಷ್ಟು ಸಂಪತ್ತುಳ್ಳವನಾಗಿದ್ದರೂ ಕೂಡ ಅವನು ದೀನ ದರಿದ್ರರಿಗೆ ಆ ಸಂಪತ್ತನ್ನು ಕೊಡದೇ ತಾನೇ ಭೋಗಿಸಬೇಕು ಎಂಬ ಯಾವ ಆಸೆ ಇದೆಯೋ, ಅದೇ ವಸ್ತುತಃ ಕೃಪಣತಾ ಎಂಬುದಾಗಿ ಹೇಳಲಾಗಿದೆ. ಈ ಕಾರ್ಪಣ್ಯ ಎಂಬ ಅತಿಭಯಂಕರವಾದ ಅವಗುಣವು ಪ್ರಸ್ತುತ ವಿಷಾದವಪಡಬೇಕಾದ ವಿಚಾರವಾಗಿದೆ. ವಿಷಾದಪಡುವ ಸಂಗತಿಯಾದರೂ ಏನು? ಸಂಪತ್ತನ್ನು ಕೊಡಲೇಬೇಕೆಂಬ ನಿಯಮವಿದೆಯೇ? ಕೊಡದಿದ್ದರೆ ಏನು ಅಪರಾಧ? ನಿಜವಾಗಿಯೂ ಆ ವ್ಯಕ್ತಿ ತನ್ನ ಸಾಮರ್ಥ್ಯ, ಬುದ್ಧಿಮತ್ತೆ ಮತ್ತು ಶ್ರಮದ ಕಾರಣದಿಂದ ಸಂಪತ್ತನ್ನು ಗಳಿಸಿರುತ್ತಾನೆ. ಹಾಗಾಗಿ ಆ ಸಂಪತ್ತನ್ನು ಅವನೇ ಇಟ್ಟುಕೊಂಡು ಬಳಸಿ, ತನ್ನ ಪರಿವಾರದ ಪ್ರಗತಿಗಾಗಿ ಸೀಮಿತವಾಗಿ ಇಟ್ಟರೆ ಅದು ಹೇಗೆ ಆತಂಕದ ವಿಷಯ? ಅದನ್ನು ಏಕೆ ಕಾರ್ಪಣ್ಯ ಎಂಬುದಾಗಿ ಕರೆಯಬೇಕು ಎಂಬುದು ಇಲ್ಲಿನ ಆಶಯ. ಹೀಗಿರುವಾಗ ವೈಭವವಿದ್ದಾಗ ಮತ್ತೊಬ್ಬರಿಗೆ ಕೊಡದ ಮನೋಧರ್ಮವು ಹೇಗೆ ವಿಷಾದದ ಸಂಗತಿ ಎಂಬುದನ್ನು ಯೋಚಿಸಬೇಕಾಗಿದೆ.

"ಸ್ತೋಕಾದಪಿ ಹಿ ದಾತವ್ಯಂ ಮುದಿದೇನ ಅಂತರಾತ್ಮನಾ। ಅಹನ್ಯಹನಿ ಯತ್ಕಿಂಚಿತ್ ಅಕಾರ್ಪಣ್ಯಮ್ ಇತಿ ಸ್ಮೃತಮ್॥" ಸ್ವಲ್ಪವನ್ನಾದರೂ ಕೊಡಲೇಬೇಕು, ಸ್ವಲ್ಪವನ್ನಾದರೂ ಅತ್ಯಂತ ಸಂತೋಷದಿಂದ ಕೊಡಬೇಕು, ಅದನ್ನು ಪ್ರತಿನಿತ್ಯವೂ ಕೊಡಬೇಕು ಎಂಬುದಾಗಿ ಕಾರ್ಪಣ್ಯದ ಸ್ವಭಾವವನ್ನು ಇಲ್ಲಿ ಹೇಳಲಾಗಿದೆ. ಪ್ರತಿಯೊಬ್ಬ ಮನುಷ್ಯನು ಕೂಡ ತಾನು ಸಂಪಾದಿಸಿದ್ದರಲ್ಲಿ ಹತ್ತನೆಯ ಒಂದು ಭಾಗವನ್ನು ದಾನ ಮಾಡಬೇಕು ಎಂಬುದಾಗಿ ನಮ್ಮೆಲ್ಲಾ ಶಾಸ್ತ್ರ ಸಂಪ್ರದಾಯಗಳು ಸಾರುತ್ತವೆ. ಅಂದರೆ ತ್ಯಾಗ ಮಾಡುವ ಮನೋಭಾವನೆ ಬೆಳೆಸಿಕೊಳ್ಳಬೇಕು; ಕೇವಲ ತಾನು ಮಾತ್ರ ಸಂಪತ್ತನ್ನು ಬಳಸಿಕೊಳ್ಳಬೇಕು ಎಂಬ ಭಾವನೆ ಸಲ್ಲದು ಎಂದು. ಸಂಪಾದಿಸಿದ ದ್ರವ್ಯದಲ್ಲಿ ಗೃಹಸ್ಥನಾದವನು ಪಂಚಮಹಾಯಜ್ಞಗಳನ್ನು ಮಾಡಬೇಕು ಎಂಬುದಾಗಿ ನಮ್ಮ ಸನಾತನ ಧರ್ಮದಲ್ಲಿ ಹೇಳಿರುವ ಅತ್ಯಂತ ಮಹತ್ವದ ವಿಷಯ. ಈ ಪಂಚಮಹಾಯಜ್ಞ ಎಂಬ ಶ್ರೇಷ್ಠವಾದ ಕರ್ಮವು ತನ್ನ ಸಂಪತ್ತನ್ನು ಸದ್ವಿನಿಯೋಗ ಮಾಡುವ ವಿಧಾನ ಎಂದು ಕರೆಯುತ್ತಾರೆ. ಇದರಿಂದ ಸಂಪತ್ತು ಸದ್ವಿನಿಯೋಗವಾದಂತಾಗುತ್ತದೆ. ದಾನದಿಂದ ಭೂತಕೋಟಿಗಳ ತೃಪ್ತಿಯು ಉಂಟಾಗಿ ದಾನಿಗೆ ಭೂತಕೋಟಿಯ ಅನುಗ್ರಹ ಸಿಗುತ್ತದೆ. ಹಾಗಾಗಿ ಎಷ್ಟು ವೈಭವವಿದ್ದರೂ ಅವನು ತನ್ನ ಗಳಿಕೆಯ ದ್ರವ್ಯವನ್ನು ಬೇರೊಬ್ಬರಿಗೆ ದಾನ ಮಾಡಲಿಲ್ಲವೆಂದರೆ ಅವನು ಶುದ್ಧನಾಗುವುದಿಲ್ಲ. ತ್ಯಾಗದ ಮನೋಭೂಮಿಕೆ ಬರದಿದ್ದರೆ ಶುದ್ಧಿ ಎಲ್ಲಿಂದ ಬರುತ್ತದೆ! ಶುದ್ಧನಾಗದಿದ್ದರೆ ಅವನು ಹೇಗೆ ತಾನೇ ಪುರುಷಾರ್ಥಗಳನ್ನು ಪಡೆಯುತ್ತಾನೆ? ಇತ್ಯಾದಿ ಅನೇಕ ಆತಂಕಗಳಿಂದ ಕೇಳಿರುವ ಪ್ರಶ್ನೆ ಇದಾಗಿದೆ.



ವ್ಯಾಸ ವೀಕ್ಷಿತ



♦ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಜರಾಸಂಧನಿಗೆ ಕೃಷ್ಣನ ಉತ್ತರ

ಜರಾಸಂಧನು ಹೇಳಿದನು: "ನಿಮ್ಮೊಂದಿಗೆ ವೈರವೆಂಬುದು ಎಂದುಂಟಾಯಿತು ಎಂಬುದು ನನ್ನ ಸ್ಮರಣೆಗೆ ಬರುತ್ತಿಲ್ಲ. ಯೋಚಿಸಿದರೂ ಹೊಳೆಯುತ್ತಿಲ್ಲ. ನನ್ನ ಕಡೆಯಿಂದ ಯಾವುದೇ ಅಪರಾಧವೆಂಬುದಿಲ್ಲದಿರುವಾಗ, ನಿರಪರಾಧನಾದ ನನ್ನನ್ನು ಶತ್ರುವೆಂಬುದಾಗಿ ಹೇಗೆ ಪರಿಗಣಿಸಿದಿರಿ? ವಿಪ್ರರೇ, ಸಾಧು-ಪುರುಷರ ವರ್ತನೆಯೆಂದರೆ ಹೀಗಿರುವುದೇ? ಯಾರಿಗಾದರೂ ಧರ್ಮಕ್ಕೆ ಹೊಡೆತಬಿತ್ತೆಂದರೆ ಮನಸ್ಸು ಸಂತಾಪಗೊಳ್ಳುತ್ತದೆ. ಮಹಾರಥಿಯೆಂದೂ ಧರ್ಮಜ್ಞನೆಂದೂ ಕರೆಸಿಕೊಳ್ಳುವ ಯಾವನೇ ಕ್ಷತ್ರಿಯನು ಅನ್ಯಥಾ ನಡೆದುಕೊಳ್ಳುವವನಾಗಿ ಅಪರಾಧವಿಲ್ಲದವನ ಮೇಲೇರಿ ಹೋಗುವನೋ, ಅಂತಹವನು ಪಾಪಗತಿಯನ್ನು ಹೊಂದುವನು ಹಾಗೂ ತನ್ನ ಶ್ರೇಯಸ್ಸಿಗೇ ಭಂಗವನ್ನು ತರುವನು. ಸತ್ಕರ್ಮಗಳನ್ನು ಮಾಡುವುದೆನ್ನುವುದರಲ್ಲಿ ಕ್ಷತ್ರಿಯರ ಧರ್ಮವೆಂಬುದೇ ಮೂರೂ ಲೋಕಗಳಲ್ಲಿ ಶ್ರೇಷ್ಠವೆನಿಸತಕ್ಕದ್ದು. ಧರ್ಮಜ್ಞರು ಬೇರಿನ್ನಾವುದೇ ಧರ್ಮವನ್ನು ಪ್ರಶಂಸಿಸುವುದಿಲ್ಲ. ನಾನಾದರೋ ಸ್ವಧರ್ಮದಲ್ಲಿ ನೆಲೆಗೊಂಡಿರತಕ್ಕವನು. ಮನಸ್ಸನ್ನು ಸಂಯಮದಲ್ಲಿ ಇಟ್ಟುಕೊಂಡಿರುವವನು. ಪ್ರಜೆಗಳ ವಿಷಯದಲ್ಲಿ ಏನೂ ಅಪರಾಧವನ್ನು ಎಸಗದಿರುವವನು. ನನ್ನ ವಿಷಯದಲ್ಲಿ ಏನೋ ಪ್ರಮಾದದಿಂದಲೇ ನೀವು ಹೀಗೆ ಹೇಳುತ್ತಿರುವಿರಿ."

ಅದಕ್ಕೆ ಕೃಷ್ಣನು ಹೇಳಿದನು: ಒಂದು ಕುಲದ ಉದ್ಧಾರವೆಂಬುದು ದೊಡ್ಡಕೆಲಸವಯ್ಯಾ ಮಹಾಬಾಹುವೇ! ಕುಲದ ಗೌರವವನ್ನುಳಿಸುವಂತಹವನು ಎಲ್ಲೋ ಒಬ್ಬನಿದ್ದಾನು. ಅಂತಹ ಮಹಾಪುರುಷನೊಬ್ಬನ ಆಣತಿಯಂತೆಯೇ ನಾವೀಗ ನಿನಗೆ ದಂಡನವನ್ನೀಯಲು ಬಂದಿದ್ದೇವೆ. ಈ ಭೂಮಿಯ ಮೇಲಿರುವ ಅನೇಕ ಕ್ಷತ್ರಿಯ ರಾಜರನ್ನು ನೀನು ಸೆರೆಗೆ ನೂಕಿರುವೆ. ಇದು ಕ್ರೂರಾಪರಾಧ. ಇದನ್ನು ಮಾಡಿಯೂ ನಿನ್ನನ್ನು ನೀನೇ ನಿರಪರಾಧಿಯೆಂದುಕೊಳ್ಳುವುದೇ? ಅಪರಾಧಿಗಳಲ್ಲದ ಇತರ ರಾಜರನ್ನು ಒಬ್ಬ ರಾಜನು ಅದೆಂತು ಹಿಂಸಿಸಿಯಾನು ರಾಜಶ್ರೇಷ್ಠನೇ? ರಾಜರುಗಳನ್ನು ಜೈಲಿಗೆ ತಳ್ಳಿ ಅವರನ್ನು ರುದ್ರನಿಗೆ ಬಲಿಗೊಡಲು ನೀನು ಬಯಸುತ್ತಿರುವೆಯಲ್ಲವೇ? ನೀನು ಎಸಗುವ ಆ ಪಾಪವು ನಮಗೆ ಅಂಟಿಕೊಳ್ಳುತ್ತದೆ. ಓ ಜರಾಸಂಧ! ಆದರೆ ನಾವು ಧರ್ಮವನ್ನು ಪಾಲಿಸತಕ್ಕವರು, ಧರ್ಮದ ರಕ್ಷಣೆಯನ್ನು ಮಾಡಲು ಸಮರ್ಥರಾಗಿರುವವರು.


ದೇವತೆಗೆಂದು ಮನುಷ್ಯರನ್ನು ಬಲಿಗೊಡುವುದನ್ನು ನಾವೆಂದೂ ಕಂಡವರಲ್ಲ. ಹಾಗಿರಲು ಶಿವನ ಯಜ್ಞಕ್ಕಾಗಿ ಅಷ್ಟೊಂದು ಮನುಷ್ಯರನ್ನು ಬಲಿಗೊಡಲಿರುವೆಯೆಂಬುದೇ ಒಪ್ಪಲಾಗದ ಸಂಗತಿ. ನೀನು ಕ್ಷತ್ರಿಯ. ಉಳಿದ ರಾಜರು ನಿನಗೆ ಸವರ್ಣರು. ಜರಾಸಂಧ, ಮತ್ತಾರು ತಾನೆ ನಿನ್ನಂತೆ ಈ ರೀತಿಯಾಗಿ ದುರ್ಮತಿಯನ್ನು ಹೊಂದಿದ್ದಾರು? ಯಾವ ಯಾವ ಅವಸ್ಥೆಯಲ್ಲಿ ಯಾವ ಯಾವ ಕರ್ಮವನ್ನು ಒಬ್ಬನು ಮಾಡುತ್ತಾನೋ, ಅದದೇ ಅವಸ್ಥೆಯಲ್ಲಿ ಅದರ ಫಲವನ್ನು ಹೊಂದಬೇಕಾಗುತ್ತದೆ. ನೀನು ಜ್ಞಾತಿಕ್ಷಯಕರ. ಎಂದರೆ ಬಂಧುಗಳನ್ನೇ ನಾಶಮಾಡಲಿಕ್ಕೆ ಹೊರಟಿರತಕ್ಕವನು. ಆದರೆ ನಾವು ಆರ್ತರಿಗೆ ರಕ್ಷಣೆಯನ್ನು ಕೊಡತಕ್ಕವರು. ಆದ್ದರಿಂದ ಜ್ಞಾತಿವೃದ್ಧಿಗಾಗಿ ನಿನ್ನ ವಧೆಯನ್ನು ಮಾಡಲು ಬಂದಿರುವಂಥವರು.

ಈ ಲೋಕದಲ್ಲಿ ಕ್ಷತ್ರಿಯರಲ್ಲಿ ಗಂಡಸೆಂಬುವನೇ ಮತ್ತೊಬ್ಬನಿಲ್ಲ ಎಂದ ನೀನೇನನ್ನು ಭಾವಿಸಿಕೊಂಡಿರುವೆಯೋ, ಅದು ನಿನ್ನ ಮಹತ್ತಾದ ಬುದ್ಧಿವಿಪ್ಲವವೇ ಸರಿ. ಸ್ವಾಭಿಮಾನಿಯಾದ ಯಾವ ಕ್ಷತ್ರಿಯನು ತಾನೆ ತನ್ನ ಬಂಧುಗಳನ್ನು ಅರಿತವನಾಗಿ, ಅವರನ್ನು ಕಾಪಾಡಲೋಸುಗ ಮಾಡಬೇಕಾದ ರಣವನ್ನು ತಪ್ಪಿಸಿಕೊಂಡಾನು? ಅದರಿಂದಲೇ ಸ್ವರ್ಗಪ್ರಾಪ್ತಿಯು ತನಗಂಟಾಗುವುದು ಎಂಬುದನ್ನು ಅರಿತಿದ್ದೂ ಸಹ! ರಣವೆಂಬುದು ಒಂದು ಯಜ್ಞ. ರಣಯಜ್ಞದಲ್ಲಿ ದೀಕ್ಷೆಗೊಂಡ ಕ್ಷತ್ರಿಯರು ಸ್ವರ್ಗದಲ್ಲಿ ಆಸ್ಥೆಯುಳ್ಳವರಾಗಿ, ತಮಗೆ ಅಭೀಷ್ಟವಾದ ಲೋಕಗಳನ್ನು ಸೇರುವರೆಂಬುದನ್ನು ನೀನೂ ಅರಿತಿರಬೇಕಷ್ಟೆ?

ರಂಗಭೂಮಿ; ಎಡವಟ್ಟಿನಲ್ಲಿಯೂ ರಸ!

ವಕ್ರದೃಷ್ಟಿ

♦ ಎನ್. ರಾಮನಾಥ್
anakuramanath@gmail.com



ಟಿ.ಪಿ. ಕೈಲಾಸಂ ಬರೆದ ನಾಟಕದಲ್ಲಿನ ಸನ್ನಿವೇಶ ಇಂತಿದೆ:

"ಯಾರಲ್ಲಿ!" ದರ್ಪದಿಂದ ಕೂಗಿದ ರಾಜ.

"ಅಪ್ಪಣೆ ಮಹಾಪ್ರಭು" ಎನ್ನುತ್ತಾ ಭಟನೊಬ್ಬನು ಮುಂದೆ ಬಂದ.

"ರಾಜದ್ವಾರದ ಬಳಿ ಏನು ನಡೆಯುತ್ತಿದೆ?"

"ಮಹಾಪ್ರಭುಗಳೇ, ದ್ವಾರಸ್ಥನೋರ್ವನು ವಿಪ್ರನಾಗಿರುವನು."

ಆ ಕಾಲದಲ್ಲಿ ಮತಾಂತರ ಇರಲಿಲ್ಲ. ಇತರ ಜಾತಿಯವರನ್ನು ವಿಪ್ರರನ್ನಾಗಿಸುವುದಂತೂ ಕನಸಿನಲ್ಲಿಯೂ ಕಲ್ಪಿಸಿಕೊಳ್ಳಲಾಗದ ಕಾಲಘಟ್ಟ. ಇಂಥದರಲ್ಲಿ ದ್ವಾರಸ್ಥನೊಬ್ಬನು ಥಟ್ಟನೆ ವಿಪ್ರನಾಗಲು ಸಾಧ್ಯವೆ?

ರಾಜನ ಪಾತ್ರಧಾರಿಗೆ ಭಟನ ಪಾತ್ರಧಾರಿಯ ಎಡವಟ್ಟು ತಿಳಿಯಿತು. "ಹೋಗಿ ಅದೇನೆಂದು ಮತ್ತೆ ಅರಿತು ಬಾ" ಎಂದು ಹೂಂಕರಿಸಿದ. ಮತ್ತೆ ಬಂದ ಭಟನು "ವಿಪ್ರನೊಬ್ಬನು ದ್ವಾರಸ್ಥನಾಗಿರುವನು" ಎಂದ. ನಾಟಕ ಮುಂದುವರಿಯಿತು.

ಎಡವಟ್ಟುಗಳಿಗೂ, ನಾಟಕಗಳಿಗೂ ಬಿಡಲಾರದ ನಂಟು. ಒಮ್ಮೆ ರಸಪೂರ್ಣವಾಗಿ ನಡೆಯುತ್ತಿದ್ದ ನಾಟಕವೊಂದರಲ್ಲಿ ರಂಗದಲ್ಲಿದ್ದ ಇಬ್ಬರು ನಟರೂ ತಮ್ಮ ಮಾತುಗಳನ್ನು ಮರೆತರು. ಹಾಗೆ ಮರೆತಾಗ ಮಾತನ್ನು ನೆನಪಿಸಲೆಂದೇ ಇದ್ದ ಪ್ರಾಂಪ್ಟರ್ ಸೈಡ್‌ವಿಂಗಿನಿಂದ ಡೈಲಾಗನ್ನು ಪಿಸುಗುಡುವಿನಲ್ಲಿ ನುಡಿದ. ಆದರೂ ನಟರು ಬೆಬ್ಬೆಬ್ಬೇ. "ಯಾಕ್ರೋ, ಡೈಲಾಗ್ ಕೇಳಿಸ್ತಿಲ್ವಾ?" ಪ್ರಾಂಪ್ಟರ್ ಕೊಂಚ ದನಿಯೇರಿಸಿ ಕೇಳಿದ.

ಸೈಡ್‌ವಿಂಗಿನ ಸಮೀಪಕ್ಕೇ ನಡೆದ ನಟನೊಬ್ಬನು "ಕೇಳಿಸ್ತಿದೆ, ಸ್ಪಷ್ಟವಾಗಿ ಕೇಳಿಸ್ತಿದೆ. ಆದರೆ ಆ ಡೈಲಾಗ್ ನನ್ನದೋ, ಅವನದೋ?" ಎಂದ.

ಸೈಡ್‌ವಿಂಗಿನ ಪ್ರಾಂಪ್ಟಿಂಗು ವಿಫಲವಾದ ಮತ್ತೊಂದು ಪ್ರಸಂಗವು ಕೈಲಾಸಂರ 'ನಂ ಕಂಪ್ನಿ' ನಾಟಕದಲ್ಲಿ ಕಂಡುಬರುತ್ತದೆ. ಮಕ್ಕಳಿಲ್ಲದ ರಾಜದಂಪತಿಗಳಿಗೆ ತಪಸ್ಸು ಮಾಡಿದರೆ ಮಕ್ಕಳಾಗುತ್ತೆಂದು ವಿಪ್ರನೊಬ್ಬನು ನುಡಿದ ಕಾರಣ ರಾಜನು ಕಾಡಿಗೆ ಹೊರಡುವನು. ಅವನನ್ನು ತಡೆಯಲೆಂದು ನಾಡಿಗರು ಯತ್ನಿಸುತ್ತಾ, 'ಪಾಡು ಪಾರ್ವ ಪೇಳ್ವನೆಂದು ನಾಡು ಬಿಡುವುದೇ, ಭೂಪ, ನಾಡ ಬಿಡುವುದೇ' ಎಂದು ಹಾಡಬೇಕಿತ್ತು.

ಏರುಧ್ವನಿಯ ನಾಡಿಗರ ಪಾತ್ರಧಾರಿಯೊಬ್ಬನು 'ನಾಡ ಬುಡುವುದೇ... ಭೂಪ, ನಾಡ ಬುಡುವುದೇ...' ಎಂದು ಹಾಡಿದ.

"ಏಯ್! ಬು ಅಲ್ಲ ಕಣೋ, ಬೀ ಕಣೋ" ಎಂದ ಪ್ರಾಂಪ್ಟರ್.

"ನಾಡು ಬುಡುವುದೇ, ಭೀಪಾ, ನಾಡ ಬುಡುವುದೇ" ಎಂದ ಏರುಕಂಠಿ.

"ಅದಲ್ವೋ, ಮೊದಲ ಬು ಕಣೋ..."

"ನಾಡ ಬಿಡುವುದೇ ಭೀಪಾ ನಾಡ ಬಿಡುವುದೇ..."

"ಥೂ! ಇವನು ಸರಿಹೋಗಲ್ಲ ಕಣ್ರೋ... ವಾದ್ಯದ ಸದ್ದು ಏರಿಸ್ರೋ" ಎಂದ ಪ್ರಾಂಪ್ಟರ್.

ಖ್ಯಾತ ನಟ ಕಾಲಾಪಿಳ್ಳಣ್ಣರನ್ನು ಕುರಿತಾದ ಪ್ರಸಂಗವೊಂದಿದೆ. ಒಳ್ಳೆಯ ಸಂಗೀತಗಾರರಾಗಿದ್ದ ಅವರು ಹಾಡಿನ ಒಂದೇ ಸಾಲನ್ನು ವಿಸ್ತರಿಸಿ ಹಾಡುತ್ತಾ ಸಂಗೀತರಸಿಕರ ಮನವನ್ನು ಗೆಲ್ಲುವುದರಲ್ಲಿದ್ದರು. ಆದರೆ ಸಭೆಯಲ್ಲಿರುವ ಎಲ್ಲರಿಗೂ ಸಂಗೀತದ ಗಂಧವಿರಬೇಕೆಂಬ ನಿಯಮವಿಲ್ಲವಲ್ಲ. ಸಭಿಕರಲ್ಲೊಬ್ಬನು ಎದ್ದುನಿಂತು, "ಸ್ವಾಮಿ, ಕೆಲವೊಮ್ಮೆ ಮುಂದಿನ ಮಾತು ಮರೆತ್ಹೋಗೋದು ಸಹಜವೇ. ಪರವಾಯಿಲ್ಲ ಬಿಡಿ, ಪಕ್ಕದವನಿಗೆ ಮಾತಾಡಕ್ಹೇಳಿ, ಮುಂದಿನ ಮಾತುಗಳು ನೆನಪಿಗೆ ಬಂದಾವು" ಎಂದಿದ್ದ!

ಪೌರಾಣಿಕ ನಾಟಕಗಳಲ್ಲಿ ಆಧುನಿಕತೆಯ ಸುಳಿವು ತೂರಿ ನಗೆಯೆಬ್ಬಿಸುವ ಪ್ರಸಂಗಗಳು ಅನೇಕವಿವೆ. ಶ್ರೀ ಎಂ.ಎನ್. ಅಶ್ವಥ್ ಬರೆದಿರುವ 'ಸೀ ಕಿಸ್ನ ಸಂದಾನ' ನಾಟಕವು ಇಂತಹ ಹಾಸ್ಯಪ್ರಸಂಗಗಳ ಮಾಲೆಯೇ ಆಗಿದೆ. ಇದೋ ಆ ನಾಟಕದ ಒಂದು ಸಣ್ಣ ಝಲಕ್:

"ಎಲೈ ಸೀ ಕಿಸ್ನ, ಮಾಯಾವಿ! ಪಾಂಡವರು ಮಾಂಸ ಮಾರ್ತಾರೆ; ಯುಧಿಷ್ಠಿರನು ಮಾಂಸ ಮಾರ್ತಾನೆ. ಭೀಮಸೇನನು ಮಾಂಸ ಮಾರ್ತಾನೆ; ಹರ್ಜುನನು ಮಾಂಸ ಮಾರ್ತಾನೆ; ನಕುಲಸಹದೇವರು ಮಾಂಸ ಮಾರ್ತಾರೆ" ಎಂದು ಅಬ್ಬರಿಸಿದ ದುರ್ಯೋಧನ ಪಾತ್ರಧಾರಿ.

"ಲೇ, ಪಾಂಡವರು ಯಾವಾಗ, ಎಲ್ಲಿ ಮಾಂಸದಂಗಡಿ ಇಟ್ಕೊಂಡಿದ್ರೋ?" ಹೈರಾಣಾದರು ನಾಟಕ ಕಲಿಸುವ ಮೇಷ್ಟ್ರು.

"ನೀವೇ ಏಳಿದ್ರಲ್ಲ ಮೇಸ್ಟ್ರೇ!"

"ಎಲ್ಲಿ, ಆ ಸ್ಕ್ರಿಪ್ಟ್ ತೊಗೊಂಡ್ಬಾ." ನಟನು ಸ್ಕ್ರಿಪ್ಟ್ ತಂದ, ಸಾಲುಗಳನ್ನು ತೋರಿಸಿದ. ಅದರಲ್ಲಿದ್ದ 'ಮಹಾ ಸಮರ್ಥರೆ..' ಇವನ ನಾಲಿಗೆಗೆ ಅಟಕಾಯಿಸಿಕೊಂಡು 'ಮಾಂಸ ಮಾರ್ತಾರೆ' ಎಂದಾಗಿತ್ತು.

ಇದೇ ನಾಟಕದಲ್ಲಿ ದ್ರೌಪದಿಯು 'ಅರ್ಜುನ ನೀನು ಓಗು; ನಾನು ಹೊಳೆಗೆ ಓಗುತ್ತೇನೆ' ಎನ್ನುತ್ತಾಳೆ. ನಾಟಕದ ಮೇಷ್ಟ್ರು, "ನೀನ್ಯಾಕಮ್ಮ ಹೊಳೆಗೆ ಹೋಗ್ಬೇಕು? ನೀನು ರಾಣಿ ಕಣಮ್ಮಾ, ದ್ರೌಪದಿ. ನೀನು ಹೋಗಬೇಕಾದ್ದು ಹೊಳೆಗೆ ಅಲ್ಲ, ಒಳಗೆ!" ಎಂದು ತಿದ್ದುತ್ತಾನೆ. ದುರ್ಯೋಧನನು 'ದುರ್ವೇದನ' ಆಗಿ, ದುಶ್ಶಾಸನನು 'ದುಶ್ವಾಸನ' ಆಗಿ (ಆಗಾಗ್ಗೆ ಹೆಂಡ ಏರಿಸುವುದರಿಂದ ದುಶ್ವಾಸನನೇ) ಶಕುನಿಯು 'ಸಕ್ಕುನ್ನಿ'ಯಾಗಿ, ಇಡೀ ನಾಟಕವು ವಿನೋದಪೂರ್ಣವಾಗಿದೆ.

ವೇದಿಕೆಯ ಮೇಲೆ ಒಂದು ವಿಧದ ವಿನೋದ ಕಂಡರೆ ವೇದಿಕೆಯ ಹೊರಗೆ ಮತ್ತೊಂದು ರೀತಿಯ ವಿನೋದ ಕಂಡುಬರುತ್ತದೆ. 'ರಾಮಾಯಣ' ನಾಟಕವು ಆ ಹಳ್ಳಿಯಲ್ಲಿ ಹಲವಾರು ಪ್ರದರ್ಶನಗಳನ್ನು ಕಂಡಿತ್ತು. ಸೀತೆಯ ಪಾತ್ರಧಾರಿಯ ಅಭಿನಯಕ್ಕೆ ಸಭಿಕರು ಎಂಟು ಗೇಣು (ಮಾರು!) ಹೋಗಿದ್ದರು. ಮರುದಿನ ಪರದೆ ಏರಿಸುವುದಕ್ಕೆ ಮುಂಚೆ ನಟನಟಿಯರನ್ನೆಲ್ಲ ಒಗ್ಗೂಡಿಸಲು ನೋಡಿದಾಗ ಸೀತೆ ನಾಪತ್ತೆ! "ರಾವಣನೇ ಬರದೆ ಸೀತೆ ಎಲ್ಹೋದ್ಳೋ?" ಕಂಪನಿಯ ಯಜಮಾನರು ಕಕ್ಕಾಬಿಕ್ಕಿಯಾಗಿದ್ದರು.

"ಹನುಮಂತನೂ ಕಾಣ್ತಿಲ್ಲ ನನ್ನೊಡೆಯ" ಬಿನ್ನವಿಸಿದ ಯಜಮಾನರ ಆಪ್ತ. ವಿಚಾರಿಸಿದಾಗ ತಿಳಿದ ಅಂಶವೆಂದರೆ ಸೀತೆಗೆ ಚೂಡಾಮಣಿಯನ್ನು ಕೊಡುವ ಸನ್ನಿವೇಶದಲ್ಲಿ ದಿನವೂ ಹನುಮನ ಪಾತ್ರಧಾರಿಯು ಪ್ರೇಮಮಯ ನೋಟವನ್ನು ಬೀರುತ್ತಿದ್ದನಂತೆ, ಕೆಲವು ಪಿಸುನುಡಿಗಳನ್ನೂ ಆಡುತ್ತಿದ್ದನಂತೆ. ಸೀತೆಯ ಪಾತ್ರಧಾರಿಯೂ ಅದಕ್ಕೆ ಸ್ಪಂದಿಸಿದ ಕಾರಣ ರಾವಣನಿಗೆ ಚಾನ್ಸೇ ಕೊಡದೆ ಹನುಮನೇ ಸೀತೆಯನ್ನು ಹಾರಿಸಿಕೊಂಡು ಹೋಗಿದ್ದ!

ಸೀತೂ ಕಂಪನಿ ಪ್ರಸಿದ್ಧಿಯ ಉತ್ತುಂಗದಲ್ಲಿದ್ದ ಸಮಯ. ಕಂಪನಿಯ ನಾಟಕಗಳಲ್ಲಿ ಜನಮನವನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದುದು ಸ್ತ್ರೀಪಾತ್ರಗಳೇ. ಸುಂದರಿಯರಿರಲ್ ರಸಿಕರ್ ದೂರವಿರ್ಪರೇಂ! ಊರಿನ ಧನಿಕನೊಬ್ಬನಿಗೆ ಪಾತ್ರಧಾರಿಯೊಬ್ಬಳ ಮೇಲೆ ಮನಸ್ಸಾಯಿತು. ಧನಿಕನು, "ಎಷ್ಟೇ ಖರ್ಚಾದ್ರೂ ಸರಿ, ಆ ಹುಡುಗಿ ನನಗೆ ಬೇಕು" ಎಂದು ಕಂಪನಿಯ ಮುಖ್ಯಸ್ಥರ ಬೆನ್ನುಬಿದ್ದ. "ಅವಳು ಯಾರನ್ನೂ ಭೇಟಿ ಮಾಡಲ್ಲ ಅಂತಾಳೆ" ಎಂದರು ಕಂಪನಿ ಯವರು.

"ಕೇಳಿದಷ್ಟು ಕೊಡ್ತೀನಿ!" ಎಂದ ಸಾಹುಕಾರನನ್ನು ಗ್ರೀನ್‌ರೂಂನಿಂದ ದೂರ ಇರಿಸುವುದೇ ಹರಸಾಹಸವಾಯಿತು. ಕಡೆಗೂ ಒಂದು ದಿನ ಆ ರೂಪಸಿಯನ್ನು ಸಿರಿವಂತನ ಬಳಿಗೆ ಮಾಲಿಕರು ಕರೆದುಕೊಂಡು ಬಂದೇಬಿಟ್ಟರು.

"ಹುಡುಗೀನ್ಕರ್ಕೊಂಬರ್ತೀನೀಂತ ಪಂಚೆ ಶಲ್ಯದ ಆಸಾಮೀನ ಕರ್ಕೊಂಬಂದ್ರಲ್ಲ!" Howಹಾರಿದರು ಸಾಹುಕಾರರು.

"ಕ್ಷಮಿಸಿ ಸಾಹುಕಾರ್ರೇ. ಹುಡುಗಿಯ ಪಾತ್ರದವನು ಹುಡುಗ ಅಂತ ಗೊತ್ತಾದ್ರೆ ಕಲೆಕ್ಷನ್ ಡೌನ್ ಆಗತ್ತೇಂತ ನಿಮ್ಮಿಂದ ವಿಷಯ ಮುಚ್ಚಿಟ್ಟು ಇಷ್ಟು ದಿನ ತಳ್ಳಿದೆ" ರಹಸ್ಯ ಹೊರಗೆಡವಿದರು ಕಂಪನಿಯವರು. ಸೀತೂ ಕಂಪನಿಯ ಸೀತೂವಿನ ಬೆಡಗು, ಬಿನ್ನಾಣ ಸ್ತ್ರೀಯರನ್ನೂ ನಾಚಿಸುವಂತಿದ್ದವು. ಸೀತೂ ಸೀರೆಯ ನೆರಿಗೆಯನ್ನು ಚಿಮ್ಮಿಸಿಕೊಂಡು ನಡೆಯುವ ರೀತಿಯನ್ನು ಕಲಿಯಲೆಂದೇ ಅನೇಕ ಹೆಂಗಳೆಯರು ಅವರ ಬಳಿ ಬರುತ್ತಿದ್ದರಂತೆ.

ರಂಗನಾಟಕಗಳನ್ನು ಆಕಾಶವಾಣಿಯಲ್ಲಿಯೂ ಬಿತ್ತರಿಸಲು ಅನುಕೂಲವಾಗುವಂತೆ ರೇಡಿಯೋ ನಾಟಕಗಳ ಶಕೆ ಆರಂಭವಾಯಿತು. ಧಾರವಾಡ ಆಕಾಶವಾಣಿಯಲ್ಲಿ ಡಾ. ಎಚ್.ಕೆ. ರಂಗನಾಥ್ ಮತ್ತು ಖ್ಯಾತ ನಟಿ ಯಮುನಾ ಮೂರ್ತಿಯವರು ಅಸಂಖ್ಯಾತ ನಾಟಕ ಪ್ರಯೋಗಗಳನ್ನು ಕೈಗೊಂಡು ಯಶಸ್ವಿಯಾದವರು. ಹಾಗೊಂದು ನಾಟಕದ ಸನ್ನಿವೇಶ. ಡೈಲಾಗುಗಳನ್ನು ಹಾಳೆಗಳಲ್ಲಿ ಬರೆದುಕೊಂಡು ಓದುತ್ತಾ, ಆ ಹಾಳೆಯ ಡೈಲಾಗ್ ಮುಗಿದಾಕ್ಷಣ ಸದ್ದಾಗದಂತೆ ಹಾಳೆಯನ್ನು ಜಾರಿಸಿ ಮುಂದಿನ ಹಾಳೆಗೆ ಹೋಗುವುದು ಅಂದಿನ ಕ್ರಮ. ನಾಟಕದ ಒಂದು ಹಂತದಲ್ಲಿ "ಮಗು ಕಾಣೆಸ್ತಿಲ್ವಂತೆ" ಎಂಬ ಮಾತು; ಅದಕ್ಕೆ ಯಮುನಾಮೂರ್ತಿಯವರ ಸ್ಪಂದನ ಇದ್ದಿತು. ಆದರೆ '... ಕಾಣೆಸ್ತಿಲ್ವಂತೆ' ಎನ್ನುವ ಸಮಯಕ್ಕೆ ಸರಿಯಾಗಿ ಯಮುನಾಮೂರ್ತಿಯವರ ಕೈಯಲ್ಲಿದ್ದ ಹಾಳೆಗಳು ಜಾರಿ, ಕ್ರಮವಿಹೀನವಾಗಿ ನೆಲದ ಮೇಲೆ ಹರಡಿಕೊಂಡವು. ಹಾಳೆಗಳನ್ನು ಸದ್ದಿಲ್ಲದೆ ಎತ್ತಿ, ಕ್ರಮದಲ್ಲಿ ಜೋಡಿಸಿಕೊಂಡು ಮುಂದಿನ ಡೈಲಾಗ್ ಕೈಗೆತ್ತಿಕೊಳ್ಳಬೇಕಾಗಿತ್ತು. ಅಲ್ಲಿಯವರೆಗೂ ಪ್ರಸಾರದಲ್ಲಿ ನಿಶ್ಶಬ್ದವಿರಲು ಸಾಧ್ಯವಿಲ್ಲವಲ್ಲ! ಹಾಳೆಗಳನ್ನು ಹೆಕ್ಕಿ, ಜೋಡಿಸುವವರೆಗೆ ಯಮುನಾಮೂರ್ತಿಯವರು "ಅಯ್ಯೋ! ಆ ಮಗುವಿನ ತಾಯಿ ಎಷ್ಟು ಅಳ್ತಿರ್ತಾಳೋ; ಭಗವಂತಾ! ಯಾಕಪ್ಪಾ ಇಂತಹ ಪರಿಸ್ಥಿತಿ ತಂದ್ಬಿಟ್ಟೆ..." ಮುಂತಾದ ಗೋಳುಪದಗಳನ್ನಾಡುತ್ತಾ ಪರಿಸ್ಥಿತಿಯನ್ನು ನಿಭಾಯಿಸಿದ್ದರು.

ರಂಗನಾಥರು ಅಭಿನಯಿಸುತ್ತಿದ್ದ ಪ್ರಸಂಗವೊಂದರಲ್ಲಿ ಸಹನಟಿಯು "ಹೊರಡೋಣವೇ ಪ್ರಾಣನಾಥ" ಎನ್ನಬೇಕಿತ್ತು, ಅದಕ್ಕುತ್ತರವಾಗಿ ಇವರು "ನಡೆ ಪ್ರಾಣಪ್ರಿಯೆ" ಎನ್ನಬೇಕಿತ್ತು. ನಟಿಯ ಬಾಯಲ್ಲಿ ಹೊರಡುತ್ತಿದ್ದ 'ನಾತ'ವನ್ನು 'ನಾಥ'ಕ್ಕೆ ತರಿಸಲು ಬಹಳವೇ ಪ್ರಯತ್ನಗಳಾದವು. ಕಡೆಗೊಮ್ಮೆ 'ನಾಥ' ಎಂದಾಗ, 'ಸರಿ, ಲೈವ್ ಹೋಗೋಣ' ಎಂದು ಮುಂದಾದರು. ಆದರೆ ಲೈವ್‌ನಲ್ಲಿ ಮತ್ತೆ 'ಹೊರಡೋಣವೇ ಪ್ರಾಣನಾತ' ಎಂದಳು ನಟಿ.

ರೋಸಿಹೋದ ರಂಗನಾಥರು, "ನಡೆ ಅಲ್ಪಪ್ರಾಣಪ್ರಿಯೆ" ಎಂದರು!

ನಟನೆಗೆ ಉಚ್ಚಾರ, ಮುಖಭಾವಗಳೇ ಜೀವಾಳ. ರೇಡಿಯೋದಲ್ಲಂತೂ ಧ್ವನಿಯ ಏರಿಳಿತಗಳು, ಸ್ಪಷ್ಟ ಉಚ್ಚಾರಗಳೇ ಭಾವವಾಹಕಗಳು. ಅಂತಿರುವಾಗ 'ಮುಂದಿನ ಕಾರ್ಯಕ್ರಮ ಗೌತಮಬುದ್ಧ' ಎನ್ನಬೇಕಾದವನು 'ಮುಂದಿನ ಕಾರ್ಯಕ್ರಮ ಭೌತಮ ಗುದ್ದ' ಎಂದಿದ್ದ!

ಕಾವ್ಯೇಷು ನಾಟಕಂ ರಮ್ಯಂ. ಇಂತಹ ಪ್ರಸಂಗಗಳು ವೇದಿಕೆಯ ಮೇಲೂ, ವೇದಿಕೆಯಿಂದ ಹೊರಗೂ ಜನರಿಗೆ ಆಪ್ಯಾಯಮಾನವಾಗುತ್ತವೆ. ನಾಟಕ ಗೆಲ್ಗೆ; ವಿನೋದಮಹಿ ಗೆಲ್ಗೆ; ವಿನೋದನಾಟಕಂ ಗೆಲ್ಗೆ, ವಾಳ್ಗೆ.

ಮಹಿಳಾ ಪರ ಹೋರಾಟಗಳಲ್ಲಿ ಭಾರತೀಯ ದೃಷ್ಟಿಕೋನವಿರಲಿ

▸ ದಿವಾಕರ ಹನಕೋಡು

ಲೇಖಕಿ ಭಾನು ಮುಷ್ತಾಕ್‌ರವರು "ಕನ್ನಡ ಭಾಷೆಯನ್ನು ಕನ್ನಡ ಭುವನೇಶ್ವರಿಯೆಂದು ಮಂದಾಸನದಲ್ಲಿ ಕೂರಿಸಿ ಪೂಜಿಸುತ್ತೀರಿ. ಮತ್ತೊಂದೆಡೆ ಮಹಿಳೆಯರನ್ನು ಶೋಷಣೆ ಮಾಡುತ್ತೀರಿ. ಕನ್ನಡ ಭಾಷೆಯ ವಿಷಯಕ್ಕೆ ಬಂದಾಗ ಒಬ್ಬ ಮುಸ್ಲಿಂ ಮಹಿಳೆಯಾದ ನಾನು ಎಲ್ಲಿ ನಿಲ್ಲಬೇಕೆಂದು ಗೊತ್ತಾಗುತ್ತಿಲ್ಲ" ಎಂದು ಈ ಹಿಂದೆ ಹೇಳಿಕೆ ನೀಡಿದ್ದರು.

ಮಹಿಳೆಯರನ್ನು ಪೂಜಿಸುವುದರ ಮೂಲಕ, ಅವಳನ್ನು ಆರಾಧಿಸುವ ಮೂಲಕ ಅವಳ ಶೋಷಣೆ ನಡೆಯುತ್ತಿದೆ. ಅವಳನ್ನು ತಮಗೆ ಸಮಾನಳೆಂಬಂತೆ ನಡೆಸಿಕೊಳ್ಳುವುದಿಲ್ಲ. ಒಂದೋ ದೇವಿ, ತಾಯಿಯೆಂಬಂತೆ ನೋಡುತ್ತಾರೆ. ಇಲ್ಲವೇ ದಾಸಿಯಂತೆ ನಡೆಸಿಕೊಳ್ಳುತ್ತಾರೆ ಎಂಬುದು ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಯೋಚಿಸುವ ಬಹಳ ಮಂದಿ ಸ್ತ್ರೀವಾದಿಗಳ ವಾದ.

ಆದರೆ ಹೆಣ್ಣನ್ನು ದೇವಿಯಾಗಿ, ತಾಯಿಯಾಗಿ ನೋಡಿದವನು ಹೆಣ್ಣನ್ನು ಕೀಳಾಗಿ ಕಾಣಲು ಸಾಧ್ಯವೇ?! ಶಕ್ತಿಸ್ವರೂಪಿಣಿಯ ರೂಪದಲ್ಲಿ, ಮಾತೃಸ್ವರೂಪಿಣಿಯ ರೂಪದಲ್ಲಿ ಪದೇ ಪದೇ ನೋಡುತ್ತಾ, ಆರಾಧಿಸುತ್ತಾ ಬಂದವರಿಗೆ ಹೆಣ್ಣನ್ನು ಕಂಡಾಗ ಗೌರವದ, ಆದರದ ಭಾವನೆಗಳೇ ಮೊದಲು ಬರುವುದು ಸಹಜ.

ಭಾರತೀಯ ಸಂಸ್ಕೃತಿಯಲ್ಲಿ ಭೂಮಿತಾಯಿಯಿಂದ ನದಿಯವರೆಗೆ ಯಾವೆಲ್ಲಾ ಪ್ರಾಕೃತಿಕ ಶಕ್ತಿಗಳು ನಮ್ಮನ್ನು ಪೊರೆಯುತ್ತಿದೆಯೋ ಅವುಗಳೆಲ್ಲವನ್ನೂ ಹೆಣ್ಣಿನ ರೂಪದಲ್ಲಿ, ತಾಯಿಯ ರೂಪದಲ್ಲಿ ನೋಡುವ ದೃಷ್ಟಿ ಜನಮಾನಸದಲ್ಲಿ ತುಂಬಾ ಆಳವಾಗಿ ಬೇರೂರಿದೆ.

ಸ್ತ್ರೀವಾದಿಗಳು ಒಮ್ಮೆ 'ದ್ರೌಪದಿ ಪ್ರತಾಪ' ಎಂಬ ಯಕ್ಷಗಾನ ಪ್ರಸಂಗವನ್ನು ನೋಡಬೇಕು. ಇದು ಮೂಲ ಮಹಾಭಾರತದಲ್ಲಿ ಇಲ್ಲದ ಒಂದು ಕಾಲ್ಪನಿಕ ಕತೆಯಾದರೂ ತುಂಬಾ ಸೊಗಸಾಗಿದೆ. ಇದರಲ್ಲಿ.... ಕುರುಕ್ಷೇತ್ರ ಯುದ್ಧಾನಂತರ ಯುದ್ಧವನ್ನು ಗೆದ್ದ ಶ್ರೇಯಸ್ಸು ಯಾರಿಗೆ ಸಲ್ಲಬೇಕು ಎಂಬ ಚರ್ಚೆ ಪಾಂಡವ ಪಾಳೆಯದಲ್ಲಿ ನಡೆಯುತ್ತದೆ. ಈ ವಿಷಯವಾಗಿ ಭೀಮಾರ್ಜುನರಲ್ಲಿ ಜಗಳ ನಡೆದು ಅವರಿಬ್ಬರ ಮಧ್ಯೆ ಕಾಳಗವೇ ನಡೆದು ಬಿಡುತ್ತದೆ! ತಮ್ಮನೆಂಬ ವಾತ್ಸಲ್ಯ ಭಾವದಿಂದ ಅರ್ಜುನನೊಡನೆ ಕಠಿಣವಾಗಿ ಹೋರಾಡಲು ಭೀಮನಿಗೆ ಸಾಧ್ಯವಾಗದ ಕಾರಣ ಆತ ಸೋಲುತ್ತಾನೆ. ತನ್ನ ಸೋಲಿನ ನಂತರ ತುಂಬಾ ಯೋಚಿಸಿದ ಭೀಮನು ಮಡದಿ ದ್ರೌಪದಿಯನ್ನು ಅರ್ಜುನನ ವಿರುದ್ಧ ಯುದ್ಧಕ್ಕೆ ಕಳಿಸುತ್ತಾನೆ.(ಒಂದೊಂದು ವರ್ಷ ಒಬ್ಬೊಬ್ಬರ ಬಳಿ ದ್ರೌಪದಿ ಇರುವಂತೆ ಪಾಂಡವರು ತಮ್ಮಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ ಆ ವರ್ಷ ದ್ರೌಪದಿಯು ಭೀಮಸೇನನ ಜೊತೆ ಇರುತ್ತಾಳೆ) ಅರ್ಜುನ ದ್ರೌಪದಿಯರ ಮಧ್ಯೆ ನಡೆದ ಯುದ್ಧದಲ್ಲಿ ದ್ರೌಪದಿ ಗೆಲ್ಲುತ್ತಾಳೆ!

ಆಗ ಅರ್ಜುನನ ಸೋಲಿನಿಂದ ನೊಂದ ಸುಭದ್ರೆಯು ದ್ರೌಪದಿಯ ಮೇಲೆ ಯುದ್ಧಕ್ಕೆ ಬಂದು ಸೋಲುತ್ತಾಳೆ. ತಂಗಿಯ ಸಹಾಯಕ್ಕೆ ಬಂದ ಶ್ರೀ ಕೃಷ್ಣನು ದ್ರೌಪದಿಯ ಜೊತೆ ಯುದ್ಧ ಮಾಡಲು ತೊಡಗುತ್ತಾನೆ. ಆ ಕಾಳಗದಲ್ಲಿಯೂ ದ್ರೌಪದಿಗೇ ಗೆಲುವಾಗುತ್ತದೆ!! ಕೃಷ್ಣನು ತನ್ನ ಆತ್ಮದಂತಿರುವ ಮಹಾಶಿವನನ್ನು ಪ್ರಾರ್ಥಿಸಲು ಪರಶಿವನೇ ಸಮರಕ್ಕೆ, ಯುದ್ಧಕ್ಕೆ ಬಂದು ಹೋರಾಡಿದರೂ ಆ ಕಾಳಗದಲ್ಲಿಯೂ ದ್ರೌಪದಿಯೇ ಗೆಲ್ಲುತ್ತಾಳೆ!! ಇದರ ಪರಿಣಾಮವಾಗಿ ಪಾರ್ವತಿಯು ಮಹಾಕಾಳಿಯ ರೂಪದಲ್ಲಿ ರಣಾಂಗಣಕ್ಕೆ ಬರುತ್ತಾಳೆ. ಮಹಾಕಾಳಿ ಮತ್ತು ದ್ರೌಪದಿಯರ ಯುದ್ಧವನ್ನು ಶ್ರೀಕೃಷ್ಣ ಮತ್ತು ನಾರದರು ಬಂದು ತಡೆಯುತ್ತಾರೆ.

> ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಿಳೆಯರಿಗೆ ಶ್ರೇಷ್ಠವಾದ ಸ್ಥಾನ ನೀಡಲಾಗಿದೆ.

ದ್ರೌಪದಿಯಲ್ಲಿದ್ದ ಮಹಾಶಕ್ತಿಯ ಅಂಶವನ್ನು ಮಹಾಕಾಳಿಯು ತನ್ನತ್ತ ಸೆಳೆದುಕೊಳ್ಳುವಂತೆ ಶ್ರೀಕೃಷ್ಣನು ಸೂಚಿಸಿದಾಗ ಪಾಂಡವ ಪಕ್ಷಕ್ಕೆ ಶಕ್ತಿ ತುಂಬಲು ಪಾಂಚಾಲಿಯಲ್ಲಿ ಸನ್ನಿವಿಷ್ಟವಾಗಿದ್ದ ಮಹಾಕಾಳಿಯ ಶಕ್ತಿ ಮರಳಿ ತನ್ನ ಮೂಲಸ್ಥಾನವಾದ ಪಾರ್ವತಿಯನ್ನು ಸೇರುವ ಮೂಲಕ ಕಥೆ ಸುಖಾಂತ್ಯವಾಗುತ್ತದೆ. ಈ ಪ್ರಸಂಗದ ಸೂತ್ರಧಾರನಾದ ಶ್ರೀಕೃಷ್ಣನು ಪಾಂಡವರು ಗೆಲ್ಲುವುದಕ್ಕೆ ಮುಖ್ಯ ಕಾರಣ ದ್ರೌಪದಿಯಲ್ಲಿದ್ದ ಮಹಾಶಕ್ತಿಯ ಅಂಶ ಎಂದು ಸಾರುವುದರೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ. ಸ್ತ್ರೀಪರವಾದ ಭಾಷಣ ಎಂದಾಕ್ಷಣ ಸೀತೆಯನ್ನು ಕಾಡಿಗಟ್ಟಿದ ಕಥೆಯನ್ನೋ, ಮನುಸ್ಮೃತಿಯ ಒಂದು ಸಾಲನ್ನೋ ಮತ್ತೆ ಮತ್ತೆ ಚರ್ವಿತಚರ್ವಣ ಎನ್ನುವಂತೆ ಭಾಷಣ ಮಾಡುವ ಎಲ್ಲರೂ ಒಮ್ಮೆ ಮಹಾಭಾರತದ ದ್ರೌಪದಿಯಂತಹ ದಿಟ್ಟ ಮಹಿಳೆಯ ಬಗೆಗೂ ಮುಕ್ತ ಮನಸ್ಸಿನಿಂದ ವಿಚಾರ ಮಾಡಿ ನೋಡಬೇಕು. ನಮ್ಮ ಜನಪದ ಲೋಕದಲ್ಲಿ ಬರುವ ಇಂತಹ ಕತೆಗಳನ್ನು ತಿಳಿದುಕೊಳ್ಳಬೇಕು.

ರಾಮಾಯಣದಲ್ಲಿ ದಶರಥನು ಯುದ್ಧಕ್ಕೆ ಹೋಗುವಾಗ ತನ್ನ ಕಿರಿಯ ಪತ್ನಿಯಾದ ಕೈಕೇಯಿಯನ್ನೂ ಕರೆದುಕೊಂಡು ಹೋಗುತ್ತಾನೆ. ಯುದ್ಧದಲ್ಲಿ ಸಹಾಯ ಮಾಡಿದಳೆಂದು ಆಕೆಗೆ ವರವನ್ನೂ ಕೊಡುವುದರಿಂದಲೇ ರಾಮಾಯಣದ ಕತೆಗೆ ಮುಖ್ಯವಾದ ತಿರುವು ಸಿಕ್ಕಿತಲ್ಲವೇ!!

ನರಕಾಸುರನ ಜತೆ ಯುದ್ಧ ಮಾಡುವಾಗ ಕೃಷ್ಣನೊಂದಿಗೆ ಪತ್ನಿ ಸತ್ಯಭಾಮೆಯೂ ರಣರಂಗಕ್ಕೆ ಬಂದಿರುತ್ತಾಳೆ. ಯುದ್ಧದ ಮಧ್ಯದಲ್ಲಿ ಕೃಷ್ಣನು ಬಳಲಿರುವಾಗ ಸತ್ಯಭಾಮೆಯು ಅಸುರನೊಡನೆ ಯುದ್ಧವನ್ನು ಮುಂದುವರೆಸಿ ಕೃಷ್ಣನಿಗೆ ಬೇಕಾಗಿದ್ದ ವಿಶ್ರಾಂತಿಯನ್ನು ಒದಗಿಸುತ್ತಾಳೆ.

ಭೂಮಿ ಆದಿಪರಾಶಕ್ತಿಯಿಂದ ಸೃಷ್ಟಿಸಲ್ಪಟ್ಟಿರುತ್ತದೆ. ಲೋಕದ ಸಮರ್ಥ ನಿರ್ವಹಣೆಗಾಗಿ ಆಕೆಯೇ ತ್ರಿಮೂರ್ತಿಗಳನ್ನು ಸೃಷ್ಟಿಸಿ ಕರ್ತವ್ಯಗಳನ್ನು ಹಂಚಿರುತ್ತಾಳೆ.

ಪ್ರತಿಬಾರಿ ರಾಕ್ಷಸರಿಂದ ವಿಪತ್ತು ಬಂದಾಗಲೆಲ್ಲಾ ಆದಿಪರಾಶಕ್ತಿಯು ಖಳ ರಕ್ಕಸರನ್ನು ಸಂಹರಿಸಿ ಲೋಕವನ್ನು ಕಾಪಾಡುತ್ತಾಳೆ. ಬ್ರಹ್ಮ, ವಿಷ್ಣು, ರುದ್ರ, ಇಂದ್ರಾದಿ ದೇವತೆಗಳೆಲ್ಲಾ ಸೋತು ಕೈ ಚೆಲ್ಲಿದಾಗ ಮಹಾದುರ್ಗೆಯು ದುಷ್ಟ ರಾಕ್ಷಸರನ್ನು ಸಂಹರಿಸಿ ಲೋಕವನ್ನು ಕಾಪಾಡುತ್ತಾಳೆ.

ಭಾರತದ ಪುರಾಣಗಳಲ್ಲಿ, ಸಂಸ್ಕೃತಿಯಲ್ಲಿ, ನಾಗರಿಕತೆಯಲ್ಲಿ ಮಹಿಳೆಯನ್ನು ಯಾವ ರೀತಿ ಪೂಜನೀಯ ಸ್ಥಾನದಲ್ಲಿ ಇಟ್ಟಿದ್ದಾರೆ ಎಂಬುದನ್ನು ಎಲ್ಲರೂ ತಿಳಿಯಬೇಕಾದ ಅವಶ್ಯಕತೆ ಇದೆ. ಯಾವೆಲ್ಲಾ ಶ್ರೇಷ್ಠ ಸಂಗತಿಗಳಿವೆಯೋ ಅವೆಲ್ಲವನ್ನೂ ಸ್ತ್ರೀರೂಪದಲ್ಲಿ ಕಂಡು ಗೌರವಿಸುವ ಗುಣ ಭಾರತೀಯರಲ್ಲಿದೆ.

ಐಶ್ವರ್ಯಕ್ಕೆ ಸಂಬಂಧಪಟ್ಟ ಹಣ, ಭೂಮಿ, ಸಂಪತ್ತು, ಧಾನ್ಯ, ವಾಹನ, ಗೋಸಂಪತ್ತು ಎಲ್ಲವನ್ನೂ ಲಕ್ಷ್ಮೀ ಎಂದು ಪೂಜಿಸುತ್ತಾರೆ. ಎಲ್ಲಾ ವಿದ್ಯೆ-ಕಲೆಗಳನ್ನೂ ಸರಸ್ವತಿಯ ರೂಪದಲ್ಲಿ ಕಂಡು ಆರಾಧಿಸುತ್ತಾರೆ.

ಶಕ್ತಿಯ ರೂಪದಲ್ಲಿರುವ ಎಲ್ಲವನ್ನೂ ಮಹಾಶಕ್ತಿ, ಮಹಾಕಾಳಿಯ ರೂಪದಲ್ಲಿ ಕಂಡು ನಮಿಸುತ್ತೇವೆ. ಕವಿ ಬಂಕಿಮಚಂದ್ರರು ಭಾರತಮಾತೆಯನ್ನು ವರ್ಣಿಸುವಾಗ ಹೇಳಿದ್ದಾರೆ,

ಹೇ ಬಲಾ ಮಾತಾಮಿ ಅಬಲಾ
ಬಹುಬಲಧಾರಿಣಿ, ರಿಪುದಲವಾರಿಣಿ

(ನಿನ್ನನ್ನು ಅಬಲೆಯೆಂದು ಕರೆದವರ್‍ಯಾರು?! ನೀನು ಅಬಲೆಯಲ್ಲ. ಮಹಾಬಲಶಾಲಿ, ಶತ್ರುಗಳನ್ನು ನಾಶಮಾಡುವ ಶಕ್ತಿಶಾಲಿನಿ) ಎಂದು ವರ್ಣಿಸಿದ್ದಾರೆ.

ರಾಮಾಯಣದಲ್ಲಿ ರಾಮನ ಅಶ್ವಮೇಧದ ಕುದುರೆಯನ್ನು ಮಾಯಾಪುರಿ ಎಂಬ ಸ್ತ್ರೀ ರಾಜ್ಯದ ಯೋಧೆಯರು ಕಟ್ಟಿ ರಾಮನ ಸೈನ್ಯದೊಡನೆ ಕಾದಾಡಿದ ಕತೆಯನ್ನು ನೋಡಿದರೆ ಮಹಾಭಾರತದಲ್ಲಿ ಪಾಂಡವರ ಅಶ್ವಮೇಧದ ಕುದುರೆಯನ್ನು ಕಟ್ಟಿ ಅರ್ಜುನನೊಡನೆ ಯುದ್ಧ ಮಾಡಿದ ಸ್ತ್ರೀ ರಾಜ್ಯದ ರಾಣಿ ಪ್ರಮೀಳೆಯ ಪ್ರಸಂಗವನ್ನು ನಾವು ಕಾಣುತ್ತೇವೆ.

ಪ್ರಸಿದ್ಧ ಮಧುರೆಯ ಮೀನಾಕ್ಷಿ ದೇಗುಲದ ಸ್ಥಳ ಪುರಾಣದ ಪ್ರಕಾರ ಪಾಂಡ್ಯರ ರಾಜಕುಮಾರಿ ಮೀನಾಕ್ಷಿಯು ಭೂಲೋಕದ ಎಲ್ಲಾ ರಾಜರುಗಳನ್ನು ಯುದ್ಧದಲ್ಲಿ ಗೆದ್ದು ಸ್ವರ್ಗಲೋಕಕ್ಕೆ ದಾಳಿ ಮಾಡುತ್ತಾಳೆ. ಇಂದ್ರನನ್ನೂ ಯುದ್ಧದಲ್ಲಿ ಸೋಲಿಸುತ್ತಾಳೆ. ಕೊನೆಗೆ ಪರಶಿವನನ್ನೇ ವರಿಸುತ್ತಾಳೆ.

ಶ್ರೀ ಶ್ರೀ ಶಂಕರಾಚಾರ್ಯರಿಗೂ ಮಂಡನ ಮಿಶ್ರರಿಗೂ ವೇದಾಂತದ ವಿಚಾರವಾಗಿ ವಾಗ್ವಾದ ನಡೆಯುವಾಗ ಇಬ್ಬರಲ್ಲಿ ಜಯಶಾಲಿ ಯಾರು ಆಗುವರೆಂದು ತೀರ್ಮಾನಿಸಲು ತೀರ್ಪುಗಾರರು ಒಬ್ಬರು ಬೇಕಾಗುತ್ತದೆ. ಆಗ ಯತಿವರೇಣ್ಯರು ಮಂಡನ ಮಿಶ್ರರ ಪತ್ನಿ ಉಭಯ ಭಾರತೀ ದೇವಿಯವರೇ ತೀರ್ಪುಗಾರರಾಗಲಿ ಎಂದು ಹೇಳುತ್ತಾರೆ!! ಹೀಗೆ ಅನೇಕ ಸಂದರ್ಭಗಳಲ್ಲಿ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಿಳೆಯರಿಗೆ ಶ್ರೇಷ್ಠವಾದ ಸ್ಥಾನವನ್ನೇ ನೀಡಲಾಗಿದೆ.

ಕೆಲವು ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಧಾರ್ಮಿಕ ಆಚರಣೆಗಳ ಕುರಿತ ಸಂವಾದ ಕಾರ್ಯಕ್ರಮವೊಂದು ನಡೆಯಿತು.ರಜಸ್ವಲೆಯಾದ ಮಹಿಳೆ ಹೊರಗೆ ಕೂರಬೇಕೆ? ಬೇಡವೇ? ಎಂಬ ಬಗ್ಗೆ ಚರ್ಚೆ ನಡೆದಾಗ ಹೆಚ್ಚಿನ ಮಹಿಳೆಯರು ಅವಳಿಗೆ ಮುಟ್ಟಿನ ಮೂರು ದಿನಗಳ ಕಾಲ ಮೈಲಿಗೆಯ ನೆಪದಲ್ಲಿ ವಿಶ್ರಾಂತಿ ನೀಡುವುದು ಸರಿಯಾದ ಕ್ರಮ ಎಂದು ಹೇಳಿದರು. ಆ ಸಮಯದಲ್ಲಿ ಗಂಡಂದಿರು ಅಡಿಗೆ ಮಾಡಲಿ, ಅಡಿಗೆ ಮನೆಯ ಅನುಭವ, ಸಂಕಷ್ಟಗಳ ಪರಿಚಯ ಅವರಿಗೂ ಆಗಲಿ, ನಮಗೂ ಏಕತಾನತೆಯ ಕೆಲಸ ಕಾರ್ಯಗಳಿಂದ ಬಿಡುವು ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು. ಇಲ್ಲಿ ಅನೇಕ ಆಚರಣೆಗಳ ಬಗ್ಗೆ ಸಂವಾದ ನಡೆಯುವಾಗ ಗಂಡ ಮಾಡಿದ ಧಾರ್ಮಿಕ ಆಚರಣೆಗಳಿಂದ ಬರುವ ಪುಣ್ಯದಲ್ಲಿ (ಹೆಂಡತಿಯು ಭಾಗವಹಿಸಲಿ ಅಥವಾ ಭಾಗವಹಿಸದಿರಲಿ) ಹೆಂಡತಿಗೆ ಅರ್ಧಪಾಲು ಸಿಗುತ್ತದೆ ಎಂದು ತುಂಬಾ ಖುಷಿಯಿಂದ ಹೇಳಿಕೊಂಡ ಗೃಹಿಣಿಯರನ್ನು ನಾವು ಕಂಡೆವು.

ಇದೆಲ್ಲವನ್ನೂ ವಿಮರ್ಶಿಸುವಾಗ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಪಾಶ್ಚಿಮಾತ್ಯ ದೃಷ್ಟಿಕೋನದಿಂದ ನೋಡಿ ಟೀಕೆ, ಟಿಪ್ಪಣಿ ಮಾಡುವುದು ಸರಿಯಲ್ಲ ಎಂದು ತಿಳಿಯುತ್ತದೆ. ಭಾರತೀಯ ನಾರಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ, ಅವಳ ಹೋರಾಟದ ಬಗ್ಗೆ ನಾವು ಭಾರತೀಯ ದೃಷ್ಟಿಕೋನದಿಂದಲೇ ನೋಡಿ ವಿಮರ್ಶಿಸಬೇಕಾದದ್ದು ಇಂದು ತುಂಬಾ ಅಗತ್ಯವಾಗಿದೆ.

ಪತ್ರ ಮಿತ್ರ

ಬಡ್ಡಿ ಮನ್ನಾ: ಆರ್ಥಿಕ ಶಿಸ್ತು ತಪ್ಪದಿರಲಿ

ಸರ್ಕಾರಗಳು ಜನಪರ ಕ್ರಮಗಳ ಮೂಲಕ ಜನಮನ ಗೆಲ್ಲುವುದು ಹೊಸದೇನಲ್ಲ. ಇತ್ತೀಚೆಗೆ ಸಂಚಾರ ದಂಡ ಮನ್ನಾ ಮೂಲಕ ಸಾರ್ವಜನಿಕರಿಗೆ ಕೆಲವು ಮಟ್ಟಿನ ನೆರವು ನೀಡಿದ ಸರ್ಕಾರ, ಇದೀಗ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವವರಿಗೆ ಯುಗಾದಿ ಕಾಣಿಕೆಯಾಗಿ ಏಪ್ರಿಲ್‌ನಿಂದ ಮೂರು ತಿಂಗಳ ಅವಧಿಗೆ ಓಟಿಎಸ್ ಜಾರಿಗೊಳಿಸಿ ಬಡ್ಡಿ ಮನ್ನಾ ಘೋಷಿಸಿರುವುದು ಗಮನಾರ್ಹ ಬೆಳವಣಿಗೆ. ಹಬ್ಬದ ಸಂದರ್ಭದಲ್ಲಿ ಇಂತಹ ಸಡಿಲಿಕೆಗಳು ಸಾಮಾನ್ಯ ಜನರಿಗೆ ತಾತ್ಕಾಲಿಕ ಉಸಿರಾಟ ನೀಡುವುದರಲ್ಲಿ ಸಂಶಯವಿಲ್ಲ. ಆದರೆ, ಈ ರೀತಿಯ ನಿರ್ಧಾರಗಳ ದೀರ್ಘಾವಧಿಯ ಪರಿಣಾಮಗಳ ಬಗ್ಗೆ ಚಿಂತನೆ ಅಗತ್ಯವಾಗಿದೆ.

ಒಂದು ಕಡೆ ನೋಡಿದರೆ, ಬಾಕಿ ಬಿಲ್ ಪಾವತಿಸಲು ಅಸಮರ್ಥರಾಗಿದ್ದವರಿಗೆ ಬಡ್ಡಿ ಮನ್ನಾ ಒಂದು ಅವಕಾಶ. ವರ್ಷಗಳ ಕಾಲ ಬಾಕಿ ಉಳಿದಿರುವ ಮೊತ್ತವನ್ನು ಪಾವತಿಸಲು ಇದೊಂದು ಪ್ರೇರಣೆಯಾಗಿ ಪರಿಣಮಿಸಬಹುದು. ಇದರ ಫಲವಾಗಿ ಸರ್ಕಾರಕ್ಕೂ ಮೂಲ ಬಾಕಿ ಮೊತ್ತ ವಾಪಸು ಸಿಗುವ ಸಾಧ್ಯತೆ ಇದೆ. ಹೀಗಾಗಿ, ಇದು ಬಾಕಿ ವಸೂಲಾತಿಗೆ ಸಹಾಯಕವಾಗುವ ಕ್ರಮವೆಂದು ಪರಿಗಣಿಸಬಹುದು.

ಆದರೆ, ಇನ್ನೊಂದು ಮುಖವೂ ಇದೆ. ಪದೇ ಪದೇ ಬಡ್ಡಿ ಮನ್ನಾ ನೀಡುವ ಪದ್ಧತಿ ಬೆಳೆದರೆ, ಅದು ಪಾವತಿ ಶಿಸ್ತಿಗೆ ಧಕ್ಕೆಯಾಗುವ ಸಾಧ್ಯತೆ ಇದೆ. ಸಮಯಕ್ಕೆ ಸರಿಯಾಗಿ ಬಿಲ್ ಪಾವತಿಸುವ ನಾಗರಿಕರಲ್ಲಿ ಅಸಮಾಧಾನ ಮೂಡುವುದು ಸಹಜ. 'ಬಾಕಿ ಇಟ್ಟರೆ ಮನ್ನಾ ಸಿಗುತ್ತದೆ' ಎಂಬ ಮನೋಭಾವ ಬೆಳೆದುಬಂದರೆ, ಅದು ಆಡಳಿತದ ವಿಶ್ವಾಸಾರ್ಹತೆಗೆ ಹಾನಿ ಉಂಟುಮಾಡಬಹುದು. ಸರ್ಕಾರದ ಈ ನಿರ್ಧಾರದಿಂದಾಗಿ ಬಡ್ಡಿ ರೂಪದಲ್ಲಿ ಜಲಮಂಡಳಿಗೆ ಬರಬೇಕಾಗಿದ್ದ ಸುಮಾರು 311 ಕೋಟಿ ರೂ. ಮನ್ನಾ ಆಗಲಿದೆ. ಬಡ್ಡಿ ರೂಪದಲ್ಲಿ ಬರಬೇಕಾಗಿದ್ದ ಆದಾಯ ಕಡಿಮೆಯಾದರೆ, ನೀರು ಸರಬರಾಜು ಮಂಡಳಿಗಳಂತಹ ಸಂಸ್ಥೆಗಳ ಆರ್ಥಿಕ ಸ್ಥಿತಿ ದುರ್ಬಲಗೊಳ್ಳುವ ಸಾಧ್ಯತೆ ಇದೆ. ಇದು ಅಂತಿಮವಾಗಿ ಸಾರ್ವಜನಿಕ ಸೇವೆಗಳ ಗುಣಮಟ್ಟಕ್ಕೂ ಪರಿಣಾಮ ಬೀರುವ ಅಪಾಯವಿದೆ.

ಹೀಗಾಗಿ, ಇಂತಹ ಮನ್ನಾ ಕ್ರಮಗಳನ್ನು ತಾತ್ಕಾಲಿಕ ಮತ್ತು ಅಪರೂಪದ ಕ್ರಮಗಳಾಗಿ ಮಾತ್ರ ಪರಿಗಣಿಸುವುದು ಸೂಕ್ತ. ಬಡ್ಡಿ ಮನ್ನಾವನ್ನು ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುವ ಬದಲು, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮಾತ್ರ ಸೀಮಿತಗೊಳಿಸುವುದು ಉತ್ತಮ. ಜೊತೆಗೆ, ನಿಯಮಿತವಾಗಿ ಬಿಲ್ ಪಾವತಿಸುವವರಿಗೆ ಪ್ರೋತ್ಸಾಹಕ ರಿಯಾಯಿತಿಗಳನ್ನು ನೀಡುವ ಮೂಲಕ ಪಾವತಿ ಶಿಸ್ತನ್ನು ಉತ್ತೇಜಿಸುವುದು ಅಗತ್ಯ. ಒಟ್ಟಿನಲ್ಲಿ, ಬಡ್ಡಿ ಮನ್ನಾ ಜನಪರ ಕ್ರಮವಾಗಿದ್ದರೂ, ಆರ್ಥಿಕ ಶಿಸ್ತಿನ ಮೌಲ್ಯವನ್ನು ಕುಗ್ಗಿಸದಂತೆ ಸರ್ಕಾರ ಸಮತೋಲನ ಸಾಧಿಸಬೇಕು. ತಾತ್ಕಾಲಿಕ ಸಡಿಲಿಕೆ ಮತ್ತು ದೀರ್ಘಾವಧಿಯ ಆರ್ಥಿಕ ಸ್ಥಿರತೆ – ಈ ಎರಡರ ನಡುವಿನ ಸಮನ್ವಯವೇ ಉತ್ತಮ ಆಡಳಿತದ ಲಕ್ಷಣವಾಗುತ್ತದೆ.

-ಜಿ.ನಾಗೇಂದ್ರ ಕಾವೂರು, ಸಂಡೂರು

ಈಗ ಸರಿಯೆ?

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಈಗಾಗಲೇ ಪ್ರಾರಂಭವಾಗಿದ್ದು ಮಾರ್ಚ್ 31ರಂದು ತೃತೀಯ ಭಾಷೆಯ ಪರೀಕ್ಷೆಗಳು ನಡೆಯಲಿರುವಾಗ ಸರಕಾರವು ಹಿಂದಿ ಭಾಷೆಯ ಪರೀಕ್ಷೆಗಳಿಗೆ ಅಂಕಗಳನ್ನು ನೀಡದೆ ಗ್ರೇಡ್ ನೀಡುವುದಾಗಿ ಪ್ರಕಟಿಸಿದೆ. ವಿದ್ಯಾರ್ಥಿಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಕಾರಣ ನೀಡಲಾಗಿದೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯಾವುದೇ ನಿರ್ಣಯ ತೆಗೆದುಕೊಳ್ಳುವುದಿದ್ದರೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ತೆಗೆದುಕೊಳ್ಳಬೇಕು. ಈಗ ಪ್ರಕಟಿಸಿದ ನಿರ್ಣಯವನ್ನು ಮುಂದಿನ ವರ್ಷಕ್ಕೆ ಅನ್ವಯಿಸಲಿ, ಈ ವರ್ಷಕ್ಕೆ ಬೇಡ. ಅನೇಕ ವಿದ್ಯಾರ್ಥಿಗಳು ತೃತೀಯ ಭಾಷೆ ವಿಷಯವನ್ನೂ ಕಷ್ಟ ಪಟ್ಟು ಓದಿರುತ್ತಾರೆ. ಅದರಲ್ಲಿಯೂ ನೂರಕ್ಕೆ ನೂರು ಪಡೆಯಬೇಕೆಂದು ಪ್ರಯತ್ನಿಸಿದವರಿಗೆ ಆಗಬಹುದಾದ ನಿರಾಶೆಯನ್ನು ಸರಕಾರ ಗಮನಿಸಿಲ್ಲ. ವರ್ಷದ ಪ್ರಾರಂಭದಿಂದಲೂ ಎಲ್ಲ ವಿಷಯಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆಯುವಂತೆ ಶಿಕ್ಷಣ ಕೊಡಲು ಪ್ರಯತ್ನ ಮಾಡುವುದನ್ನು ಬಿಟ್ಟು ಅನ್ಯ ಮಾರ್ಗಕ್ಕಿಳಿಯುವುದು ಸಮಂಜಸವಲ್ಲ. ಜಾಣ ನಾಗರಿಕರನ್ನು, ಅಭ್ಯಾಸದ ಒತ್ತಡ ಸಹಿಸುವಂಥವರನ್ನು ತಯಾರು ಮಾಡುವತ್ತ ಸರಕಾರ ಗಮನಹರಿಸಿದರೆ ನಮ್ಮ ರಾಜ್ಯದ, ದೇಶದ ಭವಿಷ್ಯ ಉಜ್ವಲವಾಗುವುದು.

-ರವೀಂದ್ರ ಸೋ. ಆಕಳವಾಡಿ, ಧಾರವಾಡ

ಅತಿರೇಕದ ಆದೇಶ

ದೆಹಲಿಯ ದೊರೆಯೊಬ್ಬ ತನ್ನ ಅತಿರೇಕ ವರ್ತನೆಯಿಂದ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ವರ್ಗಾಯಿಸಿ ನಗೆ ಪಾಟಲಿಗೀಡಾದ ಕಥೆಯನ್ನು ನಾವೆಲ್ಲಾ ಕೇಳಿದ್ದೇವೆ. ನಮ್ಮ ಶಿಕ್ಷಣ ಸಚಿವರೂ ತಮ್ಮ ಅತಿರೇಕ ವರ್ತನೆಯಿಂದ ನಾಗರಿಕರ ಮನವನ್ನು ಕ್ಷೋಭೆಗೀಡು ಮಾಡುತ್ತಿದ್ದಾರೆ.

'ನಮ್ಮ ಶಿಕ್ಷಣ ಸಚಿವರಿಗೆ ಕನ್ನಡದಲ್ಲಿ ಸರಿಯಾಗಿ ಮಾತನಾಡಲು ಬರುತ್ತಿಲ್ಲ' ಎಂದ ವಿದ್ಯಾರ್ಥಿಯೊಬ್ಬನ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಆದೇಶಿಸಿದ ವಿಚಾರ ನಮಗೆಲ್ಲಾ ನೆನಪಿದೆ. ಮೊನ್ನೆ ಮೊನ್ನೆ ಒಂದನೆಯ ತರಗತಿಗೆ ಪ್ರವೇಶ ಪಡೆಯಲು ಆರು ವರ್ಷಗಳ ವಯಸ್ಸನ್ನು ಕಡ್ಡಾಯ ಮಾಡಿದ್ದ ಶಿಕ್ಷಣ ಸಚಿವರು, ಬಳಿಕ ತಮ್ಮ ಬಣ್ಣ ಬದಲಾಯಿಸಿ 5 ವರ್ಷ 10 ತಿಂಗಳಿಗೇ ಮಕ್ಕಳನ್ನು ಒಂದನೆಯ ತರಗತಿಗೆ ಸೇರಿಸಬಹುದೆಂದು ಆದೇಶ ಮಾಡಿದ್ದಾರೆ. ಒಂದಷ್ಟು ದಿನ ಪೋಷಕರನ್ನು ಚಿಂತೆಗೀಡು ಮಾಡಿ ಏನು ಪುರುಷಾರ್ಥ ಸಾಧಿಸಿದರೋ?!

ಇದೀಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಯನ್ನು ಅಟಕ್ಕುಂಟು ಲೆಕ್ಕಕ್ಕಿಲ್ಲ ಎಂದು ಪರಿಗಣಿಸಿ ತೀರ್ಪು ನೀಡಿದ್ದಾರೆ. ವಿನಾಕಾರಣ ಹಿಂದಿ ದ್ವೇಷವನ್ನು ಪ್ರದರ್ಶಿಸಿ ಕನ್ನಡದ ಉಟ್ಟು ಓರಾಟಗಾರರಿಗೆ, ಹಿಂದಿ ವಿರೋಧಿಗಳಿಗೆ ಮುದ ನೀಡಿದ್ದಾರೆ.

ಬಾಲ್ಯದಲ್ಲಿ ಭಾಷಾಧ್ಯಯನ ಶ್ರಮವೇ ಅಲ್ಲ. ಬಹಳ ಕಾಲ ಅಧ್ಯಾಪಕ ವೃತ್ತಿಯಲ್ಲಿದ್ದ ನಾನು ಮಕ್ಕಳು ಕನ್ನಡ- ಸಂಸ್ಕೃತ- ಇಂಗ್ಲಿಷ್- ಹಿಂದಿ ಭಾಷೆಗಳಲ್ಲಿ ಪ್ರಾವೀಣ್ಯ ಪಡೆದುದನ್ನು ನೋಡಿದ್ದೇನೆ.

ಸಚಿವರ ಆದೇಶದಿಂದ ಹೆಚ್ಚಿನ ಶಾಲೆಗಳಲ್ಲಿರುವ ಹಿಂದಿ ಅಧ್ಯಾಪಕರ ಶ್ರಮ, ವಿದ್ಯಾರ್ಥಿಗಳ ಉತ್ಸಾಹ ಕುಗ್ಗಿ ಹೋಗುವುದರಲ್ಲಿ ಸಂಶಯವಿಲ್ಲ.

-ಎಂ. ಸುಬ್ರಹ್ಮಣ್ಯ ಭಟ್, ಮುಡಿಪು

ಮಧ್ಯಪ್ರಾಚ್ಯ ಯುದ್ಧದಲ್ಲಿ ಇರಾನ್ ಪರ ನಿಂತ ಹೌತಿಗಳಿಂದ ಇಸ್ರೇಲ್ ಮೇಲೆ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ

ಸಮರಕ್ಕೆ ಹೌತಿ ಬಂಡುಕೋರರ ಸೇರ್ಪಡೆ

ದುಬೈ: ಇರಾನ್ ಬೆಂಬಲಿತ ಹೌತಿ ಬಂಡುಕೋರರು ಶನಿವಾರ ಮುಂಜಾನೆ ಇಸ್ರೇಲ್ ಗುರಿಯಾಗಿಸಿ ಕ್ಷಿಪಣಿ ಹಾರಿಸಿರುವುದಾಗಿ ಹೇಳಿಕೊಂಡಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಪ್ರಾರಂಭವಾದ ಯುದ್ಧದ ನಂತರ ಇದು ಅವರ ಮೊದಲ ದಾಳಿಯಾಗಿದ್ದು, ಇಸ್ರೇಲ್ ಸೇನೆ ಆ ಕ್ಷಿಪಣಿಗಳನ್ನು ಆಕಾಶದಲ್ಲೇ ಹೊಡೆದುರುಳಿಸಿರುವುದಾಗಿ ತಿಳಿಸಿದೆ.

ಒಂದು ತಿಂಗಳಿನಿಂದ ಮುಂದುವರಿಯುತ್ತಿರುವ ಯುದ್ಧವು ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ದಾಳಿ ನಡೆಸಿದ ನಂತರ ಆರಂಭಗೊಂಡಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಇಸ್ರೇಲ್ ಹಾಗೂ ಪಕ್ಕದ ಗಲ್ಫ್ ರಾಷ್ಟ್ರಗಳ ಮೇಲೆ ದಾಳಿಗಳನ್ನು ನಡೆಸಿದೆ. ಈ ಸಂಘರ್ಷವು ಜಾಗತಿಕ ವಿಮಾನ ಸಂಚಾರಕ್ಕೆ ಅಡ್ಡಿಪಡಿಸಿದ್ದು, ತೈಲ ರಫ್ತಿಗೆ ಹೊಡೆತ ನೀಡಿದೆ ಹಾಗೂ ಇಂಧನದ ಬೆಲೆಗಳನ್ನು ಏರಿಸಿದೆ.

ಹೌತಿ ದಾಳಿಯಿಂದ ಸಂಘರ್ಷ ಮತ್ತಷ್ಟು ಸಂಕೀರ್ಣ: ಹೌತಿ ಸೇನೆಯ ಬ್ರಿಗೇಡಿಯರ್ ಜನರಲ್ ಯಹ್ಯಾ ಸರೀ, ಇಸ್ರೇಲ್‌ನ ದಕ್ಷಿಣ ಭಾಗದಲ್ಲಿರುವ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹಾರಿಸಲಾಗಿದೆ ಎಂದು ಹೇಳಿದ್ದಾರೆ. ಈ ವೇಳೆ ಇಸ್ರೇಲ್‌ನ ಬೀರ್ ಶೆಬಾ ನಗರ ಮತ್ತು ಪ್ರಮುಖ ಅಣು ಸಂಶೋಧನಾ ಕೇಂದ್ರದ ಸುತ್ತಮುತ್ತ ಸೈರನ್‌ಗಳು ಮೊಳಗಿವೆ.

ಟೆಲ್ ಅವೀವ್‌ನಲ್ಲಿ ಸ್ಫೋಟಗಳ ಸದ್ದು ಕೇಳಿಬಂದಿದ್ದು, ಅಗ್ನಿಶಾಮಕ ದಳವು 11 ಸ್ಥಳಗಳಲ್ಲಿ ರಕ್ಷಣಾಕಾರ್ಯ ನಡೆಸಿ ದೆ. ಹೌತಿ ದಾಳಿಗಳು ಮುಂದುವರಿದರೆ ಕೆಂಪು ಸಮುದ್ರ ಮಾರ್ಗದ ವಾಣಿಜ್ಯ ಸಾಗಣೆಗೂ ಅಪಾಯ ಎದುರಾಗುವ ಸಾಧ್ಯತೆ ಇದೆ.

ಇರಾನ್ ಅಣು ಸೌಕರ್ಯಗಳ ಮೇಲೆ ಇಸ್ರೇಲ್ ದಾಳಿ: ಇಸ್ರೇಲ್ ತನ್ನ ದಾಳಿಗಳನ್ನು ಟೆಹ್ರಾನ್‌ನ ಹೃದಯ ಭಾಗದಲ್ಲಿರುವ ಕ್ಷಿಪಣಿ ಉತ್ಪಾದನಾ ಕೇಂದ್ರಗಳ ಮೇಲೆ ಕೇಂದ್ರೀಕರಿಸಿದೆ. ಇರಾನ್‌ನ ಅಣುಶಕ್ತಿ ಸಂಸ್ಥೆ ಪ್ರಕಾರ, ಅರಾಕ್‌ನ ಶಹೀದ್ ಖೊಂಡಾಬ್ ಹೆವಿ ವಾಟರ್ ಸಂಕೀರ್ಣ ಮತ್ತು ಯಜ್ದ್ ಪ್ರಾಂತ್ಯದ ಯೆಲ್ಲೋಕೇಕ್ ಉತ್ಪಾದನಾ ಘಟಕ ಗುರಿಯಾಗಿವೆ. ಈ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ ಎಂದು ಇರಾನ್ ಹೇಳಿದರೂ, ಇಸ್ರೇಲ್ ಇದನ್ನು ತನ್ನ ಅಣು ಕಾರ್ಯಕ್ರಮದ ಮೇಲೆ ದೊಡ್ಡ ಹೊಡೆತವೆಂದು ಹೇಳಿದೆ. ಇರಾನ್ ಇದಕ್ಕೆ ಪ್ರತಿದಾಳಿ ಮಾಡುವುದಾಗಿ ಎಚ್ಚರಿಸಿದೆ.

ಹಾರ್ಮುಜ್ ಮಹತ್ವ, ಜಾಗತಿಕ ಪರಿಣಾಮ: ಹಾರ್ಮುಜ್ ಜಲಸಂಧಿ ಜಗತ್ತಿನ ತೈಲ ಸಾಗಣೆಯನ್ನು ನಿರ್ವಹಿಸುವ ಪ್ರಮುಖ ಮಾರ್ಗವಾಗಿದೆ. ಯುದ್ಧದಿಂದ ಈ ಮಾರ್ಗದ ನಿಯಂತ್ರಣ ಗಂಭೀರ ಪರಿಣಾಮಗಳನ್ನು ಉಂಟುಮಾಡಿದೆ. ತೈಲ ಮಾತ್ರವಲ್ಲದೆ, ರಸಗೊಬ್ಬರ ವ್ಯಾಪಾರಕ್ಕೂ ಇದು ಪ್ರಮುಖವಾಗಿದೆ. ಇದರ ಪರಿಣಾಮವಾಗಿ ಕೃಷಿ ಮತ್ತು ಆಹಾರ ಭದ್ರತೆಯ ಮೇಲೆ ಜಾಗತಿಕ ಮಟ್ಟದಲ್ಲಿ ಒತ್ತಡ ಹೆಚ್ಚಾಗಿದೆ.

ರಾಜತಾಂತ್ರಿಕ ಪ್ರಯತ್ನ, ಸೈನಿಕ ಚಟುವಟಿಕೆ: ಅಮೆರಿಕ ಅಧ್ಯಕ್ಷರು ಯುದ್ಧ ಅಂತ್ಯಕ್ಕೆ ಮಾತುಕತೆ ಉತ್ತಮವಾಗಿ ಸಾಗುತ್ತಿವೆ ಎಂದು ಹೇಳಿದರೂ, ಇರಾನ್ ಇದನ್ನು ತಳ್ಳಿಹಾಕಿದೆ. ಅಮೆರಿಕ ನೀಡಿದ 15 ಅಂಶಗಳ ಪ್ರಸ್ತಾವವನ್ನು ಇರಾನ್ ತಿರಸ್ಕರಿಸಿ, ತನ್ನದೇ ಐದು ಅಂಶಗಳ ಯೋಜನೆಯನ್ನು ಮುಂದಿಟ್ಟಿದೆ. ಇದರಲ್ಲಿ ಪರಿಹಾರ ಹಣ ಮತ್ತು ಜಲಸಂಧಿಯ ಮೇಲಿನ ಸ್ವಾಯತ್ತತೆಯ ಮಾನ್ಯತೆ ಸೇರಿವೆ. ಈ ನಡುವೆ ಅಮೆರಿಕ ಸುಮಾರು 2,500 ಮೆರೈನ್ಸ್ ಮತ್ತು 1,000 ಪ್ಯಾರಾಟ್ರೂಪರ್‌ಗಳನ್ನು ಮಧ್ಯಪ್ರಾಚ್ಯಕ್ಕೆ ಕಳುಹಿಸಿದೆ.

ಸಾವಿನ ಸಂಖ್ಯೆ ಹೆಚ್ಚಳ: ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19 ಮಂದಿ ಸಾವಿಗೀಡಾಗಿದ್ದಾರೆ. ಲೆಬನಾನ್‌ನಲ್ಲಿ 1,100ಕ್ಕೂ ಹೆಚ್ಚು ಜನರು ಮೃತರಾಗಿದ್ದಾರೆ. ಅಮೆರಿಕದ 13 ಸೈನಿಕರು ಮೃತಪಟ್ಟಿದ್ದು, ಇರಾಕ್‌ನಲ್ಲಿ 80 ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳಲ್ಲಿ 20 ಜನರು ಮೃತಪಟ್ಟಿದ್ದಾರೆ. ಇದರ ಜತೆಗೆ ಇರಾನ್‌ನಲ್ಲಿ 82,000 ಕಟ್ಟಡಗಳು ಹಾನಿಗೊಳಗಾಗಿದ್ದು, ಲಕ್ಷಾಂತರ ಜನರು ವಾಸಸ್ಥಳ ಕಳೆದುಕೊಂಡಿದ್ದಾರೆ.

ಮಾನವೀಯ ನೆರವು: ಸಂಯುಕ್ತ ರಾಷ್ಟ್ರಗಳ ವಿನಂತಿಯ ಮೇರೆಗೆ ಇರಾನ್ ಹಾರ್ಮುಜ್ ಜಲಸಂಧಿ ಮೂಲಕ ಮಾನವೀಯ ಸಹಾಯ ಮತ್ತು ಕೃಷಿ ಸರಕುಗಳ ಸಾಗಣೆಗೆ ಅನುಮತಿ ನೀಡಲು ಒಪ್ಪಿದೆ. ಇದು ಯುದ್ಧದ ನಡುವೆ ಒಂದು ಸಣ್ಣ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗಿದೆ. ಆದರೆ, ಒಟ್ಟಾರೆ ಪರಿಸ್ಥಿತಿ ಇನ್ನೂ ಗಂಭೀರವಾಗಿದ್ದು, ಯುದ್ಧ ಇನ್ನಷ್ಟು ವಿಸ್ತಾರಗೊಳ್ಳುವ ಭೀತಿ ಇದೆ.





ಸುಮಾರು 47,000 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಹಡಗು ಜಗ್ ವಸಂತ್ ಪಶ್ಚಿಮ ಏಷ್ಯಾದ ಉದ್ವಿಗ್ನತೆಯ ನಡುವೆ ಹಾರ್ಮುಜ್ ಜಲಸಂಧಿ ದಾಟಿ ಗುಜರಾತಿನ ವದಿನಾರ್ ಬಂದರಿಗೆ ತಲುಪಿದೆ.

ಯುಎಇಯಲ್ಲಿ ಐವರು ಭಾರತೀಯರಿಗೆ ಗಾಯ

ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಅಲ್ಲಿನ ಸೇನೆ ಬ್ಯಾಲಿಸ್ಟಿಕ್ ಕ್ಷಿಪಣಿಯೊಂದನ್ನು ಹೊಡೆದುರುಳಿಸಿದಾಗ ಅದರ ಅವಶೇಷಗಳು ಬಿದ್ದು ಐವರು ಭಾರತೀಯರು ಗಾಯಗೊಂಡಿದ್ದಾರೆ ಎಂದು ಶುಕ್ರವಾರ ಅಧಿಕೃತ ವರದಿಗಳು ತಿಳಿಸಿವೆ. ಕ್ಷಿಪಣಿಯನ್ನು ತಡೆದಾಗ ಅದರ ಚೂರುಗಳು ವಸತಿ ಪ್ರದೇಶದ ಮೇಲೆ ಬಿದ್ದಿದ್ದರಿಂದ ಈ ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ. ಸ್ಥಳೀಯ ತುರ್ತು ಸೇವಾ ಸಿಬ್ಬಂದಿ ಸಂತ್ರಸ್ತರನ್ನು ಹತ್ತಿರದ ಆಸ್ಪತ್ರೆಗಳಿಗೆ ದಾಖಲಿಸಿದ್ದು, ಸಣ್ಣಪುಟ್ಟ ಗಾಯಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಐವರೂ ಪ್ರಸ್ತುತ ಅಪಾಯದಿಂದ ಪಾರಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ಕ್ಷಿಪಣಿ ನಿಗದಿತ ಗುರಿಯನ್ನು ತಲುಪುವ ಮೊದಲೇ ಅದನ್ನು ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಯಶಸ್ವಿಯಾಗಿ ನಾಶಪಡಿಸಿರುವುದಾಗಿ ಯುಎಇ ರಕ್ಷಣಾ ಸಚಿವಾಲಯ ಖಚಿತಪಡಿಸಿದೆ. ಈ ಕ್ಷಿಪಣಿಯ ಮೂಲದ ಬಗ್ಗೆ ಅಧಿಕಾರಿಗಳು ಪೂರ್ಣ ಪ್ರಮಾಣದ ತನಿಖೆ ಪ್ರಾರಂಭಿಸಿದ್ದಾರೆ.

20 ಅಮೆರಿಕ ಸೈನಿಕರಿಗೆ ಗಾಯ, ಹಲವಾರು ವಿಮಾನಗಳಿಗೆ ಹಾನಿ

ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ಏರ್ ಬೇಸ್ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಅಮೆರಿಕದ 20ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ, ಹಲವಾರು ವಿಮಾನಗಳು ಹಾನಿಗೊಳಗಾಗಿವೆ ಎಂದು ಮೂಲಗಳು ತಿಳಿಸಿವೆ. ಶುಕ್ರವಾರ ಮಾತ್ರವೇ ಆರು ಕ್ಷಿಪಣಿಗಳು ಮತ್ತು 29 ಡ್ರೋನ್‌ಗಳ ಮೂಲಕ ದಾಳಿ ನಡೆದಿದ್ದು, ಕನಿಷ್ಠ 15 ಸೈನಿಕರು ಗಾಯಗೊಂಡಿದ್ದಾರೆ. ಈ ತಾಣವು ಸೌದಿ ವಾಯುಪಡೆಯ ನಿಯಂತ್ರಣದಲ್ಲಿದ್ದರೂ, ಅಮೆರಿಕದ ಪಡೆಗಳು ಕೂಡ ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ದಾಳಿಯಲ್ಲಿ ಇಬ್ಬರು ಸೈನಿಕರು ತೀವ್ರವಾಗಿ ಗಾಯಗೊಂಡಿದ್ದು, ಅಮೆರಿಕದ ಇಂಧನ ಮರುಪೂರಣ ವಿಮಾನಗಳನ್ನು ಗುರಿಯಾಗಿಸಲಾಗಿದೆ. ಘಟನೆಯ ನಂತರ ವಿಮಾನಗಳಿಗೆ ಆಗಿರುವ ಹಾನಿಯನ್ನು ತೋರಿಸುವ ಉಪಗ್ರಹ ಚಿತ್ರಗಳು ಅಂತರ್ಜಾಲದಲ್ಲಿ ಪ್ರಕಟವಾಗಿವೆ. ಹೆಸರು ಹೇಳಲು ಬಯಸದ ಇಬ್ಬರು ಅಧಿಕಾರಿಗಳು, ಸಾವುನೋವು ಮತ್ತು ಹಾನಿಯನ್ನು ಖಚಿತಪಡಿಸಿದ್ದಾರೆ. ತಿಂಗಳ ಕಾಲ ನಡೆದ ಈ ಸಂಘರ್ಷದಲ್ಲಿ 300ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ವರದಿ ಮಾಡಿದೆ. ಹೆಚ್ಚಿನವರು ಕರ್ತವ್ಯಕ್ಕೆ ಮರಳಿದ್ದರೂ, 30 ಮಂದಿ ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ ಮತ್ತು 10 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಈ ಹಿಂದೆ ಮಾ.1ರಂದು ಇದೇ ವಾಯುನೆಲೆಯ ಮೇಲೆ ಇರಾನ್ ದಾಳಿ ನಡೆಸಿತ್ತು. ಅದರಲ್ಲಿ ಆರ್ಮಿ ಸಾರ್ಜೆಂಟ್ ಬೆಂಜಮಿನ್ ಎನ್. ಪೆನ್ನಿಂಗ್ಟನ್ ಸಾವನ್ನಪ್ಪಿದ್ದರು. ಇರಾನ್ ಸೇನೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿಕೆ ನೀಡಿದ ಮರುದಿನವೇ ಈ ದಾಳಿ ನಡೆದಿದೆ. ಈ ಯುದ್ಧದಲ್ಲಿ ಒಟ್ಟು 13 ಸೈನಿಕರು ಮೃತಪಟ್ಟಿದ್ದಾರೆ.

ಅಮೆರಿಕದ ಟೊಮಾಹಾಕ್ ಕ್ಷಿಪಣಿಗಳ ದಾಸ್ತಾನು ಇಳಿಕೆ

ವಾಷಿಂಗ್ಟನ್: ಇರಾನ್ ವಿರುದ್ಧದ ಯುದ್ಧದ ಮೊದಲ ನಾಲ್ಕು ವಾರಗಳಲ್ಲಿ ಅಮೆರಿಕದ ಮಿಲಿಟರಿ 850ಕ್ಕೂ ಹೆಚ್ಚು ಟೊಮಾಹಾಕ್ ಕ್ರೂಸ್ ಕ್ಷಿಪಣಿಗಳನ್ನು ಪ್ರಯೋಗಿಸಿದ್ದು, ಇದರಿಂದ ಶಸ್ತ್ರಾಸ್ತ್ರ ದಾಸ್ತಾನು ಕ್ಷೀಣಿಸುವ ಕಳವಳ ಉಂಟಾಗಿದೆ. ಕ್ಷಿಪಣಿಗಳ ಹೆಚ್ಚಿನ ಬಳಕೆಯ ನಂತರ ಮಧ್ಯಪ್ರಾಚ್ಯದಲ್ಲಿ ಪ್ರಸ್ತುತ ಕ್ಷಿಪಣಿಗಳ ಮಟ್ಟ ಆತಂಕಕಾರಿ ಅನ್ನುವಷ್ಟು ಕಡಿಮೆಯಿದೆ ಎಂದು ಪೆಂಟಗನ್ ಅಧಿಕಾರಿಗಳು ವಿವರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲಿ ಪಡೆಗಳನ್ನು ಒಳಗೊಂಡ ಜಂಟಿ ಮಿಲಿಟರಿ ಕಾರ್ಯಾಚರಣೆಯಾದ ಆಪರೇಷನ್ ಎಪಿಕ್ ಫ್ಯೂರಿ ಸಮಯದಲ್ಲಿ ಈ ನಿಖರ-ನಿರ್ದೇಶಿತ ಶಸ್ತ್ರಾಸ್ತ್ರಗಳನ್ನು ಹೆಚ್ಚು ಬಳಸಲಾಗಿತ್ತು. ಟೊಮಾಹಾಕ್‌ಗಳ ಭಾರಿ ಬಳಕೆ, ಇತರ ಪ್ರದೇಶಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸುವ ಮತ್ತು ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಆಂತರಿಕ ಚರ್ಚೆಗಳಿಗೆ ಕಾರಣವಾಗಿದೆ. ಪ್ರಸ್ತುತ ಉತ್ಪಾದನಾ ಸಾಮರ್ಥ್ಯ, ವರ್ಷಕ್ಕೆ ಸುಮಾರು 600 ಕ್ಷಿಪಣಿಗಳನ್ನು ತಯಾರಿಸಲು ಅವಕಾಶ ನೀಡುತ್ತದೆ. ಆದರೆ ಕಳೆದ ರಕ್ಷಣಾ ಬಜೆಟ್‌ನಲ್ಲಿ ಕೇವಲ 57 ಘಟಕಗಳಿಗೆ ಮಾತ್ರ ಅನುಮೋದನೆ ನೀಡಲಾಗಿತ್ತು. ಪ್ರತಿ ಕ್ಷಿಪಣಿಯ ವೆಚ್ಚ ಸುಮಾರು 3.6 ಮಿಲಿಯನ್ ಯುಎಸ್ ಡಾಲರ್ ಆಗಿದ್ದು, ಇದನ್ನು ನಿರ್ಮಿಸಲು ಎರಡು ವರ್ಷಗಳವರೆಗೆ ಸಮಯ ಬೇಕಾಗುತ್ತದೆ.ತನ್ನ ಕಾರ್ಯತಂತ್ರದ ಗುರಿಗಳನ್ನು ಸಾಧಿಸಲು ಮಿಲಿಟರಿ ಬಳಿ ಸಾಕಷ್ಟು ಯುದ್ಧಸಾಮಗ್ರಿಗಳಿವೆ, ಎಂದು ಪೆಂಟಗನ್ ವಕ್ತಾರರು ತಿಳಿಸಿದ್ದಾರೆ. ಆದರೂ, ಈ ಬಾರಿ ಅಮೆರಿಕ ದಾಸ್ತಾನಿನ ಸುಮಾರು ನಾಲ್ಕನೇ ಒಂದು ಭಾಗದಷ್ಟು ಕ್ಷಿಪಣಿಗಳನ್ನು ಬಳಸಿದೆ ಎಂದು ವಿಶ್ಲೇಷಕರು ಅಂದಾಜಿಸಿದ್ದಾರೆ.

ಕ್ಷಿಪಣಿಗಳ ಮೇಲೆ ಭಾರತದ ಜನತೆಗೆ ಧನ್ಯವಾದ ಎಂದು ಉಲ್ಲೇಖ

ಇಸ್ರೇಲ್ ಮೇಲೆ ಇರಾನ್ ಮತ್ತೆ ದಾಳಿ

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿ ಜಗತ್ತಿನ ಗಮನ ಸೆಳೆದಿದೆ. ಇಸ್ರೇಲ್ ಮೇಲೆ ಇರಾನ್ ಮತ್ತೆ ದಾಳಿ ಆರಂಭಿಸಿದ್ದು, ಇಸ್ರೇಲಿ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡಿದೆ. ಇರಾನ್ ಹಲವು ಹಂತಗಳಲ್ಲಿ ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಮೂಲಕ ದಾಳಿಗಳನ್ನು ಮುಂದುವರಿಸುತ್ತಿದೆ.ಇತ್ತೀಚಿನ ದಾಳಿಗಳಲ್ಲಿ ಅಶ್ದೋಡ್ ಪ್ರದೇಶದ ತೈಲ ಸಂಗ್ರಹಣಾ ಟ್ಯಾಂಕ್‌ಗಳು ಮತ್ತು ಡಿಪೋಗಳು, ಮೋದಿಯಿನ್ ಪ್ರದೇಶದ ಸೈನಿಕ ನೆಲೆಗಳು ಸೇರಿದಂತೆ ಪ್ರಮುಖ ತಂತ್ರಜ್ಞಾನ ಕೇಂದ್ರಗಳನ್ನು ಗುರಿಯಾಗಿಸಲಾಗಿದೆ. ಜತೆಗೆ, ಅಲ್-ಧಫ್ರಾ, ಅಲ್-ಉದೈರ್ ಮತ್ತು ಅಲಿ ಅಲ್-ಸೇಲಂ ವಾಯುನೆಲೆಗಳಲ್ಲಿರುವ ಅಮೆರಿಕನ್ ಸೈನಿಕ ಮೂಲಸೌಕರ್ಯಗಳ ಮೇಲೆಯೂ ದಾಳಿ ನಡೆದಿದೆ. ಈ ಪ್ರದೇಶಗಳಲ್ಲಿ ಸಾರಿಗೆ ವಿಮಾನಗಳು ಹಾಗೂ ಡ್ರೋನ್‌ಗಳ ನಿರ್ವಹಣೆಗಾಗಿ ಬಳಸುವ ಹ್ಯಾಂಗರ್‌ಗಳಿಗೂ ಹಾನಿಯಾಗಿದೆ ಎಂದು ವರದಿಯಾಗಿದೆ.

ಗಮನ ಸೆಳೆದ ವಿಚಿತ್ರ ಸಂಗತಿ: ಈ ದಾಳಿಗಳ ನಡುವೆ ಒಂದು ವಿಚಿತ್ರ ಸಂಗತಿ ಗಮನ ಸೆಳೆದಿದೆ. ಇರಾನ್ ತನ್ನ ಕ್ಷಿಪಣಿಗಳ ಮೇಲೆ "ಭಾರತದ ಜನತೆಗೆ ಧನ್ಯವಾದ" ಮತ್ತು "ಜರ್ಮನ್ ಜನತೆಗೆ ಧನ್ಯವಾದ" ಎಂಬ ಸಂದೇಶಗಳನ್ನು ಬರೆದಿದೆ. ಭಾರತಕ್ಕೆ ಧನ್ಯವಾದ ಹೇಳಿರುವುದು ಇದೇ ಮೊದಲ ಬಾರಿಯಲ್ಲ ಎಂದು ಹೇಳಲಾಗುತ್ತಿದೆ. ಭಾರತವು ಇರಾನಿಗೆ ಗಾಯಾಳುಗಳ ಚಿಕಿತ್ಸೆಗಾಗಿ ಮಾನವೀಯ ನೆಲೆಯಲ್ಲಿ ಅಗತ್ಯ ಔಷಧಗಳನ್ನು ಕಳುಹಿಸಿಕೊಟ್ಟಿತ್ತು.

ಕಾಶ್ಮೀರ ಪ್ರದೇಶದಲ್ಲಿ ಇರಾನ್‌ಗೆ ಬೆಂಬಲವಾಗಿ ಜನರು ದೇಣಿಗೆ ಸಂಗ್ರಹಿಸಿರುವುದಾಗಿ ವರದಿಯಾಗಿದೆ. ಈ ದೇಣಿಗೆಗಳಲ್ಲಿ ಹಣ ಮಾತ್ರವಲ್ಲದೆ, ಚಿನ್ನ, ಬೆಳ್ಳಿ ಮತ್ತು ಇತರ ಬೆಲೆಬಾಳುವ ವಸ್ತುಗಳೂ ಸೇರಿವೆ. ವೃದ್ಧರು, ಮಹಿಳೆಯರು ಮತ್ತು ಮಕ್ಕಳು ಸಹ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೊಡುಗೆ ನೀಡಿದ್ದಾರೆ. ಕೆಲ ಮಕ್ಕಳು ತಮ್ಮ ಉಳಿತಾಯ ಹಣವನ್ನು ನೀಡಿದರೆ, ಕೆಲವು ಯುವತಿಯರು ತಮ್ಮ ಆಭರಣಗಳನ್ನು ದಾನ ಮಾಡಿದ್ದಾರೆ. ಈ ಬೆಂಬಲದ ಹಿನ್ನೆಲೆ ಇರಾನ್ ಭಾರತೀಯರಿಗೆ ಧನ್ಯವಾದ ಹೇಳುತ್ತಿರುವುದಾಗಿ ವಿಶ್ಲೇಷಿಸಲಾಗುತ್ತಿದೆ.

ಕಿರುಸುದ್ದಿ

ಛತ್ತೀಸ್‌ಗಢ: ಮೂವರು ಮಾವೋಗಳ ಶರಣಾಗತಿ

ಕಂಕೇರ್: ಓರ್ವ ಮಹಿಳಾ ನಕ್ಸಲ್ ಸಹಿತ ಮೂವರು ನಕ್ಸಲರು ಶನಿವಾರ ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯಲ್ಲಿ ಶರಣಾಗತರಾಗಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ರಾಧಿಕಾ ಕುಂಜಮ್, ಸಂದೀಪ್ ಕಡಿಯಮ್ ಮತ್ತು ರೈನು ಪಡ್ಡಾ ಶರಣಾದ ನಕ್ಸಲರು. ಕುಂಜಮ್ ಮತ್ತು ಕಡಿಯಮ್ ನಿಷೇಧಿತ ನಕ್ಸಲ್ ಸಂಘಟನೆಯ ಪ್ರದೇಶ ಸಮಿತಿ ಸದಸ್ಯರಾಗಿದ್ದು, ಎರಡು ಸೆಲ್ಫ್ ಲೋಡಿಂಗ್ ರೈಫಲ್‌ಗಳು ಮತ್ತು. 303 ರೈಫಲ್‌ಗಳನ್ನು ಪೊಲೀಸರಿಗೆ ಒಪ್ಪಿಸಿರುವುದಾಗಿ ಪೊಲೀಸ್ ಅಧೀಕ್ಷಕ ನಿಖಿಲ್ ರಖೇಛ ತಿಳಿಸಿದ್ದಾರೆ. ಶರಣಾಗತ ನಕ್ಸಲರು ನೀಡಿದ ಮಾಹಿತಿ ಮೇರೆಗೆ, ವಲಯದಲ್ಲಿ ಸಕ್ರಿಯರಿರುವ ಇತರ ನಕ್ಸಲರನ್ನು ಸಂಪರ್ಕಿಸಿ, ಹಿಂಸೆ ತೊರೆದು ಸಮಾಜದ ಹೆದ್ದೆರೆಗೆ ಸೇರುವಂತೆ ಮನವೊಲಿಸುವ ನಿಟ್ಟಿನಲ್ಲಿ, ಅವರ ಪತ್ತೆಗಾಗಿ ಶೋಧ ನಡೆದಿದೆ. ಮಾ. 25,26ರಂದು ಆರು ಮಂದಿ ನಕ್ಸಲೀಯರು ಛತ್ತೀಸ್‌ಗಢ ಜಿಲ್ಲೆಯಲ್ಲಿ ಪೊಲೀಸರಿಗೆ ಶರಣಾಗಿದ್ದರು. ವಲಯದಲ್ಲಿರುವ ಮಿಕ್ಕ ಮಾವೋವಾದಿಗಳು ಕೂಡ ಹಿಂಸೆ ತೊರೆದು ಶರಣಾಗುವಂತೆ ಬಸ್ತಾರ್ ವಲಯದ ಐಜಿಪಿ ಸುಂದರ್‌ರಾಜ್ ಪಟ್ಟಿಲಿಂಗಂ ನಕ್ಸಲರಿಗೆ ಮರು ಮನವಿ ಮಾಡಿದ್ದಾರೆ.

ರಾಮನವಮಿ ಮೆರವಣಿಗೆ ಮೇಲೆ ಕಿಡಿಗೇಡಿಗಳ ಕಲ್ಲು

ಕೋಲ್ಕತ್ತಾ: ಶ್ರೀ ರಾಮನವಮಿ ಮೆರವಣಿಗೆಗೆ ದುಷ್ಕರ್ಮಿಗಳ ಕಲ್ಲು ತೂರಾಟದಿಂದ ಹಿಂಸೆ ಭುಗಿಲೆದ್ದು, ಎರಡು ಗುಂಪುಗಳು ಘರ್ಷಣೆಗಿಳಿದ ಹಿನ್ನೆಲೆಯಲ್ಲಿ ಮುರ್ಶಿದಾಬಾದ್ ಜಿಲೆಯ ರಘುನಾಥಗಂಜ್ ಮತ್ತು ಜಂಗಿಪುರ ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಹಿಂಸಾಚಾರಗಳಿಗೆ ಸಂಬಂಧಿಸಿ ಇದುವರೆಗೆ 30 ಮಂದಿಯನ್ನು ಬಂಧಿಸಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಹಿರಿಯ ಪೊಲೀಸ್‌ಅಧಿಕಾರಿ ತಿಳಿಸಿದ್ದಾರೆ . ಬಂಧಿತರ ವಿವರಗಳನ್ನು ಪೊಲೀಸರು ಬಹಿರಂಗಪಡಿಸಿಲ್ಲ. ಜಂಗಿಪುರ ಆಸ್ಪತ್ರೆ ಮತ್ತು ಸಮೀಪದ ಪ್ರದೇಶಗಳಲ್ಲಿ ಪ.ಬಂಗಾಳ ಪೊಲೀಸ್ ಸಿಬ್ಬಂದಿ, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು ಗಸ್ತು ತಿರುಗತ್ತಿದ್ದು, ಜನರಲ್ಲಿ ಧೈರ್ಯ ಮೂಡಿಸಲು ಆರ್‌ಎಎಫ್ ರೂಟ್ ಮಾರ್ಚ್ ನಡೆಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪ್ರದೇಶದಲ್ಲಿನ ಹಲವು ಅಂಗಡಿಗಳು, ಮಾರುಕಟ್ಟೆಗಳು ಮುಚ್ಚಿವೆ. ರಸ್ತೆಗಳಲ್ಲಿ ಬೆರಳೆಣಿಕೆಯ ಜನರು ಓಡಾಡುತ್ತಿದ್ದಾರೆ. ವಾಹನ ಸಂಚಾರ ಮಾತ್ರ ಎಂದಿನಂತಿದೆ. ಪ್ರದೇಶದಲ್ಲಿ ಸಬ್ ಡಿವಿಜನಲ್ ಆಸ್ಪತ್ರೆಯಿದ್ದು, ಜನರಿಗೆ ಯಾವುದೇ ತೆರ ಅನಾನುಕೂಲವಾಗದಂತೆ ನೋಡಿಕೊಳ್ಳುತ್ತಿದ್ದೇವೆ. ನಮ್ಮ ಅಧಿಕಾರಿಗಳು, ಅರೆ ಸೇನಾ ಪಡೆ ಸಿಬ್ಬಂದಿ ಗರಿಷ್ಠ ಸಂಖ್ಯೆಯಲ್ಲಿ ಸ್ಥಳದಲ್ಲಿ ಪಹರೆಯಲ್ಲಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಶ್ರೀರಾಮನವಮಿ ಶೋಭಾಯಾತ್ರೆಯಂಗ ಭಕ್ತಿ ಸಂಗೀತದ ವ್ಯವಸ್ಥೆ ಮಾಡಲಾಗಿತ್ತು. ಸಂಗೀತದ ಸದ್ದು ಜೋರಾಯಿತೆಂದು ದುಷ್ಕರ್ಮಿಗಳ ಗುಂಪೊಂದು ರಘುನಾಥಗಂಜ್‌ನ ಮಕೆಂಝಿ ಪಾರ್ಕ್ ಬಳಿ ರಾಮಭಕ್ತರಲ್ಲಿ ಕ್ಯಾತೆ ತೆಗೆದು ಉದ್ವಿಗ್ನತೆಗೆ ಕಾರಣವಾಗಿದ್ದರು.

ಸೇನೆಗೆ 2,000 ಪ್ರಹಾರ್ ಮಶೀನ್ ಗನ್ ಹಸ್ತಾಂತರ

ಗ್ವಾಲಿಯರ್: ಮೇಕ್ ಇನ್ ಇಂಡಿಯಾ ಉಪಕ್ರಮದನ್ವಯ ದೇಶದಲ್ಲಿಯೇ ಉತ್ಪಾದಿಸಲ್ಪಟ್ಟ 2,000 ಪ್ರಹಾರ್ ಲಘು ಮಶೀನ್ ಗನ್‌ಗಳನ್ನು(ಎಲ್‌ಎಂಜಿ) ಅದಾನಿ ಡಿಫೆನ್ಸ್ ಭಾರತೀಯ ಸೇನೆಗೆ ಶನಿವಾರ ಹಸ್ತಾಂತರಿಸಿದೆ. ಗ್ವಾಲಿಯರ್ ನಗರದ ಹೊರವಲಯದಲ್ಲಿನ ಸಣ್ಣ ಶಸ್ತ್ರಾಸ್ತ್ರಗಳ ಉತ್ಪಾದನಾ ಘಟಕದಲ್ಲಿ 7.62 ಎಂ.ಎಂ ಬಂದೂಕುಗಳನ್ನು ಅದಾನಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಉತ್ಪಾದನೆ ಮಾಡಿದೆ.

ಗಡಿ ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಲೈನ್ ಆಫ್ ಆ್ಯಕ್ಚುವಲ್ ಕಂಟ್ರೋಲ್ (ಎಲ್‌ಎಸಿ) ಮತ್ತು ಲೈನ್ ಆಫ್ ಕಂಟ್ರೋಲ್ (ಎಲ್‌ಒಸಿ)ನಲ್ಲಿ ರಕ್ಷಣಾ ನಿಯೋಜನೆಗಾಗಿ ಭಾರತ ಸಾಕಷ್ಟು ರಕ್ಷಣಾ ಹೂಡಿಕೆ ನಡೆಸುತ್ತಿದೆ. ಈ ಸಂದರ್ಭ ಹೊಸ ಶಸ್ತ್ರಾಸ್ತ್ರಗಳು ಸೇನೆಯ ಬಲ ಹೆಚ್ಚಿಸಲಿದ್ದು, ಒಟ್ಟಾರೆ ಯುದ್ಧ ಕಾರ್ಯಾಚರಣಾ ಸಾಮರ್ಥ್ಯವನ್ನು ಹಾಗೂ ಯುದ್ಧ ಸನ್ನದ್ಧತೆಯನ್ನು ಹೆಚ್ಚಿಸಲಿದೆ. 508 ಎಂ.ಎಂ. (20 ಇಂಚಿನ) ಬ್ಯಾರೆಲ್ ಉದ್ದವನ್ನು ಪ್ರಹರ್ ಹೊಂದಿರಲಿದೆ. ಲಘು ಮಶೀನ್ ಗನ್‌ನ 8 ಕೆ.ಜಿ. ತೂಕವಿರಲಿದ್ದು, 1,100 ಎಂ.ಎಂ. ಉದ್ದವಿರಲಿದೆ. ಇದಲ್ಲದೆ ಪ್ರಹಾರ್ ಬಂದೂಕು 1,000 ಮೀ. ದೂರದವರೆಗೂ ದಾಳಿ ನಡೆಸಬಲ್ಲ ಸಾಮರ್ಥ್ಯವನ್ನು ಹೊಂದಿರಲಿದೆ. ಗ್ವಾಲಿಯರ್ ಘಟಕದಲ್ಲಿ ನಡೆದ ಔಪಚಾರಿಕ ಸಮಾರಂಭದಲ್ಲಿ ಶನಿವಾರ ಲಘು ಮಶೀನ್ ಗನ್‌ಗಳನ್ನು ಸೇನೆಗೆ ಹಸ್ತಾಂತರಿಸಲಾಯಿತು. ರಕ್ಷಣಾ ಸಚಿವಾಲಯದ ರಕ್ಷಣಾ ಸ್ವಾಮ್ಯ ಅಧಿಕಾರಿ ಎ.ಅನ್ಬರಸು, ಅದಾನಿ ಡಿಫೆನ್ಸ್ ಮತ್ತು ಏರೋಸ್ಪೇಸ್ ಸಿಇಒ ಆಶಿಶ್ ರಾಜ್‌ವಂಶಿ ಮತ್ತು ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ತ.ನಾಡು: ಡಿಎಂಕೆ 164 ಅಭ್ಯರ್ಥಿಗಳ ಪಟ್ಟಿ ಪ್ರಕಟ

ಚೆನ್ನೈ: ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷವು ಏ.23ರಂದು ನಡೆಯಲಿರುವ ವಿಧಾನಸಭೆ ಚುನಾವಣೆಗಾಗಿ 164 ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಶನಿವಾರ ಘೋಷಿಸಿದೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ಅವರ ಪುತ್ರ ಮತ್ತು ಉಪ ಮುಖ್ಯಮಂತ್ರಿಯಾದ ಉದಯನಿಧಿ ಅವರನ್ನು ಅವರ ಪ್ರಸ್ತುತ ನಗರ ಕ್ಷೇತ್ರಗಳಿಂದ ಮತ್ತೆ ಅಭ್ಯರ್ಥಿಗಳನ್ನಾಗಿ ಘೋಷಿಸಲಾಗಿದೆ.



ಇದರಿಂದ ಹಲವಾರು ಕ್ಷೇತ್ರಗಳಲ್ಲಿ ಪ್ರತಿಸ್ಪರ್ಧಿ ಎಐಎಡಿಎಂಕೆಯೊಂದಿಗೆ ನೇರ ಪೈಪೋಟಿ ಏರ್ಪಡಲಿದೆ.

ಕಾಂಗ್ರೆಸ್ ಹಾಗೂ ಎಡಪಂಥೀಯ ಪಕ್ಷಗಳನ್ನು ಒಳಗೊಂಡ ಮೈತ್ರಿ ಪಕ್ಷಗಳೊಂದಿಗೆ ನಡೆದ ಹಲವು ದಿನಗಳ ಸೀಟ್ ಹಂಚಿಕೆ ಮಾತುಕತೆಗಳನ್ನು ಪೂರ್ಣಗೊಳಿಸಿದ ಡಿಎಂಕೆ, ಅವರಿಗೆ ಮೀಸಲಾದ ಕ್ಷೇತ್ರಗಳನ್ನು ಗುರುತಿಸಿದೆ. ಇದಾದ ಕೆಲವೇ ನಿಮಿಷಗಳಲ್ಲಿ, ಡಿಎಂಕೆ ಮುಖ್ಯ ಕಚೇರಿ ಅಣ್ಣಾ ಅರಿವಾಲಯಂದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸ್ಟಾಲಿನ್ ತಮ್ಮ ಪಕ್ಷದ 164 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದರು. ಸೀಟ್ ಹಂಚಿಕೆ ಮಾತುಕತೆಯಲ್ಲಿ ಯಾವುದೇ ವಿಳಂಬವಾಗಿಲ್ಲ ಎಂದು ಸ್ಟಾಲಿನ್ ಹೇಳಿದ್ದಾರೆ. ಸಹನೆಯುತ ಚರ್ಚೆಗಳು ಎಲ್ಲರೂ ತೃಪ್ತರಾಗುವಂತೆ ಮಾಡಿವೆ ಎಂದು ಅವರು ಹೇಳಿದರು. ಜೊತೆಗೆ ಮೈತ್ರಿ ಪಕ್ಷಗಳೊಂದಿಗೆ ಏಕತೆ ಕಾಪಾಡಲು ಪ್ರಯತ್ನಿಸುತ್ತಿದ್ದೇನೆ ಎಂದೂ ತಿಳಿಸಿದ್ದಾರೆ.

ನಕ್ಸಲ್ ಪಿಡುಗು ನಿರ್ನಾಮದ ಬಗ್ಗೆ ನಾಳೆ ಲೋಕ ಚರ್ಚೆ

ಹೊಸದಿಲ್ಲಿ: ದೇಶವನ್ನು ನಕ್ಸಲ್ ಪಿಡುಗಿನಿಂದ ಮುಕ್ತಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ಪ್ರಯತ್ನಗಳ ಬಗ್ಗೆ ಲೋಕಸಭೆಯಲ್ಲಿ ಸೋಮವಾರ ಚರ್ಚೆ ನಡೆಯಲಿದೆ. ಮಾರ್ಚ್ 30ರ ಲೋಕಸಭಾ ಕಲಾಪ ಯಾದಿಯನ್ವಯ, ಸದನದ ನಿಯಮ 193ರಡಿ, ವಾಮಪಂಥೀಯ ತೀವ್ರವಾದದಿಂದ ದೇಶವನ್ನು ಮುಕ್ತಗೊಳಿಸುವ ಪ್ರಯತ್ನಗಳು ಎಂಬ ವಿಷಯವನ್ನು ಸರಕಾರ ಚರ್ಚೆಗೆ ಪಟ್ಟಿ ಮಾಡಿದೆ.

2026ರ ಮಾ.31ರೊಳಗೆ ನಕ್ಸಲ್ ಪಿಡುಗನ್ನು ದೇಶದಿಂದ ಸಂಪೂರ್ಣ ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಹಿಂದೆ ಹೇಳಿದ್ದರು. ಲೋಕಸಭೆಯ ಕಲಾಪಗಳ ನೀತಿ ನಿಯಮಾವಳಿಗಳ 193ನೇ ನಿಯಮದಕ್ಕಿ ನೀಡಲಾಗಿರುವ ನೋಟೀಸ್ ಮೇರೆಗೆ ,ನಕ್ಸಲ್ ವಿಷಯವನ್ನು ಚರ್ಚೆಗೆ ನಿಗದಿಪಡಿಸಲಾಗಿದೆ. ಟಿಡಿಪಿ ಸಂಸದ ಬೈರೆಡ್ಡಿ ಶಬರಿ ಮತ್ತು ಶಿವಸೇನಾ ಸದಸ್ಯ ಶ್ರೀಕಾಂತಂ ಶಿಂಧೆ ನೋಟೀಸ್ ನೀಡಿದ್ದರು.

ಮೋದಿ ಸರ್ಕಾರದಲ್ಲಿ ದೇಶದ ಜನತೆಗೆ ಸಂಪೂರ್ಣ ಭರವಸೆ: ಕೇಂದ್ರ ಗೃಹ ಸಚಿವ ಶಾ

ತೈಲ ಬೆಲೆ ಏರಿಕೆ ಇಲ್ಲದ ಏಕೈಕ ದೇಶ ಭಾರತ

ಹೊಸದಿಲ್ಲಿ: ಜಗತ್ತಿನಾದ್ಯಂತ ಇಂಧನ ದರ ಮಿತಿಮೀರಿ ಹೆಚ್ಚುತ್ತಿದ್ದರೂ ಭಾರತದಲ್ಲಿ ಮಾತ್ರ ಪೆಟ್ರೋಲ್, ಡೀಸೆಲ್ ದರಗಳಲ್ಲಿ ಯಾವುದೇ ಹೆಚ್ಚಳವಾಗಿಲ್ಲ. ಇದಕ್ಕೆ ಕಾರಣೀಭೂತ ನರೇಂದ್ರ ಮೋದಿ ಸರ್ಕಾರದಲ್ಲಿ ಸಂಪೂರ್ಣ ಭರವಸೆ ಕಾಯ್ದುಕೊಳ್ಳಿ ಎಂದು ದೇಶವಾಸಿಗಳಿಗೆ ಗೃಹ ಸಚಿವ ಶಾ ಕರೆ ನೀಡಿದ್ದಾರೆ. ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಅಥವಾ ಇಂಧನ ಕೊರತೆ ಇಲ್ಲ. ಜಾಗತಿಕ ಬಿಕ್ಕಟ್ಟಿನ ಹೊರತೂ ಪೂರೈಕೆ ಮತ್ತು ದರಗಳನ್ನು ಸೂಕ್ತವಾಗಿ ನಿರ್ವಹಿಸುವಲ್ಲಿ ಭಾರತ ಸರಕಾರ ಯಶಸ್ವಿಯಾಗಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಯಾವುದೇ ಲಾಕ್‌ಡೌನ್ ಇಲ್ಲ. ಇಂಧನ, ಅನಿಲ ವಹಿವಾಟುಗಳು ದೇಶದಲ್ಲಿ ಮಾಮೂಲಾಗಿರುವುದು ಮತ್ತು ಜನರಿಗೆ ಅಬಾಧಿತವಾಗಿ ಇವನ್ನು ನಾವು ಪೂರೈಸುತ್ತೇವೆ ಎಂದವರು ಟೈಮ್ಸ್ ನೌ ಸಮ್ಮಿಟ್‌ಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ. ಜನರಿಗೆ ಯಾವ ಕಾರಣಕ್ಕೂ ಕಷ್ಟವಾಗಕೂಡದು ಎಂಬುದು ಸರಕಾರ ಕಾಳಜಿ. ಹಾಗಾಗೇ ಸರಕಾರ ತೈಲ ಉತ್ಪನ್ನಗಳ ಮೇಲಿನ ಅಬ್ಕಾರಿ ಸುಂಕ ಕಡಿತಗೊಳಿಸಿ, ಹಣಕಾಸು ಹೊರೆಯನ್ನು ಸ್ವಯಂ ಹೊತ್ತುಕೊಂಡಿದೆ ಎಂದು, ಸರಕಾರ ಬಿಕ್ಕಟ್ಟನ್ನು ಸರಿಯಾಗಿ ನಿಭಾಯಿಸುತ್ತಿಲ್ಲ ಎಂಬ ಟೀಕೆಗಳಿಗೆ ಸಚಿವರು ಪ್ರತ್ಯುತ್ತರಿಸಿದರು.

ಜಗತ್ತಿನ ಇತರ ದೇಶಗಳಲ್ಲಿ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಫಿಲಿಪೈನ್ಸ್‌ನಲ್ಲಿ ರಾಷ್ಟ್ರೀಯ ತುರ್ತುಸ್ಥಿತಿ ಘೋಷಿಸಲಾಗಿದೆ. ಶ್ರೀಲಂಕಾದಲ್ಲಿ 8ಲೀಟರ್ ಮೀರಿ ಇಂಧನ ಪೂರೈಕೆ ಇಲ್ಲ. ಥೈಲ್ಯಾಂಡ್‌ನಲ್ಲಿ ವರ್ಕ್ ಫ್ರಂ ಹೋಮ್ ಜಾರಿಯಾಗಿದೆ. ವಿಯೆಟ್ನಾಂ ಮತ್ತು ಪಾಕಿಸ್ಥಾನಗಳಲ್ಲಿ ವಿಮಾನಗಳ ಹಾರಾಟ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ ಮತ್ತು ವಾರದ ದುಡಿಮೆ ದಿನಗಳನ್ನು ನಾಲ್ಕಕ್ಕೆ ಇಳಿಸಲಾಗಿದೆ.

ವಿಯೆಟ್ನಾಂನಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರಗಳಲ್ಲಿ ಶೇ.50ರಷ್ಟು ಹೆಚ್ಚಳವಾಗಿದೆ. ಪಾಕಿಸ್ಥಾನದಲ್ಲಿ 17ರಿಂದ 20ಶೇಕಡಾ ಏರಿಕೆಯಾಗಿದೆ. ಯುರೋಪ್‌ನಲ್ಲಿ 20ರಿಂದ 30ಶೇಕಡಾ ಹೆಚ್ಚಳವಾದರೆ ಇಂಗ್ಲೆಂಡ್‌ನಲ್ಲಿ 7ರಿಂದ 13ಶೇ.ಹೆಚ್ಚಳವಾಗಿದೆ. ಆಸ್ಟ್ರೇಲಿಯಾದಲ್ಲಿ ಶೇ.18ರಷ್ಟು , ಅಮೆರಿಕದಲ್ಲಿ ಶೇ.17ರಿಂದ 34ರಷ್ಟು , ಕಾಂಬೋಡಿ ಶೇ. 19 ಮತ್ತು ನೈಜೀರಿಯಾದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ದರದಲ್ಲಿ 40ರಿಂದ 48ಶೇಕಡಾ ಏರಿಕೆಯಾಗಿದೆ ಎಂದು ಸಚಿವ ಶಾ ಮಾಹಿತಿ ನೀಡಿದರು. ಪೆಟ್ರೋಲ್ , ಡೀಸೆಲ್ ದರಗಳಲ್ಲಿ ಶೂನ್ಯ ಏರಿಕೆ ಮತ್ತು ಇಂಧನ ಪೂರೈಕೆ ಅಬಾಧಿತವಾಗಿರುವ ರಾಷ್ಟ್ರವೊಂದಿದ್ದರೆ ಅದು ಭಾರತ ಮಾತ್ರ ಎಂದು ಸಚಿವರು ಗಮನ ಸೆಳೆದರು.

ಸಂಪೂರ್ಣ ಹೊರೆಹೊತ್ತ ರಾಷ್ಟ್ರ ಕೂಡ ಭಾರತ

ಬಿಕ್ಕಟ್ಟಿನ ಸಂಪೂರ್ಣ ಹೊರೆಯನ್ನು ಸ್ವಯಂ ಭರಿಸಿಕೊಂಡ ರಾಷ್ಟ್ರ ಕೂಡ ಭಾರತ ಮಾತ್ರ. ಇನ್ನ್ಯಾವ ದೇಶಗಳೂ ಈ ರೀತಿ ಪೂರ್ಣ ಹೊರೆಯನ್ನು ವಹಿಸಿಕೊಂಡಿಲ್ಲ. ಕೇಂದ್ರ ಸರಕಾರ ಕಳೆದ 11 ವರ್ಷಗಳಲ್ಲಿ ಕೈಗೊಂಡ ಕ್ರಮಗಳಿಂದಾಗಿ ಭಾರತೀಯ ಆರ್ಥಿಕತೆಯಿಂದು ಅದೆಷ್ಟು ಚೈತನ್ಯಶೀಲವಾಗಿದೆಯೆಂದರೆ, ಸರ್ಕಾರ ತನ್ನ ಅಬಕಾರಿ ಸುಂಕವನ್ನೂ ಕಡಿತಗೊಳಿಸಲು ಶಕ್ತವಾಗಿದೆ. 2014ರಲ್ಲಿ ಅಸ್ತಿತ್ವದಲ್ಲೇ ಇದ್ದಿರದ ತೈಲ ಮೀಸಲನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ ಮಾತ್ರವಲ್ಲ, ತೈಲ ಖರೀದಿಯನ್ನೂ ವೈವಿಧ್ಯಗೊಳಿಸಿದೆ. ಹಿಂದೆ ಭಾರತ 27ರಾಷ್ಟ್ರಗಳಿಗೆ ಸೀಮಿತವಾಗಿ ತೈಲ ಆಮದು ಮಾಡುತ್ತಿತ್ತು . ಇಂದು ಈ ಸಂಖ್ಯೆ 42ಕ್ಕೆ ನೆಗೆದಿದೆ ಎಂದು ಸಚಿವ ಶಾ ಹೆಮ್ಮೆ ವ್ಯಕ್ತಪಡಿಸಿದರು. ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ನಂಬಬೇಡಿ ಎಂದು ಜನರಿಗೆ ಸಚಿವರು ಸಲಹೆಯಿತ್ತರು.

ಸಚಿವ ರಾಜನಾಥ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ ಒಪ್ಪಿಗೆ

ಕ್ಷಿಪಣಿ ರಕ್ಷಣಾ ವ್ಯವಸ್ಥೆ ವಿಸ್ತರಣೆ

ಹೊಸದಿಲ್ಲಿ: ಭಾರತದ ದೂರಗಾಮಿ ವಾಯು ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ 2.38 ಲಕ್ಷ ಕೋಟಿ ರೂ.ಗಳ ಖರೀದಿ ಯೋಜನೆಗೆ ಅನುಮೋದನೆ ನೀಡಿದೆ.

ಈ ರಕ್ಷಣಾ ಉತ್ತೇಜನದ ಪ್ರಮುಖ ಭಾಗವಾಗಿ, ರಷ್ಯಾದಿಂದ ಹೆಚ್ಚುವರಿ ಐದು ಎಸ್-400 ಟ್ರಯಂಫ್ ದೂರಗಾಮಿ ಭೂಮಿಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಲಾಗುತ್ತಿದೆ. ಈ ವ್ಯವಸ್ಥೆಗಳು 400 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಶತ್ರು ವಿಮಾನಗಳು, ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಪತ್ತೆಹಚ್ಚಿ ನಾಶಪಡಿಸುವ ಸಾಮರ್ಥ್ಯ ಹೊಂದಿವೆ. 2018ರಲ್ಲಿ ನಡೆದ ಐದು ಘಟಕಗಳ ಮೊದಲ ಒಪ್ಪಂದದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಇದರೊಂದಿಗೆ ಒಟ್ಟು ಎಸ್-400 ವ್ಯವಸ್ಥೆಗಳ ಸಂಖ್ಯೆ ಹತ್ತಕ್ಕೆ ಏರಲಿದೆ.

ಗಡಿಗಳಲ್ಲಿ ಕಣ್ಗಾವಲು: ಕ್ಷಿಪಣಿ ವ್ಯವಸ್ಥೆಗಳ ಜತೆಗೆ 100 ಮಾನವರಹಿತ ಕಾಂಬ್ಯಾಟ್ ಏರಿಯಲ್ ವೆಹಿಕಲ್ಸ್ (ಯುಸಿಎವಿ) ಮತ್ತು 120 ಲೋಯಿಟರಿಂಗ್ ಮ್ಯೂನಿಷನ್‌ಗಳ ಖರೀದಿಗೆ ಮಂಡಳಿ ಅನುಮತಿ ನೀಡಿದೆ. ಚೀನಾ ಮತ್ತು ಪಾಕಿಸ್ತಾನದ ಗಡಿಗಳಲ್ಲಿ ಕಣ್ಗಾವಲು ಮತ್ತು ಆಕ್ರಮಣಕಾರಿ ಕಾರ್ಯಾಚರಣೆಗಳನ್ನು ಬಲಪಡಿಸಲು ಈ ಯುಸಿಎವಿಗಳನ್ನು ಬಳಸಿಕೊಳ್ಳುವ ಯೋಜನೆಯಿದೆ. ಅಲ್ಲದೆ, 200 ಬ್ರಹ್ಮೋಸ್ ಎಕ್ಸ್ಟೆಂಡೆಡ್ ರೇಂಜ್ ಕ್ರೂಸ್ ಕ್ಷಿಪಣಿಗಳು ಮತ್ತು 400 ಸುಧಾರಿತ ಟೋಡ್ ಆರ್ಟಿಲರಿ ಗನ್ ಸಿಸ್ಟಮ್‌ಗಳ ಸ್ಥಳೀಯ ಉತ್ಪಾದನೆಗೂ ಅನುಮೋದನೆ ನೀಡಲಾಗಿದೆ.

ಮಿಲಿಟರಿ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಉತ್ತೇಜಿಸಲು ಈ ಹೆಚ್ಚಿನ ಯೋಜನೆಗಳು ಬೈ ಇಂಡಿಯನ್-ಐಡಿಡಿಎಂ ವರ್ಗದಲ್ಲಿ ಬರುತ್ತವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ಯೋಜನೆ, ಭಾರತೀಯ ನೌಕಾಪಡೆ ಮತ್ತು ವಾಯುಪಡೆಗಾಗಿ ದೇಶೀಯ ಎಲೆಕ್ಟ್ರಾನಿಕ್ ಯುದ್ಧ ಸಾಮಗ್ರಿಗಳು ಮತ್ತು ಹೆಚ್ಚಿನ ಎತ್ತರದಲ್ಲಿ ಹಾರುವ ಕಣ್ಗಾವಲು ಡ್ರೋನ್‌ಗಳ ಅಭಿವೃದ್ಧಿಯನ್ನು ಒಳಗೊಂಡಿದೆ.

ಪ್ರಾದೇಶಿಕ ಭದ್ರತಾ ಸವಾಲುಗಳ ಹಿನ್ನೆಲೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಒಂದೇ ದಿನದಲ್ಲಿ ನೀಡಲಾದ ಅತಿದೊಡ್ಡ ರಕ್ಷಣಾ ಅನುಮೋದನೆಗಳಲ್ಲಿ ಒಂದಾಗಿದೆ. ಈ ಖರೀದಿ ಪ್ರಕ್ರಿಯೆ, ಸಶಸ್ತ್ರ ಪಡೆಗಳ ಯಂತ್ರಾಂಶಗಳನ್ನು ಆಧುನೀಕರಿಸುವ ಗುರಿ ಹೊಂದಿರುವ ಬಹು-ವರ್ಷದ ಒಪ್ಪಂದಗಳನ್ನು ಒಳಗೊಂಡಿರುತ್ತದೆ.

ಕೊಡಗು ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ನ್ಯಾಯಮೂರ್ತಿ ಇ. ಎಸ್. ಇಂದಿರೇಶ್ ಅಭಿಮತ

ಭಾರತದ ಹಿಂದಿನ ಶಿಕ್ಷಣ ಪದ್ಧತಿ ಇಂದಿನ ಅಗತ್ಯ



ಮಡಿಕೇರಿ: ಭಾರತವು ವಿಶ್ವದ ಅತ್ಯುನ್ನತ ನಾಗರಿಕತೆಗಳನ್ನು ಹೊಂದಿದ್ದು, ಪ್ರಾಚೀನ ಕಾಲದಲ್ಲಿ ಗುರುಕುಲ ಮತ್ತು ಆಶ್ರಮಗಳು ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿದ್ದವು. ತದನಂತರ ನಳಂದ ಮತ್ತು ತಕ್ಷಶಿಲಾದಂತಹ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಭಾರತೀಯ ಸಮಾಜದ ಮೌಲ್ಯಗಳನ್ನು, ಬದುಕಿನ ಪಾಠಗಳನ್ನು, ಸಂಸ್ಕಾರಯುತ ವಿದ್ಯಾಭ್ಯಾಸವನ್ನು ಉನ್ನತ ಶಿಕ್ಷಣದ ಮೂಲಕ ಬೋಧಿಸುತ್ತಿದ್ದವು. ಭಾರತದ ಇಂತಹ ಐತಿಹಾಸಿಕ ಶಿಕ್ಷಣ ಪದ್ಧತಿ ಇಂದಿನ ಮಕ್ಕಳಿಗೆ ಅತ್ಯಗತ್ಯ ಮತ್ತು ಅನಿವಾರ್ಯ ಎಂದು ಬೆಂಗಳೂರು ದಕ್ಷಿಣದ ಆಡಳಿತಾತ್ಮಕ ನ್ಯಾಯಾಧೀಶ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಇ. ಎಸ್. ಇಂದಿರೇಶ್ ಅವರು ಅಭಿಮತ ವ್ಯಕ್ತಪಡಿಸಿದರು.

ಚಿಕ್ಕ ಅಳುವಾರದಲ್ಲಿರುವ ಕೊಡಗು ವಿಶ್ವವಿದ್ಯಾಲಯದ ಜ್ಞಾನ ಕಾವೇರಿ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕೊಡಗು ವಿಶ್ವವಿದ್ಯಾಲಯದ ಮೂರನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಿಜಿಟಲ್ ಯುಗದಲ್ಲಿ ನಾವು ಎಷ್ಟೇ ಮುಂದುವರೆದಿದ್ದರೂ ನಮ್ಮ ಪೂರ್ವಜರ ಜ್ಞಾನದಿಂದ ನಾವು ತುಂಬಾ ದೂರ ಉಳಿದಿದ್ದೇವೆ ಎಂಬುದನ್ನು ಅರ್ಥೈಸಿಕೊಳ್ಳಬೇಕು. ವಿಜ್ಞಾನ, ಕಲೆ, ಸಾಹಿತ್ಯ, ಸಂಗೀತ, ರಾಜಕೀಯ ಒಳಗೊಂಡಂತೆ ಬಹುತೇಕ ಕ್ಷೇತ್ರಗಳಲ್ಲಿ ನಮ್ಮ ಪೂರ್ವಜರು ಆಳವಾದ ಜ್ಞಾನ ಹೊಂದಿದ್ದರು. ವೈದಿಕ ಶಿಕ್ಷಣವು ಕೇವಲ ಧರ್ಮಾಧಾರಿತ ಅಲ್ಲ. ಅಲ್ಲಿ ಕೌಶಲ್ಯದ ಬೆಳವಣಿಗೆ, ತತ್ವಾದರ್ಶಗಳನ್ನು, ವೈಚಾರಿಕತೆಯ ವಿಸ್ತಾರಕ್ಕೆ ಅನುವು ಮಾಡಿಕೊಟ್ಟಿದೆ ಎಂದು ಅವರು ತಿಳಿಸಿದರು.

ಉತ್ತಮ ಬದುಕಿನ ವಿಚಾರಗಳನ್ನು ನೇರವಾಗಿ ಖಾರವಾಗಿ ತಿಳಿಸಿಕೊಟ್ಟ ಚಾಣಕ್ಯ, 1848ರಲ್ಲಿ ಹೆಣ್ಣುಮಕ್ಕಳಿಗಾಗಿ ಶಾಲೆ ಪ್ರಾರಂಭಿಸಿದ ಮತ್ತು ಭಾರತದ ಹೆಣ್ಣು ಮಕ್ಕಳ ಶಿಕ್ಷಣದ ಪ್ರವರ್ತಕರಾದ ಸಾವಿತ್ರಿಬಾಯಿಫುಲೆ, ಮೌಲ್ಯಾಧಾರಿತ ಶಿಕ್ಷಣದ ಮಹತ್ವಕ್ಕೆ ಒತ್ತು ನೀಡಿದ ಸ್ವಾಮಿ ವಿವೇಕಾನಂದರು, ದೇಶದ ಮೌಲ್ಯಗಳನ್ನು ಶಿಕ್ಷಣದ ಮೂಲಕ ಮಕ್ಕಳಿಗೆ ತಲುಪಿಸಲು ಬನಾರಸ್ ವಿಶ್ವವಿದ್ಯಾಲಯ ಪ್ರಾರಂಭಿಸಿದ ಮದನ ಮೋಹನ ಮಾಳವೀಯ, ರವೀಂದ್ರನಾಥ ಟ್ಯಾಗೋರ್ ಇವರೆಲ್ಲರೂ ಉನ್ನತ ಶಿಕ್ಷಣದ ಮಹತ್ವವನ್ನು ವಿಶ್ವಕ್ಕೆ ಪರಿಚಯಿಸಿದವರು. ಇವರು ಹಾಕಿ ಕೊಟ್ಟ ಶಿಕ್ಷಣದ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದು ಅವರು ವಿವರಿಸಿದರು.

ಮುಖ್ಯ ಅತಿಥಿಯಾಗಿದ್ದ ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸುರೇಶ್ ಎಚ್. ಜಂಗಮಶೆಟ್ಟಿ ಅವರು ಮಾತನಾಡಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಉನ್ನತ ಶಿಕ್ಷಣ ಸಿಗಬೇಕೆಂಬ ಬೃಹತ್ ಆಶಯದೊಂದಿಗೆ ಜಿಲ್ಲೆಗೊಂದು ವಿಶ್ವವಿದ್ಯಾಲಯ ಆರಂಭವಾಗಿದ್ದು, ಈ ಹಾದಿಯಲ್ಲಿ ಕೊಡಗು ವಿಶ್ವವಿದ್ಯಾಲಯ ಮೂರು ವರ್ಷದಲ್ಲಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದೆ. ಅಲ್ಲದೆ ಇಂದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೊಡಗು ವಿಶ್ವವಿದ್ಯಾಲಯ ಗುರುತಿಸಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದು ಪ್ರಶಂಸಿಸಿದರು.

ಡಿಜಿಟಲ್ ಯುಗದಲ್ಲಿ ವರ್ತಮಾನಕ್ಕೆ ತಕ್ಕಂತೆ ಶಿಕ್ಷಕರು ಪ್ರತಿಕ್ಷಣವೂ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಕೃತಕ ಬುದ್ಧಿಮತ್ತೆಯ ಕಾಲದಲ್ಲಿರುವ ಇಂದಿನ ವಿದ್ಯಾರ್ಥಿಗಳು ಎಷ್ಟೇ ಮಾಹಿತಿ ಹೊಂದಿದ್ದರೂ ಕೂಡಾ ಅವರಿಗೆ ಜ್ಞಾನದ ಕೊರತೆ ನೀಗಿಸಲು ಶಿಕ್ಷಕರು ಮತ್ತು ತರಗತಿಯ ಅವಶ್ಯಕತೆ ಇದೆ ಎಂಬುದನ್ನು ಶಿಕ್ಷಕರು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಅವರು ಮಾತನಾಡಿ,ಕೊಡಗು ವಿಶ್ವವಿದ್ಯಾಲಯವು ಮೂರು ವರ್ಷಗಳ ಅವಧಿಯಲ್ಲಿ ನಡೆದು ಬಂದ ಹಾದಿಯನ್ನು ಸವಿವರವಾಗಿ ತಿಳಿಸಿದರು.

ಕೊಡಗು ಜಿಲ್ಲೆಯಲ್ಲಿ ಉನ್ನತ ಶಿಕ್ಷಣವು ಜನರ ಮನೆ ಬಾಗಿಲಿಗೆ ತಲುಪಲು, ಉನ್ನತ ಶಿಕ್ಷಣದಲ್ಲಿ ಜಿಲ್ಲೆಯ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಮತ್ತು ಕೊಡಗಿನ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗಬಾರದೆಂಬ ಮಹತ್ತರ ಆಶಯದೊಂದಿಗೆ ಕೊಡಗು ವಿಶ್ವವಿದ್ಯಾಲಯ ಕಾರ್ಯನಿರತವಾಗಿದೆ ಎಂದರು.

ಕೊಡಗು ಜಿಲ್ಲೆಯು ರಾಜ್ಯದ ಇತರ ಜಿಲ್ಲೆಗಳಿಗಿಂತ ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ವಿಭಿನ್ನವಾಗಿದ್ದು, ದೂರದ ವಿಶ್ವವಿದ್ಯಾಲಯಗಳಿಗೆ ತೆರಳಲು ಸಾಧ್ಯವಾಗದೆ, ಉನ್ನತ ಶಿಕ್ಷಣ ಸಿಗದೆ ಅವಕಾಶ ವಂಚಿತರಾದ ಇಲ್ಲಿನ ಆದಿವಾಸಿ, ಹಿಂದುಳಿದ, ಗಿರಿಜನ, ಬುಡಕಟ್ಟು ಮತ್ತು ಎಲ್ಲಾ ವರ್ಗಗಳ ಮಕ್ಕಳಿಗೆ ಉನ್ನತ ಶಿಕ್ಷಣ ತಲುಪಿಸಲು ಈ ಜಿಲ್ಲೆಗೆ ವಿಶ್ವವಿದ್ಯಾಲಯದ ಅವಶ್ಯಕತೆ ತುರ್ತಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಗೋಣಿಕೊಪ್ಪ ಕಾವೇರಿ ಕಾಲೇಜಿನ ವಿದ್ಯಾರ್ಥಿನಿ ಮನ ಕೆ. ಆರ್. ಅವರ 'ದಿ ಟೋನ್ ಆಫ್ ಸೈಲೆನ್ಸ್' ಎಂಬ ಕವನ ಸಂಕಲನವನ್ನು ಬಿಡುಗಡೆ ಮಾಡಲಾಯಿತು. ಹಾಗೂ ಈ ಸಂದರ್ಭದಲ್ಲಿ ಕೊಡಗು ವಿಶ್ವವಿದ್ಯಾಲಯದ ಘಟಕ, ಸರ್ಕಾರಿ, ವಿವಿಧ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಗೌರವ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಕೊಡಗು ವಿಶ್ವವಿದ್ಯಾಲಯದ ಘಟಕ, ಸರ್ಕಾರಿ, ವಿವಿಧ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರು, ಅಧ್ಯಾಪಕರು, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಗುಣಶ್ರೀ ಬಿ. ಎಸ್., ವಿವಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಎನ್ ಸಿಸಿ ಸಂಯೋಜಕರು ಮತ್ತು ಅಭ್ಯರ್ಥಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕೊಡಗು ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಡಾ. ಸುರೇಶ್ ಎಂ. ಸ್ವಾಗತಿಸಿದರು. ಕಾರ್ಯಕ್ರಮ ಅಧಿಕಾರಿ ಮತ್ತು ಕನ್ನಡ ವಿಭಾಗದ ಉಪನ್ಯಾಸಕ ಡಾ. ಜಮೀರ್ ಅಹಮದ್ ನಿರೂಪಿಸಿದರು. ಕೊಡಗು ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ವಿಶೇಷ ಅಧಿಕಾರಿ ಪ್ರೊ. ರವಿಶಂಕರ್ ಎಂ. ಎನ್. ವಂದಿಸಿದರು.

ಸಂಸ್ಕಾರವಿಲ್ಲದ ಶಿಕ್ಷಣ ಅರ್ಥಹೀನ

ನಮ್ಮ ಋಷಿಮುನಿಗಳು ಮಕ್ಕಳಲ್ಲಿ ಆಲೋಚನಾಪರತೆ, ಪ್ರತಿಫಲಿತ ಚಿಂತನೆಯನ್ನು ರೂಢಿಸಬೇಕೆಂದು ಬಯಸಿದ್ದರು. ಇಂದಿನ ವಿದ್ಯಾರ್ಥಿಗಳಲ್ಲಿ ಈ ಆಲೋಚನಾ ಶಕ್ತಿ ಅವರವರು ಬೆಳೆದು ಬಂದ ಪರಿಸರದಿಂದ ಪ್ರಭಾವಿತವಾಗಿರುತ್ತದೆ. ಈ ಕಾಲದ ಮಕ್ಕಳಲ್ಲಿ ಮೊಬೈಲ್ ಬಳಕೆ ಹೆಚ್ಚಾಗಿ ಆಲೋಚನಾ ಶಕ್ತಿ ಕುಂಠಿತವಾಗುತ್ತಿದೆ. ದೇಶದ ಇತಿಹಾಸ ಮತ್ತು ಭೌಗೋಳಿಕ ಜ್ಞಾನ ಅವರಲ್ಲಿ ಇಲ್ಲ. ಇದನ್ನು ಪಾಲಕರು, ಪೋಷಕರು ಮತ್ತು ಶಿಕ್ಷಕರು ಗಮನಿಸಬೇಕು. ಬುನಾದಿ ಗಟ್ಟಿ ಇದ್ದರೆ ಮಾತ್ರ ಕಟ್ಟಡ ಬಹುಕಾಲ ಬಾಳಿಕೆ ಬರುತ್ತದೆ. ಅದೇ ರೀತಿ ಮನೆಯಲ್ಲಿ ಶಿಕ್ಷಣ, ಸಂಸ್ಕಾರ ನೀಡಿದರೆ ಮಾತ್ರ ಮಕ್ಕಳ ಭವಿಷ್ಯ ಭದ್ರವಾಗುತ್ತದೆ. ಎಲ್ಲಿ ಸಂಸ್ಕಾರ ಇರುತ್ತೋ ಅಲ್ಲಿ ಸರಸ್ವತಿ ನೆಲೆಸಿರುತ್ತಾಳೆ. ಸಂಸ್ಕಾರವಿಲ್ಲದ ಶಿಕ್ಷಣ ಅರ್ಥಹೀನ. ಈ ಸಂಸ್ಕಾರ ಕಲಿಸಲು ನಮ್ಮ ಭಾರತದ ಪ್ರಾಚೀನ ಶಿಕ್ಷಣ ಪದ್ಧತಿಯು ತಳಹದಿ ಎಂಬುದನ್ನು ನಾವೆಲ್ಲರೂ ಮರೆಯಬಾರದು ಎಂದು ಅವರು ಸ್ಪಷ್ಟಪಡಿಸಿದರು.

ಖರ್ಗೆ ವಿರುದ್ಧ ಸಂಸದ ಕೋಟ ಪತ್ರ ಸಮರ

ಉಡುಪಿ: ವಿಬಿ ಜಿ ರಾಮ್ ಜಿ ಕಾಯಿದೆ ಕುರಿತು ಟೀಕಿಸಿ ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ರಾಜ್ಯದ ಎಲ್ಲ ಪಂಚಾಯತ್ ಸದಸ್ಯರಿಗೆ ಪತ್ರ ಬರೆದಿದ್ದು, ಅದಕ್ಕೆ ಪ್ರತಿಯಾಗಿ ಅದರಲ್ಲಿನ ಎಲ್ಲ ಆರೋಪಗಳಿಗೆ ಉತ್ತರವಾಗಿ ನಾನು ಕೂಡ ಗ್ರಾಪಂ



ಸದಸ್ಯರು ಹಾಗೂ ರಾಜ್ಯದ ಸಂಸದರುಗಳಿಗೆ ಪತ್ರ ಬರೆದಿದ್ದೇನೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಉಡುಪಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವರ ಪತ್ರ ಸತ್ಯಕ್ಕೆ ದೂರವಾದ ಮಾಹಿತಿಯನ್ನು ಒದಗಿಸುತ್ತಿದ್ದು, ಈ ಯೋಜನೆ ಬಗ್ಗೆ ಸುಳ್ಳು ಮತ್ತು ಅಪಪ್ರಚಾರದ ಹೇಳಿಕೆ ನೀಡಿ ಜನರನ್ನು ಮತ್ತು ಸ್ಥಳೀಯ ಆಡಳಿತದ ಜನಪ್ರತಿನಿಧಿಗಳನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಈ ಕಾಯಿದೆಯನ್ನು ಯಾವುದೇ ಚರ್ಚೆ ಮಾಡದೆ ಸರ್ವಾಧಿಕಾರದಿಂದ ಅನುಮೋದನೆ ಮಾಡಲಾಗಿದೆ ಎಂಬ ಆರೋಪ ಸುಳ್ಳು, ಈ ಕಾಯಿದೆಯನ್ನು ಚರ್ಚಿಸಿಯೇ ಬಹುಮತದಿಂದ ಅನುಷ್ಠಾನಗೊಂಡಿದೆ. ನೂತನ ಕಾಯಿದೆಯಲ್ಲಿ ಈಗ ಗ್ರಾಪಂಗಳು ಮತ್ತು ಗ್ರಾಮಸಭೆಗಳಿಗೆ ಇರುವ ಅಧಿಕಾರವನ್ನು ಕಿತ್ತುಕೊಳ್ಳದೆ ಮೊದಲಿನಂತೆ ಉಳಿಸಲಾಗಿದೆ. ಈ ಯೋಜನೆಯ ಉದ್ಯೋಗಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ವಿಬಿ ಜಿ ರಾಮ್ ಜಿ ಕಾಯಿದೆ ಬಗ್ಗೆ ವಾಸ್ತವಿಕತೆಯನ್ನು ತಿಳಿಸುವುದಕ್ಕಾಗಿ ನಾನು ಪತ್ರ ಬರೆದಿದ್ದೇನೆ ಎಂದರು.

ಶ್ರೀ ಮಹಾವಿಷ್ಣು ಶೇಷಶಯನ ಭಜನಾ ಮಂದಿರ

ನೂತನ ರಾಜಗೋಪುರದ ಲೋಕಾರ್ಪಣೆ



ಮಂಗಳೂರು: ಮಹಾಜನ ಸಭಾ ಬೆಂಗ್ರೆ ಇದರ ವತಿಯಿಂದ ತೋಟ ಬೆಂಗ್ರೆಯಲ್ಲಿ ಸುಮಾರು 150 ವರ್ಷ ಇತಿಹಾಸವಿರುವ ಶ್ರೀ ಮಹಾವಿಷ್ಣು ಶೇಷಶಯನ ಭಜನಾ ಮಂದಿರದ 57ನೇ ವರ್ಷದ ಏಕಾಹ ಭಜನಾ ಮಹೋತ್ಸವ ಪ್ರಯುಕ್ತ ನೂತನ ರಾಜಗೋಪುರದ ಲೋಕಾರ್ಪಣೆ ಕಾರ್ಯಕ್ರಮ ವಿಠಲ ದಾಸ ತಂತ್ರಿ ದೇರೆಬೈಲ್ ಅವರ ಮಾರ್ಗದರ್ಶನದಲ್ಲಿ ಗುರುವಾರ ನಡೆಯಿತು.

ಈ ವೇಳೆ ಪ್ರಾರ್ಥನೆ, ಪುಣ್ಯಾಹ ವಾಚನ, ವಾಸ್ತು ಬಲಿ, ವಾಸ್ತು ಪೂಜೆ, ಗಣಹೋಮ, ವಿಷ್ಣು ಸಹಸ್ರನಾಮ ಅರ್ಚನೆ, ರಾಜಗೋಪುರದ ಶಿಖರ ಸ್ಥಾಪನೆ, ಶಿಖರದ ಕಳಸ ಪೂಜೆ, ಪ್ರತಿಷ್ಠೆ ಪೂಜೆ ಮುಂತಾದ ಧಾರ್ಮಿಕ ಕಾರ್ಯಕ್ರಮ ನೆರವೇರಿಸಲಾಯಿತು.

ಮಹಾಜನ ಸಭಾದ ನೂತನ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಹಾಗೂ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಬೆಂಗ್ರೆಯ ಸಾಧಕರನ್ನು ಸನ್ಮಾನಿಸಲಾಯಿತು. ಮಹಾಜನ ಸಭೆಯ ನೂತನ ಲೋಗೋವನ್ನು ಬಿಡುಗಡೆ ಮಾಡಲಾಯಿತು. ನಿವೃತ್ತ ಶಿಕ್ಷಣಾಧಿಕಾರಿ ಗೀತಾ ದೇವದಾಸ್ ಕಾರ್ಯಕ್ರಮ ಉದ್ಘಾಟಿಸಿದರು. ಬೆಂಗ್ರೆ ಮಹಾಜನ ಸಭಾದ ಅಧ್ಯಕ್ಷ ಸಂಜಯ್ ಸುವರ್ಣ, ಬಂದರು ಮತ್ತು ಮೀನುಗಾರಿಕಾ ಉಪವಿಭಾಗ ಸಹಾಯಕ ಎಂಜಿನಿಯರ್ ಮನೋಹರ್, ಮೀನುಗಾರಿಕೆ ಉಪ ನಿರ್ದೇಶಕಿ ರೇವತಿ ಜೆ.ಎ., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪಯಸ್ವಿನಿ ಕೆ.ಎಂ., ಮೆಸ್ಕಾಂ ಎಇ ಗಣೇಶ್, ಹಸಿರು ಕ್ರಾಂತಿ ಸಂಚಾಲಕ ನಾಗರಾಜ್, ಪ್ರದೀಪ್ ಕರ್ಕೇರ, ಬೆಂಗ್ರೆ ಮಹಾಜನ ಸಭಾ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ತಲೆಗೆ ಕಬ್ಬಿಣದ ಬಕೆಟ್ ಬಿದ್ದು ಕಾರ್ಮಿಕ ದಾರುಣ ಸಾವು

ಉಳ್ಳಾಲ: ಹೊಸ ಬಾವಿ ಕೊರೆಯುವ ಕಾಮಗಾರಿ ನಡೆಸುತ್ತಿದ್ದ ವೇಳೆ ಕ್ರೇನ್‌ನ ಕೊಕ್ಕೆಯಿಂದ ಬೇರ್ಪಟ್ಟ ಮಣ್ಣು ತುಂಬಿದ್ದ ಕಬ್ಬಿಣದ ಬಕೆಟ್ ಮೂವತ್ತು ಅಡಿ ಎತ್ತರದಿಂದ ತಲೆಯ ಮೇಲೆ ಬಿದ್ದ ಪರಿಣಾಮ ವಲಸೆ ಕಾರ್ಮಿಕನೋರ್ವ ದಾರುಣವಾಗಿ ಮೃತಪಟ್ಟ ದುರ್ಘಟನೆ ಶುಕ್ರವಾರ ಸಂಜೆ ಕುತ್ತಾರು ಪದವಿನ ಸಲಾತ್ ನಗರ ಎಂಬಲ್ಲಿ ನಡೆದಿದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕು ಮಲ್ಲಾಪುರ ನಿವಾಸಿ ಶಿವಕುಮಾರ ಜಿ.ಕೆ. (30) ಮೃತ ವ್ಯಕ್ತಿ.

ಉಳ್ಳಾಲ ತಾಲೂಕಿನ ಕುತ್ತಾರು ಏನ ಸಲಾತ್ ನಗರದ ಖಾಲಿ ಸೈಟೊಂದರಲ್ಲಿ ಹೊಸ ಬಾವಿ ಅಗೆಯುತ್ತಿದ್ದ ವೇಳೆ ಶುಕ್ರವಾರ ಸಂಜೆ 4.30 ರ ವೇಳೆಗೆ ದುರ್ಘಟನೆ ನಡೆದಿದೆ. ಒಟ್ಟು ಆರು ಜನ ಕೂಲಿ ಕಾರ್ಮಿಕರಲ್ಲಿ, ಶಿವಕುಮಾರ್ ಸೇರಿ ಮೂವರು ಕಾರ್ಮಿಕರು ಮೂವತ್ತು ಅಡಿ ಆಳ ಕೊರೆಯಲಾದ ಬಾವಿಯೊಳಗಡೆ ಕೆಲಸ ನಿರ್ವಹಿಸುತ್ತಿದ್ದರು. ಈ ವೇಳೆ ಕ್ರೇನ್ ಮೂಲಕ ಕಬ್ಬಿಣದ ಬಕೆಟಲ್ಲಿ ಮಣ್ಣನ್ನು ಮೇಲಕ್ಕೆತ್ತುತ್ತಿದ್ದ ಸಂಧರ್ಭ ಕ್ರೇನಿನ ಕೊಕ್ಕೆಯಿಂದ ಬೇರ್ಪಟ್ಟ ಮಣ್ಣು ತುಂಬಿದ ಕಬ್ಬಿಣದ ಬಕೆಟ್ ನೇರವಾಗಿ ಕಾರ್ಮಿಕ ಶಿವ ಕುಮಾರ್ ಅವರ ತಲೆ ಮೇಲೆ ಬಿದ್ದಿದೆ. ಗಂಭೀರ ಗಾಯಗೊಂಡಿದ್ದ ಶಿವಕುಮಾರನನ್ನು ಮೇಲಕ್ಕೆತ್ತಿ ದೇರಳಕಟ್ಟೆಯ ಖಾಸಗಿ ಆಸ್ಪತ್ರೆಗೆ ಸಾಗಿಸಲಾದರೂ ದಾರಿ ಮಧ್ಯದಲ್ಲಿಯೇ ಅವರು ಮೃತಪಟ್ಟಿದ್ದಾರೆ. ಬಾವಿಯೊಳಗಿದ್ದ ಇತರ ಇಬ್ಬರು ಕಾರ್ಮಿಕರು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಶಿವಕುಮಾರ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾಣಿಸಲಾಗಿದೆ. ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.



ಮೃತ ಶಿವಕುಮಾರ್ ವಿವಾಹಿತರಾಗಿದ್ದು ತನ್ನ ಪತ್ನಿ ಮತ್ತು ಮೂರು ವರ್ಷದ ಗಂಡು ಮತ್ತು ಒಂದು ವರ್ಷದ ಹೆಣ್ಣು ಮಗಳೊಂದಿಗೆ ತೊಕ್ಕೊಟ್ಟುವಿನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಗುರುವಾರದಂದು ಪತ್ನಿ ಮತ್ತು ಮಕ್ಕಳನ್ನ ಅವರು ಊರಿಗೆ ಕಳುಹಿಸಿ ಕೊಟ್ಟಿದ್ದರಂತೆ.ಶಿವಕುಮಾರ್ ಅವರು ಎರಡು ವಾರಗಳ ಹಿಂದಷ್ಟೆ ತನ್ನ ಕಿರಿಯ ಮಗಳ ಮೊದಲನೆಯ ಹುಟ್ಟಿದ ಹಬ್ಬವನ್ನು ಸಂಭ್ರಮದಿಂದ ಆಚರಿಸಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

28-03-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	: 260 - 480	ಹಳೆ ಕರಿಗೋಟು	: 230 - 260
ಚೋಲ್ ಅಡಿಕೆ	: 520 - 550	ಹಸಿ ಕೊಕ್ಕೋ	: 70 - 100
ಡಬಲ್ ಚೋಲ್	: 525 - 550	ಒಣ ಕೊಕ್ಕೋ	: 270 - 300
ಹೊಸ ಪಟೋರ	: 340 - 390	ಕಾಳುಮೆಣಸು ಧಾರಣೆ	
ಹಳೆ ಪಟೋರ	: 375 - 405	ಕಾಳುಮೆಣಸು	: 465 - 665
ಹೊಸ ಉಳ್ಳಿ	: 115 - 285	ರಬ್ಬರ್ ಧಾರಣೆ : ಗ್ರೇಡ್	
ಹಳೆ ಉಳ್ಳಿ	: 105 - 285	ಆರ್‌ಎಸ್‌ಎಸ್ 1	- 215.50
ಹೊಸ ಕೋಕಾ	: 315 - 335	ಆರ್‌ಎಸ್‌ಎಸ್ 2	- 197.00
ಹಳೆ ಕೋಕಾ	: 315 - 335	ಸ್ಕ್ರಾಪ್ 1	- 129.00
ಹೊಸ ಕರಿಗೋಟು	: 230 - 260	ಸ್ಕ್ರಾಪ್ 2	- 110.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಮರ್ ಬಂಪರ್ (ನಂ.BR-108) ಡ್ರಾ ಮಾರ್ಚ್ 28ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.10,00,00,000/- [10 Crore]
SB 517026 (PALAKKAD)
Consolation Prize Rs.1,00,000
SA 517026 SC 517026 SD 517026 SE 517026 SG 517026
2nd Prize Rs.1,00,00,000/- [1 Crore]
SE 660573 (CHITTUR)
3rd Prize Rs.5,00,000/- [5 Lakhs]
1) SA 142382 (PATTAMBI)
2) SA 296152 (PUNALUR)
3) SB 431602 (THIRUVANANTHAPURAM)
4) SB 524318 (PALAKKAD)
5) SC 137259 (PALAKKAD)
6) SC 541650 (PATTAMBI)
7) SD 287445 (GURUVAYOOR)
8) SD 734008 (KOTTAYAM)
9) SE 558483 (MANANTHAVADY)
10) SE 586727 (ERNAKULAM)
11) SG 215482 (WAYANADU)
12) SG 780768 (KOZHIKKODE)

FOR THE TICKETS ENDING WITH THE FOLLOWING NUMBERS

4th Prize Rs.1,00,000/-
(Last five digits to be drawn once)
92638 Lottery ticket sales

5th Prize Rs.5,000/-
0176 0313 0565 0672 1671 1870 2279 2428 2819 2877
3024 3096 3558 3919 4247 4288 4363 5937 5968 6578
7240 7808 8753 8846 8848 8882 9074 9149 9344 9742

6th Prize Rs.2,000/-
0107 0266 0380 0472 1223 1330 1395 1410 1592 1806
2276 3473 3928 3931 4100 5150 5584 6315 6323 6413
6515 6599 6684 7098 7446 7481 8063 8524 8566 8641
8692 9173 9307 9311 9350 9680

7th Prize Rs.1,000/-
0201 0347 0379 0458 0513 0857 0895 1140 1184 1347
1657 1708 1772 2090 2138 2351 2453 2835 2885 2904
3039 3401 3701 3872 4186 4206 4245 4781 4815 4899
5406 5493 5571 5600 5632 5744 5919 6019 6074 6116
6217 6566 6848 6945 7025 7225 7245 7381 7510 7636
7826 8290 8434 8605 8656 8696 8788 8842 8853 8910
8987 9254 9268 9521 9542 9600 9623 9735 9756 9781
9915 9920

8th Prize Rs.500/-
0016 0088 0136 0147 0406 0467 0622 0650 1114 1180
1267 1321 1437 1485 1532 1759 1932 2029 2111 2142
2187 2344 2386 2694 2998 3032 3065 3190 3342 3411
3483 3503 3542 3703 3803 3867 3877 3886 3997 4011
4039 4316 4384 4517 4703 4750 4988 5088 5206 5217
5334 5409 5475 5479 5483 5615 5680 5732 6136 6155
6403 6458 6485 6839 6892 7711 7740 7831 8017 8234
8329 8353 8469 8662 8787 8796 8874 8880 9020 9030
9314 9520 9597 9656 9665 9777 9812 9827 9830 9898

9th Prize Rs.250/-
0021 0044 0054 0170 0212 0290 0300 0301 0361 0528
0685 0806 0984 1017 1031 1270 1317 1467 1554 1760
1764 1782 1842 1848 1937 2163 2251 2305 2574 2616
2629 2726 2747 3013 3060 3138 3260 3359 3386 3449
3497 3507 3575 3622 3623 3696 3700 3709 3721 3724
3894 4215 4274 4321 4390 4544 4550 4554 4837 4893
4928 5043 5122 5243 5404 5535 5575 5612 5665 5777
5849 5896 6006 6083 6092 6240 6407 6658 6667 6702
6820 7101 7157 7206 7212 7308 7417 7658 7705 7735
7810 7911 8038 8463 8582 8755 8838 9317 9363 9463
9509 9533 9564 9616 9630 9688 9840 9870

ಸಚಿವ ಸತೀಶ್ ಜಾರಕಿಹೊಳಿ ಭೇಟಿ

ಪೂನಡ್ಕ ಸೇತುವೆ ನಿರ್ಮಾಣಕ್ಕೆ ನಿರ್ಧಾರ



ವಿಟ್ಲ: ಜನರಿಗೆ ಅನುಕೂಲ ಆಗುವ ಸೇತುವೆಯಾದರೆ ಮಾಡುವ ಪ್ರಯತ್ನ ಮಾಡಲಾಗುವುದು. ಪೂನಡ್ಕ ಸೇತುವೆ ಸುಮಾರು 50 ವರ್ಷದ ಹಿಂದಿನ ಬೇಡಿಕೆಯೆಂದು ತಿಳಿದು, ಖುದ್ದು ಸ್ಥಳ ಪರಿಶೀಲನೆಗೆ ಆಗಮಿಸಿದ್ದೇನೆ. ಕಾಲು ಸಂಕ ಹಾಗೂ ಸೇತುವೆಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಪೂನಡ್ಕ ಸೇತುವೆ ಬಗ್ಗೆ ಸಾಧಕ ಭಾದಕ ನೋಡಿ ಬಳಿಕ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು. ಸೇತುವೆಯ ಸಂಪೂರ್ಣ ಖರ್ಚು ಕರ್ನಾಟಕವೇ ಭರಿಸಲಿದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಮಾಣಿಲ ಗ್ರಾಮದ ಕಾಮಜಾಲು ಪೂನಡ್ಕ ಮೂಲಕ ಕೇರಳ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಾಣ ಸ್ಥಳ ವೀಕ್ಷಣೆ ಮಾಡಿ ಮಾತನಾಡಿದರು.

20 ವರ್ಷಗಳಿಂದ ಸೇತುವೆಗಳ ಕಾಮಗಾರಿಗೆ ಆದ್ಯತೆಯನ್ನು ನೀಡಲಾಗಿಲ್ಲ. ಕೇರಳ ಸಂಪರ್ಕ ಕಲ್ಪಿಸುವ ಎರಡು ಮೂರು ಸೇತುವೆ ಮಾಡುವ ಪ್ರಸ್ತಾವನೆಯಿದೆ. ಸುಳ್ಯ ಭಾಗ ಸೇರಿ ಬೇರೆ ಭಾಗದಲ್ಲಿ ಬೇಡಿಕೆಯಿದೆ. ಸಂಪರ್ಕ ಸನಿಹ ಆಗುವ ಸ್ಥಳಗಳಲ್ಲಿ ಅಭಿವೃದ್ಧಿ ನಡೆಸಲಾಗುವುದು. ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳ ಅಭಿವೃದ್ಧಿ ಕಾರ್ಯ ಮುಂದಿನ ದಿನ ನಡೆಯಲಿದೆ. ಜಿಲ್ಲೆಯಾದ್ಯಂತ ಕೆಲವು ಸೇತುವೆ ಹೊಸದಾಗಿ ಮಾಡಿದರೆ, ಅಗಲೀಕರಣ ಸೇರಿ ಕೆಲವನ್ನು ದುರಸ್ಥಿ ಮಾಡಲಾಗುತ್ತಿದೆ. ಎಸ್.ಎಚ್.ಡಿ.ಪಿ. ಕಾಮಗಾರಿಗಳಿ ಸದ್ಯ ಉತ್ತಮವಾಗಿ ನಡೆಯುತ್ತಿದ್ದು, ಹಿಂದಿನ ಅವಧಿಯ ವಿಚಾರ ತಿಳಿದಿಲ್ಲ. ಪುತ್ತೂರು ಶಾಸಕರು ನೀಡಿದ ಬಹಳಷ್ಟು ಯೋಜನೆಯನ್ನು ನೀಡಲಾಗಿದೆ. ಮಳೆಗೆ ಕಾಮಗಾರಿ ಹಾನಿಯಾಗಬಾರದೆಂಬ ನಿಟ್ಟಿನಲ್ಲಿ ಇಲಾಖೆಯ ಕಾಮಗಾರಿಗಳನ್ನು ಅಕ್ಟೋಬರ್ ಬಳಿಕವೇ ನಡೆಸಲಾಗುತ್ತಿದ್ದು, ಗುತ್ತಿಗೆಯನ್ನು ಏಪ್ರಿಲ್‌ನಲ್ಲಿ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಶಾಸಕ ಅಶೋಕ್ ಕುಮಾರ್ ರೈ, ವಿಟ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪದ್ಮನಾಭ ಪೂಜಾರಿ ಸಣ್ಣಗುತ್ತು, ಕುಕ್ಕಾಜೆ ಶ್ರೀಕೃಷ್ಣ ಗುರೂಜಿ, ಪ್ರಮುಖರಾದ ಎಂ.ಎಸ್. ಮಹಮ್ಮದ್, ಗೋಪಾಲಕೃಷ್ಣ ನಾಯಕ್ ಮುಕ್ವೆ, ಶ್ರೀಧರ್ ಬಾಳೆಕಲ್ಲು, ವಿಷ್ಣು ಕುಮಾರ್ ಕೊಮ್ಮುಂಜೆ, ಜಯರಾಮ್ ಬಲ್ಲಾಳ್, ಕೃಷ್ಣ ಪೂಜಾರಿ, ಗಣೇಶ್ ಭಟ್ ದೇಲಂತಮಜಲು, ವಿಷ್ಣು ಕನ್ನಡಗುಳಿ, ರಾಮಕೃಷ್ಣ ಅಡ್ಯಂತಾಯ, ಕರೀಂ ಕುದ್ದುಪದವು ಮತ್ತಿತರರು ಜತೆಗಿದ್ದರು.

ಕಿರುಸುದ್ದಿ

ವೆಕೇಶನ್ ಫಾಸ್ಟರ್ ಕೇರ್ 2026: ಅರ್ಜಿಗಳನ್ನು ಮಾ.31ರ ವರೆಗೆ ಸಲ್ಲಿಸಲು ಅವಕಾಶ

ಕಾಸರಗೋಡು: ಜಿಲ್ಲೆಯ ಅನುಮೋದಿತ ಮಕ್ಕಳ ಆರೈಕೆ ಸಂಸ್ಥೆಗಳಲ್ಲಿ ವಾಸಿಸುವ ಮಕ್ಕಳನ್ನು ಬೇಸಿಗೆ ರಜೆಯಲ್ಲಿ ಮನೆಗಳಿಗೆ ಕರೆತರಲು ಆಸಕ್ತಿ ಹೊಂದಿರುವ ಪೋಷಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಕ್ಕಳ ಆರೈಕೆ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ರಜೆಯ ಅವಧಿಯಲ್ಲಿ ಕುಟುಂಬದ ಗಮನ, ರಕ್ಷಣೆ ಮತ್ತು ಪ್ರೀತಿಯ ಆರೈಕೆಯನ್ನು ಒದಗಿಸುವುದು, ಅವರು ಸುರಕ್ಷಿತವಾಗಿ ಬೆಳೆಯುವ ವಾತಾವರಣವನ್ನು ಸೃಷ್ಟಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ ಶಿಶುಪಾಲನಾ ಸಂಸ್ಥೆಗಳಲ್ಲಿ ವಾಸಿಸುವ ಆರು ವರ್ಷಕ್ಕಿಂತ ಮೇಲ್ಪಟ್ಟ ಬಾಲಕ ಮತ್ತು ಬಾಲಕಿಯರನ್ನು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಶಾಲಾ ರಜಾದಿನಗಳಲ್ಲಿ ಸೂಕ್ತ ಪೋಷಕರ ಮನೆಗಳಲ್ಲಿ ಪಾಲನೆ ಮಾಡಲು ವ್ಯವಸ್ಥೆ ಮಾಡಿಕೊಡಲಾಗುತ್ತದೆ. ಮಕ್ಕಳನ್ನು ನೋಡಿಕೊಳ್ಳಲು ಸಮರ್ಥ ಮತ್ತು ಇಚ್ಛಾಶಕ್ತಿಯುಳ್ಳ 35 ವರ್ಷಕ್ಕಿಂತ ಮೇಲ್ಪಟ್ಟ ದಂಪತಿ ಅರ್ಜಿ ಸಲ್ಲಿಸಬಹುದು. ರಜಾ ಪಾಲನಾ ಆರೈಕೆ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ದಂಪತಿಗಳನ್ನು ದೀರ್ಘಾವಧಿಯ ಪಾಲನಾ ಆರೈಕೆಗೆ ಪರಿಗಣಿಸಲಾಗುತ್ತದೆ. ಆಸಕ್ತರು ತಮ್ಮ ಅರ್ಜಿಗಳನ್ನು ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿಗೆ ಸಲ್ಲಿಸಬೇಕು. ಕೊನೆಯ ದಿನಾಂಕ ಮಾ.31 ಆಗಿದ್ದು, ಹೆಚ್ಚಿನ ಮಾಹಿತಿಗೆ ದೂರವಾಣಿ: 04994 256990 ಕರೆ ಮಾಡಬಹುದು.

ಕೊಡೇರಿ ಶ್ರೀರಾಮ ಭಜನಾಮಂದಿರ ಶ್ರೀರಾಮ ತೊಟ್ಟಿಲೋತ್ಸವ

ನಾಗೂರು: ಕೊಡೇರಿ ಹಕ್ರೆಮಠ ಶ್ರೀರಾಮ ಭಜನಾ ಮಂದರಿದಲ್ಲಿ ರಾಮ ನವಮಿಯ ಅಂಗವಾಗಿ ವರ್ಷಂಪ್ರತಿ ನಡೆಯುವ ಶ್ರೀರಾಮ ತೊಟ್ಟಿಲೋತ್ಸವವು ಶುಕ್ರವಾರ ಮಂದಿರದಲ್ಲಿ ಅದ್ದೂರಿಯಾಗಿ ನಡೆಯಿತು.

ಬೆಳಗ್ಗೆ ಉದಯಕಾಲದ ಪೂಜೆಯೊಂದಿಗೆ ಏಕಹ ಭಜನೆ ಆರಂಭಗೊಂಡು, ತೊಟ್ಟಿಲೋತ್ಸವದ ಪ್ರಯುಕ್ತ ಬಾಲರಾಮನ ಮೂರ್ತಿಯನ್ನು ಶಾಸ್ತ್ರೋಕ್ತವಾಗಿ ತೊಟ್ಟಿಲೊಳಗೆ ಇಟ್ಟು ಮಾತೆಯರ ಒಡಗೂಡಿ ತೊಟ್ಟಿಲು ತೂಗುವ ಶಾಸ್ತ್ರ ನಡೆಯಿತು. ಅನಂತರ ತುಲಾಭಾರ ಸೇವೆ, ಅನ್ನಸಂತರ್ಪಣೆ ಜರಗಿತು. ಸಂಜೆ ದೇವರ ಪುರಮೆರವಣಿಗೆ ಕಿರಿಮಂಜೇಶ್ವರ ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ವರೆಗೂ ಸಾಗಿ ಮಂದಿರಕ್ಕೆ ವಾಪಸ್ ಆಗಿದೆ. ಊರ, ಪರವೂರ ಭಕ್ತರು ಅಪರ ಸಂಖ್ಯೆಯಲ್ಲಿ ಸೇರಿದ್ದರು.

ಕೊಡಂಗೆ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ನವಮಿ

ಶಿರ್ವ: ಪರ್ಕಳ ರಾಮನಗರ ಕೊಡಂಗೆ ಶ್ರೀರಾಮ ಮಂದಿರದಲ್ಲಿ ಮೂರು ದಿನಗಳ ಪರ್ಯಂತ ಶ್ರೀರಾಮ ನವಮಿ ಉತ್ಸವ ನಡೆಯಿತು. ಮಂದಿರದಲ್ಲಿ ಗಣಹೋಮ, ಶ್ರೀಸತ್ಯನಾರಾಯಣ ಪೂಜೆ, ಶ್ರೀರಾಮ ರಕ್ಷಾಸ್ತೋತ್ರ ಮತ್ತು ಹನುಮಾನ್ ಚಾಲೀಸಾ ಪಠಣ ನಡೆಯಿತು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ನಳಿನಾಕ್ಷಿ ಮತ್ತು ಮಕ್ಕಳು, ಬೀರುಕೋಡಿ, ಸುರಿಬೈಲು, ಬೋಳಂತೂರು ಮಂಚಿ, ಬಂಟ್ವಾಳ (ತಾ).
2. ನಾಗಶ್ರೀ ಮಿತ್ರ ವೃಂದ ಚಾರಿಟೇಬಲ್ ಟ್ರಸ್ಟ್ (ರಿ). ಕಮ್ಮಾಜೆ, ತೆಂಕಬೆಳ್ಳೂರು, ಬಂಟ್ವಾಳ (ತಾ).
3. ಊರ ಹತ್ತು ಸಮಸ್ತರು, ಕುಡುಂಬೂರು, ಬೈಕಂಪಾಡಿ.
4. ವಿಶ್ವ ಹಿಂದೂ ಪರಿಷತ್, ಭಜರಂಗದಳ, ಜೈ ಹನುಮಾನ್ ಶಾಖೆ, ಅಜಿಲಮೊಗರು, ಸರಪಾಡಿ, ಬಂಟ್ವಾಳ (ತಾ).
5. ಸುಬ್ರಹ್ಮಣ್ಯ ಭಟ್ ಕೆ.ಎಸ್., ಅಗ್ರಹಾರ, 'ಶಂಕರ ನಿಲಯ', ಸುಬ್ರಹ್ಮಣ್ಯ, ಸುಳ್ಯ (ತಾ).
6. ಗೀತಾ ಶ್ರೀಧರ ಶೆಟ್ಟಿ, ಮೇಗಿನ ಬೈಲು, ಇರಾ, ಬಂಟ್ವಾಳ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ನವಶಕ್ತಿ ಯುವಕ ಸಂಘ ಮತ್ತು ಹತ್ತು ಸಮಸ್ತರು, ಮೂಡುಪೆರಾರ ಚರ್ಚ್ ಬಳಿ, ವಯಾ ಗಂಜಿಮಠ

ಶ್ರೀ ಧರ್ಮಸ್ಥಳ ಮೇಳ
ಎಡನೀರಿನಲ್ಲಿ
ಶ್ರೀಮದ್ ಎಡನೀರು ಮಠ, ಕಾಸರಗೋಡು ಮತ್ತು ಶ್ರೀ ಮಠದ ಶಿಷ್ಯವೃಂದ

ಶ್ರೀ ಸಾಲಿಗ್ರಾಮ ಮೇಳ
ಮಾ: 30: ಸೊಪ್ಪಿನಮಲ್ಲಿಯಲ್ಲಿ
-ಸಂಪೂರ್ಣ ನಾಗಶ್ರೀ

ಶ್ರೀ ಪೆರ್ಡೂರು ಮೇಳ
ಬುರ್ಜು ಮುತ್ತಿನಕೊಪ್ಪದಲ್ಲಿ-**ಚದುರಂಗ**

ಶ್ರೀ ಹನುಮಗಿರಿ ಮೇಳ
ಕಳವಾರು ಬೆಂಕಿನಾಥೇಶ್ವರ ದೇವಸ್ಥಾನದಲ್ಲಿ

ಶ್ರೀ ಪಾವಂಜೆ ಮೇಳ
ವಾಮಂಜೂರಿನಲ್ಲಿ- **ಶ್ರೀ ದೇವಿ ಮಹಾತ್ಮೆ**



ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಪದವಿನಂಗಡಿ ಪೇರ್ಲಗುರಿ ಶ್ರೀ ಪ್ರಸನ್ನ ಗಣಪತಿ ಶಾಖೆಯಲ್ಲಿ ಶುಕ್ರವಾರ ಶ್ರೀರಾಮನವಮಿ ಆಚರಿಸಲಾಯಿತು. ಭಜನೆ, ರಾಮರಕ್ಷಾ ಸ್ತೋತ್ರ ಪಠಣದ ಬಳಿಕ ಯೋಗಬಂಧು ಶ್ರೀವಿದ್ಯಾ ಭಟ್ ಬೌದ್ಧಿಕ್ ನೀಡಿದರು. ಯೋಗ ಶಿಕ್ಷಕ ಜೀವನ್ ಪ್ರಸಾದ್ ಬೊಲ್ಪುಗುಡ್ಡೆ, ಸಂಚಾಲಕಿ ಲೋಲಾಕ್ಷಿ ಮೊದಲಾದವರಿದ್ದರು.

ಎ.2: ಕುಂದಾಪುರದಲ್ಲಿ ಉದ್ಯೋಗ ಮೇಳ

ಕುಂದಾಪುರ: ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಉಡುಪಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಕುಂದಾಪುರ ಇವರ ಆಶ್ರಯದಲ್ಲಿ ಭಂಡಾರ್‌ಕಾರ್ಸ್ ಕಾಲೇಜು ಕುಂದಾಪುರ ಸಹಯೋಗದೊಂದಿಗೆ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ– 2026 ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಎ.2ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ನಡೆಯಲಿದೆ ಎಂದು ಉಡುಪಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ವಿಜಯ ಕುಮಾರ್ ಹೇಳಿದರು.



ಕುಂದಾಪುರ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಕೌಶಲ್ಯಯುತ ಯುವ ಜನರಿಗೆ ಉದ್ಯೋಗ ಕಲ್ಪಿಸಿ ಅವರ ಜೀವನ ಮಟ್ಟವನ್ನು ಸುಧಾರಿಸಿ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಆಯೋಜಿಸಲಾಗಿರುವ ಈ ಉದ್ಯೋಗ ಮೇಳದಲ್ಲಿ ಸುಮಾರು 70ಕ್ಕೂ ಮಿಕ್ಕಿ ಕಂಪನಿಗಳು ಭಾಗವಹಿಸಲಿದೆ. ಎಸೆಸ್ಸೆಲ್ಸಿ ಕೆಳಗಿನ ಮತ್ತು ಎಸೆಸ್ಸೆಲ್ಸಿಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ 18 ವರ್ಷ ಮೇಲ್ಪಟ್ಟ ಪುರುಷ, ಮಹಿಳಾ, ತೃತೀಯ ಲಿಂಗಿಗಳು, ವಿಶೇಷ ವರ್ಗದವರು ಹಾಗೂ ವಿಶೇಷಚೇತನ ಅಭ್ಯರ್ಥಿಗಳು ಹಾಜರಾಗ ಬಹುದಾಗಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸುವ ಉದ್ಯೋಗಾಕಾಂಕ್ಷಿಗಳಿಗೆ ಮಾಹಿತಿ ನೀಡಲು ಒಂದು ತಂಡವನ್ನು ರಚಿಸಲಾಗಿದೆ. ಈಗಾಗಲೇ ಹಲವರು ನೊಂದಣಿ ಮಾಡಿಸಿಕೊಂಡಿದ್ದು, ಸ್ಥಳದಲ್ಲೇ ನೊಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಗಳು ಣಜಣಾಡಿ.ಟಿಛಿ.ಟಿ ವೆಬ್ ಸೈಟ್ ಭೇಟಿ ನೀಡಿ ಉದ್ಯೋಗ ಮೇಳ –2026 ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ ಅಥವಾ ಕ್ಯೂಆರ್ ಕೋಡ್ ಬಳಸಿಕೊಂಡು ನೊಂದಣಿ ಮಾಡಿಸಿಕೊಳ್ಳಬಹುದು ಎಂದು ಅವರು ತಿಳಿಸಿದರು. ಕುಂದಾಪುರ ತಾಪಂ. ಇಒ ಮಹೇಶ ಕೆ.ಜಿ., ಚಿತ್ತಾರ ತಾಲೂಕು ಸಂಜೀವಿನಿ ಒಕ್ಕೂಟದ ಮೈತ್ರಿ ವರ್ಣ, ಭಂಡಾರ್ ಕಾರ್ಸ್ ಕಾಲೇಜಿನ ಜ್ಯೋತಿ ಸಾಲಿಗ್ರಾಮ ಉಪಸ್ಥಿತರಿದ್ದರು.

ಗಮನಸೆಳೆದಿದ್ದಾರೆ ಕೋಟತಟ್ಟು ಪಡುಕರೆ ಭಗವತ್ ಭಜನಾ ಮಂದಿರದ ಶ್ರೀರಾಮನ ಭಜಕರು

ಪ್ರತಿದಿನ ಮನೆಮನೆಗೆ ಭಜನಾ ಸಂಕೀರ್ತನೆ

ಕೋಟ: ಇಲ್ಲಿನ ಕೋಟತಟ್ಟು ಪಡುಕರೆ ಭಗವತ್ ಭಜನಾ ಮಂದಿರದ ಶ್ರೀ ರಾಮ ಭಜಕರು ಮನೆ ಮನೆಗೆ ತೆರಳಿ ಭಜನಾ ಸಂಕೀರ್ತನೆ ಸಾರುತ್ತಿದ್ದಾರೆ. ಐತಿಹಾಸಿಕ ಧಾರ್ಮಿಕ ಪರಂಪರೆಯಿಂದ ಬಂದ ಭಜನೆ ದೇಗುಲ, ಮಂದಿರಗಳಿಗೆ ಸಿಮೀತಗೊಳ್ಳದೆ ನಗರ ಭಜನೆ ಎಂಬ ನಾಮ ಧ್ಯೇಯದೊಂದಿಗೆ ಪ್ರತಿದಿನ ಸಂಜೆ ಶ್ರೀರಾಮ ದೇಗುಲ ಅಥವಾ ಮಂದಿರದ ಮೂಲಕ ಮನೆ ಮನೆಗಳಿಗೆ ತೆರಳಿ ಭಜನಾ ಸಂಕೀರ್ತನೆ ಮೊಳಗಿಸುತ್ತಿದ್ದಾರೆ.

ನಗರ ಭಜನೆ ಎಂಬ ವೈಶಿಷ್ಟ್ಯಗಳು

ಕರಾವಳಿ ಕಡಲ ತಟದಲ್ಲಿ ಭಜನಾ ಮಂದಿರದ ಮೂಲಕ ರಾಮ ನವಮಿಯ ಪೂರ್ವ ತಯಾರಿಯಾಗಿ ನಗರ ಭಜನೆಯೊಂದಿಗೆ 46ನೇ ವರ್ಷದ ಅಖಂಡ ಭಜನ ಮಂಗಲೋತ್ಸವ ಅಹೋರಾತ್ರಿ ಸಂಪನ್ನಗೊಳ್ಳುತ್ತದೆ. ಆದರೆ ಈ ನಗರ ಭಜನೆಯ ವಿಶೇಷತೆ ಏನೆಂದರೆ ಪ್ರತಿ ದಿನ ಸಂಜೆ ಶ್ರೀರಾಮನ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಇರಿಸಿ ಪ್ರತಿದಿನ ಹತ್ತಾರು ಮನೆಗಳಿಗೆ ತೆರಳಿ ತುಳಸಿ ಕಟ್ಟೆ ಅಥವಾ ಅಂಗಳದಲ್ಲಿ ಇರಿಸಿ ಪೂಜೆ ಸಲ್ಲಿಸಿ ಕುಣಿತ ಭಜನೆಯ ಮೂಲಕ ಶ್ರೀರಾಮನನ್ನು ಒಲಿಸಿಕೊಳ್ಳಲು ಮುಂದಾ ಗುತ್ತಾರೆ, ಅದರಲ್ಲಿ ವಿಶೇಷವಾಗಿ ಆರಾಧಿಸುವ ಮನೆಯವರು ಸ್ವಾಗತಿಸಿ ಆ ಭಜಕರಿಗೆ ಆತಿಥ್ಯಗೈದು ಅವರಿಗೆ ಬೇಕಾದ ಫಲಹಾರ, ಪಾನೀಯ ವ್ಯವಸ್ಥೆ ಗೈದು ಗೌರವಯುತವಾಗಿ ನಡೆಸಿಕೊಳ್ಳುವ ರೀತಿ ಬಲು ಅಪರೂಪದಲ್ಲಿ ಅಪರೂಪವಾಗಿದೆ, ಅದೇ ರೀತಿ ಸುತ್ತಮುತ್ತಲಿನ ಮನೆಯ ಭಜನಾಸಕ್ತರು ಕಣ್ತುಂಬಿಕೊಳ್ಳುತ್ತಾರೆ.





> ಭಜನೆ ಕರಾವಳಿ ಕಡಲ ಮಕ್ಕಳಾದ ಮೊಗವೀರ, ಬಿಲ್ಲವ ಸೇರಿದಂತೆ ಅನೇಕ ಸಮುದಾಯಗಳ ಜೀವನಾಡಿಯಾಗಿ ಪ್ರತಿ ಮನೆಗಳಲ್ಲಿ ಆರಾಧನಾ ಕೇಂದ್ರವಾಗಿ ಮೂಡಿದೆ. ಹಿಂದಿನ ಕಾಲದಲ್ಲಿ ಊಟಕ್ಕೆ ಹಾಹಾಕಾರ ಪಡುವ ದಿನಗಳಲ್ಲಿ ಭಜನಾ ಸಂಸ್ಕೃತಿ ಹೆಚ್ಚಿನ ಮಹತ್ವ ಪಡೆದುಕೊಂಡಿ ತು. ಆದೇ ರೀತಿ ನಗರ ಭಜನೆ ಕೂಡಾ ತನ್ನದೆ ಆದ ವಿಶೇಷತೆ ಪಡೆದಿದ್ದು ಕುಳಿತು, ಕುಣಿದು ಹೇಳುವ ಭಜನೆ ಹಿಂದೂ ಧರ್ಮದಲ್ಲಿ ಪ್ರಮುಖ ಪಾತ್ರ ವಹಿಸಿದೆ.
> ■ ಆನಂದ್ ಸಿ. ಕುಂದರ್, ಅಧ್ಯಕ್ಷರು, ಕರಾವಳಿ ಭಜನಾ ಮಂದಿರಗಳ ಅಭಿವೃದ್ಧಿ ಹರಿಕಾರರು

> ಈ ನಗರ ಭಜನೆ ತನ್ನದೆ ಆದ ಧಾರ್ಮಿಕ ಹಿನ್ನೆಲೆ ಹಾಗೂ ಹಿಂದೂ ಸಂಸ್ಕೃತಿಯ ಪುನರುತ್ಥಾನ ಸಾಧನವಾಗಿ ಮಾರ್ಪಾಡುಗೊಂಡಿದೆ, ಇದೊಂದು ಕರಾವಳಿ ಭಾಗದ ಜನರ ಜೀವನಾಡಿಯಾಗಿ ಭಜನಾ ಮಂದಿರಗಳ ಮೂಲಕ ಯುವ ಮನಸ್ಸುಗಳಿಗೆ ಸ್ಪೂರ್ತಿದಾಯಕವಾಗಿದೆ. ಅದರಲ್ಲೂ ಕುಣಿತ ಭಜನೆಯ ವೈಶಿಷ್ಟ್ಯವನ್ನು ವಿಶ್ಲೇಷಿಸಲು ಪದಗಳೇ ಸಾಲದು. ಅಂತಹ ಭಜನೆ ಈ ಭಗವತ್ ಭಜಕರು ಮನೆ ಮನಗಳಲ್ಲಿ ಭಕ್ತಿಸಂಕೀರ್ತನೆಯನ್ನು ಪಸರಿಸಿದ್ದಾರೆ. ಅವರಿಗೆ ವಿಶೇಷವಾಗಿ ಮನೆ ಮನೆಗಳಲ್ಲಿ ಬೇಕಾದ ಪಾನೀಯ ಫಲಹಾರದ ವ್ಯವಸ್ಥೆಯನ್ನು ನೀಡಿ ಗೌರವಪೂರ್ಣವಾಗಿ ನೋಡಿಕೊಳ್ಳುತ್ತಿದ್ದೇವೆ
> ■ ರವೀಂದ್ರ ಐತಾಳ್ ಪಾರಂಪಳ್ಳಿ

> ನಮ್ಮ ಭಗವತ್ ಭಜನಾ ಮಂಡಲದಲ್ಲಿ ಸುಮಾರು 46 ವರ್ಷಗಳಿಂದ ಭಜನೆಯನ್ನುಗೈದು, ನಗರ ಭಜನೆ ಮೂಲಕ ವಿಶೇಷವಾಗಿ ಆರಾಧಿಸಿ ಆಯೋಜಿಸಿಕೊಂಡು ಬರುತ್ತಿದ್ದೇವೆ. ನಮ್ಮ ಭಜನಾ ಮಂದಿರ ವ್ಯಾಪ್ತಿಯ ಸುಮಾರು 600 ಮನೆಗಳಿಗೆ ದೇವರನ್ನು ಹೊತ್ತು ಕೊಂಡು ಹೋಗಿ ಭಜನೆ ಮಾಡುತ್ತಿದ್ದೇವೆ. ನಗರ ಭಜನೆ ಪ್ರಾರಂಭವಾದಾಗಿನಿಂದ ಯಾವುದೇ ಸಾಂಕ್ರಾಮಿಕ ರೋಗಗಳು ಇನ್ನಿಲ್ಲದಂತಾಗಿದೆ. ಮನೆ ಮನೆಗೆ ದೇವರನ್ನು ಹೊತ್ತು ಕೊಂಡು ಹೋಗಿ ಭಜನೆ ಮಾಡುವುದರಿಂದ ಜನರಲ್ಲಿ ಭಕ್ತಿ ಭಾವ ದ್ವಿಗುಣ ಗೊಂಡಿದೆ.ಪ್ರಸ್ತುತ ಯುವ ಮನಸ್ಸುಗಳಿಗೆ ಹೊಸ ಆಯಾಮ ನೀಡಿದೆ
> ■ ರಾಮ ಬಂಗೇರ ಪಡುಕರೆ, ಭಗವತ್ ಭಜನಾ ಗುರುಗಳು.

ಕರಾವಳಿಯ ಜೀವಾಳ ಭಜನೆ

ಭಜನೆ ಎಂಬುದು ಹಿಂದೂ ಧರ್ಮದಲ್ಲಿ ತನ್ನದೆ ಆದ ಧಾರ್ಮಿಕ ಹಿನ್ನಲ್ಲೆಯನ್ನು ಪಡೆದಿದೆ. ಆದರಲ್ಲೂ ಕರಾವಳಿ ಭಾಗದಲ್ಲಿ ಭಜನೆಯನ್ನು ಉಸಿರಾಗಿಸಿಕೊಂಡು ಮನೆಮನದಲ್ಲಿ ದೇವನಾಮ ಸ್ಮರಣೆಯೊಂದಿಗೆಭಗವಂತನನ್ನು ಬಲುಹತ್ತಿರದಿಂದ ಒಲಿಸಿಕೊಳ್ಳುವ ಸಾಧನವಾಗಿದೆ. ಕರಾವಳಿ ಭಾಗದಲ್ಲಿ ಶ್ರೀರಾಮ ಮಂದಿರದ ಮೂಲಕ ಚಿಕ್ಕ ಬಾಲಕರಿಂದ ಹಿಡಿದು ಹಿರಿತನದವರೆಗೆ ಭಜನೆ ಜೀವಾಳವಾಗಿರಿಸಿಕೊಂಡು ಧಾರ್ಮಿಕ ಜಗತ್ತಿಗೆ ಹೊಸ ಆಯಾಮ ನೀಡಿದ್ದಾರೆ. ತಾಳದ ನಾದ ಮೇಳೈಸಿಕೊಂಡು ದಾಸ ಸಾಹಿತ್ಯಕ್ಕೆ ಜೀವ ತುಂಬುವ ಈ ಭಜಕರು ಭಜನೆಯನ್ನು ಉಳಿಸಿ ಬೆಳೆಸಲು ಬಹುಮುಖ್ಯದ ಪಾತ್ರ ವಹಿಸಿದ್ದಾರೆ.

ನಗರ ಭಜನೆ ಉದ್ದೇಶ ದೀಪ ಸ್ಥಾಪನೆ ಮಾಡಿ ಆ ದೀಪವನ್ನು ದೇವರ ರೂಪದಲ್ಲಿ ಮನೆ ಮನೆ ಕೊಂಡೊಯ್ದು ಅಲ್ಲಿ ದೀಪ ಪ್ರಜ್ವಲಿಸಿ ಸಂರ್ಕೀನೆಗೈದು ಆ ದೀಪವನ್ನು ಮನೆಯ ದೇವರ ಕೋಣೆಯಲ್ಲಿರಿಸುವ ನಗರ ಭಜನೆ ಧನ್ಯಾನಕ ಶಕ್ತಿ ತುಂಬುವ ಕಾಯಕವಾಗಿದೆ,

ನಲವತ್ತರಿಂದ ಐವತ್ತು ಮನೆ ಇಳಿ ಸಂಜೆ ಹೊತ್ತಿಗೆ ಹೊರಟು ರಾತ್ರಿ 12 ಗಂಟೆ ವರೆಗೆ ವರ್ಷದಲ್ಲಿ 800ಕ್ಕೂ ಅಧಿಕ ಮನೆಗಳಲ್ಲಿ ಈ ಸಂಕೀರ್ತನೆ ಜಾಗೃತಗೊಳ್ಳುತ್ತದೆ ಇದು ಕರಾವಳಿ ಭಾಗದಲ್ಲಿ ತನ್ನದೆ ಆದ ವಿಶೇಷತೆಯನ್ನು ಪಡೆದುಕೊಂಡಿದೆ.

'ಪದ್ಮನಾಭ ಫ್ಯಾಮಿಲಿ' ಚಿತ್ರಕ್ಕೆ ಕಾಪು ಅಮ್ಮನ ಸನ್ನಿಧಾನದಲ್ಲಿ ಮುಹೂರ್ತ



ಕಾಪು : ನವದುರ್ಗಾ ಫಿಲಂಸ್ ಬ್ಯಾನರ್ ಅಡಿಯಲ್ಲಿ ಕನ್ಯಾನ ಸದಾಶಿವ ಶೆಟ್ಟಿ ನಿರ್ಮಾಣದ, ಇಸ್ಮಾಯಿಲ್ ಮೂಡುಶೆಡ್ಡೆ ರಚನೆ ಮತ್ತು ನಿರ್ದೇಶನದ ನೂತನ ಕನ್ನಡ ಚಲನಚಿತ್ರ 'ಪದ್ಮನಾಭ ಏಂಡ್ ಫ್ಯಾಮಿಲಿ'ಗೆ ಕಾಪುವಿನ ಶ್ರೀ ಹೊಸ ಮಾರಿಗುಡಿ ದೇವಸ್ಥಾನದಲ್ಲಿ ಆಕ್ಷನ್ ಕಟ್ ಹೇಳುವ ಮೂಲಕ, ದೀಪ ಬೆಳಗಿಸಿ ದೇವಳದ ಪ್ರಧಾನ ತಂತ್ರಿ ಕೊರಂಗ್ರಪಾಡಿ ವಿದ್ವಾನ್ ಕೆ. ಪಿ ಕುಮಾರಗುರು ತಂತ್ರಿಯವರ ಸಮಕ್ಷಮದಲ್ಲಿ ಪ್ರಾರ್ಥನೆ ಸಲ್ಲಿಸಿ ಶುಭ ಹಾರೈಸಲಾಯಿತು.

ಈ ಸಂದರ್ಭದಲ್ಲಿ ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಶ್ರೀನಿವಾಸ ತಂತ್ರಿ ಕಲ್ಯ, ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ರತ್ನಾಕರ ಶೆಟ್ಟಿ ನಡಿಕೆರೆ, ಅಭಿವೃದ್ಧಿ ಸಮಿತಿ ಅಧ್ಯಕ್ಷ ರಾಜರ್ಷಿ ಕೆ. ವಾಸುದೇವ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ ಕಲ್ಯ, ಮಾತೃ ವೈಭವ ಸೇವಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಯೋಗೀಶ್ ವಿ. ಶೆಟ್ಟಿ, ನವದುರ್ಗಾ ಲೇಖನ ಸಮಿತಿಯ ಕಾರ್ಯಧ್ಯಕ್ಷ ಶ್ರೀಕಾಂತ್ ಭಟ್ ನಂದಳಿಕೆ, ಪ್ರಧಾನ ಕಾರ್ಯದರ್ಶಿ ಗೀತಾಂಜಲಿ ಎಂ. ಸುವರ್ಣ, ವ್ಯವಸ್ಥಾಪನಾ ಸಮಿತಿಯ ಸದಸ್ಯರುಗಳಾದ ಮಾದವ ಆರ್ ಪಾಲನ್, ಶೇಖರ ಸಾಲ್ಯಾನ್, ರವೀಂದ್ರ ಮಲ್ಲಾರ್, ಜಯಲಕ್ಷ್ಮಿ ಶೆಟ್ಟಿ, ಚರಿತ ದೇವಾಡಿಗ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಚಿತ್ರದಲ್ಲಿ ನಾಯಕ ನಾಯಕಿಯಾಗಿ ರಿದನ್ ಶೆಟ್ಟಿ ಮತ್ತು ಸಂಗೀತಾ ಶೃಂಗೇರಿ ಪಾತ್ರವನ್ನು ನಿರ್ವಹಿಸಲಿದ್ದಾರೆ. ಹಾಗೂ ಪ್ರಧಾನ ಪಾತ್ರದಲ್ಲಿ ಅರವಿಂದ್ ಬೋಳಾರ್, ಭೋಜರಾಜ ವಾಮಂಜೂರ್, ದೀಪಕ್ ರೈ ಪಾಣಾಜೆ, ಮೈಮ್ ರಾಮದಾಸ್, ಪುಷ್ಪರಾಜ್ ಬೋಳಾರ್, ಮಾನಸಿ ಸುಧೀರ್, ರವಿ ರಾಮಕುಂಜ ನಟಿಸಲಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ.

ಬುದ್ಧಿವಂತಿಕೆ, ಕಾರ್ಯಚತುರತೆ ಇದ್ದವರಿಗೆ ಸಾಧನೆ ಎಂದೂ ಅಸಾಧ್ಯವಲ್ಲ: ಶಾಸಕ ಕೊಡ್ಗಿ

ಬೈಂದೂರು: ಎಲ್ಲಾ ಮಕ್ಕಳು ರಾಮನಾಗಿ ಹುಟ್ಟುತ್ತಾರೆ. ಸಮಾಜದ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಮಾಡುವ ಸಮಾಜ ಘಾತುಕ ಕ್ರಿಯೆಯಿಂದ ಮತ್ತು ಸಂಸ್ಕಾರದ ಕೊರತೆಯಿಂದಾಗಿ ಬೆಳೆಬೆಳೆಯುತ್ತಾ, ರಾವಣರಾಗುತ್ತಾರೆ. ಬುದ್ಧಿವಂತಿಕೆ, ಕಾರ್ಯಚತುರತೆ ಇದ್ದವರಿಗೆ ಸಾಧನೆ ಮಾಡುವುದು ಕಷ್ಟಕರವಾಗದು. ಈ ನೆಲೆಯಲ್ಲಿ ಜಯಶೀಲ ಶೆಟ್ಟಿ ಇವರು ತಮ್ಮ ತಾಯಿಯ ಕನಸನ್ನು ನನಸು ಮಾಡುವ ಮೂಲಕ ತಮ್ಮ ತಂದೆ ಹಾಕಿಕೊಟ್ಟ ಧರ್ಮದ ಮಾರ್ಗದಲ್ಲಿ ಮುಂದುವರಿದು ಹೇರಂಜಾಲು ಎಂಬ ಪುಟ್ಟ ಧಾರ್ಮಿಕ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದ್ದಾರೆ ಎಂದು ಕುಂದಾಪುರ ಶಾಸಕ ಕಿರಣ್‌ಕುಮಾರ್ ಕೊಡ್ಗಿ ಹೇಳಿದರು.



ಹೇರಂಜಾಲು ಗ್ರಾಮದ ಇತಿಹಾಸ ಪ್ರಸಿದ್ಧವಾದ ಶ್ರೀ ಗುಡೇ ಮಹಾಲಿಂಗೇಶ್ವರ ದೇವಸ್ಥಾನದ ನೂತನ ರಾಜಗೋಪುರ ಲೋಕಾರ್ಪಣೆ, ಅತಿರುದ್ರ ಮಹಾಯಾಗ ಹಾಗೂ ಇನ್ನಿತರ ಧಾರ್ಮಿಕ ಕಾರ್ಯಗಳ ಪ್ರಯುಕ್ತ ಶುಕ್ರವಾರ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಗುರುರಾಜ ಗಂಟಿಹೊಳೆ ಮಾತನಾಡಿ, ಧರ್ಮ, ಸಂಸ್ಕೃತಿಗಳು ಪುನರುತ್ಥಾನಗೊಳ್ಳುವ ಧಾರ್ಮಿಕ ಕೇಂದ್ರವಾದ ದೇವಸ್ಥಾನ ಉದ್ಧಾರವಾದರೆ ಆ ಊರೇ ಶ್ರೇಷ್ಠತೆ ಹೊಂದಿದಂತೆ. ಗರ್ಭಗುಡಿಯಲ್ಲಿರುವ ಬಿಂಬದ ಶಕ್ತಿ ತಂತ್ರಿಗಳ ಮೂಲಕ ಸದೃಢವಾದಾಗ ಆ ಪ್ರದೇಶದಲ್ಲಿ ವಾಸಿಸುವ ಜನರ ಮಾನಸಿಕತೆ, ದೈಹಿಕತೆ ಎಲ್ಲವೂ ಬಲಾಢ್ಯವಾಗಿ ಅಲ್ಲಿ ಶಾಂತಿ, ನೆಮ್ಮದಿಯ ತಾಣವಾಗುತ್ತದೆ ಪೂರ್ವಜನ್ಮದ ಸುಕೃತಫಲ ಹಾಗೂ ದೈವಾನುಗ್ರಹವಿದ್ದು ಕಾಲಕೂಡಿ ಬಂದಾಗ ಸತ್ಕಾರ್ಯಗಳು ನಡೆಯುತ್ತವೆ. ಪ್ರತಿಯೊಬ್ಬರಲ್ಲಿಯೂ ದೈವೀ ಭಾವನೆ ಧಾರ್ಮಿಕ ಪ್ರಜ್ಞೆ ಇರಬೇಕು ಎಂದರು.

ಧಾರ್ಮಿಕ ಕ್ಷೇತ್ರದ ಪ್ರಮುಖರಾದ ಕಟ್ಟೆ ಶಂಕರ ಭಟ್ ನವೀಲುಗೋಣ ಹಾಗೂ ವಾಸ್ತುತಜ್ಞ ಸುಬ್ರಮಣ್ಯ ಭಟ್ ಗುಂಡಿಬೈಲು ಧಾರ್ಮಿಕ ಪ್ರವಚನ ನೀಡಿದರು. ಕೋಟ ಅಮೃತೇಶ್ವರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆನಂದ ಸಿ. ಕುಂದರ್, ಗುರುರಾಜ್ ಭಟ್, ಬೊಳಂಬಳ್ಳಿ ದೇವಳದ ಆಡಳಿತ ಧರ್ಮದರ್ಶಿ ಧರ್ಮರಾಜ್ ಜೈನ್, ಉದ್ಯಮಿ ಕುಶಲ್ ಶೆಟ್ಟಿ, ಕೃಷ್ಣ ಪೂಜಾರಿ ಅಪ್ಪಾಡಿ, ಕಾಲ್ತೋಡು ಶ್ರೀ ಮಹಾಲಸ ಮಾರಿಕಾಂಬ ದೇವಸ್ಥಾನದ ಅರ್ಚಕ ರಾಮಯ್ಯ, ಹೇರಂಜಾಲು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪದ್ಮನಾಭ ಮೇರ್ಟ್, ಖಜಾಂಜಿ ಹೆಚ್. ವಿಜಯ್ ಶೆಟ್ಟಿ ಉಪಸ್ಥಿತರಿದ್ದರು.

ರಾಜಗೋಪುರದ ಸೇವಾಕರ್ತ, ದೇವಳದ ಗೌರವಾಧ್ಯಕ್ಷ ಹೆಚ್. ಜಯಶೀಲ ಎನ್. ಶೆಟ್ಟಿ ಸ್ವಾಗತಿಸಿ, ಪ್ರಾಸ್ತಾವಿಸಿದರು. ಪತ್ರಕರ್ತ ಕೆ. ಸಿ. ರಾಜೇಶ್ ಹಾಗೂ ಆರ್‌ಜೆ ನಯನಾ ನಿರೂಪಿಸಿದರು. ಸ್ವಾಗತ ಸಮಿತಿ ಸಂಚಾಲಕ ವಾಜುರಾಜ್ ಶೆಟ್ಟಿ ವಂದಿಸಿದರು.

'ಸೃಜನ 2026–ಸೇವೆಯಿಂದ ಕ್ರಿಯಾಶೀಲತೆ'–'ತುಳುನಾಡ ವೈಭವ' ವಿ.ವಿ. ಮಟ್ಟದ ಅಂತರ್ ಕಾಲೇಜು ಸ್ಪರ್ಧಾವಳಿ

ಮಂಗಳೂರು: ನಗರದ ಕೆನರಾ ಕಾಲೇಜು (ಸ್ವಾಯತ್ತ), ರಾಷ್ಟ್ರೀಯ ಸೇವಾ ಯೋಜನೆ ಘಟಕದ ಆಶ್ರಯದಲ್ಲಿ 'ಸೃಜನ 2026 – ಸೇವೆಯಿಂದ ಕ್ರಿಯಾಶೀಲತೆ – ತುಳುನಾಡ ವೈಭವ' ಅಂತರ್ ಕಾಲೇಜು ಮಟ್ಟದ ಕಾರ್ಯಕ್ರಮ ನೆರವೇರಿತು.

ಉದ್ಘಾಟನಾ ಸಮಾರಂಭದಲ್ಲಿ ಮೇರ ಮಜಲು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ನಾಯ್ಗ ಧ್ವಜಾರೋಹಣ ನಡೆಸಿ ಮಾತನಾಡಿ, ವಿಕಸಿತ ಭಾರತದ ಕನಸು ನನಸಾಗಬೇಕಾದರೆ ಪ್ರಬಲ ಸಮಾಜದ ನಿರ್ಮಾಣ ಆಗಬೇಕು. ಎನ್ ಎಸ್ ಎಸ್ ಸೇವಾ ಚಟುವಟಿಕೆಗಳ ಮೂಲಕ ವ್ಯಕ್ತಿತ್ವ ವಿಕಾಸ ಸಾಧ್ಯ. ನಿಸ್ವಾರ್ಥ ಸೇವಾ ಚಿಂತನೆ ಇದರ ಪ್ರಮುಖ ಉದ್ದೇಶ ಎಂದರು.

ಮುಖ್ಯ ಅತಿಥಿಯಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ವಿಜಯಲಕ್ಷ್ಮಿ ನಾಯಕ್ ಮಾತನಾಡಿ, ಎನ್‌ಎಸ್‌ಎಸ್ ಕೇವಲ ಕಾರ್ಯಕ್ರಮವಲ್ಲ, ಅದು ಜೀವನ ಚಿಂತನೆ, ಸ್ವಾರ್ಥ ಬದುಕಿನಿಂದ ಸಮಾಜಮುಖಿ ಕಡೆಗೆ ಕೊಂಡು ಹೋಗುವ ಮಾರ್ಗ ಎಂದರು.

ಪ್ರಾಂಶುಪಾಲರಾದ ಡಾ. ಪ್ರೇಮಲತಾ ವಿ., ಅಧ್ಯಕ್ಷತೆ ವಹಿಸಿದ್ದ ಬಸ್ತಿ ಪುರುಷೋತ್ತಮ ಶೆಣೈ ಶುಭ ಹಾರೈಸಿದರು. ಸಂಸ್ಥೆಯ ಸಂಚಾಲಕ ಸಿಎ ಎಂ ಜಗನ್ನಾಥ್ ಕಾಮತ್, ಆಡಳಿತಾಧಿಕಾರಿ ಡಾ. ದೀಪ್ತಿ ನಾಯಕ್, ಎನ್‌ಎಸ್‌ಎಸ್ ಸಂಯೋಜನಾಧಿಕಾರಿಗಳಾದ ಸುಶಾಮ ಸಿ., ಸ್ಮಿತಾ ಎಂ., ಕಾರ್ತಿಕ್, ಲಕ್ಷ್ಮಿ ಹೆಗ್ಡೆ ಉಪಸ್ಥಿತರಿದ್ದರು.



▸▸ ವಿಕಸಿತ ಭಾರತದ ಕನಸು ನನಸಾಗ ಬೇಕಾದರೆ ಪ್ರಬಲ ಸಮಾಜದ ನಿರ್ಮಾಣ ಆಗಬೇಕು.

▸▸ ಎನ್‌ಎಸ್‌ಎಸ್ ಕೇವಲ ಕಾರ್ಯ ಕ್ರಮವಲ್ಲ, ಅದು ಜೀವನ ಚಿಂತನೆ, ಸ್ವಾರ್ಥ ಬದುಕಿನಿಂದ ಸಮಾಜಮುಖಿ ಕಡೆಗೆ ಕೊಂಡು ಹೋಗುವ ಮಾರ್ಗ

ಸಿಬ್ಬಂದಿ ಕ್ಷೇಮ ಪಾಲನ ಸಂಯೋಜಕಿ ವಾಣಿ ಯು. ಎಸ್. ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕಿ ಸುಶಮಾ ಸಿ. ವಂದಿಸಿದರು. ವಿದ್ಯಾರ್ಥಿ ಯುವರಾಜ್ ನಿರೂಪಿಸಿದರು .

ನಂತರ ಕಾಲೇಜಿನ ಆವರಣದಲ್ಲಿ ವಿವಿಧ ಸ್ಪರ್ಧಾ ಕಾರ್ಯಕ್ರಮಗಳು ನಡೆದವು. ರಸ ವೈಭವ, ವಾಗ್ವಿಲಾಸ, ಕಲಾಮಂಜರಿ, ರಂಗಿತರಂಗ, ಸಮೂಹ ಗಾಯನ, ಕಸದಿಂದ ರಸ, ಬೀದಿನಾಟಕ, ನೆನಪಿನ ದೋಣಿ–ಸಾಕ್ಷ ಚಿತ್ರ, ದಿ ಆಲ್ ರೌಂಡರ್ ಎಲ್ಲರ ಮೆಚ್ಚುಗೆಗೆ ಪಾತ್ರವಾದವು.

ಮುಕ್ಕ ಶ್ರೀನಿವಾಸ್ ವಿವಿನಲ್ಲಿ ಬಿಟೆಕ್ ಇಂಜಿನಿಯರಿಂಗ್ ವಿದ್ಯಾರ್ಥಿಗಳ ರಚನೆಯ ಪ್ರೊಜೆಕ್ಟ್ ಮಾದರಿ ಪ್ರಾತ್ಯಕ್ಷಿಕೆ

ಮಂಗಳೂರು: ಮುಕ್ಕ ಶ್ರೀನಿವಾಸ್ ಯೂನಿವರ್ಸಿಟಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯಲ್ಲಿ ಅಂತಿಮ ವರ್ಷದ ಬಿಟೆಕ್ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಿದ್ಧಪಡಿಸಿದ ಪ್ರೊಜೆಕ್ಟ್ ಮಾದರಿಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಇಂಡಿವಿಲೇಜ್ ಐಟಿ ಸೊಲ್ಯೂಷನ್ಸ್ ಪ್ರೈ ಲಿ ಸಂಸ್ಥೆಯ ಮಾನವ ಸಂಪನ್ಮೂಲ ಸೇವೆಗಳ ವಿಭಾಗದ ನಿರ್ದೇಶಕ ಶ್ರೀನಿವಾಸ್ ಭಟ್ ಮಾತನಾಡಿ, ನೋವಿಗೋ ಸೊಲ್ಯೂಷನ್ಸ್ ಪ್ರೈ ಲಿ ಸಂಸ್ಥೆಯ ಗ್ರೂಪ್ ಪ್ರಾಜೆಕ್ಟ್ ಮ್ಯಾನೇಜರ್ ಭರತೇಶ್ ಬಂಗೇರ ಅತಿಥಿಯಾಗಿದ್ದರು. ಶ್ರೀನಿವಾಸ್ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಕೆ. ಸತ್ಯನಾರಾಯಣ ರೆಡ್ಡಿ ಅಧ್ಯಕ್ಷತೆ ವಹಿಸಿದರು. ಶ್ರೀನಿವಾಸ್ ಯೂನಿವರ್ಸಿಟಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯ ಮುಖ್ಯಸ್ಥ ಡಾ. ರಾಮಕೃಷ್ಣ ಎನ್. ಹೆಗಡೆ ಉಪಸ್ಥಿತರಿದ್ದರು.



ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಮಷೀನ್ ಲರ್ನಿಂಗ್, ಸೈಬರ್ ಸೆಕ್ಯೂರಿಟಿ ಆ್ಯಂಡ್ ಸೈಬರ್ ಫೊರೆನ್ಸಿಕ್ಸ್, ಇಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಆ್ಯಂಡ್ ರೊಬೋಟಿಕ್ಸ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಸಿದ್ಧಪಡಿಸಿದ 115 ನವೀನ ರೀತಿಯ ಪ್ರೊಜೆಕ್ಟ್ ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಈ ಪೈಕಿ 14 ಪ್ರಾಜೆಕ್ಟ್‌ಗಳಿಗೆ ಗುಣಮಟ್ಟ, ನವೀನತೆ ಹಾಗೂ ಸಮಾಜಮುಖಿ ಮಹತ್ವವನ್ನು ಆಧರಿಸಿ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯಿಂದ ಪ್ರಾಯೋಜಕತ್ವ ಲಭಿಸಿದೆ.

ಕಾರ್ಯಕ್ರಮದ ಸಂಚಾಲಕ ಪ್ರೊ. ಆನಂದ್ ಎಸ್. ಉಪ್ಪಾರ್ ಸ್ವಾಗತಿಸಿದರು. ಡಾ. ಪ್ರವೀಣ್ ಬ್ಲೆಸ್ಸಿಂಗ್ಟನ್ ಅತಿಥಿ ಪರಿಚಯ ಮಾಡಿದರು. ಪ್ರೊ. ವರ್ಷಾ ಜಿ. ಬಂಗೇರ ವಂದಿಸಿದರು. ಪ್ರೊ. ರೋಹನ್ ಫೆರ್ನಾಂಡಿಸ್ ಹಾಗೂ ಪ್ರೊ. ಅಮೃತಾ ಕಿಂಡಾಲ್ಕರ್ ಕಾರ್ಯಕ್ರಮವನ್ನು ನಿರೂಪಿಸಿದರು.

ಶ್ರೀನಿವಾಸ್ ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದ ನಿರ್ದೇಶಕ ಡಾ. ಪ್ರವೀಣ್ ಬಿ. ಎಂ., ಪ್ರಾಜೆಕ್ಟ್ ಎಕ್ಸಿಬಿಷನ್–26 ಸಹ–ಸಂಯೋಜಕ ಡಾ. ನವೀನ್ ಕುಮಾರ್ ಜೆ. ಆರ್. ಉಪಸ್ಥಿತರಿದ್ದರು.

ಕಿರುಸುದ್ದಿ

ನಿಂತಿದ್ದ ಲಾರಿ ಹಿಂಭಾಗಕ್ಕೆ ಸ್ಕೂಟರ್ ಡಿಕ್ಕಿ: ಸವಾರನಿಗೆ ಗಾಯ

ಕಾಸರಗೋಡು: ಹಾನಿಗೊಂಡು ರಸ್ತೆಯಲ್ಲಿ ಸಿಲುಕಿಕೊಂಡ ಲಾರಿಯ ಹಿಂಬಾಗಕ್ಕೆ ಸ್ಕೂಟರ್ ಡಿಕ್ಕಿ ಹೊಡೆದು ವ್ಯಕ್ತಿ ಗಂಭೀರ ಗಾಯಗೊಂಡಿದ್ದಾರೆ. ಶನಿವಾರ ಬೆಳಗ್ಗೆ 5 ಗಂಟೆಯ ವೇಳೆ ಕಾಸರಗೋಡು– ಕಾಞಂಗಾಡು ಕೆಎಸ್‌ಟಿಪಿ ರಸ್ತೆಯ ಪಳ್ಳಿಕೆರೆಯಲ್ಲಿ ಈ ಅವಘಡ ನಡೆದಿದೆ. ಮಂಗಳೂರು ಭಾಗಕ್ಕೆ ಲಾರಿ ಸಂಚರಿಸುತ್ತಿತ್ತು. ಪಳ್ಳಿಕೆರೆಗೆ ತಲುಪಿದಾಗ ಹಾನಿಗೊಂಡು ರಸ್ತೆ ಮಧ್ಯೆ ನಿಂತಿತು. ಬಳಿಕ ಚಾಲಕ ಮತ್ತು ಕ್ಲೀನರ್ ಸೇರಿ ದುರಸ್ತಿ ನಡೆಸುತ್ತಿದ್ದ ವೇಳೆ ತಲುಪಿದ ಸ್ಕೂಟರ್ ಲಾರಿಗೆ ಡಿಕ್ಕಿ ಹೊಡೆದಿದೆ. ಇದರಿಂದ ಸ್ಕೂಟರ್‌ನ ಮುಂಭಾಗ ಸಂಪೂರ್ಣ ಹಾನಿಯಾಗಿದೆ. ಗಾಯಗೊಂಡ ಸವಾರನ್ನು ಉದುಮದ ಖಾಸಗಿ ಆಸ್ಪತ್ರೆಯಲ್ಲಿ ಬಳಿಕ ಕಾಸರಗೋಡಿನ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಪೊಲೀಸರು ಸ್ಥಳಕ್ಕಾಗಮಿಸಿ ಡಿಕ್ಕಿಯಾದ ಸ್ಕೂಟರ್‌ನ ಆರ್‌ಸಿ ಮಾಲಕಿ ಓರ್ವ ಮಹಿಳೆಯಾಗಿದ್ದಾರೆ ಎಂದು ಪತ್ತೆಹಚ್ಚಲಾಗಿದೆ. ಗಾಯಗೊಂಡ ಸವಾರನಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಲಾರಿ ಅಪಘಾತ–ಚಾಲಕ ಪಾರು

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಪಡುಪಣಂಬೂರು ಪೆಟ್ರೋಲ್ ಬಂಕ್ ಬಳಿ ಸರಕು ಸಹಿತ ಲಾರಿ ಎಂದು ಚಾಲಕನ ನಿಯಂತ್ರಣ ತಪ್ಪಿ ಚರಂಡಿಗೆ ಇಳಿದು ಹೆದ್ದಾರಿ ಬದಿಯ ಗುಡ್ಡೆಗೆ ಡಿಕ್ಕಿ ಹೊಡೆದಿದ್ದು ಚಾಲಕ ಪವಾಡ ಸದೃಶ ಪಾರಾಗಿದ್ದಾನೆ. ಕೇರಳ ಮೂಲದ ನೋಂದಣಿಯ ಲಾರಿ ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದು ಪಡು ಪಣಂಬೂರು ತಲುಪುತ್ತಿದ್ದಂತೆ ಲಾರಿ ಚಾಲಕ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ.

ಆಟೋ ಡಿಕ್ಕಿ; ಪಾದಚಾರಿಗೆ ಗಂಭೀರ ಗಾಯ

ಮೂಡುಬಿದಿರೆ: ಇಲ್ಲಿನ ವಿದ್ಯಾಗಿರಿ–ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಗಾಂಧಿನಗರದಲ್ಲಿ ರಸ್ತೆ ಪಕ್ಕ ಶುಕ್ರವಾರ ರಾತ್ರಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿಯೊಬ್ಬರಿಗೆ ಆಟೋ ರಿಕ್ಷಾ ಡಿಕ್ಕಿ ಹೊಡೆದಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಂಧಿನಗರದ ಕಿರ್ದಬೆಟ್ಟು ನಿವಾಸಿ ಶಂಕರ್ ಆಚಾರ್ಯ ಗಾಯಗೊಂಡ ವ್ಯಕ್ತಿ. ಇವರು ಶುಕ್ರವಾರ ರಾತ್ರಿ ಮೂಡುಬಿದಿರೆ ಕಡೆಯಿಂದ ಗಾಂಧಿನಗರದ ಕಡೆಗೆ ನಡೆದುಕೊಂಡು ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಶೇಖರ್ ಎಂಬವರು ಚಲಾಯಿಸುತ್ತಿದ್ದ ಆಟೋ ರಿಕ್ಷಾ ಇವರಿಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಅಪಘಾತದ ಭೀಕರತೆಗೆ ಶಂಕರ್ ಆಚಾರ್ಯ ಅವರ ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ತಕ್ಷಣವೇ ಸ್ಥಳೀಯರ ನೆರವಿನಿಂದ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಿಧನ ಸುದ್ದಿ

ವಿ.ಎ.ತೋಮಸ್



ಉಪ್ಪಿನಂಗಡಿ: ಕಡಬ ತಾಲೂಕಿನ ಶಿರಾಡಿ ಗ್ರಾಮ ಪಂಚಾಯತ್‌ನಲ್ಲಿ ಕುಡಿಯುವ ನೀರು ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ, ಶಿರಾಡಿ ಗ್ರಾಮದ ಮಿತ್ತನಾಜೆ ವಡೆಯಾಟ್ ನಿವಾಸಿ ವಿ.ಎ. ತೋಮಸ್ ಯಾನೆ ಸಜಿ(53)ಅವರು ಮಾ.27ರಂದು ರಾತ್ರಿ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ವಿ.ಎ. ತೋಮಸ್ ಅವರು ಕಳೆದ 16 ವರ್ಷಗಳಿಂದ ಶಿರಾಡಿ ಗ್ರಾ.ಪಂ.ನಲ್ಲಿ ಕುಡಿಯುವ ನೀರು ಪಂಪ್ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ವಾರದ ಹಿಂದೆ ಅನಾರೋಗ್ಯಕ್ಕೆ ಒಳಗಾದ ಅವರನ್ನು ಚಿಕಿತ್ಸೆಗಾಗಿ ಮಂಗಳೂರಿನ ದೇರಳಕಟ್ಟೆ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಅವರು ನಿಧನರಾಗಿದ್ದಾರೆ. ಮೃತರು ತಾಯಿ, ಪತ್ನಿಯನ್ನು ಅಗಲಿದ್ದಾರೆ.

ಶಕುಂತಳಾ ರೈ



ಮುಲ್ಕಿ: ಶಿರ್ವ ಕೋಡು ದಿ.ಕುಮಾರ ಹೆಗ್ಡೆ ಮತ್ತು ಹೆಜಮಾಡಿ ಬಾಳಿಕೆ ದಿ.ಸರೋಜಿನಿ ಹೆಗ್ಡೆ ಅವರ ಪುತ್ರಿ ಶಕುಂತಳಾ ರೈ (81) ಮಾ.27ರಂದು ಮುಂಬೈಯ ಸ್ವಗೃಹದಲ್ಲಿ ನಿಧನರಾದರು. ಅವರು ಪತಿ ಸದಾಶಿವ ರೈ, ಪುತ್ರರಾದ ಸಚಿನ್ ರೈ, ಡಾ. ಸುಜಿತ್ ರೈ ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ.

ಕೇರಳ ವಿಧಾನಸಭಾ ಚುನಾವಣೆ: ಆರು ಕೋಟಿ ಪೋಲಿಂಗ್ ಸಾಮಗ್ರಿಗಳು

ಕಾಸರಗೋಡಿಗೆ ಮೊದಲ ಲೋಡ್

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಗೆ ಒಟ್ಟು ಆರು ಕೋಟಿ ಚುನಾವಣಾ ಸಾಮಾಗ್ರಿಗಳು ಬಂದು ಸೇರಲಿದೆ. ಅದರಲ್ಲಿ ಮೊದಲ ಲೋಡ್‌ನ್ನು ಕಾಸರಗೋಡು ಜಿಲ್ಲೆಗೆ ಪೂರೈಸುವ ಕ್ರಮ ಆರಂಭಿಸಲಾಗಿದೆ. ಹೀಗೆ ಆರು ಕೋಟಿ ಪೋಲಿಂಗ್ ಸಾಮಗ್ರಿಗಳಲ್ಲಿ ಮತ ದಾನ ಯಂತ್ರಗಳು, ರಬ್ಬರ್ ಬ್ಯಾಂಡ್, ಪೆನ್ನು, ಬೆಂಕಿಪೊಟ್ಟಣ, ಮೇಣದ ಬತ್ತಿಯಿಂದ ಆರಂಭಗೊಂಡು ಮತದಾನಗೈಯ್ಯುವ ವೇಳೆ ಮರೆ ಒಡ್ಡುವ ವೋಟಿಂಗ್ ಕಂಪಾರ್ಟ್ ಮೆಂಟ್ ಸೇರಿದಂತೆ ಇತರ 28 ಸಾಮಗ್ರಿಗಳು ಇದರಲ್ಲಿ ಒಳಗೊಳ್ಳಲಿದೆ.

ಕೇರಳದ ಒಟ್ಟು 140 ವಿಧಾನಸಭಾ ಕ್ಷೇತ್ರಗಳಲ್ಲಾಗಿ ಒಟ್ಟು 30,471 ಮತಗಟ್ಟೆಗಳಿವೆ. ಅವುಗಳಿಗೆ ಆರು ಕೋಟಿ ಚುನಾವಣಾ ಸಾಮಗ್ರಿಗಳನ್ನು ಪೂರೈಸಲಾಗುವುದು. ಈ ಚುನಾವಣೆಗೆ ಅಗತ್ಯವಿ ಇರುವ ಸಾಮಗ್ರಿಗಳ ಯಾದಿಯನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಯಾರಿಸಿ ಅದನ್ನು ಸರಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದರಂತೆ ಅಗತ್ಯದ ಸಾಮಗ್ರಿಗಳನ್ನು ತಿರುವನಂತಪುರದಲ್ಲಿರುವ ಸ್ಟೇಶನರಿ ಇಲಾಖೆಯ ಕಂಟ್ರೋಲ್ ರೂಮ್‌ನಿಂದ ಆಯಾ ಜಿಲ್ಲೆಗಳ ಕಲೆಕ್ಟರೇಟ್‌ಗಳಿಗೆ ಕಳುಹಿಸಿಕೊಡಲಾಗುತ್ತಿದೆ.

ಅದೇ ರೀತಿ ಈ ಕಂಟ್ರೋಲ್ ರೂಮ್‌ನಿಂದ ಮೊದಲ ಚುನಾವಣಾ ಸಾಮಗ್ರಿಗಳ ಲೋಡ್ ಕಾಸರಗೋಡಿಗೆ ಕಳುಹಿಸಿಕೊಡಲಾಗಿದೆ. ಇತರ ಜಿಲ್ಲೆಗಳಿಗೆ ಎಪ್ರಿಲ್ 5ರೊಳಗಾಗಿ ಈ ಸಾಮಗ್ರಿಗಳು ಬಂದು ಸೇರಲಿದೆ. ಚುನಾವಣಾ ಅಗತ್ಯಕ್ಕಾಗಿ 31,789 ಪೆನ್ಸಿಲ್‌ಗಳು, 35,080 ಸ್ಟಾಂಪ್ ಪ್ಯಾಡ್‌ಗಳು, 9,150 ಟಿನ್ ಬೋಕ್ಸ್‌ಗಳು, 35,080 ಗಮ್, 1,12,710 ಪ್ಯಾಕಿಂಗ್ ಪೇಪರ್ ಶೀಟ್‌ಗಳು, 35,080 ರಬ್ಬರ್ ಬ್ಯಾಂಡ್ ಪ್ಯಾಕೇಟ್‌ಗಳು, ಎರಡು ರೀತಿಯ 35,080 ಮಾರ್ಕರ್ ಪೆನ್‌ಗಳು, 35,080 ಸ್ಲೈವ್ ಬೋರ್ಡ್ ಪ್ಯಾಕೆಟ್‌ಗಳು ಮತ್ತು 23,680 ವೋಟಿಂಗ್ ಕಂಪಾರ್ಟ್‌ಮೆಂಟ್‌ಗಳು ಚುನಾವಣಾ ಸಾಮಾಗ್ರಿಗಳಲ್ಲಿ ಒಳಗೊಳ್ಳಲಿದೆ. ಇದರ ಹೊರತಾಗಿ ಮತಗಟ್ಟೆಗಳ ಅಗತ್ಯಕ್ಕಾಗಿ 1,40,320 ಮೇಣದ ಬತ್ತಿಗಳು, 35,080 ಬೆಂಕಿಪೊಟ್ಟಣಗಳು, 10,540 ಪ್ಯಾಕೆಟ್ ಸೀಲಿಂಗ್ ಬಾಕ್ಸ್‌ಗಳು, ಕೆಂಪು ಮತ್ತು ನೀಲಿ ಶಾಯಿ ಹೊಂದಿರುವ 1,76,160ಪೆನ್‌ಗಳು, 7,01,600 ಮೀಟರ್ ನೂಲುಗಳು, ಕಾಗದ ಮತ್ತು ನೂಲುಗಳನ್ನು ತುಂಡು ಮಾಡಲು 35,080 ಬ್ಲೇಡ್‌ಗಳು, ಚುನಾವಣಾ ಸಿಬ್ಬಂದಿಗಳ ಕೈಯಲ್ಲಿ ಶಾಯಿ ತಗಲಿದಲ್ಲಿ ಅದನ್ನು ಉಜ್ಜಿ ತೆಗೆಯಲು ತಲಾ 100 ಗ್ರಾಂ ಒಳಗೊಂಡ 35,080 ಕಾಟನ್ ಬಟ್ಟೆಗಳು ಈ ಚುನಾವಣಾ ಸಾಮಗ್ರಿಗಳಲ್ಲಿ ಒಳಗೊಂಡಿವೆ.





ಎನ್‌ಡಿಎ ಅಭ್ಯರ್ಥಿ ಸುರೇಂದ್ರನ್ ಕಾರ್ಯಕರ್ತರೊಂದಿಗೆ ವಿವಿಧ ಕಡೆ ಪ್ರಚಾರ ನಡೆಸಿದರು

ಶಾಸಕ ಪೊನ್ನಣ್ಣರಿಂದ ಪ್ರಚಾರ

ಮಡಿಕೇರಿ: ಕೇರಳದ ವಯನಾಡು ಜಿಲ್ಲೆಯ ಮಾನಂದವಾಡಿ ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿಯ ಪರವಾಗಿ, ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಅವರು ಶನಿವಾರ ತಿರುನೆಲ್ಲಿ ಕ್ಷೇತ್ರದಲ್ಲಿ ಬಿರುಸಿನ ಪ್ರಚಾರ ಕೈಗೊಂಡರು. ಈ ಸಂದರ್ಭ ತಿರುನೆಲ್ಲಿ ಭಾಗದ ಪ್ರಸಿದ್ಧ ಶ್ರೀ ತಿರುನಲ್ಲಿ ಪೆಮ್ಮಯ್ಯ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸುವುದರೊಂದಿಗೆ ಅಭ್ಯರ್ಥಿಯ ಗೆಲುವಿಗಾಗಿ ಪ್ರಾರ್ಥಿಸಿದರು. ಶಾಸಕರೊಂದಿಗೆ, ಮಾನಂದವಾಡಿ ಕ್ಷೇತ್ರದ ಅಭ್ಯರ್ಥಿ ಉಷಾ ವಿಜಯನ್, ಕೊಡಗಿನ ಪ್ರಮುಖರಾದ ಅಜ್ಜಿಕುಟ್ಟಿರ ಪೊನ್ನು, ಕುಂಡಚ್ಚಿರ ಮಂಜು ದೇವಯ್ಯ, ರಾಜನ್, ಶಾಸಕರ ಸಹಾಯಕ ಕುಮಾರ್ ಮಂಡ್ಯ ಹಾಗೂ ಇತರ ಪ್ರಮುಖರು ಹಾಜರಿದ್ದರು.



ಎಂಡೋ ಪೀಡಿತ ಪ್ರದೇಶಗಳಿಗೆ ಭೇಟಿ,

ಕಾಸರಗೋಡು: ಎಂಡೋಸಲ್ಫಾನ್ ಪೀಡಿತ ಬದಿಯಡ್ಕ ಗ್ರಾಮ ಪಂಚಾಯತ್‌ನ ಕೆಲವು ಪ್ರದೇಶಗಳಿಗೆ ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಶುಕ್ರವಾರ ಭೇಟಿ ನೀಡಿದರು. ಅಲ್ಲದೆ ಕವಿ ಡಾ.ಕಯ್ಯಾರ ಕಿಞ್ಞಣ್ಣ ರೈಗಳ ಮನೆ, ಪ್ರತಿಷ್ಠಿತ ಜೆ.ಎ.ಎಸ್.ಬಿ.ಎಸ್. ಸಂಸ್ಥೆ ಸೇರಿದಂತೆ ಹಲವು ಪ್ರಮುಖ ಸ್ಥಳಗಳಿಗೆ ಭೇಟಿಯಿತ್ತರು.

ಬಳಿಕ ಮಧೂರು ಗ್ರಾಮ ಪಂಚಾಯತ್‌ನ ವಿವಿಧ ಪ್ರದೇಶಗಳ ಪ್ರಮುಖ ನಾಗರಿಕರನ್ನು ಭೇಟಿ ಮಾಡಿದರು. ವಿವಿಧ ಸಂಸ್ಥೆಗಳಿಗೆ ಭೇಟಿಯಿತ್ತು ಮತಯಾಚಿಸಿದರು. ಈ ಸಂದರ್ಭದಲ್ಲಿ ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು, ಮಾಹಿನ್ ಕೇಳೋಟ್, ಅನಸ್ ಮಿಕಾ ಥೋಡ್, ಹ್ಯಾರಿಸ್ ಬೆದಿರ, ಅನ್ವರ್ ಓಜೋನ್, ಶ್ಯಾಮ್ ಪ್ರಸಾದ್ ಮಾನ್ಯ, ಖಾದರ್ ಮಾನ್ಯ, ಅಬ್ದುಲ್ಲ ಚೆಳಕರ, ಎಂ.ಎಸ್.ಮೊಯ್ದೀನ್, ಹಮೀದ್ ಕೆಡೆಂಜಿ, ಎಂ.ಎಸ್.ಹಮೀದ್, ವಕೀಲ ಶಂಸುದ್ದೀನ್, ಮುಹಮ್ಮದ್ ವತ್ತಾಯಕ್ಕಾಡ್ ಮೊದಲಾದವರಿದ್ದರು.

ಚುನಾವಣಾ ವೆಚ್ಚ ಮೇಲ್ವಿಚಾರಣೆ ಪರಿಶೀಲನಾ ಸಭೆ

ಕಾಸರಗೋಡು: ಮುಂಬರುವ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಅಭ್ಯರ್ಥಿಗಳು ಮತ್ತು ಎಲ್ಲಾ ರಾಜಕೀಯ ಪಕ್ಷಗಳ ಪ್ರಚಾರ ವೆಚ್ಚಗಳ ಮೇಲ್ವಿಚಾರಣೆ ನಡೆಸುವ ನಿಟ್ಟಿನಲ್ಲಿ ಕಲೆಕ್ಟರೇಟ್‌ನಲ್ಲಿ ವಿಶೇಷ ಪರಿಶೀಲನಾ ಸಭೆಯು ಶನಿವಾರ ಜರಗಿತು.

ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತ್ತು ಸಾರ್ವಜನಿಕ ವೀಕ್ಷಕರು ಸಭೆಯಲ್ಲಿ ಭಾಗವಹಿಸಿದ್ದರು. ಚುನಾವಣಾ ಆಯೋಗವು ನಿಗದಿಪಡಿಸಿದ ವೆಚ್ಚ ಪ್ರೋಟೋಕಾಲ್‌ನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಚುನಾವಣಾ ಅಧಿಕಾರಿಗಳು ನಿರ್ದೇಶಿಸಿದರು. ಚುನಾವಣಾ ಪ್ರಚಾರ ಅಥವಾ ಕಾರ್ಯಕರ್ತರ ಪ್ರಯಾಣಕ್ಕಾಗಿ ಬಳಸುವ ಎಲ್ಲಾ ರೀತಿಯ ವಾಹನಗಳಿಗೆ ಚುನಾವಣಾ ಅಧಿಕಾರಿಯಿಂದ ನಿಗದಿತ



ನಮೂನೆಯಲ್ಲಿ ಅನುಮತಿ ಪಡೆಯಬೇಕೆಂದು ವೀಕ್ಷಕರು ಸೂಚಿಸಿದರು.

ಚುನಾವಣಾ ವೆಚ್ಚ ವೀಕ್ಷಕ ನಿಶಾಂತ್ ಅಗರ್ವಾಲ್, ಕಾಞಂಗಾಡು, ಕಾಸರಗೋಡು, ಮಂಜೇಶ್ವರ ಮತ್ತು ಉದುಮ ವಿಧಾನಸಭಾ ಕ್ಷೇತ್ರಗಳ ವೆಚ್ಚ ವೀಕ್ಷಕ ಅಜಯ್ ಕುಮಾರ್ ಥಾಡಿಯಾ, ವೆಚ್ಚ ನೋಡಲ್ ಅಧಿಕಾರಿ ವಿ.ಚಂದ್ರನ್, ಗಣಕೀಕರಣ ಮತ್ತು ಐಟಿ / ಐಸಿಟಿ ಅರ್ಜಿ ನೋಡಲ್ ಅಧಿಕಾರಿ ಕೆ.ಲೀನಾ ಮುಂತಾದವರು ಮಾತನಾಡಿದರು. ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಕೇರಳದಲ್ಲಿ ಎನ್‌ಡಿಎ ಶುಭ ನಿರೀಕ್ಷೆ: ತುಷಾರ್ ವೆಳ್ಳಾಪಳ್ಳಿ

ಕಾಸರಗೋಡು: ವಿಧಾನಸಭಾ ಚುನಾವಣೆಯಲ್ಲಿ ಕೇರಳದಲ್ಲಿ ಎನ್‌ಡಿಎ ಶುಭ ನಿರೀಕ್ಷೆ ಹೊಂದಿದೆ ಎಂದು ಎನ್‌ಡಿಎ ಘಟಕ ಪಕ್ಷವಾದ ಬಿಡಿಜೆಎಸ್ ಅಧ್ಯಕ್ಷ ತುಷಾರ್ ವೆಳ್ಳಾಪಳ್ಳಿ ಹೇಳಿದ್ದಾರೆ. ಎನ್‌ಡಿಎ ಪ್ರಧಾನ ಘಟಕ ಪಕ್ಷವಾಗಿರುವ ಬಿಡಿಜೆಎಸ್ ಕೂಡಾ ಈ ಚುನಾವಣೆಯಲ್ಲಿ ಗೆಲ್ಲುವ ಎಲ್ಲಾ ಸಾಧ್ಯತೆಗಳು ಇವೆ. ಮತೀಯ ಅಲ್ಪಸಂಖ್ಯಾತರು ಎನ್‌ಡಿಎಗೆ ನಿಕಟವಾಗತೊಡಗಿದ್ದಾರೆ. ಈ ಚುನಾವಣೆಯಲ್ಲಿ ಎಡರಂಗ ಬುಡ ಸಹಿತ ಕುಸಿದು ಬೀಳಲಿದೆ. ಇನ್ನೊಂದೆಡೆ



ಐಕ್ಯರಂಗನೊಳಗೆ ಪರಸ್ಪರ ಆಂತರಿಕ ಕಚ್ಚಾಟ ನಡೆಯುತ್ತಿದೆ. ಇಂತಹ ಬೆಳವಣಿಗೆಗಳು ಕೇರಳದಲ್ಲಿ ಎನ್‌ಡಿಎಗೆ ಹೆಚ್ಚು ಅನುಕೂಲಕರವಾಗಲಿದೆ. ಕೇರಳದ ಸರ್ವಾಂಗೀಣ ಅಭಿವೃದ್ಧಿಯೇ ಎನ್‌ಡಿಎಯ ಪ್ರಧಾನ ಗುರಿಯಾಗಿದೆ. ಕೇರಳದಲ್ಲಿ ಈ ತನಕ ಆಡಳಿತ ನಡೆಸಿದ ಎಡರಂಗ, ಐಕ್ಯರಂಗ ಸರಕಾರಗಳಿಗೆ ಕೇರಳವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಚುನಾವಣೆಯಲ್ಲಿ ಕೇರಳದ ಜನತೆ ಪರ್ಯಾಯ ಸರಕಾರ ಆಗ್ರಹಿಸುತ್ತಿದೆ. ಅದು ಎನ್‌ಡಿಎಗೆ ಅನುಕೂಲಕರವಾಗಲಿದೆ ಎಂದು ತುಷಾರ್ ವೆಳ್ಳಾಪಳ್ಳಿ ಹೇಳಿದ್ದಾರೆ.

ಕಾಸರಗೋಡು, ಮಂಜೇಶ್ವರದಲ್ಲಿ ಐಕ್ಯರಂಗಕ್ಕೆ ಸುಲಭ ಜಯ: ಚೆನ್ನಿತ್ತಲ

ಕಾಸರಗೋಡು: ಮಂಜೇಶ್ವರ, ಕಾಸರಗೋಡು ವಿಧಾನಸಭಾ ಕ್ಷೇತ್ರಗಳಲ್ಲಿ ಐಕ್ಯರಂಗದ ಅಭ್ಯರ್ಥಿಗಳು ಸುಲಭದಲ್ಲಿ ಜಯ ಗಳಿಸುವರೆಂದು ಕಾಂಗ್ರೆಸ್ ಮುಖಂಡ ರಮೇಶ್ ಚೆನ್ನಿತ್ತಲ ಹೇಳಿದ್ದಾರೆ.



ಅವರು ಶನಿವಾರ ಪ್ರೆಸ್ ಕ್ಲಬ್‌ನಲ್ಲಿ ನಡೆದ ಮೀಟ್‌ದ ಪ್ರೆಸ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಎರಡು ಕ್ಷೇತ್ರಗಳಲ್ಲಿ ಐಕ್ಯರಂಗಕ್ಕೆ ಯಾವುದೇ ಆತಂಕವಿಲ್ಲ. ರಾಜ್ಯದಲ್ಲಿ 100ಕ್ಕೂ ಹೆಚ್ಚು ಸೀಟು ಗಳಿಸಿ ಐಕ್ಯರಂಗ ಅಧಿಕಾರಕ್ಕೇರಲಿದೆ. ವಿಧಾನಸಭಾ ಚುನಾವಣೆಯಲ್ಲಿ ಸಿಪಿಎಂ – ಬಿಜೆಪಿ ಮಧ್ಯೆ ಡೀಲ್ ಇದೆ. 2021ರ ಚುನಾವಣೆಯಲ್ಲಿ 60 ವಿಧಾನಸಭಾ ಕ್ಷೇತ್ರಗಳಲ್ಲಿ ಈ ರೀತಿಯ ಡೀಲ್ ನಡೆಸಲಾಗಿತ್ತು ಎಂದರು.

ಕೇರಳದ ಪ್ರಾಥಮಿಕ ಸಹಕಾರಿ ಸಂಘಗಳಿಗಿರುವ (ಪಿಎಸಿಎಸ್) ಸಾರ್ವಜನಿಕ ಸಾಫ್ಟ್‌ವೇರ್ ತಯಾರಿಸುವ ಯೋಜನೆಯಲ್ಲಿ ಸರಕಾರ 700 ಕೋಟಿ ರೂ.ಗಳ ಅವ್ಯವಹಾರ ನಡೆಸಿದೆ ಎಂದು ಅವರು ಆರೋಪಿಸಿದರು. ಐಕ್ಯರಂಗ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ, ಡಿಸಿಸಿ ಅಧ್ಯಕ್ಷ ಪಿ.ಕೆ.ಫೈಸಲ್ ಜೊತೆಗಿದ್ದರು.

ಬದಿಯಡ್ಕ: ಎಲ್‌ಡಿಎಫ್–ಯುಡಿಎಫ್ ವಿರುದ್ಧ ಗುಡುಗಿದ ತೇಜಸ್ವಿ ಸೂರ್ಯ

ಬದಿಯಡ್ಕ: ಕೇರಳವನ್ನು ಅಧೋಗತಿಗೆ ತಳ್ಳಿದ ಎಡರಂಗ ಸರಕಾರದ ವಿರುದ್ಧದ ನಮ್ಮ ಸಿಟ್ಟನ್ನು ತೋರಿಸುವ ಚುನಾವಣೆ ಸನಿಹವಾಗಿದೆ. ಯಾವುದೇ ಅಭಿವೃದ್ಧಿಯನ್ನು ಮಾಡದೆ ಕೇರಳವನ್ನು ಸ್ವಂತ ಹಿತಾಸಕ್ತಿಗೋಸ್ಕರ ಲೂಟಿ ಮಾಡಿದ ಎಡ ಮತ್ತು ಐಕ್ಯರಂಗಗಳನ್ನು ಹೊರಹಾಕುವುದರ ಜೊತೆಗೆ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಚುನಾವಣೆ ಇದಾಗಬೇಕು. ಕೇವಲ ಒಂದು ಗಂಟೆಯಲ್ಲಿ ಮಂಗಳೂರಿನಿಂದ ಇಂದು ಕಾಸರಗೋಡಿಗೆ ಪ್ರಯಾಣಿಸಬಹುದು. ಇದಕ್ಕೆ ಕಾರಣ ದೇಶದಲ್ಲಿ ಅಧಿಕಾರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಕಾರಣವಾಗಿದೆ ಎಂದು ಬೆಂಗಳೂರು ಸಂಸದ, ಬಿಜೆಪಿ ಯುವಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ಹೇಳಿದ್ದಾರೆ.

ಕಾಸರಗೋಡು ಮತ್ತು ಮಂಜೇಶ್ವರ ಅಭಿವೃದ್ಧಿಯನ್ನು ಹೊಂದದ ಪ್ರದೇಶವಾಗಿದೆ. ಕೇರಳದ ಅರ್ಧದಷ್ಟು ಜನರು ಬೆಂಗಳೂರಿನಲ್ಲಿದ್ದಾರೆ. ದೇಶದಲ್ಲಿ ಅತ್ಯಂತ ಬುದ್ಧಿವಂತರು, ಕಠಿಣ ಪರಿಶ್ರಮ ಪಡುವ ಯುವಕರು ಕೇರಳದಲ್ಲಿ ಕೆಲಸವಿಲ್ಲದೆ ಅನ್ಯ ರಾಜ್ಯಗಳನ್ನು ಅವಲಂಬಿಸುವ ಪರಿಸ್ಥಿತಿಯಿದೆ. ವಯಸ್ಸಾದ ಅಜ್ಜ ಅಜ್ಜಿಯರು ಮಾತ್ರ ಕೇರಳದಲ್ಲಿದ್ದಾರೆ. ಕೇರಳದ ಎಲ್ಲಾ ಹೈವೇ ರಸ್ತೆಗಳೂ ನರೇಂದ್ರ ಮೋದಿ ಪ್ರಧಾನಿಯಾದ ಮೇಲೆ ಅಭಿವೃದ್ಧಿಯಾಗಿವೆ. ಒಳ್ಳೆಯ ರಸ್ತೆ ಬಂದರೆ ಎಲ್ಲಾ ಜನರಿಗೂ ಉಪಯೋಗವಾಗುತ್ತದೆ. ಬಿಜೆಪಿ



ಅಧಿಕಾರಕ್ಕೆ ಬಂದರೆ ಸಕಲ ವಿಭಾಗದಲ್ಲಿಯೂ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ಉತ್ತಮ ಶಾಲೆ, ಕಾಲೇಜು, ಆಸ್ಪತ್ರೆಗಳು ಇಲ್ಲದ ಕೇರಳ ರಾಜ್ಯವನ್ನು ಬಿಟ್ಟು ಅನೇಕ ಜನರು ಇತರ ರಾಜ್ಯಗಳಿಗೆ ತೆರಳುತ್ತಿದಾರೆ. ಮಲೆಯಾಳ ಭಾಷೆಗೆ ನೀಡುವಷ್ಟೇ ಪ್ರಾಮುಖ್ಯತೆ ಕನ್ನಡ ಭಾಷೆಗೂ ಸಿಗಬೇಕು. ಕಾಸರಗೋಡಿನಲ್ಲಿ ಬಿಜೆಪಿ ಗೆದ್ದು ಬಂದಲ್ಲಿ ಎಲ್ಲರಿಗೂ 5 ಲಕ್ಷ ರೂಪಾಯಿಯ ಆರೋಗ್ಯ ವಿಮೆ ಜಾರಿಯಾಗಲಿದೆ ಎಂದು ಅವರು ಘೋಷಿಸಿದರು.

ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರ ಚುನಾವಣಾ ಪ್ರಚಾರದ ಅಂಗವಾಗಿ ಬದಿಯಡ್ಕದಲ್ಲಿ ಶನಿವಾರ ನಡೆದ ಬೃಹತ್ ರೋಡ್ ಶೋ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ, ಪ್ರಮುಖರಾದ ರವೀಶ ತಂತ್ರಿ ಕುಂಟಾರು, ಎಂ.ಶ್ರೀಧರ ಬೆಳ್ಳೂರು, ಡಿ.ಶಂಕರ, ಎಂ.ಪಿ.ರಾಮಪ್ಪ ಮಂಜೇಶ್ವರ, ಅಶ್ವಿನಿ ಕೆ.ಎಂ., ಗೋಪಾಲಕೃಷ್ಣ ಮುಂಡೋಳುಮೂಲೆ, ರವೀಂದ್ರ ರೈ ಗೋಸಾಡ, ಎಂ.ಸುಧಾಮ ಗೋಸಾಡ ಸಹಿತ ಅನೇಕ ಮಂದಿ ಪ್ರಮುಖರು ಪಾಲ್ಗೊಂಡಿದ್ದರು.

ಬಿಜೆಪಿ ಪ್ರಮುಖರಿಂದ ವಿಶ್ವಾಸದ ಘೋಷಣೆ

ರೋಡ್ ಶೋ ಆರಂಭಕ್ಕೂ ಮುನ್ನ ಮಳೆ ಸುರಿದು ಅಡಚಣೆಯಾದರೂ ಕಾರ್ಯಕರ್ತರು, ಹಿತೈಷಿಗಳು ಹಾಗೂ ಪದಾಧಿಕಾರಿಗಳು ಉತ್ಸಾಹದಿಂದ ಘೋಷಣೆಗಳನ್ನು ಹಾಕುತ್ತಾ ಬದಿಯಡ್ಕ ಪೇಟೆಯ ರಸ್ತೆಯುದ್ದಕ್ಕೂ ಶಿಸ್ತಿನಿಂದ ಹೆಜ್ಜೆ ಹಾಕಿ ಮುಂದುವರಿದರು. ನಾಯಕರೂ ಮಳೆಯನ್ನು ಲೆಕ್ಕಿಸದೆ ಕಾರ್ಯಕರ್ತರೊಂದಿಗೆ ಹೆಜ್ಜೆ ಹಾಕಿ ಕಾಸರಗೋಡು ಮಂಡಲದಲ್ಲಿ ಈ ಬಾರಿ ತಾವರೆ ಅರಳಲೇಬೇಕು ಎಂಬ ವಿಶ್ವಾಸದ ಘೋಷಣೆ ಮೊಳಗಿಸಿದರು.

ಮಾ. 30ರಂದು ಏಕಾದಶ ನದಿಗಳ ಪುಣ್ಯ ತೀರ್ಥಗಳ ಭವ್ಯ ಮೆರವಣಿಗೆ | ಏ.3ರಂದು ಪ್ರತಿಷ್ಠೆ, ಏ.6ರಂದು ಬ್ರಹ್ಮಕುಂಭಾಭಿಷೇಕ

ಮಾ.30–ಏ.6: ಈಶ್ವರನ ಹೂದೋಟ ಪದ್ಯಾಣದಲ್ಲಿ ಬ್ರಹ್ಮಕಲಶೋತ್ಸವ

ಮಂಗಳೂರು: ಈಶ್ವರನ ಹೂದೋಟ ಎಂದೇ ಬಣ್ಣಿಸಲಾಗುವ ಪ್ರಶಾಂತ, ಪ್ರಕೃತಿಯ ಸೊಬಗು, ಹಸಿರು ಸಿರಿಯ ಮಧ್ಯೆ ಇರುವ ಬಂಟ್ವಾಳ ತಾಲೂಕಿನ ಕರೋಪಾಡಿ ಗ್ರಾಮದ ಪದ್ಯಾಣದಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಮಾ. 30ರಿಂದ ಏ. 6ವರೆಗೆ ನಡೆಯುವ ಬ್ರಹ್ಮಕಲಶೋತ್ಸವಕ್ಕೆ ಸಜ್ಜಾಗಿದೆ. ಏ. 7ರಂದು ಕಾರ್ಯಕರ್ತರ ಸಭೆ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ, ಹೈಕೋರ್ಟ್ ಹಿರಿಯ ವಕೀಲ ಡಾ. ಅರುಣ್ ಶ್ಯಾಮ್ ತಿಳಿಸಿದರು.

ಭಾರತದ ಏಕಾದಶ ಪುಣ್ಯ ನದಿಗಳ ತೀರ್ಥದೊಂದಿಗೆ ಶ್ರೀ ಮಹಾಲಿಂಗೇಶ್ವರ ದೇವರಿಗೆ ಬ್ರಹ್ಮಕಲಶಾಭಿಷೇಕ ನಡೆಯಲಿರುವುದು ವಿಶೇಷವಾಗಿದೆ. ಗಂಗೆ, ಯಮುನೆ, ಸರಸ್ವತಿ, ನರ್ಮದೆ, ಗಂಡಕೀ, ನಾರಾಯಣಿ, ತ್ರಿಶೂಲಿ, ಸರಯೂ, ಕಾವೇರಿ, ತುಂಗೆ, ನೇತ್ರಾವತಿ ನದಿಗಳ ತೀರ್ಥದ ಭವ್ಯ ಮೆರವಣಿಗೆ ಸಂಗಮ ಕ್ಷೇತ್ರ ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ, ಮಹಾಕಾಳಿ ದೇವಸ್ಥಾನದಿಂದ ಮಾ. 30ರಂದು ಬೆಳಗ್ಗೆ 11ಕ್ಕೆ ಚಾಲನೆಗೊಂಡು, ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ವಿಟ್ಲ ಪಂಚಲಿಂಗೇಶ್ವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆದು, ಹೊರೆಕಾಣಿಕೆಗಳ ಸಹಿತ ನಾಡಿನ ಸಾಧು, ಸಂತರ ನೇತೃತ್ವದಲ್ಲಿ ಶ್ರೀ ಕ್ಷೇತ್ರ ಪದ್ಯಾಣ ತಲುಪಲಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಮಾ.30ರಂದು ಮಧ್ಯಾಹ್ನ 3.30ಕ್ಕೆ ಮಿತ್ತನಡ್ಕ ಶ್ರೀ ಮಲರಾಯ ದೈವಸ್ಥಾನದಿಂದ ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಹಸಿರುವಾಣಿ



ಸಾಂಸ್ಕೃತಿಕ ಕಾರ್ಯಕ್ರಮಗಳು

ಪದ್ಯಾಣ ಬ್ರಹ್ಮಕಲಶೋತ್ಸವದಲ್ಲಿ ಪ್ರತಿದಿನ ಸಂಜೆ 7ರಿಂದ ವೈಭವದ ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿವೆ. ಮಾ.30ರಂದು ಜೂನಿಯರ್ ಶಂಕರ್ ಮತ್ತು ಬಳಗದಿಂದ ಗಿಲಿಗಿಲಿ ಮ್ಯಾಜಿಕ್, 31ರಂದು ಪದಯಾನ ತಂಡದಿಂದ ನೃತ್ಯಾಂಜಲಿ, ಏ.1ರಂದು ಡಾ. ವಿನಯಾ ಪದ್ಯಾಣ ಬೆಂಗಳೂರು ಅವರಿಂದ ಭಕ್ತಿಗಾನ ಸುಧಾ, 2ರಂದು ಸೂರ್ಯಗಾಯತ್ರಿ ಅವರಿಂದ ಭಕ್ತಿಗಾನ ಸಂಭ್ರಮ, 3ರಂದು ಪಾವಂಜೆ ಮೇಳದಿಂದ ತ್ರಿಪುರ ಮಥನ ಯಕ್ಷಗಾನ, 4ರಂದು ಆಳ್ವಾಸ್ ಸಾಂಸ್ಕೃತಿಕ ವೈಭವ, 5ರಂದು ಶಿವಶ್ರೀ ಸ್ಕಂದಪ್ರಸಾದ್ ಅವರಿಂದ ಶಿವಪದ ಯಾನ, 6ರಂದು ಹನುಮಗಿರಿ ಮೇಳದಿಂದ ಶ್ರೀದೇವಿ ಮಹಾತ್ಮೆ ಯಕ್ಷಗಾನ ಪ್ರದರ್ಶನಗೊಳ್ಳಲಿದೆ.

ಮೆರವಣಿಗೆ ನಡೆಯಲಿದೆ. ಸಂಜೆ 4ಕ್ಕೆ ತಂತ್ರಿಗಳ ಆಗಮನ, ಸಂಜೆ 5ರಿಂದ ವೈದಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಸಂಜೆ 4.30ರಿಂದ ಸುಧರ್ಮ ಸಭೆ ನಡೆಯಲಿದೆ. ಮಾ.31ರಂದು ಬೆಳಗ್ಗೆ 7ರಿಂದ ವೈದಿಕ ಕಾರ್ಯಕ್ರಮ, ಚಂಡಿಕಾಯಾಗ, ಸಂಜೆ 4.30ರಿಂದ ಸುಧರ್ಮ ಸಭೆ: ಮಾತೃಸಂಗಮ ನಡೆಯಲಿದೆ. ಏ.1ರಂದು ಬೆಳಗ್ಗೆ 7ರಿಂದ ವೈದಿಕ ಕಾರ್ಯಕ್ರಮ, ಸಂಜೆ 4.30ರಿಂದ ಸುಧರ್ಮ ಸಭೆ, ಏ.2ರಂದು ಬೆಳಗ್ಗೆ 7ರಿಂದ ವೈದಿಕ ಕಾರ್ಯಕ್ರಮ, ಸಂಜೆ 4.30ರಿಂದ ಸುಧರ್ಮ ಸಭೆ, ಏ.3ರಂದು ಬೆಳಗ್ಗೆ 10.56ಕ್ಕೆ ಶ್ರೀ ಮಹಾಲಿಂಗೇಶ್ವರ ದೇವರು, ಶ್ರೀ ಮಹಾಗಣಪತಿ, ಶ್ರೀ ಶಾಸ್ತಾರ ದೇವರ ಪುನರ್ ಪ್ರತಿಷ್ಠೆ, ರುದ್ರಹೋಮ, ಸಂಜೆ 4.30ರಿಂದ ಸುಧರ್ಮ ಸಭೆ ನಡೆಯಲಿದೆ. ಏ.4ರಂದು ಬೆಳಗ್ಗೆ 7ರಿಂದ ವೈದಿಕ ಕಾರ್ಯಕ್ರಮ, ಸಂಜೆ 4.30ಕ್ಕೆ ಸುಧರ್ಮ ಸಭೆ, ಏ.5ರಂದು ಬೆಳಗ್ಗೆ 7ರಿಂದ ವೈದಿಕ ಕಾರ್ಯಕ್ರಮ, ಶ್ರೀಶಿವ ಪಂಚಾಕ್ಷರಿ ಹಾಗೂ ಶ್ರೀ ಶಕ್ತಿಪಂಚಾಕ್ಷರಿ ಹವನ, ಸಂಜೆ 4.30ರಿಂದ ಸುಧರ್ಮ ಸಭೆ, ಏ.7ರಂದು ಬೆಳಗ್ಗೆ 7ರಿಂದ ದರ್ಶನ ಬಲಿ, ಬಟ್ಟಲು ಕಾಣಿಕೆ, ಸಂಜೆ 4.30ರಿಂದ ಕಾರ್ಯಕರ್ತ ಸಂಗಮ, ರಾತ್ರಿ 9ರಿಂದ ಶ್ರೀ ಧೂಮಾವತಿ ಹಾಗೂ ಕೊರತಿ ದೈವಗಳ ನೇಮ, ಮೇ 20ರಂದು ದೃಢಕಲಶ ನಡೆಯಲಿದೆ ಎಂದು ವಿವರಿಸಿದರು.

ದೇವಸ್ಥಾನದ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಸೇರಾಜೆ, ಬ್ರಹ್ಮಕಲಶೋತ್ಸವ ಸಮಿತಿ ಸಂಚಾಲಕ ಸೇರಾಜೆ ಗೋಪಾಲಕೃಷ್ಣ ಭಟ್, ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ ಶೆಟ್ಟಿ ಆನೆಯಾಲಗುತ್ತು, ಕಾರ್ಯದರ್ಶಿ ಕೃಷ್ಣ ಎಂ.ಆರ್.ಕಡಬ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಅರವಿಂದ ಪದ್ಯಾಣ, ಕಾರ್ಯದರ್ಶಿ ಈಶಾನ್ಯ ಪದ್ಯಾಣ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಪ್ರಣತಿ ಚೈತನ್ಯ ಪದ್ಯಾಣ, ವಿವಿಧ ಸಮಿತಿಗಳ ಪ್ರಮುಖರಾದ ವಿನೋದ್ ಶೆಟ್ಟಿ ಪಟ್ಲ, ಚೈತನ್ಯಕೃಷ್ಣ ಪದ್ಯಾಣ ಉಪಸ್ಥಿತರಿದ್ದರು.

ಬ್ರಹ್ಮಕುಂಭಾಭಿಷೇಕ

ಏ.6ರಂದು ಬೆಳಗ್ಗೆ 7ರಿಂದ ಶತರುದ್ರ ಸಹಿತ ಬ್ರಹ್ಮಕುಂಭಾಭಿಷೇಕ ನೆರವೇರಲಿದೆ. ಬ್ರಹ್ಮಕಲಶದಲ್ಲಿ ಬಿಲ್ವಪತ್ರೆ ಮತ್ತು ರುದ್ರಾಕ್ಷಿಯನ್ನು ಸರಣಿಕೆಯನ್ನಾಗಿ ನೀಡಲಾಗುವುದು. ಗ್ರಾಮಗೌರವ ಎಂಬ ಪರಿಕಲ್ಪನೆಯಲ್ಲಿ ಸ್ವಯಂಸೇವಕರನ್ನು ಗೌರವಿಸಲಾಗುತ್ತದೆ ಎಂದು ಅರುಣ್ ಶ್ಯಾಮ್ ತಿಳಿಸಿದರು.

ಮಾ. 30ರಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಸುಬ್ರಹ್ಮಣ್ಯ ಮಠಾಧೀಶ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ, ಮಾಣಿಲ ಶ್ರೀ ಮೋಹನದಾಸ ಸ್ವಾಮೀಜಿ ಮತ್ತು ಕಣಿಯೂರು ಶ್ರೀ ಮಹಾಬಲೇಶ್ವರ ಸ್ವಾಮೀಜಿ ಭಾಗವಹಿಸುವರು. ಹೈಕೋರ್ಟ್ ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ, ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರದ್ಧಾ ಅಮಿತ್, ಮಾ. 31ರಂದು ಒಡಿಯೂರಿನ ಶ್ರೀ ಮಾತಾನಂದಮಯಿ, ದಿಲ್ಲಿಯ ವಾಗ್ಮಿ ಕಾಜಲ್ ಹಿಂದುಸ್ತಾನಿ ಏ. 1ರಂದು ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು, ಏ. 2ರಂದು ಶ್ರೀ ಭೀಮನಕಟ್ಟೆ ಮಠದ ರಘುವರೇಂದ್ರ ತೀರ್ಥ ಶ್ರೀಪಾದರು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಏ. 3ರಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ, ಒಡಿಯೂರು ಸಂಸ್ಥಾನಂನ ಶ್ರೀ ಗುರುದೇವಾನಂದ ಸ್ವಾಮೀಜಿ, ಹೊರನಾಡು ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮಕರ್ತರಾದ ಡಾ. ಭೀಮೇಶ್ವರ ಜೋಷಿ,

ಧಾರ್ಮಿಕ ಸಭೆ

ಮಾಜಿ ಕೇಂದ್ರ ಸಚಿವ ಅನಂತಕುಮಾರ ಹೆಗಡೆ, ಅಯೋಧ್ಯೆ ಶ್ರೀ ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಗೋಪಾಲ್ ಜಿ., ಮೈಸೂರು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಏ. 4ರಂದು ರಾಮಕೃಷ್ಣಮಠದ ಅಧ್ಯಕ್ಷ ಶ್ರೀ ಜಿತಕಾಮಾನಂದಜಿ ಮಹಾರಾಜ್, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎ.ಶ್ರೀಶಾನಂದ, ಕರ್ನಾಟಕ ರಾಜ್ಯ ಗ್ರಾಹಕ ಆಯೋಗ ಅಧ್ಯಕ್ಷ ನ್ಯಾಯಮೂರ್ತಿ ಶಿವಶಂಕರೇಗೌಡ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಷಿ, ಶ್ರೀಪಾದ್ ಯೆಸ್ಸೊ ನಾಯಕ್, ಏ.ರಂದು 5ರಂದು ಮಂತ್ರಾಲಯದ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮೀಜಿ ಮತ್ತು ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವ ವಿ.ಸೋಮಣ್ಣ ಏ. 6ರಂದು ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ, ಗೌರಿಗದ್ದೆ ಅವಧೂತ ವಿನಯ ಗುರೂಜಿ, ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ, ಕೊಂಡೆವೂರು ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ವಾಗ್ಮಿ ಚಕ್ರವರ್ತಿ ಸೂಲಿಬೆಲೆ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಯಡಿಯೂರಪ್ಪ, ಏ. 7ರಂದು ಕಾರ್ಯಕರ್ತರ ಸಭೆಗೆ ಚಿತ್ರದುರ್ಗ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿ, ಹಿರೇಹಡಗಲಿ ಕ್ಷೇತ್ರದ ಶ್ರೀ ಅಭಿನವ ಹಾಲಶ್ರೀ ಸ್ವಾಮೀಜಿ, ವಿಹಿಂಪ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್ ವೆಲ್, ಹಿಂದು ಜಾಗರಣಾ ವೇದಿಕೆ ಕರ್ನಾಟಕ ಕ್ಷೇತ್ರೀಯ ಸಂಯೋಜಕ ಜಗದೀಶ ಕಾರಂತ, ಹಿರಿಯ ವೈದ್ಯ ಡಾ.ಎಂ.ಕೆ.ಪ್ರಸಾದ್ ಭಂಡಾರಿ, ಧಾರ್ಮಿಕ ಮುಖಂಡ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ಭಾಗವಹಿಸುವರು ಎಂದು ಅರುಣ ಶ್ಯಾಮ್ ತಿಳಿಸಿದರು.

ಕಿರುಸುದ್ದಿ

ಸ್ಯಾನ್ ಫ್ರಾನ್ಸಿಸ್ಕೊ ತಂಡಕ್ಕೆ ಅಶ್ವಿನ್



ಹೊಸದಿಲ್ಲಿ: ಭಾರತದ ಮಾಜಿ ಅಂತಾರಾಷ್ಟ್ರೀಯ ಆಟಗಾರ ಆರ್. ಅಶ್ವಿನ್ ಅಮೆರಿಕದ ಟಿ20 ಲೀಗ್‌ನಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಸ್ಯಾನ್ ಫ್ರಾನ್ಸಿಸ್ಕೊ ಯುನಿಕಾರ್ನ್ಸ್ ತಂಡದೊಂದಿಗೆ ಒಪ್ಪಂದಕ್ಕಿಳಿದಿರುವ ಅಶ್ವಿನ್, ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಆಡಲಿರುವ ಮೊದಲ ಭಾರತೀಯ ಕ್ಯಾಪ್ಡ್ ಆಟಗಾರರಾಗಿದ್ದಾರೆ ಎಂದು ತಂಡ ಶನಿವಾರ ಘೋಷಿಸಿದೆ. "ಮೇಜರ್ ಲೀಗ್ ಕ್ರಿಕೆಟ್ ಇತ್ತೀಚಿನ ಸೀಸನ್‌ಗಳಲ್ಲಿ ವಿಶ್ವಮಟ್ಟದ ಆಟಗಾರರನ್ನು ಆಕರ್ಷಿಸುತ್ತಿದ್ದು, ಅಮೆರಿಕದ ದೇಶೀಯ ಕ್ರಿಕೆಟ್ ಪ್ರತಿಭೆಗಳಿಗೆ ಉತ್ತಮ ವೇದಿಕೆಯಾಗುತ್ತಿದೆ. ಇಂತಹ ಲೀಗ್‌ನ ಭಾಗವಾಗುವುದು ನನಗೆ ವಿಶೇಷ ಅವಕಾಶ," ಎಂದು ಅಶ್ವಿನ್ ತಿಳಿಸಿದ್ದಾರೆ. "ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಆಡುತ್ತಿರುವ ಮೊದಲ ಭಾರತೀಯ ಆಟಗಾರ ಎಂಬ ಜವಾಬ್ದಾರಿಯನ್ನು ನಾನು ಸಂಪೂರ್ಣವಾಗಿ ಸ್ವೀಕರಿಸುತ್ತೇನೆ. ನನ್ನ ಗಮನ ತಂಡವನ್ನು ಗೆಲುವಿನತ್ತ ಕೊಂಡೊಯ್ಯುವುದು ಹಾಗೂ ಅಭಿಮಾನಿಗಳಿಗೆ ಉತ್ತಮ ಕ್ರಿಕೆಟ್ ನೀಡುವುದಾಗಿದೆ," ಎಂದು ಅವರು ಹೇಳಿದ್ದಾರೆ.

ಎರಡು ವಾರದವರೆಗೆ ಧೋನಿ ಅಲಭ್ಯ

ಚೆನ್ನೈ: ಮಹೇಂದ್ರ ಸಿಂಗ್ ಧೋನಿ ಅವರನ್ನು ನೋಡಲು ಕಾತರದಿಂದ ಕಾಯುತ್ತಿದ್ದ ಸಮಸ್ತ ಚೆನ್ನೈ ಸೂಪರ್ ಕಿಂಗ್ಸ್ ಅಭಿಮಾನಿಗಳಿಗೆ ಭಾರೀ ನಿರಾಸೆಯಾಗಿದ್ದು, ಮೊದಲಿನ 2 ವಾರದ ಚೆನ್ನೈ ಪಂದ್ಯಗಳಿಗೆ ಧೋನಿ ಲಭ್ಯರಿಲ್ಲ ಎಂದು ಫ್ರಾಂಚೈಸಿ ಖಚಿತಪಡಿಸಿತು. ಕೇವಲ ಐಪಿಎಲ್ ಸಮಯದಲ್ಲಿ ಮಾತ್ರ ಕಾಣಿಸಿಕೊಳ್ಳುವ ಧೋನಿ ಈ ಬಾರಿ ಮತ್ತಷ್ಟು ಕಣ್ಮರೆಯಾಗಿದ್ದಾರೆ. ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ರಿಹ್ಯಾಬ್‌ನಲ್ಲಿರುವ ಅವರು ನಮಗೆ ಅಲಭ್ಯರಾಗಿದ್ದಾರೆಂದು ಫ್ರಾಂಚೈಸಿ ಪ್ರಕಟಣೆಯಲ್ಲಿ ತಿಳಿಸಿದೆ. ಚೆನ್ನೈ ತಂಡದಲ್ಲಿ ಮೂವರು ವಿಕೆಟ್ ಕೀಪರ್‌ಗಳಿದ್ದಾರೆ. ಧೋನಿ ಹೊರತುಪಡಿಸಿ ಸಂಜು ಸ್ಯಾಮ್ಸನ್, ಉರ್ವಿಲ್ ಪಟೇಲ್ ಮತ್ತು ನೂತನ ಆಟಗಾರ ಕಾರ್ತಿಕ್ ಶರ್ಮ ವಿಕೆಟ್ ಕೀಪಿಂಗ್ ಮಾಡಬಲ್ಲರು. 16 ವರ್ಷದಲ್ಲಿ ಮೊದಲ ಬಾರಿಗೆ ಧೋನಿ ಅವರಿಲ್ಲದೆ ಚೆನ್ನೈ ತಂಡ ಕಣಕ್ಕಿಳಿಯುವುದು ಖಚಿತವಾಗಿದೆ. ಎರಡು ವಾರಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ನಾಲ್ಕು ಪಂದ್ಯಗಳನ್ನು ಹೊಂದಿದೆ.

ಶಾಟ್ಗನ್ ವಿಶ್ವಕಪ್ ಸ್ಕೀಟ್: ಫೈನಲ್ಗೇರದ ಭಾರತೀಯರು

ಹೊಸದಿಲ್ಲಿ: ಟ್ಯಾಂಜಿಯರ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್‌ನ ಸ್ಕೀಟ್ ವಿಭಾಗದಲ್ಲಿ ಭಾರತೀಯ ಶೂಟರ್‌ಗಳು ಫೈನಲ್‌ಗೆ ಪ್ರವೇಶಿಸಲು ವಿಫಲರಾದರು. ಒಲಿಂಪಿಯನ್ ಮಹೇಶ್ವರಿ ಚೌಹಾಣ್ ಉತ್ತಮ ಹೋರಾಟ ನೀಡಿದರೂ, ಟಾಪ್ 8 ಸ್ಥಾನ ತಪ್ಪಿಸಿಕೊಂಡರು. ಮೊದಲ ದಿನ 75ರಲ್ಲಿ 69 ಅಂಕ ಗಳಿಸಿದ್ದ ಅವರು, ಕೊನೆಯ ಸುತ್ತುಗಳಲ್ಲಿ 23 ಮತ್ತು 21 ಹೊಡೆದು ಒಟ್ಟು 113 ಅಂಕಗಳಿಗೆ ತಲುಪಿದರು. ಫೈನಲ್ ಪ್ರವೇಶಕ್ಕೆ ಅಗತ್ಯವಾಗಿದ್ದ 115 ಅಂಕಗಳಿಗೆ ಅವರು ಎರಡು ಅಂಕಗಳಿಂದ ಹಿಂದುಳಿದರು. ದರ್ಶನಾ ರಾಠೋಡ್ ಕೊನೆಯ ಸುತ್ತಿನಲ್ಲಿ ಪರಿಪೂರ್ಣ 25 ಅಂಕ ಗಳಿಸಿದರೂ, ಒಟ್ಟು 112 ಅಂಕಗಳೊಂದಿಗೆ 19ನೇ ಸ್ಥಾನ ಪಡೆದರು. ಅವರ ಸಹೋದರಿ ಯಶಸ್ವಿ ರಾಠೋಡ್ 110 ಅಂಕಗಳೊಂದಿಗೆ 23ನೇ ಸ್ಥಾನ ಪಡೆದರು. ರ್ಯಾಂಕಿಂಗ್ ಅಂಕಗಳಿಗಾಗಿ ಸ್ಪರ್ಧಿಸಿದ್ದ ಅರೀಬಾ ಖಾನ್ ಮತ್ತು ಮಾನ್ಸಿ ರಘುವಂಶಿ ತಲಾ 112 ಅಂಕಗಳನ್ನು ಗಳಿಸಿದರು.ಪುರುಷರ ವಿಭಾಗದಲ್ಲಿ ಪರಂಪಾಲ್ ಸಿಂಗ್ ಗುರೋನ್ 117 ಅಂಕಗಳೊಂದಿಗೆ 26ನೇ ಸ್ಥಾನ ಪಡೆದರು. ಜ್ಯೋತಿರಾದಿತ್ಯ ಸಿಂಗ್ ಸಿಸೋಡಿಯಾ 108 ಅಂಕಗಳೊಂದಿಗೆ 62ನೇ ಸ್ಥಾನ ಹಾಗೂ ಮಾನ್ ಸಿಂಗ್ 105 ಅಂಕಗಳೊಂದಿಗೆ 65ನೇ ಸ್ಥಾನ ಪಡೆದರು.ರ್ಯಾಂಕಿಂಗ್ ಅಂಕಗಳಿಗಾಗಿ ಸ್ಪರ್ಧಿಸಿದ್ದ ಸುಖಬೀರ್ ಸಿಂಗ್ ಹರಿಕಾ 113 ಹಾಗೂ ಹರ್ಮೆಹರ್ ಸಿಂಗ್ ಲಾಲಿ 102 ಅಂಕ ಗಳಿಸಿದರು.

ತೇಜಸ್ವಿನ್‌ಗೆ ಡೆಕಾಥ್ಲಾನ್ ಸ್ವರ್ಣ

ಟೆಕ್ಸಾಸ್: ಅಮೆರಿಕದಲ್ಲಿ ನಡೆದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಭಾರತೀಯ ಅಥ್ಲೀಟ್ ತೇಜಸ್ವಿನ್ ಶಂಕರ್ ಡೆಕಾಥ್ಲಾನ್ ವಿಭಾಗದಲ್ಲಿ ಸ್ವರ್ಣ ಪದಕವನ್ನು ಗೆದ್ದಿದ್ದಾರೆ. ಇಲ್ಲಿ ನಡೆದ 2026ರ ಡೇವಿಡ್ ನೋಬಲ್ ರಿಲೇ ಕೂಟದಲ್ಲಿ 7,947 ಅಂಕಗಳ ಸಂಪಾದಿಸಿ ತೇಜಸ್ವಿನ್ ಅಗ್ರಸ್ಥಾನ ಪಡೆದಿದ್ದು, 8,000 ಅಂಕಗಳ ಮೈಲಿಗಲ್ಲನ್ನು ದಾಟಲು 53 ಅಂಕಗಳ ಕೊರತೆ ಅನುಭವಿಸಿದರು. ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಅರ್ಹತಾ ಮಾನದಂಡಗಳನ್ನು ದಾಟುವ ಮೂಲಕ ಶಂಕರ್ ಈ ಋತುವಿನಲ್ಲಿ ಅದ್ಭುತ ಆರಂಭವನ್ನು ಕಂಡಿದ್ದಾರೆ. ತೇಜಸ್ವಿನ್ ತಮ್ಮ ವೈಯಕ್ತಿಕ ಅತ್ಯುತ್ತಮ ಪ್ರದರ್ಶನವನ್ನು ಉತ್ತಮಪಡಿಸಿದ್ದು, ಶ್ರೇಷ್ಠ ಪ್ರದರ್ಶನ ನೀಡುವ ಮೂಲಕ ಭಾರತೀಯ ಡೆಕಾಥ್ಲನ್‌ಪಟು ದಾಖಲಿಸಿದ ಅತ್ಯುತ್ತಮ ಪ್ರದರ್ಶನವನ್ನು ದಾಖಲಿಸಿದ್ದಾರೆ.

ಭಾರತದ ನಾಲ್ಕು ತಂಡಗಳಿಗೆ ವಿಶ್ವ ಅಥ್ಲೆಟಿಕ್ಸ್ ರಿಲೇ ಅರ್ಹತೆ

ಚಂಡೀಗಢ: ಭಾರತೀಯ ಓಪನ್ ರಿಲೇ ಕಾರ್ನಿವಲ್‌ನಲ್ಲಿ ಶನಿವಾರ ಉತ್ತಮ ಪ್ರದರ್ಶನ ನೀಡಿದ ಭಾರತದ ನಾಲ್ಕು ರಿಲೇ ತಂಡಗಳು ವಿಶ್ವ ಅಥ್ಲೆಟಿಕ್ಸ್ ರಿಲೇ 2026 ಕೂಟಕ್ಕೆ ಅರ್ಹತೆಯನ್ನು ಸಂಪಾದಿಸಿದೆ. ಇವುಗಳಲ್ಲಿ ಪ್ರಮುಖವಾಗಿ ಭಾರತೀಯ ಪುರುಷರ 4 400 ಮೀ. ರಿಲೇ ತಂಡ ವಿಶ್ವ ಅಥ್ಲೆಟಿಕ್ಸ್ ರಿಲೇ ಅರ್ಹತೆ ಸಂಪಾದಿಸಿದ್ದು, ಪುರುಷರ 4 100 ಮೀ. ರಿಲೇ ತಂಡ ಅರ್ಹತೆಯನ್ನು ಸಂಪಾದಿಸುವಲ್ಲಿ ವಿಫಲವಾಗಿದೆ. ಉಳಿದಂತೆ ಭಾರತದ 4 100 ಮೀ. ಮಿಶ್ರ ರಿಲೇ, ಮಹಿಳೆಯರ 4 100 ಮೀ. ಮತ್ತು 4 400 ಮೀ. ಮಿಶ್ರ ರಿಲೇ ತಂಡಗಳು ಅರ್ಹತೆ ಸಂಪಾದಿಸಿವೆ.

ವಿರಾಟ್ ಆಟಕ್ಕೆ ಹೈದರಾಬಾದ್ ತತ್ತರ | ಬಿಟ್ಟಲ್ಲೇ ಶುರುಮಾಡಿದ ಆರ್‌ಸಿಬಿ | ಕಿಶನ್ ಹೋರಾಟ ವ್ಯರ್ಥ

ಹಾಲಿ ಚಾಂಪಿಯನ್ಸ್‌ಗೆ ಗೆಲುವಿನ ಆರಂಭ

ಪೃಥ್ವಿರಾಜ್ ಕುಲಕರ್ಣಿ

ಬೆಂಗಳೂರು: ಹಾಲಿ ಚಾಂಪಿಯನ್ ಆರ್‌ಸಿಬಿ ಐಪಿಎಲ್ 2026ರ ಉದ್ಘಾಟನಾ ಪಂದ್ಯದಲ್ಲಿ ಸನ್‌ರೈಸರ್ಸ್ ವಿರುದ್ಧ 26 ಎಸೆತಗಳು ಉಳಿದಿರುವಂತೆ 6 ವಿಕೆಟ್ ಜಯ ಸಾಧಿಸಿದ್ದು, ಗೆಲುವಿನ ಶುಭಾರಂಭ ಮಾಡಿದೆ.

ಆರ್‌ಸಿಬಿ ಅಭಿಮಾನಿಗಳಿಗೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಕ್ರಿಕೆಟ್ ಮರಳಿದ ಖುಷಿ. ತಮ್ಮ ನೆಚ್ಚಿನ ಆಟಗಾರ ವಿರಾಟ್ ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ಆ ಖುಷಿಗೆ ಬೂಸ್ಟರ್! ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಹೈದರಾಬಾದ್ ತಂಡವನ್ನು 6 ವಿಕೆಟ್‌ನಿಂದ ಸೋಲಿಸಿದ ನಂತರ ಚಿನ್ನಸ್ವಾಮಿ ಕ್ರೀಡಾಂಗಣದ ತುಂಬಾ ಕೆಂಪು ಜೆರ್ಸಿ, ಕೈಯಲ್ಲಿ ಝುಂಡಾ ಹಿಡಿದುಕೊಂಡು ಎಂದಿನಂತೆ ಮೈದಾನಕ್ಕೆ ಬಂದಿದ್ದ ಸಮಸ್ತ ಆರ್‌ಸಿಬಿ ಅಭಿಮಾನಿಗಳ ದಿನ ಸಂಭ್ರಮವಾಗಿ ಮುಕ್ತಾಯಗೊಂಡಿತು.

ನಿರೀಕ್ಷೆಗಳೊಂದಿಗೆ ಮೈದಾನಕ್ಕಿಳಿದ ಹೈದರಾಬಾದ್ ಇಶಾನ್ ಕಿಶನ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ 201 ರನ್ ಗಳಿಸಿತು. ಗುರಿ ಬೆನ್ನತ್ತಿದ ಆರ್‌ಸಿಬಿ 15.4 ಓವರ್‌ಗಳಲ್ಲೇ 203 ರನ್ ಗಳಿಸಿ ಪಂದ್ಯ ಮುಗಿಸಿತು.

ದೇವದತ್ತ ಪಡಿಕ್ಕಲ್ ಹಾಗೂ ವಿರಾಟ್ ಕೊಹ್ಲಿ ಪಂದ್ಯದ ಹೀರೋ ಎನಿಸಿದರು. ಜೇಕಬ್ ಡಫಿ ಪಂದ್ಯಶ್ರೇಷ್ಠ ಗೆದ್ದುಕೊಂಡರು. ಎದುರಾಳಿ ಪರ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದರು.

ಆರ್‌ಸಿಬಿ ಆಡಿದ್ದೇ ಆಟ: ಗುರಿ ಬೆನ್ನತ್ತುವಾಗ ಯಾವ ಕ್ಷಣಕ್ಕೂ ಆರ್‌ಸಿಬಿ ಅಭಿಮಾನಿಗಳು ಕೆಳಗೆ ಕೂಡಲಿಲ್ಲ. ಸ್ಥಳೀಯ ಪ್ರತಿಭೆ ಪಡಿಕ್ಕಲ್ ಹೈದರಾಬಾದ್ ಪಡೆಯ ವಿಶ್ವಾಸ ಮುರಿದು ಹಾಕಿದರು. ಆದೆಲ್ಲಾ ಆರಂಭದಲ್ಲಿ ಸಾಲ್ಟ್ ವಿಕೆಟ್ ಬಿದ್ದರೂ ವಿರಾಟ್ ಕೊಹ್ಲಿ ಹಾಗೂ ಪಡಿಕ್ಕಲ್ ಅವರ ಆಟಕ್ಕೆ ಕಿಂಚಿತ್ತು ಪರಿಣಾಮ ಬೀಳಲಿಲ್ಲ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ಪಡಿಕ್ಕಲ್ ಸಿಂಗಲ್, ಟುಡಿಗಳೊಂದಿಗೆ ಸೆಟ್ ಆಗುವ ಮುಲಾಜಿಗೆ ಬೀಳಲೇ ಇಲ್ಲ. ಮೊದಲ ಎಸೆತದಿಂದಲೂ ದಂಡಿಸಿ ಪಂದ್ಯವನ್ನು ಬೇಗನೇ ಮುಗಿಸಿಕೊಂಡು ಹೋಗುವ ಅವರ ನಿರ್ಧಾರ ಸ್ಫೋಟಕ ಬೌಂಡರಿ, ಗಗನದೆತ್ತರದ ಸಿಕ್ಸರ್‌ಗಳ ಮೂಲಕ ಗೋಚರಿಸಿತು. ಆರ್‌ಸಿಬಿ 8.1 ಓವರ್‌ಗಳಲ್ಲೇ 100 ರನ್ ಮುಟ್ಟಿತು. ಹೈದರಾಬಾದ್ ಸೋಲಿನ ರುಚಿ ನಿಧಾನವಾಗಿ ಸವಿಯಲಾರಂಭಿಸಿತು. ಅನುಭವಿ ಬೌಲರ್‌ಗಳಿಲ್ಲ ಹೆಚ್ಚಿನ ವೇಗಿಗಳಿಲ್ಲ. ಮುಖ್ಯವಾಗಿ ಪ್ಯಾಟ್ ಕಮ್ಮಿನ್ಸ್ ಅವರ ಅಲಭ್ಯತೆ ತಂಡಕ್ಕೆ ಕಾಡಿದ್ದು ಸ್ಪಷ್ಟವಾಗಿ ಗೋಚರಿಸಿತು.

ಚಿತ್ರ: ಮೋಹನ್ ಕುಮಾರ್ ಬಿ.ಎಸ್



ಸಂಕ್ಷಿಪ್ತ ಸ್ಕೋರ್
ಹೈದರಾಬಾದ್: 20 ಓವರ್‌ಗಳಲ್ಲಿ 201/9; ಕಿಶನ್ 80, ಅನಿಕೇತ್ 43; ಡಫಿ 22/3
ಬೆಂಗಳೂರು: 15.4 ಓವರ್‌ಗಳಲ್ಲಿ 203/4: ಕೊಹ್ಲಿ 69★, ಪಡಿಕ್ಕಲ್ 61, ಪೇಯ್ನ್ 35/2

ಕೊಹ್ಲಿ ಆರ್ಭಟ, ಆರ್‌ಸಿಬಿ ಶುಭಾರಂಭ

ಪಡಿಕ್ಕಲ್‌ಗೆ ಸಾಥ್ ನೀಡುತ್ತಾ ಬೌಂಡರಿ ಸಿಕ್ಸರ್‌ಗಳ ಮೂಲಕ ಅಭಿಮಾನಿಗಳನ್ನು ರಂಜಿಸಿದ ವಿರಾಟ್ ಕೊಹ್ಲಿ ಎದುರಾಳಿಗಳನ್ನು ಕ್ರಮೇಣವಾಗಿ ಸೋಲಿಸುತ್ತಾ ಬಂದರು. ಪಡಿಕ್ಕಲ್ ವಿಕೆಟ್ ಒಪ್ಪಿಸಿದ ನಂತರ ತೀರಾ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. 12.3 ಓವರ್ ಅನ್ನುಷ್ಟರಲ್ಲಿ ಆರ್‌ಸಿಬಿ 163 ರನ್ ಮುಟ್ಟಿತು. 13ನೇ ಓವರ್‌ನಲ್ಲಿ ವೇಗಿ ಡೇವಿಡ್ ಪಾಯ್ನೆ ಸರಸರನೇ 2 ವಿಕೆಟ್ ಕಿತ್ತರು. ಸಮಯ ಮೀರಿ ಹೋಗಿತ್ತು ಪಂದ್ಯ ಗೆದ್ದಾಗಿತ್ತು. ಕೇವಲ ಔಪಚಾರಿಕ ಆಟವಷ್ಟೇ ಆಗ ಬಾಕಿಯಿತ್ತು. ಆರ್‌ಸಿಬಿ ನಾಗಾಲೋಟಕ್ಕೆ ಜಯ ಸಿಕ್ಕಂತಾಯಿತು. ಕೊನೆಯಲ್ಲಿ ಕೊಹ್ಲಿ ಅಜೇಯ 69 ರನ್ ಗಳಿಸಿದರೆ ಡೇವಿಡ್ 16 ರನ್ ಗಳಿಸಿದರು.

ಕ್ರೀಡಾಂಗಣ ಭದ್ರತೆಗೆ ಮಾಸ್ಟರ್‌ಪ್ಲಾನ್

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯ ಅಚ್ಚುಕಟ್ಟಾದ ಪೊಲೀಸ್ ಭದ್ರತೆಯೊಂದಿಗೆ ಆರಾಮಾಗೇ ನಡೆಯಿತು. ಪಂದ್ಯ ಸಂಜೆ 7:30ಕ್ಕೆ ಶುರುವಾದರೂ ಅಭಿಮಾನಿಗಳು ಕೆಂಪು ಜೆರ್ಸಿಯೊಂದಿಗೆ ಮಧ್ಯಾಹ್ನದಿಂದಲೇ ಕಾಣಿಸಿಕೊಂಡರು. ಅಚ್ಚುಕಟ್ಟಾಗಿ ನಿಭಾಯಿಸಿದ ಪೊಲೀಸರು, ಎಂದಿನಂತೆ ಸೇರಿದ್ದ ಅಭಿಮಾನಿಗಳನ್ನು ವಿಭಿನ್ನ ಯೋಜನೆಗಳೊಂದಿಗೆ ನಿಯಂತ್ರಿಸಿದರು.

ಪೊಲೀಸ್ ಕಣ್ಗಾವಲು

ಮೈದಾನದ ಸುತ್ತಲೂ ಪೊಲೀಸ್ ಕಣ್ಗಾವಲಿತ್ತು. ಎಲ್ಲೆಲ್ಲೂ ಪೊಲೀಸ್ ಅಧಿಕಾರಿಗಳು, ಪೇದೆಗಳು ಜನರನ್ನು ಕಳುಹಿಸುತ್ತಾ ದಟ್ಟಣೆ ತಡೆದರು. ಖಾಕಿ ಕಣ್ಗಾವಲು ಕೇವಲ ಮೈದಾನಕ್ಕೆ ಸೀಮಿತವಾಗಿರಲಿಲ್ಲ. ಜನದಟ್ಟಣೆ ಮತ್ತು ಟ್ರಾಫಿಕ್ ತಡೆಯುವ ನಿಟ್ಟಿನಲ್ಲಿ ದೂರದ ಕಬ್ಬನ್ ಪಾರ್ಕ್, ಕ್ವೀನ್ಸ್ ರೋಡ್ ಮತ್ತು ಕ್ರೀಡಾಂಗಣದ ಸುತ್ತಲೂ ಬಂದೋಬಸ್ತ್ ವ್ಯವಸ್ಥೆಯನ್ನಿಟ್ಟಿತ್ತು.

ಟ್ರಾಫಿಕ್ ನಿರ್ವಹಣೆ

ಮೈದಾನದ ಸುತ್ತಲೂ ಅಚ್ಚುಕಟ್ಟಾದ ಟ್ರಾಫಿಕ್ ನಿಯಂತ್ರಣ ಮಾಡಿದ್ದು, ಭದ್ರತಾ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಮುಖ್ಯವಾಗಿ ಪಾರ್ಕಿಂಗ್‌ಗೆ ನಾಲ್ಕು ಸ್ಥಳಗಳನ್ನು ಆರಿಸಲಾಗಿತ್ತು. ಹೀಗಿರುವಾಗ ಪಂದ್ಯಕ್ಕೆ ಬಂದ ಅಭಿಮಾನಿಗಳೆಲ್ಲಾ ಮೈದಾನದ ಸುತ್ತಲೂ ಪಾರ್ಕಿಂಗ್ ಮಾಡಲೇ ಇಲ್ಲ. ಬೈಕು, ಕಾರುಗಳೊಂದಿಗೆ ಮೈದಾನಕ್ಕೆ ಬರಲೇ ಇಲ್ಲ. ರಸ್ತೆ ಬದಿಯಲ್ಲಿ ಯಾವುದೇ ಅಭಿಮಾನಿಗಳನ್ನು ನಿಲ್ಲಲು ಬಿಡಲಿಲ್ಲ. ರಸ್ತೆ ದಾಟುವಾಗಿ ಕೈಹಿಡಿದು ನಡೆಸಿದಂತೆ ಪೊಲೀಸರು ಜನರನ್ನು ಬಿಟ್ಟು ಬರುತ್ತಿದ್ದರು. ಮತ್ತೆ ತಮ್ಮ ಸ್ಥಳಗಳಲ್ಲಿ ಹೋಗಿ ನಿಲ್ಲುತ್ತಿದ್ದರು.



ಸದಾ ನಮ್ಮ ಹೃದಯದಲ್ಲಿ

ಯಾವಾಗಲೂ ಕೂಗಾಟ, ಕ್ರೇಜ್ ಮತ್ತು ಸೌಂಡ್‌ಗಾಗಿ ಹೆಸರುವಾಸಿಯಾಗಿರುವ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಒಂದು ಕ್ಷಣದ ಕಾಲ ಸ್ತಬ್ಧವಾಗಿ ನಿಂತಿತ್ತು. ಎಲ್ಲಾ ಜನರೂ ಎದ್ದು ನಿಂತು ಸಂತಾಪ ಸಲ್ಲಿಸುತ್ತಿದ್ದರೆ, ಇತ್ತ ಉಭಯ ತಂಡದ ಆಟಗಾರರು ಮೌನ ಆಚರಣೆ ಮಾಡಿದರು. ಕಾಲ್ತುಳಿತದಲ್ಲಿ ಮೃತಪಟ್ಟ 11 ಜನರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಂದ್ಯಕ್ಕೂ ಮುನ್ನ ಸಮಸ್ತ ಜನರು ಮೌನ ಆಚರಣೆ ಮಾಡಿದರು.

- 11 ಖಾಲಿ ಆಸನಗಳು
- ಕಪ್ಪು ಪಟ್ಟಿ ಕಟ್ಟಿಕೊಂಡು ಕಣಕ್ಕೆ ಆರ್‌ಸಿಬಿ
- ಅಭ್ಯಾಸದ ವೇಳೆ ಎಲ್ಲ ಆರ್‌ಸಿಬಿ ಆಟಗಾರರಿಂದ 11 ನಂಬರ್ ಜೆರ್ಸಿ ಬಳಕೆ
- 11ಆಸನಗಳಿಗೆ ಪುಷ್ಪ ಸಮರ್ಪಣೆ

ಪ್ರಮುಖ ಅಂಶಗಳು

- ಜನ ಸಂದಣಿ ನಿಯಂತ್ರಣ
- ಮೈದಾನ ಸುತ್ತಲೂ ಕಣ್ಗಾವಲು
- ಸಿಸಿ ಕ್ಯಾಮರಾಗಳೊಂದಿಗೆ ನಿಯಂತ್ರಣ
- ಎಐ ಕ್ಯಾಮರಾಗಳ ಕಣ್ಗಾವಲು
- ಟಿಕೆಟ್ ಇಲ್ಲದವರಿಗಿಲ್ಲ ನಿಲ್ಲವುದಕ್ಕೂ ಅವಕಾಶ
- ಮೈದಾನ ಸುತ್ತಲೂ ಜನರು ಓಡಾಡುತ್ತಲೇ ಇದ್ದರು.
- ಒಂದೇ ಕಡೆ ನಿಲ್ಲಲು ಬಿಡದ ಪೊಲೀಸರು
- ಅಚ್ಚುಕಟ್ಟಾದ ಪಾರ್ಕಿಂಗ್ ವ್ಯವಸ್ಥೆ
- ಗೇಟಿನ ಹೊರಗಡೆ ಜನರಿಗೆ ನಿಲ್ಲಲು ಅವಕಾಶ ನೀಡಲಿಲ್ಲ

ಬಾಂಗ್ಲಾದಲ್ಲಿ ಐಪಿಎಲ್ ಪ್ರಸಾರಕ್ಕೆ ಅಸ್ತು

ಢಾಕಾ: ಇಲ್ಲದ ಸಾಹಸಕ್ಕೆ ಕೈಹಾಕಿ ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿದ್ದು ಹಿನ್ನಡೆ ಅನುಭವಿಸಿರುವ ಬಾಂಗ್ಲಾದೇಶ ಕ್ರಿಕೆಟ್ ಸಂಸ್ಥೆ ಮತ್ತು ಅಲ್ಲಿನ ಸರ್ಕಾರ ಮತ್ತೊಮ್ಮೆ ಮಂಡಿಯೂರಿದೆ. ಬಾಂಗ್ಲಾದೇಶದಲ್ಲಿ ರದ್ದುಗೊಳಿಸಲಾಗಿದ್ದ ಐಪಿಎಲ್ ಪ್ರಸಾರಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದು, ಅವಕಾಶ ನೀಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಹೊಸ ಮಾಹಿತಿ ಮತ್ತು ಪ್ರಸಾರ ಸಚಿವ ಜಹಿರುದ್ದೀನ್ ಸ್ವಪನ್ ಅವರು, ಐಪಿಎಲ್ ಪ್ರಸಾರಕ್ಕೆ ಯಾವುದೇ ಚಾನೆಲ್ ಅರ್ಜಿ ಸಲ್ಲಿಸಿದರೆ ಸರ್ಕಾರ ಸಕಾರಾತ್ಮಕವಾಗಿ ಪರಿಗಣಿಸುತ್ತದೆ ಎಂದು ತಿಳಿಸಿದ್ದಾರೆ.

ಈ ವರ್ಷದ ಜನವರಿಯಲ್ಲಿ ಮುಸ್ತಫಿಜುರ್ ರಹಮಾನ್ ಅವರನ್ನು ಐಪಿಎಲ್‌ನಿಂದ ಹೊರಗಿಟ್ಟ ಹಿನ್ನೆಲೆ, ಬಾಂಗ್ಲಾದೇಶ ಸರ್ಕಾರ ಐಪಿಎಲ್ ಪ್ರಸಾರವನ್ನು ನಿಷೇಧಿಸಿತ್ತು. ಈ ನಿಷೇಧವನ್ನು ಅಧಿಕೃತ ಸೂಚನೆಯ ಮೂಲಕ ಜಾರಿಗೊಳಿಸಲಾಗಿತ್ತು. ಆದರೆ ಈಗಿನ ಬೆಳವಣಿಗೆಗಳಲ್ಲಿ, ಹಿಂದಿನ ಸರ್ಕಾರ ಹೊರಡಿಸಿದ್ದ ಆ ಆದೇಶವನ್ನು ರದ್ದುಗೊಳಿಸಲಾಗಿದೆ. ಯಾವುದೇ ಚಾನೆಲ್ ಐಪಿಎಲ್ ಪ್ರಸಾರಕ್ಕೆ ಅರ್ಜಿ ಸಲ್ಲಿಸಿರಲಿಲ್ಲ. ಕ್ರೀಡೆ ಮತ್ತು ರಾಜಕೀಯವನ್ನು ನಾವು ಮಿಶ್ರಣಗೊಳಿಸಲು ಬಯಸುವುದಿಲ್ಲ.



ವ್ಯಾಪಾರಿಕ ದೃಷ್ಟಿಯಿಂದ ನೋಡುತ್ತೇವೆ. ಅರ್ಜಿ ಬಂದರೆ ನಾವು ಅದನ್ನು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ, ಎಂದು ಸಚಿವ ತಿಳಿಸಿದ್ದಾರೆ. ಇದಲ್ಲದೆ, ಐಪಿಎಲ್ ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ಕೂಡ ಟೂರ್ನಿಯನ್ನು ಪ್ರಸಾರ ಮಾಡಬಹುದು. ಕೇಬಲ್ ಆಪರೇಟರ್‌ಗಳ ಮೇಲೂ ಯಾವುದೇ ನಿರ್ಬಂಧ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಯಾರನ್ನೂ ನಾವು ಪ್ರಸಾರದಿಂದ ತಡೆಯುವುದಿಲ್ಲ. ಸ್ಟಾರ್ ಸ್ಪೋರ್ಟ್ಸ್ ಅಥವಾ ಸ್ಥಳೀಯ ಚಾನೆಲ್‌ಗಳು ಪ್ರಸಾರ ಮಾಡಲು ಬಯಸಿದರೆ, ನಾವು ಅವಕಾಶ ನೀಡುತ್ತೇವೆ, ಎಂದು ಸ್ವಪನ್ ಹೇಳಿದ್ದಾರೆ.

ಮೊಂಟೆ ಕಾರ್ಲೊ ಮಾಸ್ಟರ್ಸ್‌ಗಿಲ್ಲ ಜೋಕೋವಿಚ್

ದುಬೈ: ಎರಡು ಬಾರಿ ಚಾಂಪಿಯನ್ ಆಗಿರುವ ನೊವಾಕ್ ಜೋಕೋವಿಚ್ ಮೊಂಟೆ-ಕಾರ್ಲೊ ಮಾಸ್ಟರ್ಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.

38 ವರ್ಷದ ಸರ್ಬಿಯಾ ಆಟಗಾರರು ಬಲ ಭುಜದ ಗಾಯದ ಕಾರಣದಿಂದ ಈಗಾಗಲೇ ಮಿಯಾಮಿ ಓಪನ್‌ನಿಂದ ಹೊರಬಂದಿದ್ದರು. ಅದೇ ಗಾಯದ ಹಿನ್ನೆಲೆ ಅವರು ಕ್ಲೇ ಕೋರ್ಟ್ ಟೂರ್ನಿಯಾದ ಮೊಂಟೆ-ಕಾರ್ಲೊ ಮಾಸ್ಟರ್ಸ್‌ನಿಂದಲೂ ಹಿಂದೆ ಸರಿದಿದ್ದಾರೆ. ಈ ತಿಂಗಳ ಆರಂಭದಲ್ಲಿ ಇಂಡಿಯನ್ ವೆಲ್ಸ್ ಟೂರ್ನಿಯಲ್ಲಿ ಭಾಗವಹಿಸಿದ್ದ ಜೋಕೋವಿಚ್, ರೌಂಡ್ ಆಫ್ 16ನಲ್ಲಿ ಹಾಲಿ ಚಾಂಪಿಯನ್ ಜಾಕ್ ಡ್ರೇಪರ್ ವಿರುದ್ಧ ಸೋತಿದ್ದರು. 24 ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ವಿಜೇತರಾದ ಜೋಕೋವಿಚ್, 2013 ಮತ್ತು 2015ರಲ್ಲಿ ಮೊಂಟೆ-ಕಾರ್ಲೊ ಮಾಸ್ಟರ್ಸ್ ಕಿರೀಟ ಗೆದ್ದಿದ್ದರು. ಅಮೆರಿಕದ ವಿಶ್ವ ಏಳನೇ ರ್ಯಾಂಕ್‌ನ ಆಟಗಾರ ಟೇಲರ್ ಫ್ರಿಟ್ಜ್ ಕೂಡ



ಗಾಯದ ಕಾರಣದಿಂದ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

2026ರ ಮೊಂಟೆ-ಕಾರ್ಲೊ ಮಾಸ್ಟರ್ಸ್ ಏಪ್ರಿಲ್ 5ರಿಂದ 12ರವರೆಗೆ ನಡೆಯಲಿದ್ದು, ವಿಶ್ವ ನಂ.1 ಕಾರ್ಲೋಸ್ ಅಲ್ಕರಾಜ್ ತಮ್ಮ ಪ್ರಶಸ್ತಿಯನ್ನು ರಕ್ಷಿಸಲು ಕಣಕ್ಕಿಳಿಯಲಿದ್ದಾರೆ.

ಶುಭಾರಂಭದ ವಿಶ್ವಾಸದಲ್ಲಿ ಮುಂಬೈ

ಮುಂಬೈಗೆ ಆತ್ಮವಿಶ್ವಾಸ

ಇನ್ನು ಎದುರಾಳಿ ಮುಂಬೈ ತಂಡದಲ್ಲಿ ಚಾಂಪಿಯನ್‌ಗಳ ಪಡೆ. ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್, ರನ್ನರ್-ಅಪ್ ತಂಡದ ನಾಯಕ ಸ್ಯಾಂಟ್ನರ್, ಆಲ್-ರೌಂಡರ್ ಹಾರ್ದಿಕ್ ಪಾಂಡ್ಯ, ಅನುಭವಿ ರೋಹಿತ್ ಶರ್ಮ, ತಿಲಕ್ ವರ್ಮಾ ಸೇರಿದಂತೆ ಪ್ರಮುಖ ಬ್ಯಾಟರ್‌ಗಳಿದ್ದಾರೆ. ಬೌಲಿಂಗ್‌ನಲ್ಲೂ ಜಸ್‌ಪ್ರೀತ್ ಬೂಮ್ರಾ, ದೀಪಕ್ ಚಾಹರ್, ಟ್ರೆಂಟ್ ಬೋಲ್ಟ್ ಸೇರಿದಂತೆ ಅತ್ಯುತ್ತಮ ಬೌಲರ್‌ಗಳಿದ್ದು ಮುಂಬೈ ಭರವಸೆಯಲ್ಲಿದೆ.



ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಎರಡನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಭಾನುವಾರದ ಸೂಪರ್ ಫೈಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಹೈದರಾಬಾದ್ ಹಾಗೂ ಆರ್‌ಸಿಬಿ ನಡುವಿನ ಪಂದ್ಯದೊಂದಿಗೆ ಐಪಿಎಲ್‌ಗೆ ಕಿಕ್‌ಸ್ಟಾರ್ಟ್ ಸಿಕ್ಕಿದೆ. ಪ್ರತಿಬಾರಿಯಂತೆ ಈ ಬಾರಿಯೂ ಹೌಸ್‌ಫುಲ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯುತ್ತಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣ ತಮ್ಮ ನೆಚ್ಚಿನ ಆಟಗಾರ, ಮುಂಬೈ ಕಾ ರಾಜಾ ಖ್ಯಾತಿಯ ರೋಹಿತ್ ಶರ್ಮ ಅವರ ಆಟವನ್ನು ನೋಡುವುದಕ್ಕೆ ಸಿದ್ಧರಾಗಿದ್ದಾರೆ.

ಕಳೆದ ಬಾರಿ ಸೆಮಿಫೈನಲ್ ಅಥ್ವಾ ಕ್ವಾಲಿಫೈಯರ್ ಪಂದ್ಯದಲ್ಲಿ ಮುಂಬೈ ಹೊರಬಿದ್ದಿತ್ತು. ಆರನೇ ಟ್ರೋಫಿ ಗೆಲ್ಲುವ ಪಣದೊಂದಿಗೆ ಕಣಕ್ಕಿಳಿಯುತ್ತಿರುವ ತಂಡದಲ್ಲಿ ಹಲವಾರು ಬದಲಾವಣೆಗಳುಂಟು. ಕೆಕೆಆರ್ ತಂಡ ಕಳೆದ ಬಾರಿ ನೀರಸ ಪ್ರದರ್ಶನ ನೀಡಿದ್ದುಂಟು. ಅದರ ಬೆನ್ನಲ್ಲೇ ಕೂಟದ ನಂತರ ತಂಡದಲ್ಲಿ ಸರ್ಜರಿ ಮಾಡಿಕೊಂಡು ಅತಿ ದೊಡ್ಡ ಪರ್ಸ್‌ನೊಂದಿಗೆ ಮಿನಿ ಹರಾಜಿಗಿಳಿದಿತ್ತು. ತಂಡದ ಬದಲಾವಣೆಯೊಂದಿಗೆ ಹೊಸತಾಗಿ ಶುರು ಮಾಡುವ ತವಕದಲ್ಲಿ ಅಜಿಂಕ್ಯಾ ರಹಾನೆ ಪಡೆ ಕಾಣಿಸಿಕೊಂಡಿದೆ.

ಕೆಕೆಆರ್‌ಗೆ ಅಗ್ನಿಪರೀಕ್ಷೆ: ತೀರಾ ಹಿನ್ನಡೆಯೊಂದಿಗೆ ಕಳೆದ ಆವೃತ್ತಿ ಮುಗಿಸಿದೆ. ಸಾಲದಿದ್ದಕ್ಕೆ ತಂಡಕ್ಕೆ ಇಷ್ಟು ವರ್ಷ ಶಕ್ತಿಯಾಗಿ ನಿಂತಿದ್ದಆಂಡ್ರೆ ರಸ್ಸೆಲ್ ನಿವೃತ್ತಿಯಾದರು. ತಂಡದಿಂದ ವೆಂಕಟೇಶ್ ಅಯ್ಯರ್ ಅವರನ್ನು ಆಯ್ಕೆ ಮಾಡಲಾಗಿರಲಿಲ್ಲ. ಈ ನಡುವೆ ಇದ್ದವರನ್ನು ಆಯ್ಕೆ ಮಾಡುವತ್ತ ಮುಂದಾದರೂ ಮುಸ್ತಾಫಿಝುರ್ ರೆಹಮಾನ್, ಹರ್ಷಿತ್ ರಾಣಾ ತಂಡದಿಂದ ಹೊರಬಿದ್ದಿದ್ದಾರೆ. ಇದಲ್ಲದೆ ಪಥಿರಾಣ ಬಗ್ಗೆ ಇನ್ನೂ ಮಾಹಿತಿ ಹೊರಬೀಳದ ಕಾರಣದಿಂದಾಗಿ ಬೌಲಿಂಗ್ ವಿಭಾಗದಲ್ಲಿ ಭಾರೀ ಹಿನ್ನಡೆಯಾಗಿದೆ. ಬ್ಯಾಟಿಂಗ್‌ನಲ್ಲಿ ಅಲೆನ್ ಲಯದಲ್ಲಿರುವುದು ಖುಷಿ ವಿಚಾರ. ರಹಾನೆ, ರಚಿನ್ ರವೀಂದ್ರ, ರೋಮನ್ ಪೋವೆಲ್, ಅಂಗ್ರಿಶ್ ರಘುವಂಶಿ ಸೇರಿದಂತೆ ಪ್ರಮುಖ ಬ್ಯಾಟಿಂಗ್ ಪಡೆಯನ್ನು ಹೊಂದಿದೆ. ಸುನೀಲ್ ನರೈನ್ ತಂಡಕ್ಕೆ ಬಲ ತಂದಿದ್ದಾರೆ. ಇಷ್ಟಾದರೂ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆ ಅನುಭವಿಸಿದೆ.

ಪಿಚ್ ರಿಪೋರ್ಟ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್‌ಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ನೇರ ಪಿಚ್, ಫ್ಲಾಟ್ ಇರುವುದರಿಂದ ಹೆಚ್ಚಿನ ಲಾಭ. ಸ್ಪಿನ್ ಬೌಲರ್‌ಗಳಾದ ಸ್ಯಾಂಟ್ನರ್, ಸುನೀಲ್ ನರೈನ್ ಅಂಥವರು ವಿಶ್ವಾಸದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಪಂದ್ಯದ ಮಾಹಿತಿ:
ಯಾವಾಗ: ಭಾನುವಾರ, ಎಲ್ಲಿ: ಮುಂಬೈ
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಡಬ್ಲ್ಯು35 ಲೋಗೋ ಅನಾವರಣ

ತುಮಕೂರು: ಕರ್ನಾಟಕವನ್ನು ಅಂತಾರಾಷ್ಟ್ರೀಯ ಟೆನಿಸ್ ನಕ್ಷೆಯಲ್ಲಿ ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿ, ತುಮಕೂರಿನಲ್ಲಿ ನಡೆಯ ಲಿರುವ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿಯ ಅಧಿಕೃತ ಲೋಗೋವನ್ನು ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಅನಾವರಣಗೊಳಿಸಿದರು.

ಮೇ 4ರಿಂದ 10ರವರೆಗೆ ನಡೆಯಲಿರುವ ಈ ಟೂರ್ನಿ ತುಮಕೂರು ವಿಶ್ವವಿದ್ಯಾಲಯ ಆವರಣದ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಎರಡು ದಶಕಗಳ ಬಳಿಕ ತುಮಕೂರಿನಲ್ಲಿ ಅಂತಾ ರಾಷ್ಟ್ರೀಯ ಟೆನಿಸ್ ಮರಳುತ್ತಿದೆ. ಅಂತಾ ರಾಷ್ಟ್ರೀಯ ಟೆನಿಸ್ ಫೆಡರೇಷನ್ ನಡೆಸುವ ಈ ಟೂರ್ನಿ, ಆಟಗಾರ್ತಿಯರಿಗೆ ವೃತ್ತಿಪರ ರ್‍ಯಾಂಕಿಂಗ್ ಅಂಕಗಳನ್ನು ಗಳಿಸಲು ಹಾಗೂ ಉನ್ನತ ಮಟ್ಟದ ಸ್ಪರ್ಧೆಗಳತ್ತ ಮುನ್ನಡೆಯಲು ಮಹತ್ವದ ವೇದಿಕೆಯಾಗಲಿದೆ. ಡಬ್ಲ್ಯು35 ವರ್ಗದ ಈ ಸ್ಪರ್ಧೆಯಲ್ಲಿ ಸುಮಾರು 30,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದ ಜೊತೆಗೆ 35 ಡಬ್ಲ್ಯುಟಿಎ ರ್‍ಯಾಂಕಿಂಗ್ ಅಂಕಗಳು ಲಭ್ಯವಿರುತ್ತವೆ. ಸಾಮಾನ್ಯವಾಗಿ 32 ಆಟಗಾರ್ತಿಯರ ಮುಖ್ಯ ಡ್ರಾ, ಅರ್ಹತಾ ಸುತ್ತುಗಳು ಹಾಗೂ ಡಬಲ್ಸ್ ಪಂದ್ಯಗಳನ್ನು ಒಳಗೊಂಡಿರುತ್ತದೆ. ಈ ಸಂದರ್ಭದಲ್ಲಿ ಮಾತನಾಡಿದ ಡಾ. ಪರಮೇಶ್ವರ ಅವರು, ಇದು ಕೇವಲ ಟೂರ್ನಿ ಯಲ್ಲ, ತುಮಕೂರಿನ ಯುವ ಪ್ರತಿಭೆಗಳಿಗೆ ದೊಡ್ಡ ಅವಕಾಶ. ವಿಶೇಷವಾಗಿ ಬಾಲಕಿಯರಿಗೆ ಕ್ರೀಡೆಯಲ್ಲಿ ಮುಂದುವರಿಯಲು ಇದು ಪ್ರೇರಣೆ ನೀಡುತ್ತದೆ ಎಂದರು. ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರು, ತುಮಕೂರನ್ನು ಜಾಗತಿಕ ಕ್ರೀಡಾ ಕೇಂದ್ರವಾಗಿ ತೋರಿಸಲು ಇದು ಉತ್ತಮ ಅವಕಾಶ. ಎಲ್ಲಾ ಸೌಲಭ್ಯಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಒದಗಿಸಲು ನಾವು ಸಿದ್ಧರಾಗಿದ್ದೇವೆ ಎಂದು ತಿಳಿಸಿದರು. ಒಟ್ಟಿನಲ್ಲಿ, ಈ ಟೂರ್ನಿ ತುಮಕೂರಿನ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವುದರೊಂದಿಗೆ, ಒಂದು ವಾರದ ಕಾಲ ಉನ್ನತ ಮಟ್ಟದ ಮಹಿಳಾ ಟೆನಿಸ್‌ಗೆ ವೇದಿಕೆಯಾಗಲಿದೆ

ಪದಬಂಧ

ರಾಜು ಸಂಗಮೇಶ ಹಿರೇಮಠ

5937



ಎಡದಿಂದ ಬಲಕ್ಕೆ
3.ಹೀಗೆ ಮಾಡಿದಾಗ ಮಾತ್ರ ಹಕ್ಕಿ ಹಾರುತ್ತದೆ (4)
5.ವಹಿವಾಟನ್ನು ಹೀಗೂ ಹೇಳುತ್ತೇವೆ (4)
6.ಬಳಲಿಕೆಯಿಲ್ಲಿ ತಿರುಗಿ ಮೂಡಿದೆ (3)
7.ನಗುತ್ತಲೇ ಮೇಲಕ್ಕೆ ಹಾರುವಿಕೆ (3)
9.ಜನಕರಾಜನ ಪುತ್ರಿ –ಸೀತೆ (3)
10.ಗರುವದಿಂದ ಹೊರಟ ಗಂಡುಕುರಿ (3)
12.ಇಪ್ಪತ್ತೈದನೆಯ ವಾರ್ಷಿಕೋತ್ಸವದ ಹೆಸರು (3)
14.ಋಷಿ-ಮುನಿಗಳ ಪರ್ಣಶಾಲೆ (3)
16.ದೇವತೆಗೆ ನಿಗದಿಯಾದ ಹವಿಸ್ಸಿನ ಭಾಗ (4)
17.ಮದ್ದುಗುಂಡುಗಳನ್ನಿಡುವ ಸಂಗ್ರಹಾಲಯ (4)

ಮೇಲಿನಿಂದ ಕೆಳಕ್ಕೆ
1.ವೈಭವಯುತವಾದ ನಿವಾಸ (4)
2.ರಸಿಕತನದಿಂದ ಕೂಡಿದ್ದು (3)
3.ಆಧಾರ-ಬೆಂಬಲವಿಲ್ಲಿ ತಲೆಕೆಳಗಾಗಿದೆ (3)
4.ಬದುಕಿಗೆ ಕನಿಷ್ಠ ಸಂಪನ್ಮೂಲ ಇಲ್ಲದಿರುವುದು (4)
8.ಇದು ತಂದೆ-ತಾಯಿಯ ಮನೆ (3)
9.ಸ್ಥಳ ಮೊದಲಿರುವ ನವಿಲಿನ ಕುಣಿತ (3)
11.ಆನೆಯ ಶತ್ರು ಈ ಸಿಂಹ (4)
13.ಶಾಲಾ ಕಾಲೇಜುಗಳ ವರ್ಗಕೋಣೆ (4)
14.ಒಳ್ಳೆಯ ಮನೆತನಕ್ಕೆ ಸೇರಿದವಳು (3)
15.ಎಲ್ಲರಿಗೂ ತಿಳಿಯದ ಸಂಗತಿ (3)

5936 ಉತ್ತರ

ಎಡದಿಂದ ಬಲಕ್ಕೆ:
2.ಆತ್ಮಪ್ರಶಂಸೆ
5.ಗಾನಲೋಲ
6.ಶತನಾಮ 7.ಕಾಕ
8.ನೆಗೆ 10.ಆಲ 13.ಗಳ
15.ವಕ್ರಗತಿ 17.ಅಜಗರ
18.ಪರಿಚಾರಕ

ಮೇಲಿನಿಂದ ಕೆಳಕ್ಕೆ:
1.ಮಾಲೆಗಾರ
2.ಆಪ್ತಾಲೋಚನೆ 3.ಸೆಳೆತ
4.ಆಲೆಮನೆ 6.ಶಕಲ
9.ಗೆಳತಿ 11.ಅಮ್ಲಜನಕ
12.ನವರಾತ್ರಿ
14.ನರಳಾಟ 16.ಗಣಪ

ಕಿರುಸುದ್ದಿ

ಟ್ರ್ಯಾಕ್ಟರ್ ನಿಂದ ಕೆಳಗೆ ಬಿದ್ದು ಚಾಲಕ ಸಾವು

ಕಾರ್ಕಳ: ಕಾರ್ಕಳ ತಾಲೂಕಿನ ಎರ್ಲಪಾಡಿಯಲ್ಲಿ ಭತ್ತದ ಗದ್ದೆಯಲ್ಲಿ ಬೈಹುಲ್ಲಿನ ಹುಡಿ ಮಾಡುತ್ತಿದ್ದ ವೇಳೆ ಚಾಲಕ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ. ಯರ್ಲಪಾಡಿ ಹೊಸೊಕ್ಕು ನೆಲೆಬೈಲು ಎಂಬಲ್ಲಿ ಸುಂದರ ಪೂಜಾರಿ ಅವರ ಗದ್ದೆಯಲ್ಲಿ ಶುಕ್ರವಾರ ಶ್ರೀಧರ ಎಂಬವರು ಟ್ರ್ಯಾಕ್ಟರ್‌ನಲ್ಲಿ ಬೈಹುಲ್ಲಿನ ಹುಡಿ ಮಾಡುತ್ತಿದ್ದ ವೇಳೆ ಆಯತಪ್ಪಿ ಕೆಳಗೆ ಬಿದ್ದ ಅವರು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ. ಈ ಕುರಿತು ಕಾರ್ಕಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ರ್ಯಾಕ್ಟರ್-ಕಾರು ಡಿಕ್ಕಿ: ಟ್ರ್ಯಾಕ್ಟರ್ ಚಾಲಕ ಸಾವು

ಮಡಿಕೇರಿ: ಟ್ರ್ಯಾಕ್ಟರ್ ಹಾಗೂ ಕಾರಿನ ನಡುವೆ ನಡೆದ ಅಪಘಾತದಲ್ಲಿ ಟ್ರ್ಯಾಕ್ಟರ್ ಚಾಲಕ ಸಾವಿಗೀಡಾದ ಘಟನೆ ಶನಿವಾರಸಂತೆ ಸಮೀಪದ ಖ್ಯಾತೆ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಯಸಳೂರು ಹೋಬಳಿ ತೊಂತಲಾಪುರ ಗ್ರಾಮದ ಪರಮೇಶ್ ಎಂದು ಗುರುತಿಸಲಾಗಿದೆ. ಘಟನೆಯಲ್ಲಿ ಕಾರಿನಲ್ಲಿದ್ದ ಕ್ಯಾತೆ ಗ್ರಾಮದ ಅಬ್ದುಲ್ ರೆಹಮಾನ್ ಅವರ ಮಗ ಹಾಗೂ ಮೊಮ್ಮಗನಿಗೂ ಗಾಯಗೊಂಡಿರುವುದಾಗಿ ಹೇಳಲಾಗಿದೆ. ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

8 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿ ಪತ್ತೆ

ಸುಳ್ಯ: ಕಡಬ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಿಸಿ ಕಳೆದ 8 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕನ್ವಿಕ್ಷನ್ ವಾರಂಟ್ ಆರೋಪಿ ಸುಳ್ಯ ಅಜ್ಜಾವರ ನಿವಾಸಿ ಎನ್.ಎಂ. ಅಜೀಜ್ ಎಂಬಾತನನ್ನು ಆಂಧ್ರಪ್ರದೇಶದ ಚಿತ್ತೂರು ಜೈಲಿನಲ್ಲಿರುವುದನ್ನು ಪತ್ತೆ ಹಚ್ಚಿ ಬಾಡಿ ವಾರಂಟ್ ಮೂಲಕ ದ.ಕ. ಜಿಲ್ಲಾ ಪೊಲೀಸರು ಕರೆ ತಂದಿದ್ದಾರೆ. ಎನ್.ಎಂ. ಅಜೀಜ್ ಎಂಬಾತನಿಗೆ ವಿವಿಧ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿ ಕರ್ನಾಟಕ ಉಚ್ಚ ನ್ಯಾಯಾಲಯ 10 ವರ್ಷ ಶಿಕ್ಷೆ ವಿಧಿಸಿತ್ತು. 2018ರಲ್ಲಿ ಕೇರಳ ಪೊಲೀಸರು ಸುಳ್ಯ ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಪೊಲೀಸರಿಗೆ ಹಲ್ಲೆ ಮಾಡಿ ತಪ್ಪಿಸಿಕೊಂಡಿದ್ದು, ನಂತರ ಕಲಬುರಗಿ ಜೇವರ್ಗಿ ನಿವಾಸಿ ಬಸವರಾಜು ಎಂಬುದಾಗಿ ಹೆಸರು ಬದಲಿಸಿಕೊಂಡು ಆಂಧ್ರಪ್ರದೇಶದಲ್ಲಿ ವಾಸವಾಗಿದ್ದ.



ಈತನ ಪತ್ತೆಗಾಗಿ ಸತತವಾಗಿ ಪ್ರಯತ್ನಿಸಲಾಗಿ, ಈತನು ಆಂಧ್ರಪ್ರದೇಶದ ಚಿತ್ತೂರು ಜೈಲಿನಲ್ಲಿರುವುದು ದೃಢಪಟ್ಟಿದೆ. ಈ ಹಿನ್ನಲೆಯಲ್ಲಿ ಸಂಬಂಧಪಟ್ಟ ನ್ಯಾಯಾಲಯದಿಂದ ಬಾಡಿ ವಾರಂಟ್ ಮೂಲಕ ಆರೋಪಿಯನ್ನು ವಶಕ್ಕೆ ಪಡೆಯಲಾಗಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಆರೋಪಿ ಎನ್.ಎಂ. ಅಜೀಜ್ 3 ಕೊಲೆ ಪ್ರಕರಣ, 10ಕ್ಕೂ ಅಧಿಕ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿರುವುದು ತಿಳಿದು ಬಂದಿದ್ದು, ಈತನ ಪತ್ತೆಯಿಂದ ಕೇರಳದ 3 ಪ್ರಕರಣ, ಸುಳ್ಯ ಠಾಣೆಯ 2 ಪ್ರಕರಣ, ಕಡಬ ಠಾಣೆಯ 1 ಕನ್ವಿಕ್ಷನ್ ವಾರಂಟ್ ಪ್ರಕರಣಗಳು ಪತ್ತೆಯಾದಂತಾಗಿದೆ ಎಂದು ಜಿಲ್ಲಾ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಈಜಲು ಹೋದ ನಾಲ್ವರಲ್ಲಿ ಓರ್ವ ಬಾಲಕ ಸಾವು

ಬೆಳ್ತಂಗಡಿ : ನಡ ಗ್ರಾಮದ ಅಂತ್ರಾಯಪಲ್ಕೆ ಎಂಬಲ್ಲಿರುವ ಅಂತ್ರಾಯ ಗುಂಡಿಗೆ ಈಜಲು ಹೋದ ನಾಲ್ಕು ಮಂದಿ ಬಾಲಕರಲ್ಲಿ ಓರ್ವ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಮಾ.28 ರಂದು ಸಂಜೆ ನಡೆದಿದೆ. ಬೆಳ್ತಂಗಡಿ ತಾಲೂಕಿನ ಉಜಿರೆ ಗ್ರಾಮದ ಕುಂಟಿನಿ ನಿವಾಸಿ ಹಸನಬ್ಬ ಎಂಬವರ ಪುತ್ರ ಮಹಮ್ಮದ್ ಹಫೀಝ್ (14) ಸಾವನ್ನಪ್ಪಿದ ಬಾಲಕನಾಗಿದ್ದಾನೆ.



ಮೃತದೇಹವನ್ನು ಬೆಳ್ತಂಗಡಿ ತಾಲೂಕು ಸರಕಾರಿ ಆಸ್ಪತ್ರೆಗೆ ಸಾಗಿಸಲಾಗಿದ್ದು, ಬೆಳ್ತಂಗಡಿ ಪೊಲೀಸರು ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸುತ್ತಿದ್ದಾರೆ.

ರೌಡಿಶೀಟರ್ ಆರೀಫ್ ಹತ್ಯೆ: ಪೊಲೀಸರಿಂದ ತೀವ್ರ ತನಿಖೆ

ಉಳ್ಳಾಲ: ಶುಕ್ರವಾರ ಮುಂಜಾನೆ ತೊಕ್ಕೊಟ್ಟು ಹೆದ್ದಾರಿಯ ಫ್ಲೈ ಓವರಲ್ಲಿ ದುಷ್ಕರ್ಮಿಗಳಿಂದ ಬರ್ಬರವಾಗಿ ಕೊಲೆಯಾಗಿದ್ದ ಉಚ್ಚಿಲ ಮುಳ್ಳುಗುಡ್ಡೆ ನಿವಾಸಿ ರೌಡಿಶೀಟರ್ ಆರೀಫ್ ಹುಸೇನ್ ಅಲಿಯಾಸ್ ಟ್ಯಾಬ್ಲೆಟ್ ಆರೀಫ್‌ನ ಹಂತಕರ ಬೇಟೆಗೆ ಇಳಿದಿರುವ ಮಂಗಳೂರು ಸಿಸಿಬಿ ತಂಡಕ್ಕೆ ಖಚಿತ ಸುಳಿವು ದೊರಕಿದ್ದು, ಕಳೆದ ವರುಷ ನಿಗೂಢವಾಗಿ ಸಾವನ್ನಪ್ಪಿದ್ದ ನಟೋರಿಯಸ್ ರೌಡಿ ಟೋಪಿ ನೌಫಾಲ್‌ನ ಸಹಚರರೇ ಕೊಲೆ ಕೃತ್ಯ ಎಸಗಿರುವುದಾಗಿ ತಿಳಿದು ಬಂದಿದೆ.

ಕೊಲೆಗೈದು ಪರಾರಿಯಾಗಿದ್ದ ಹಂತಕರ ಕಾರು ವಿಟ್ಲದ ಬುಡೋಳಿ ಎಂಬಲ್ಲಿ ಇಂಧನ ಖಾಲಿಯಾದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಕೊಲೆಗೆ ಬಳಸಲಾದ ಕೇರಳ ನೋಂದಣಿಯ ಕಾರನ್ನು ಮೂರು ದಿನಗಳ ಹಿಂದಷ್ಟೆ ಹಂತಕರು ಬಾಡಿಗೆಗೆ ಪಡಕೊಂಡಿದ್ದರೆನ್ನಲಾಗಿದೆ. ಉಳ್ಳಾಲದ ವ್ಯಕ್ತಿಯೋರ್ವ ಕಾರನ್ನು ಬಾಡಿಗೆಗೆ ಪಡೆದಿರುವುದಾಗಿ ಕಾರು ಮಾಲಕ ಪೊಲೀಸರಿಗೆ ಮಾಹಿತಿ ನೀಡಿದ್ದು, ಕಾರನ್ನು ಪೊಲೀಸರು ಉಳ್ಳಾಲ ಠಾಣೆಗೆ ತಂದಿದ್ದಾರೆ. ಕೊಲೆ ಕೃತ್ಯದಲ್ಲಿ ನೇರ ಭಾಗಿಯಾಗಿರುವ ಆರು ಮಂದಿ ಹಂತಕರು ಮಂಗಳೂರಿನವರೇ ಆಗಿದ್ದು ವಿಟ್ಲದಿಂದ ಬೆಂಗಳೂರಿನ ಕಡೆಗೆ ಪರಾರಿಯಾಗಿರುವ ಬಗ್ಗೆ ಸಿಸಿಬಿ ಪೊಲೀಸರು ಮಾಹಿತಿ ಕಲೆ ಹಾಕಿದ್ದಾರೆ. ಹಂತಕರ ಪತ್ತೆಗಾಗಿ ತೀವ್ರ ಕಾರ್ಯಾಚರಣೆ ನಡೆಸಿದ್ದಾರೆ.

8 ವರ್ಷದಿಂದ ತಲೆಮರೆಸಿದ್ದ ಆರೋಪಿಯ ಬಂಧನ

ಬಂಟ್ವಾಳ: ಕಳ್ಳತನ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ಸುಮಾರು 8 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಕೇರಳದ ಪಲಕ್ಕಾಡ್ ನಿವಾಸಿ ಶಕೀಲ್ ಪಿ (43) ಬಂಧಿತ ಆರೋಪಿಯಾಗಿದ್ದಾನೆ. ಈತ ದೀರ್ಘಕಾಲದಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಹಿನ್ನಲೆಯಲ್ಲಿ ವಾರಂಟ್ ಜಾರಿಯಾಗಿತ್ತು. ಕೇರಳದ ತಿರೂರ್‌ನಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿ, ಬಳಿಕ ಬಂಟ್ವಾಳದ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ.

ಮಂಗಳೂರು ವಿವಿ 44ನೇ ಘಟಿಕೋತ್ಸವ | ಹರೇಕಳ ಹಾಜಬ್ಬ, ರವೀಶ್ ಪಡುಮಲೆಗೆ ಗೌರವ ಡಾಕ್ಟರೇಟ್

ಮನುಕುಲ ಕಲ್ಯಾಣಕ್ಕೆ ಜ್ಞಾನ: ಗೆಹ್ಲೋಟ್

ಮಂಗಳೂರು: ವಿಶ್ವ ವಿದ್ಯಾನಿಲಯಗಳಿಂದ ಪದವಿ ಪಡೆದು ಹೊರ ಬರುವ ವಿದ್ಯಾರ್ಥಿಗಳು ದೇಶದ ಆಸ್ತಿಯಾಗಬೇಕು. ದೇಶ ಮತ್ತು ಸಮಾಜದ ನಿರೀಕ್ಷೆಗಳಿಗೆ ತಕ್ಕಂತೆ ನಡೆದು ತಮ್ಮ ಶಿಕ್ಷಣ, ಪ್ರತಿಭೆಯನ್ನು ಮಾನವ ಕಲ್ಯಾಣಕ್ಕಾಗಿ ಬಳಸಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕರೆ ನೀಡಿದರು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಶನಿವಾರ ನಡೆದ 44ನೆಯ ವಾರ್ಷಿಕ ಘಟಿಕೋತ್ಸವದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ರ್‍ಯಾಂಕ್ ಜೊತೆಗೆ ಚಿನ್ನದ ಪದಕ ಮತ್ತು ಪದವಿ ಪ್ರದಾನ ನೆರವೇರಿಸಿ ಮಾತನಾಡಿದ ಅವರು, ಇಂದು ವಿದ್ಯಾರ್ಥಿಗಳ ಜೀವನದಲ್ಲಿ ಮಹತ್ವದ ದಿನವಾಗಿದ್ದು, ಈ ಸಂದರ್ಭದಲ್ಲಿ ತಮ್ಮ ಶಿಕ್ಷಣದ ಪ್ರಯಾಣಕ್ಕೆ ಮಾರ್ಗದರ್ಶನ ನೀಡಿದ ತಂದೆ ತಾಯಿ, ಗುರುಗಳು ಮತ್ತು ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಕೆಗೆ ವಿದ್ಯಾರ್ಥಿಗಳು ಮರೆಯಬಾರದು ಎಂದರು.

ಪ್ರತಿಯೊಂದು ಕ್ಷೇತ್ರದಲ್ಲೂ ಸಾಧನೆ ಮಾಡಿ

ಪದವಿ ಶಿಕ್ಷಣ ಪೂರ್ಣಗೊಂಡ ನಂತರ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ತೊಡಗಿ ಕೊಳ್ಳಲಿದ್ದು, ಈ ಸಂದರ್ಭ ತಮ್ಮ ಜವಾಬ್ದಾರಿಯನ್ನು ಮರೆಯಬಾರದು. ಪ್ರತಿಯೊಂದು ಕ್ಷೇತ್ರದಲ್ಲೂ ವಿಭಿನ್ನ ಸಾಮರ್ಥ್ಯ ಮತ್ತು ಕೌಶಲ್ಯಗಳ ಅಗತ್ಯವಿದ್ದರೂ, ನಿರಂತರವಾಗಿ ಕಲಿಯುವ ಮನೋಭಾವ, ನೈತಿಕ ಮೌಲ್ಯಗಳ ಪಾಲನೆ, ಸತ್ಯನಿಷ್ಠೆ, ಕಠಿಣ ಪರಿಸ್ಥಿತಿಗಳಲ್ಲಿ ಧೈರ್ಯದಿಂದ ಎದುರಿಸುವ ಶಕ್ತಿ, ತಂಡದ ಕೆಲಸ ಮತ್ತು ಸಮಯ ಸಂಪನ್ಮೂಲಗಳ ಸಮರ್ಪಕ ಬಳಕೆ ಮುಂತಾದ ಗುಣಗಳು ಯಶಸ್ಸಿಗೆ ಅಗತ್ಯ ಎಂದು ರಾಜ್ಯಪಾಲರು ತಿಳಿಸಿದರು.



ಹರೇಕಳ ಹಾಜಬ್ಬ ಮತ್ತು ರವೀಶ್ ಪಡುಮಲೆ ಅವರಿಗೆ ಡಾಕ್ಟರೇಟ್ ಪ್ರದಾನ

ಜ್ಞಾನ ಮತ್ತು ಸಾಮರ್ಥ್ಯ ಸಮಾಜಕ್ಕಿರಲಿ

ವಿದ್ಯಾರ್ಥಿಗಳು ತಮ್ಮ ಜ್ಞಾನ ಮತ್ತು ಸಾಮರ್ಥ್ಯವನ್ನು ವೈಯಕ್ತಿಕ ಲಾಭಕ್ಕೆ ಮಾತ್ರ ಬಳಸದೆ, ಸಮಾಜ ಮತ್ತು ರಾಷ್ಟ್ರದ ಹಿತಕ್ಕಾಗಿ ಬಳಸಬೇಕು. ಇಂತಹ ಗುಣಗಳು ಅವರನ್ನು ಒಳ್ಳೆಯ ವೃತ್ತಿಪರರಷ್ಟೇ ಅಲ್ಲ, ಜವಾಬ್ದಾರಿಯುತ ಮತ್ತು ಸಂವೇದನಾಶೀಲ ನಾಗರಿಕರನ್ನಾಗಿ ರೂಪಿಸುತ್ತವೆ ಎಂದು ಅವರು ಹೇಳಿದರು.

ಘಟಿಕೋತ್ಸವ ಭಾಷಣ ಮಾಡಿದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಪದವಿ ಪಡೆದು ಹೊರ ಬರುವ ವಿದ್ಯಾರ್ಥಿಗಳು ತಮ್ಮ ಜವಾಬ್ದಾರಿಯನ್ನು ಮರೆಯಬಾರದು. ಸಮಾಜಕ್ಕೆ ತಮ್ಮಿಂದಾದ ಕೊಡುಗೆ ನೀಡಬೇಕು. ಈ ಮಣ್ಣಿನ ಅಸ್ಮಿತೆ ಉಳಿಸುವ ಕೆಲಸ ಮಾಡಬೇಕು ಎಂದರು.

ಮಂಗಳೂರು ವಿಶ್ವವಿದ್ಯಾನಿಲಯವು ಹರೇಕಳ ಹಾಜಬ್ಬ, ರವೀಶ್ ಪಡುಮಲೆ ಹಾಗೂ ಸೂರಿಕುಮೇರು ಗೋವಿಂದ ಭಟ್‌ಗೆ ಗೌರವ ಡಾಕ್ಟರೇಟ್ ನೀಡುವ ಮೂಲಕ ದ.ಕ. ಜಿಲ್ಲೆಯ ಮಣ್ಣಿನ ಅಸ್ಮಿತೆಯನ್ನು ಎತ್ತಿ ಹಿಡಿದೆ ಎಂದರು.

ಇದೇ ಸಂದರ್ಭ ಅಕ್ಷರ ಸಂತ ಹರೇಕಳ ಹಾಜಬ್ಬ, ದೈವ ನರ್ತಕ ಡಾ. ರವೀಶ್ ಪಡುಮಲೆ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನಿಸಲಾಯಿತು.

162 ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿ

ಮಂಗಳೂರು ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ನಡೆದ ಘಟಿಕೋತ್ಸವದಲ್ಲಿ ವಿವಿಧ ನಿಕಾಯಗಳ 162 ಸಂಶೋಧನಾ ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿ, 56 ಚಿನ್ನದ ಪದಕ ಹಾಗೂ 57 ನಗದ ಬಹುಮಾನಗಳೊಂದಿಗೆ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಒಟ್ಟು 147 ರ್‍ಯಾಂಕ್‌ಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದ 69 ವಿದ್ಯಾರ್ಥಿಗಳಿಗೆ ರ್‍ಯಾಂಕ್ ಪ್ರಮಾಣ ಪತ್ರ ವಿತರಿಸಲಾಯಿತು.

ಭಟ್ ನಿವಾಸಕ್ಕೆ ತೆರಳಿ ಡಾಕ್ಟರೇಟ್ ಹಸ್ತಾಂತರ

ತೆಂಕುತಿಟ್ಟಿನ ಹಿರಿಯ ಕಲಾವಿದ ಸೂರಿಕುಮೇರು ಗೋವಿಂದ ಭಟ್ (ಮರಣೋತ್ತರ) ಅವರಿಗೆ ಘೋಷಣೆಯಾಗಿರುವ ಗೌರವ ಡಾಕ್ಟರೇಟ್ ಅನ್ನು ಏ. 13ರಂದು ಅವರ ಮನೆಗೆ ತೆರಳಿ ಕುಟುಂಬಸ್ಥರಿಗೆ ಹಸ್ತಾಂತರಿಸುವುದಾಗಿ ವಿವಿ ಕುಲಪತಿ ಪ್ರೊ. ಪಿ.ಎಲ್. ಧರ್ಮ ತಿಳಿಸಿದರು.



ವಿಶ್ವವಿದ್ಯಾನಿಲದ ಕುಲಪತಿ ಪ್ರೊ. ಪಿ.ಎಲ್. ಧರ್ಮ, ಕುಲಸಚಿವ ಪ್ರೊ. ದೇವೇಂದ್ರಪ್ಪ ಉಪಸ್ಥಿತರಿದ್ದರು. ವಿಶ್ವವಿದ್ಯಾನಿಲದ ಕುಲಪತಿ ಪ್ರೊ. ಪಿ.ಎಲ್. ಧರ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು. ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ, ಪ್ರಭಾರ ಕುಲಸಚಿವ ಗಣೇಶ್ ಸಂಜೀವ್, ಹಣಕಾಸು ಅಧಿಕಾರಿ ಪಂಚಲಿಂಗಸ್ವಾಮಿ, ಮಂಗಳೂರು ವಿವಿಯ ವಿವಿಧ ನಿಕಾಯಗಳ ಡೀನ್‌ಗಳು, ಸಿಂಡಿಕೇಟ್ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಚಿನ್ನದ ಪದಕ ಪಡೆದ ಸಾಧಕ ವಿದ್ಯಾರ್ಥಿನಿಯರ ಮನದಾಳ

ಬಡತನದ ನಡುವೆಯೂ ಚಿನ್ನದ ಸಾಧನೆ ಮಾಡಿದ ಸಂಧ್ಯಾ

ಕೊಣಾಜೆ: ದಿನಾ ಬೆಳಿಗ್ಗೆ ಐದು ಗಂಟೆಗೆ ಎದ್ದು ದನದ ಹಟ್ಟಿಗೆ ಹೋಗಿ ಹಾಲು ಕರೆದು ಬಳಿಕ ಮನೆ ಕೆಲಸ ಮುಗಿಸಿ 7.15ಕ್ಕೆ ಯುನಿವರ್ಸಿಟಿಯ ಬಸ್ ಹತ್ತುತ್ತಾ ಇದ್ದೆ. ಸಂಜೆ ತರಗತಿ ಮುಗಿಸಿ ಬಂದು ಅಮ್ಮ ಕಟ್ಟಿದ ಬೀಡಿಗೂ ನೂಲು ಹಾಕುತ್ತಿದ್ದೆ. ಬಡತನದ ನಡುವೆಯೂ ಶಿಕ್ಷಣದಲ್ಲಿ ಸಾಧನೆ ಮಾಡಬೇಕು ಎನ್ನುವುದು ನನ್ನ ಹಾಗೂ ಮನೆಯವರ ಕನಸಾಗಿತ್ತು. ಇದಕ್ಕಾಗಿ ಕಷ್ಟಗಳ ನಡುವೆಯೂ ಇಷ್ಟಪಟ್ಟು ಓದಿದ್ದೆ. ಈ ಕನಸು ಇಂದು ನನಸಾಗಿದೆ ಇದು ಎಂಎ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ಮೊದಲನೆಯ ರ್‍ಯಾಂಕ್‌ನೊಂದಿಗೆ ಚಿನ್ನದ ಪದಕ ಹಾಗೂ ಏಳು ನಗದು ಪುರಸ್ಕಾರ ಪಡೆದ ಬಂಟ್ವಾಳ ಸರಪಾಡಿ ಮಣಿನಾಲ್ಕೂರಿನ ಸಂಧ್ಯಾ ಅವರ ಮನದಾಳದ ಮಾತು.



ಮಣಿನಾಲ್ಕೂರಿನ ಮೇಲಿನ ನೈಬೇಲಿನ ನೀಲಯ್ಯ ನಾಯ್ಕ ಹಾಗೂ ಬೇಬಿ ದಂಪತಿಯ ಪುತ್ರಿಯಾಗಿರುವ ಸಂಧ್ಯಾ ಎಸ್‌ವಿಎಸ್ ಕಾಲೇಜಿನ ಬಿಎಸ್ಸಿಯಲ್ಲಿ ಪದವಿ ಮಾಡಿದ್ದರೂ ಕತೆ, ಕವನ,ಸಾಹಿತ್ಯದ ಆಸಕ್ತಿ ಅವರನ್ನು ವಿವಿಯ ಕನ್ನಡ ವಿಭಾಗದತ್ತ ಸೆಳೆದಿತ್ತು. ತಂದೆ ಕೂಲಿ ಕೆಲಸ ಮಾಡಿದರೆ ತಾಯಿ ಬೀಡಿ ಕಟ್ಟಿ ಜೀವನ ಮಾಡಬೇಕಿತ್ತು. ಇದರ ಜೊತೆಯಲ್ಲಿ ಜೀವನೋಪಾಯಕ್ಕಾಗಿ ಮನೆಯಲ್ಲಿ ನಾಲ್ಕೈದು ದನಗಳೂ ಇತ್ತು. ಬಡತನದ ನಡುವೆಯೂ ಸಂಧ್ಯಾ ಹಾಗೂ ಆಕೆಯ ತಂಗಿಯನ್ನು ಓದಿಸಬೇಕೆನ್ನುವುದು ತಂದೆ ತಾಯಿಯವರ ಬಯಕೆಯಾಗಿತ್ತು. ಇದಕ್ಕೆ ಪೂರಕವಾಗಿ ಸಂಧ್ಯಾ ಓದಿಗೆ ಎಷ್ಟೋ ಅಡೆತಡೆಗಳು ಎದುರಾದರೂ ಅದನ್ನೆಲ್ಲ ಮೀರಿ ನಿಂತು ಶೈಕ್ಷಣಿಕ ಸಾಧನೆ ಮಾಡಿದ್ದಾರೆ. ತಂಗಿ ಮಂಗಳೂರು ವಿವಿಯಲ್ಲಿ ಎಂಎಸ್ಸಿ ವ್ಯಾಸಂಗ ಮಾಡುತ್ತಿದ್ದಾಳೆ.

ಏಳನೇ ತರಗತಿಯಲ್ಲೇ ಬೀಡಿ ಕಟ್ಟಲು ಕಲಿತಿದ್ದೆ

ಮನೆಯಲ್ಲಿ ಕಷ್ಟದ ಬದುಕಿನ ನಡುವೆ ಅಮ್ಮನಿಗೆ ಅನುಕೂಲವಾಗಲೆಂದು ಏಳನೇ ತರಗತಿಯನ್ನು ಬೀಡಿಯನ್ನು ಕಲಿತು ತಾಯಿಗೆ ಸಹಾಯ ಮಾಡುತ್ತಿದ್ದೆ. ಅಲ್ಲದೆ ನನ್ನ ಶಿಕ್ಷಣದ ಕನಸಿಗಾಗಿ ಅನೇಕ ಶಿಕ್ಷಕರೂ ಸಹಾಯ ಮಾಡಿದ್ದಾರೆ. ಮಂಗಳೂರು ವಿವಿಯಲ್ಲಿ ನನ್ನ ಉಪನ್ಯಾಸಕಿಯಾಗುವ ಕನಸಿಗೆ ಕನ್ನಡ ವಿಭಾಗದ ಪ್ರಾಧ್ಯಾಪಕರಿಂದ ಹೆಚ್ಚಿನ ಪ್ರೋತ್ಸಾಹ ದೊರೆತಿದೆ ಎನ್ನುತ್ತಾರೆ ಸಂಧ್ಯಾ.

ಇತ್ತೀಚೆಗೆ ಸಂಧ್ಯಾಳ ತಂದೆಗೆ ಕೈ ನೋವು ಎದುರಾಗಿರುವುದರಿಂದ ದನಗಳನ್ನು ಇತ್ತೀಚೆಗೆ ಮಾರಿದರೂ, ಸಂಜೆ ಪರಿಸರದ ಮಕ್ಕಳಿಗೆ ಟ್ಯೂಷನ್ ನೀಡುತ್ತಿದ್ದಾರೆ. ಮುಂದೆ ಪಿಎಚ್‌ಡಿ ಮಾಡಿ ಉಪನ್ಯಾಸಕಿಯಾಗಬೇನ್ನುವ ಕನಸು ಹೊತ್ತುಕೊಂಡಿರುವ ಸಂಧ್ಯಾ ಪ್ರಸ್ತುತ ಸರ್ಕಾರಿ ಬಿಇಡಿ ಕಾಲೇಜಿನಲ್ಲಿ ಬಿಇಡಿ ವ್ಯಾಸಂಗ ಮಾಡುತ್ತಿದ್ದಾರೆ.

ಸಮಾಜ ಸೇವೆಯ ಕನಸಿನಿಂದ ಸಮಾಜಶಾಸ್ತ್ರಕ್ಕೆ ಸೇರಿದೆ: ಕಾವ್ಯ

ಕೊಣಾಜೆ: ಸಮಾಜಸೇವೆಯ ಕನಸಿನೊಂದಿಗೆ ಮಂಗಳೂರು ವಿವಿಯ ಸಮಾಜಶಾಸ್ತ್ರ ವಿಭಾಗಕ್ಕೆ ಸೇರಿದ ಕೇರಳ ಮೂಲದ ವಿದ್ಯಾರ್ಥಿನಿ ಕಾವ್ಯ ಸ್ನಾತಕೋತ್ತರ ಸಮಾಜಶಾಸ್ತ್ರ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಪಡೆದುಕೊಳ್ಳುವ ಜೊತೆಗೆ ಎರಡು ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಳ್ಳುವ ಮೂಲಕ ತಮ್ಮ ಹೆತ್ತವರಿಗೆ ಹಾಗೂ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಹಿನ್ನೆಲೆ ಮತ್ತು ಶಿಕ್ಷಣ

ಕಾಸರಗೋಡು ಮೂಲದ ಕಾವ್ಯ, ತಮ್ಮ ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಹಾಗೂ ಪಿಯುಸಿ ಯನ್ನು ಕೇರಳದಲ್ಲೇ ಪೂರೈಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮಂಗಳೂರಿಗೆ ಆಗಮಿಸಿದ ಇವರು ಮಂಗಳೂರು ರಥಬೀದಿಯಲ್ಲಿರುವ ಸರಕಾರಿ ಕಾಲೇಜಿನಲ್ಲಿ ಬಿ ಎ ಮುಗಿಸಿದರು. ಕೇರಳದಲ್ಲಿ ಬೆಳೆದರೂ ಕನ್ನಡ ಮತ್ತು ತುಳು ಭಾಷೆಯ ಮೇಲೆ ಇವರಿಗಿರುವ ಹಿಡಿತ ಅದ್ಭುತ. ನಿರರ್ಗಳವಾಗಿ ಈ ಎರಡೂ ಭಾಷೆಗಳಲ್ಲಿ ಮಾತನಾಡುವ ಇವರ ಶೈಲಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕೇವಲ ಪಠ್ಯಕ್ಕೆ ಸೀಮಿತವಾಗದೆ, ಎನ್‌ಜಿಒ (ಸ್ವಯಂ ಸೇವಾ ಸಂಸ್ಥೆ) ಒಂದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಮಾಜಸೇವೆಯಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಪ್ರಸ್ತುತ ಕಣಚೂರು ಪಿಯು ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



ಹಗಲಿರುಳು ಶ್ರಮಪಟ್ಟು ಓದಿದ್ದು ಇಂದು ಫಲ ನೀಡಿದೆ. ಕಠಿಣ ಪರಿಶ್ರಮ ಮತ್ತು ಸಮಾಜಶಾಸ್ತ್ರದ ಮೇಲಿನ ಆಸಕ್ತಿಯೇ ನನ್ನ ಈ ಯಶಸ್ಸಿಗೆ ಮುಖ್ಯ ಕಾರಣ ಎಂದು ಕಾವ್ಯ ಹರ್ಷ ವ್ಯಕ್ತಪಡಿಸಿದ್ದಾರೆ. ಮುಂದೆ ಪಿಎಚ್.ಡಿ ಅಧ್ಯಯನ ನಡೆಸಿ, ಅಧ್ಯಾಪಕಿಯಾಗಿ ವೃತ್ತಿಜೀವನ ರೂಪಿಸಿಕೊಳ್ಳುವುದರ ಜೊತೆಗೆ ಸಮಾಜ ಸೇವೆಯನ್ನು ಮುಂದುವರಿಸುವ ದೊಡ್ಡ ಕನಸನ್ನು ಅವರು ಹೊಂದಿದ್ದಾರೆ.

ಸಂಪಾದನೆ ಮೂಲಕ ವಿದ್ಯಾಭ್ಯಾಸ: ಶ್ವೇತಾ

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ 2025ನೇ ಸಾಲಿನ ಬಿ.ಎ. ಪರೀಕ್ಷೆಯಲ್ಲಿ ಶ್ವೇತಾ ಅವರು 9.68 ಸಿಜಿಪಿಎ ಗಳಿಸಿ ಪ್ರಥಮ ರ್‍ಯಾಂಕ್ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಶನಿವಾರ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಮೊದಲ ರ್‍ಯಾಂಕ್ ಪ್ರಮಾಣಪತ್ರ ಹಾಗೂ ಪದಕವನ್ನು ಪ್ರದಾನ ಮಾಡಿದೆ.

ಶಶಿಕಲಾ ಮತ್ತು ಭಾಸ್ಕರ ಆಚಾರ್ಯ ದಂಪತಿಯ ಪುತ್ರಿಯಾದ ಶ್ವೇತಾ ಅವರು ಕೋವಿಡ್ ಸಂದರ್ಭದಲ್ಲೇ ತಮ್ಮ ತಂದೆಯನ್ನು ಕಳೆದುಕೊಂಡಿದ್ದು, ತಾಯಿ ಗೃಹಿಣಿಯಾಗಿದ್ದಾರೆ. ಸಂಕಷ್ಟಗಳ ನಡುವೆಯೂ ಧೈರ್ಯದಿಂದ ಮುಂದೆ ಸಾಗಿದ ಅವರು, ಮಾತುಗಾರಿಕೆ ಹಾಗೂ ಕಾಲೇಜಿನ ವಿವಿಧ ವೇದಿಕೆಗಳಲ್ಲಿ ನಿರೂಪಣೆ ಮಾಡುವ ಮೂಲಕ ಅನೇಕ ಕಡೆಗಳಲ್ಲಿ ಕಾರ್ಯಕ್ರಮ ನಿರೂಪಣೆ ಮಾಡಿ ಗಳಿಸಿದ ಆದಾಯವನ್ನು ತಮ್ಮ ವಿದ್ಯಾಭ್ಯಾಸಕ್ಕೆ ಬಳಸಿಕೊಂಡಿದ್ದಾರೆ.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಪೂರ್ಣಗೊಳಿಸಿದ ಶ್ವೇತಾ ಅವರಿಗೆ ಪಿಯುಸಿಯಲ್ಲಿ ವಿಜ್ಞಾನ ವಿಷಯದ ಮೇಲೆ ಆಸಕ್ತಿ ಮೂಡಿದ್ದು, ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡಿದ್ದರು. ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಹಿನ್ನೆಲೆಯಲ್ಲಿ ಕುಟುಂಬದವರು ಇಂಜಿನಿಯರಿಂಗ್ ಮಾಡುವ ಆಸೆ ಹೊಂದಿದ್ದರೂ, ಅವರಿಗೆ ಕೃಷಿ ವಿಜ್ಞಾನದಲ್ಲಿ ಆಸಕ್ತಿ ಇತ್ತು. ಆದರೆ ತಂದೆಯ ನಿಧನದ ಕಾರಣದಿಂದ ಮೈಸೂರು ತೆರಳಿ ಮುಂದುವರೆಯಲು ಸಾಧ್ಯವಾಗಲಿಲ್ಲ. ಇಂಜಿನಿಯರಿಂಗ್ ಮೇಲಿನ ಆಸಕ್ತಿ ಕಡಿಮೆ ಇದ್ದ ಕಾರಣ, ತಮ್ಮ ಇಚ್ಚೆಯಂತೆ ಬಿ.ಎ. ಪದವಿ ಆಯ್ಕೆ ಮಾಡಿಕೊಂಡರು. ಪ್ರಸ್ತುತ ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ವ್ಯಾಸಂಗ ಮಾಡುತ್ತಿದ್ದಾರೆ.



ಭವಿಷ್ಯದಲ್ಲಿ ಶಿಕ್ಷಕ ವೃತ್ತಿ ಅಥವಾ ಕಾರ್ಪೊರೇಟ್ ಕ್ಷೇತ್ರದಲ್ಲಿ ಮುಂದುವರೆಯುವ ಕುರಿತು ನಿರ್ಧಾರ ಕೈಗೊಳ್ಳಬೇಕಿದೆ ಎಂದಿದ್ದಾರೆ.

ಫಾತಿಮಾ ಶಲೂಲಗೆ 2 ಚಿನ್ನದ ಪದಕ

ಕೊಣಾಜೆ: ಕೇರಳ ಉಪ್ಪಳದ ಫಾತಿಮಾ ಶಲೂಲ ಅವರು ಮಂಗಳೂರು ವಿವಿಯಲ್ಲಿ ಶನಿವಾರನಡೆದಘಟಿಕೋತ್ಸವದಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಎರಡು ಚಿನ್ನದ ಪದಕ ಹಾಗೂ ಮೂರು ನಗದು ಪುರಸ್ಕಾರವನ್ನು ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.



ತಂದೆ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ತಾಯಿ ಗೃಹಿಣಿಯಾಗಿದ್ದಾರೆ. ಅವರ ಪ್ರೋತ್ಸಾಹದಿಂದಲೇ ನನಗೆ ಈ ಸಾಧನೆ ಮಾಡಲು ಅವಕಾಶ ದೊರೆತಿದೆ. ನಾನು ಮುಂದಿನ ದಿನಗಳಲ್ಲಿ ಪೋಷಕರ ಸಲಹೆ ಪಡೆದು ಪಿಎಚ್‌ಡಿ ಮಾಡಿ ಸಮಾಜಮುಖಿ ಚಟುವಟಿಕೆಗಳ ಜೊತೆಗೆ ಒಳ್ಳೆಯ ಭವಿಷ್ಯ ನಿರ್ಮಾಣದ ಗುರಿ ಇಟ್ಟುಕೊಂಡಿದ್ದೇನೆ ಎಂದರು.

ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿ

ಕಡಬ ಭಾಗದಲ್ಲಿ ಗುಡುಗು ಸಹಿತ ಜಡಿಮಳೆ

ಕಡಬ: ಕಡಬ ತಾಲೂಕಿನ ಹಲವೆಡೆ ಶನಿವಾರ ಸಂಜೆ ಗುಡುಗು ಸಹಿತ ಗಾಳಿ ಮಳೆಯಾಗಿದ್ದು ಅಪಾರ ಹಾನಿ ಸಂಭವಿಸಿದೆ.

ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಗೆ ಅಲ್ಲಲ್ಲಿ ಮರಗಳು ಮುರಿದು ಬಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ಪೆರಾಬೆ ಗ್ರಾ.ಪಂ. ಬಳಿ ಭಾರೀ ಗಾತ್ರದ ಮರವೊಂದು ವಿದ್ಯುತ್ ಲೈನ್‌ನ ಮೇಲೆ ಬಿದ್ದು ಹತ್ತಿರದ ವಿದ್ಯುತ್ ಪರಿವರ್ತಕ ನೆಲಕ್ಕುರುಳಿದೆ. ಆ ಭಾಗದಲ್ಲಿ ಹಲವು ವಿದ್ಯುತ್ ಕಂಬಗಳು ಮುರಿದು ಬಿದ್ದು ವಿದ್ಯುತ್ ಕಡಿತವಾಗಿದೆ. ರಸ್ತೆಗೆ ಬಿದ್ದ ಮರಗಳನ್ನು ಸಾರ್ವಜನಿಕರು ತೆರವು ಮಾಡಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಿದ್ದಾರೆ.

ಗ್ರಾಮೀಣ ಭಾಗದ ರಸ್ತೆಯುದ್ದಕ್ಕೂ ಗಾಳಿಯ ಪರಿಣಾಮ ಅಲ್ಲಲ್ಲಿ ಮರಗಳು ಹಾಗೂ ಮರದ ಕೊಂಬೆಗಳು ರಸ್ತೆಗೆ ಬಿದ್ದು ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಕಡಬದಿಂದ ಉಪ್ಪಿನಂಗಡಿ ತನಕ ರಸ್ತೆ ಬದಿಯಲ್ಲಿ ಹಾಕಲಾಗಿದ್ದ ಶರವೂರು ಬ್ರಹ್ಮಕಲಶೋತ್ಸವ ಹಾಗೂ ಕಡಬ ಏಕಾಹ ಭಜನಾ ಶುಭಾಶಯ ಕೋರುವ ಫ್ಲೆಕ್ಸ್‌ಗಳು ಗಾಳಿಯ ರಭಸಕ್ಕೆ ಹರಿದು ಕಿತ್ತು ಹೋಗಿವೆ. ಬಹುತೇಕ ಫ್ಲೆಕ್ಸ್‌ಗಳು ನೆಲಕ್ಕುರುಳಿವೆ.

ಕ್ಯೊಲ ಗ್ರಾಮದ ಕಡೆಂಬ್ಯಾಲ್ ಹಾಗೂ ಸುತ್ತಮುತ್ತಲಿನಲ್ಲಿ ಭಾರೀ ಗಾಳಿಗೆ ಅಡಿಕೆ ಮರಗಳು ಮುರಿದು ಬಿದ್ದು ನಾಶವಾಗಿವೆ. ಕೆಲವು ಕಡೆ ಮನೆಗಳ ಛಾವಣಿಗಳು ಕಿತ್ತು ಹೋದರೆ, ಅಡಿಕೆ ಒಣಗಿಸಲು ಹಾಕಲಾಗಿದ್ದ ಸೋಲಾರ್ ಟರ್ಪಾಲ್‌ಗಳು ಕಿತ್ತು ಹೋಗಿವೆ. ಬಾಳೆ, ತೆಂಗು ಮರಗಳಿಗೂ ಹಾನಿಯಾಗಿದೆ. ಆಲಂಕಾರು ಭಾಗದಲ್ಲಿ ಭಾರೀ ಗಾಳಿಗೆ ಶರವೂರು ಬ್ರಹ್ಮಕಲಶೋತ್ಸವಕ್ಕೆ ದೇವಸ್ಥಾನದಲ್ಲಿ ಹಾಕಲಾಗಿದ್ದ ಚಪ್ಪರಗಳಿಗೆ ಹಾನಿಯಾಗಿದೆ. ಸಾರ್ವಜನಿಕರು ಅಳವಡಿಸಿರುವ ಸ್ವಾಗತ ಕಮಾನುಗಳು ಧರೆಗೆ ಬಿದ್ದಿವೆ.



ಬಹುತೇಕ ಭಾಗಗಳಲ್ಲಿ ವಿದ್ಯುತ್ ಕಂಬಗಳಿಗೆ ಹಾನಿಯಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಆಲಂಕಾರು, ಪೆರಾಬೆ, ರಾಮಕುಂಜ, ಸವಣೂರು, ಕಾಣಿಯೂರು, ಬಲ್ಯ, ಕುಟ್ರುಪ್ಪಾಡಿ, ಬಿಳಿನೆಲೆ ಮುಂತಾದ ಭಾಗಗಳಲ್ಲಿ ಕೂಡಾ ಗಾಳಿ ಮಳೆಯಾಗಿದ್ದು, ಕೃಷಿ ತೋಟಗಳಿಗೆ ಹಾನಿಯಾಗಿದೆ.

ಉಪ್ಪಿನಂಗಡಿ ಪರಿಸರದಲ್ಲಿ ಭಾರೀ ಅವಾಂತರ

ಉಪ್ಪಿನಂಗಡಿ : ಶನಿವಾರ ಸಾಯಂಕಾಲ ಬೀಸಿದ ಬಿರುಗಾಳಿ ಮಳೆಯಿಂದಾಗಿ ಉಪ್ಪಿನಂಗಡಿ ಪರಿಸರದಲ್ಲಿ ಭಾರೀ ಅವಾಂತರ ಸೃಷ್ಟಿಸಲ್ಪಟ್ಟಿದ್ದು, ಅದ್ದೂರಿಯಾಗಿ ನಡೆಯುತ್ತಿದ್ದ ಕಂಬಳದ ಸಿದ್ದತೆಗಳು ಹಾನಿಗೀಡಾಗಿ ತೊಂದರೆಯುಂಟಾದ ಘಟನೆ ವರದಿಯಾಗಿದೆ.

ಸಂಜೆ ದಟ್ಟ ಮೋಡ ಆವರಿಸಿ ಬಿರುಗಾಳಿ ಸದೃಶ್ಯ ಗಾಳಿ ಬೀಸತೊಡಗಿ ಪರಿಸರದಾದ್ಯಂತ ಧೂಳು ಪ್ರಸಹರಿಸಲ್ಪಟ್ಟು ಜನತೆಗೆ ತೊಂದರೆಯುಂಟಾದರೆ, ಉಪ್ಪಿನಂಗಡಿಯಲ್ಲಿ ನಡೆಯುತ್ತಿದ್ದ ವಿಜಯವಿಕ್ರಮ ಜೋಡುಕರೆ ಕಂಬಳದಲ್ಲಿ ಬಿರುಗಾಳಿ ಅನಾಹುತಕಾರಿಯಾಗಿ ವರ್ತಿಸಿತು. ಪರಿಸರದಲ್ಲಿ ಅಳವಡಿಸಲಾದ ಬ್ಯಾನರ್‌ಗಳೆಲ್ಲವನ್ನೂ ಧರೆಗುರುಳಿಸಿದ ಬಿರುಗಾಳಿಯು ಪ್ರೇಕ್ಷಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಅಳವಡಿಸಲಾಗಿದ್ದ ಶಾಮೀಯಾನಗಳನ್ನು ದಿಕ್ಕೆಡಿಸಿತ್ತು.



ಬಿರುಗಾಳಿಯ ಹೊಡೆತಕ್ಕೆ ಕಂಬಳ ಪರಿಸರದಲ್ಲಿ ಅಳವಡಿಸಲಾದ ಅಂಗಡಿ ಮುಂಗಟ್ಟುಗಳು ಅತಂತ್ರಕ್ಕೆ ಸಿಲುಕಿ ಸಂಕಷ್ಟಕ್ಕೀಡಾಯಿತು. ಬಳಿಕ ಮಂದಗತಿಯ ಮಳೆ ಸುರಿದು ಪರಿಸರವಿಡೀ ತಂಪಾಯಿತು. ತನ್ಮೂಲಕ ಬಿಸಿ ವಾತಾವರಣದಲ್ಲಿ ಬಳಲುತ್ತಿದ್ದ ಮಂದಿ ತಂಪು ವಾತಾವರಣದಲ್ಲಿ ಕಂಬಳವನ್ನು ವೀಕ್ಷಿಸಲು ಅವಕಾಶ ಒದಗಿದಂತಾಯಿತು.

ಬಿರುಗಾಳಿ ಹೊಡೆತಕ್ಕೆ ಅಲ್ಲಲ್ಲಿ ಹಾನಿಯುಂಟಾಗಿರುವ ಬಗ್ಗೆ ಮಾಹಿತಿ ಬಂದಿದೆ.

ಪೊಲೀಸರ ಮೇಲೆ ಕಾರು ಹರಿಸಲು ಯತ್ನ

ಕಾರ್ಕಳ : ಕ್ರಿಕೆಟ್ ಬೆಟ್ಟಿಂಗ್ ಜಾಲದ ಐವರ ಬಂಧನ



ಕಾರ್ಕಳ: ಕಾರ್ಕಳ ಮತ್ತು ಶಿರ್ವದಲ್ಲಿ ಕರ್ತವ್ಯನಿರತ ಪೊಲೀಸ್ ಅಧಿಕಾರಿಗಳ ಮೇಲೆ ಕಾರು ಹರಿಸಲು ಯತ್ನಿಸಿ, ಕೊಲೆ ಯತ್ನ ಹಾಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಕ್ರಿಕೆಟ್ ಬೆಟ್ಟಿಂಗ್ ಜಾಲದ ಐವರು ಆರೋಪಿಗಳನ್ನು ಪೊಲೀಸರು ಸಿನಿಮೀಯ ಶೈಲಿಯಲ್ಲಿ ಬೆನ್ನಟ್ಟಿ ಬಂಧಿಸಿದ್ದಾರೆ.

ಕುಂದಾಪುರ ನಾಡ ಗ್ರಾಮದ ಸುದರ್ಶನ್ ಶೆಟ್ಟಿ (29), ಹೇರೂರಿನ ಕರ್ತವ್ಯ ಶೆಟ್ಟಿ (27), ಬೈಂದೂರು ಮೂದುರಿನ ಅರುಣ್ ಶೆಟ್ಟಿ (29), ಹೆಬ್ರಿ ಬೆಳಂಜೆಯ ತೇಜಸ್ (28) ಮತ್ತು ಬೈಂದೂರು ಶೀರೂರಿನ ಪ್ರಜ್ವಲ್ ಶೆಟ್ಟಿ (29) ಬಂಧಿತ ಆರೋಪಿಗಳು.

ಮಾರ್ಚ್ 27ರಂದು ಮಧ್ಯಾಹ್ನ ಕಾರ್ಕಳ ಗ್ರಾಮಾಂತರ ಠಾಣೆಯ ಎಸ್‌ಐ ಪ್ರಸನ್ನ ಎಂ.ಎಸ್. ಅವರು ಹಂಚಿಕಟ್ಟೆ ಬಳಿ ತಪಾಸಣೆ ನಡೆಸುತ್ತಿದ್ದಾಗ, ಬಂಗ್ಲೆಗುಡ್ಡೆ ವೃತ್ತದಿಂದ ಬಂದ ಕಪ್ಪು ಬಣ್ಣದ ಫಾರ್ಚುನರ್ ಕಾರನ್ನು ನಿಲ್ಲಿಸಲು ಸೂಚಿಸಿದರು. ಈ ವೇಳೆ ಕಾರಿನಲ್ಲಿದ್ದ ಆರೋಪಿಗಳು ಪೊಲೀಸರ ಮೇಲೆ ಕಾರು ಹರಿಸಲು ಯತ್ನಿಸಿ ಅಲ್ಲಿಂದ ಪರಾರಿಯಾಗಿದ್ದರು. ಈ ಬಗ್ಗೆ ಕಾರ್ಕಳ ನಗರ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು.

ಶಿರ್ವದಲ್ಲೂ ಅಟ್ಟಹಾಸ

ಕಾರ್ಕಳದಿಂದ ಪರಾರಿಯಾದ ಇದೇ ಕಾರು ಶಿರ್ವ ಪದವು ಬಳಿ ಬರುತ್ತಿದ್ದಾಗ, ಶಿರ್ವ ಎಸ್‌ಐ ಮಂಜುನಾಥ ಮರಬದ ಅವರು ತಡೆಯಲು ಯತ್ನಿಸಿದರು. ಆಗಲೂ ಚಾಲಕ ಕಾರಿನ ವೇಗ ಕಡಿಮೆ ಮಾಡಿ ಎಸ್‌ಐ ಅವರನ್ನು ಕಿಟಕಿಯಿಂದ ದೂಡಿ ಹಾಕಿ ಪರಾರಿಯಾಗಲು ಯತ್ನಿಸಿದ್ದಾನೆ. ತಕ್ಷಣ ಕಾರ್ಯಪ್ರವೃತ್ತರಾದ ಶಿರ್ವ ಪೇಟೆಯ ಹೆಡ್ ಕಾನ್‌ಸ್ಟೇಬಲ್ ಅವರು ಕಾರನ್ನು ತಡೆದು ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಟ್ಟಿಂಗ್ ಮತ್ತು ವಂಚನೆಯ ಜಾಲ

ಬಂಧಿತರನ್ನು ವಿಚಾರಣೆ ನಡೆಸಿದಾಗ ಇವರು ಸಂಘಟಿತರಾಗಿ ಸಾರ್ವಜನಿಕರಿಗೆ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಹಣ ಹೂಡುವಂತೆ ಆಮಿಷವೊಡ್ಡಿ ವಂಚಿಸುತ್ತಿದ್ದ ವಿಷಯ ಬೆಳಕಿಗೆ ಬಂದಿದೆ. ಜೂಜಾಟದ ದಂಧೆಯಲ್ಲಿ ತೊಡಗಿದ್ದ ಕಾರಣಕ್ಕೇ ಇವರು ಪೊಲೀಸರಿಂದ ತಪ್ಪಿಸಿಕೊಳ್ಳಲು ಈ ಕೃತ್ಯ ಎಸಗಿದ್ದರು ಎನ್ನಲಾಗಿದೆ.

ಕಾರ್ಕಳ ಮತ್ತು ಶಿರ್ವ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 25°
ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 29, ಮಾರ್ಚ್ 2026 | e-mail dignthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 3
ನೇತ್ರಾವತಿ ತಟದಲ್ಲಿ ಮೇಳೈಸಿದ ಕನಡ ಹಬ್ಬಕ್ಕೆ ಸಂಭ್ರಮದ ತೆರೆ


ಪುಟ 6
ಇಲ್ಲಿ ಯೂ ಟರ್ನ್‌ಗೆ ಸಾಗಬೇಕು ಬರೋಬ್ಬರಿ 3 ಕಿ.ಮೀ. ದೂರ!



ಸುಡುಬಿಸಿಲಿಗೆ ಬೆಂದಿರುವ ಕರಾವಳಿಯ ಇಳೆಗೆ ಹರ್ಷ ಮೂಡಿಸಿತು ಬೇಸಗೆಯ ವರ್ಷಧಾರೆ







ಹವಾಮಾನ ಇಲಾಖೆ ನುಡಿದ ಭವಿಷ್ಯ ನಿಜವಾಗಿದ್ದು, ವಾರಾಂತ್ಯಕ್ಕೆ ಕರಾವಳಿಯಲ್ಲಿ ವರ್ಷಧಾರೆಯಾಗಿದೆ. ಶನಿವಾರ ಸಂಜೆಯ ಬಳಿಕ ಕೆಲವು ತಾಸು ಸುರಿದ ಭಾರೀ ಗಾಳಿ ಸಹಿತದ ಮಳೆಗೆ ಬೆಳ್ತಂಗಡಿ, ಸುಳ್ಯ, ಉಪ್ಪಿನಂಗಡಿ, ಕಡಬ ಪರಿಸರದಲ್ಲಿ ಅಪಾರ ಕಷ್ಟನಷ್ಟಗಳು ಉಂಟಾಗಿವೆ. ಜಿಲ್ಲೆಯ ಉಳಿದ ಭಾಗಗಳಲ್ಲಿಯೂ ಮಳೆಯಾಗಿದ್ದು, ಎಲ್ಲೂ ಯಾವುದೇ ಹಾನಿ ಉಂಟುಮಾಡದೆ ಸಾಧಾರಣವಾಗಿ ಸುರಿದಿದೆ.

ಸುತ್ತಮುತ್ತ

ಕಾರ್ಕಳ ತಾಲೂಕಿನ ವಿವಿಧೆಡೆ ಆಲಿಕಲ್ಲು ಸಹಿತ ಸುರಿದ ಭಾರೀ ಗಾಳಿ ಮಳೆ

ಕಾರ್ಕಳ: ತಾಲೂಕಿನ ನೂರಲ್ಬೆಟ್ಟು, ಈದು, ಹೊಸ್ಮಾರು, ರೆಂಜಾಳ, ನೆಲ್ಲಿಕಾರು, ಇರ್ವತ್ತೂರು, ಸಾಣೂರು, ಮುಡಾರು, ಕೆರುವಾಶೆ, ಶಿರ್ಲಾಲು ಸೇರಿದಂತೆ ಹಲವು ಭಾಗಗಳಲ್ಲಿ ಶನಿವಾರ ಸಂಜೆ ಬಳಿಕ ಭಾರೀ ಮಳೆಯಾಗಿದ್ದು, ಕೆಲವೆಡೆ ಆಲಿಕಲ್ಲು ಮಳೆಯಾಗಿದೆ. ಹೆಬ್ರಿ ತಾಲೂಕಿನ ಮುನಿಯಾಲು, ವರಂಗ, ಅಂಡಾರು ಹಾಗೂ ಕಬ್ಬಿನಾಲೆ ಪ್ರದೇಶಗಳಲ್ಲಿಯೂ ಮಳೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಕರಾವಳಿ ಭಾಗದ ವಿವಿಧ ಕಡೆಗಳಲ್ಲಿ ಇನ್ನೂ ಎರಡು ದಿನಗಳ ಕಾಲ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಈಗಾಗಲೇ ಮುನ್ಸೂಚನೆಯನ್ನು ನೀಡಿದೆ.

ಬೆದ್ರದಲ್ಲಿ ಅರ್ಧ ತಾಸು ಮಳೆ, ರಾತ್ರಿವರೆಗೆ ನಿಲ್ಲದ ಮಿಂಚು, ಸಿಡಿಲಿನ ಘರ್ಜನೆ

ಮೂಡುಬಿದಿರೆ: ಶನಿವಾರ ಸಂಜೆ ಮೂಡುಬಿದಿರೆಯಲ್ಲಿ ಮಳೆಯಾಗಿದೆ. ಗುಡುಗು ಸಿಡಿಲಿನ ಆರ್ಭಟದೊಂದಿಗೆ ಮಳೆಯಾ ಗಮನವಾಗಿದೆ. ಭಾರೀ ಬಿಸಿಲ ಝಳದಿಂದ ಬಸವಳಿದಿದ್ದ ಭೂಮಿಗೆ ಕೊಂಚ ತಂಪಾದಂತಾಗಿದೆ. ಸೆಖೆಗೆ ಕಂಗೆಟ್ಟುಹೋಗಿದ್ದ ಜನತೆ ಕೊಂಚ ನಿಟ್ಟುಸಿರು ಬಿಟ್ಟಿದ್ದಾರೆ. ಸುಮಾರು ಅರ್ಧ ತಾಸುಗಳ ಕಾಲ ಮಳೆ ಸುರಿದಿದೆ. ರಾತ್ರಿಯ ತನಕವೂ ಸಿಡಿಲಾರ್ಭಟ ಮುಂದುವರಿದಿದೆ. ರಾತ್ರಿಯೂ ಮಳೆಯಾಗುವ ಸೂಚನೆ ಕಂಡು ಬಂದಿದೆ. ದಿನದ ತಾಪಮಾನ ಗರಿಷ್ಠ 35ಡಿಗ್ರಿಗಳಷ್ಟಿದ್ದು, ಕನಿಷ್ಠ ತಾಪಮಾನ 25ಡಿಗ್ರಿ ಸೆಲ್ಶಿಯಸ್ ದಾಖಲಾಗಿದೆ.

ಮಂಗಳೂರು | ಬೆಳ್ತಂಗಡಿ | ಸುಳ್ಯ | ಪುತ್ತೂರು | ಕಡಬ | ಉಪ್ಪಿನಂಗಡಿ | ಕಾರ್ಕಳ

ವೀಕೆಂಡ್ ಕೂಲ್! ಕಷ್ಟ ನಷ್ಟದ ನಡುವೆ ಇಷ್ಟವಾದ ಮಳೆ

ಮಂಗಳೂರು: ನಗರ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ವಾರಾಂತ್ಯ ಶನಿವಾರ ಸಂಜೆಯ ಬಳಿಕ ಭರ್ಜರಿ ಮಳೆ ಸುರಿದಿದೆ.

ಕಳೆದ ಹಲವು ದಿನಗಳಿಂದ ಸುಡುಬಿಸಿಲಿಗೆ ನಲುಗಿದ್ದ ಇಳೆಗೆ ಈ ಮಳೆ ತುಸು ತಂಪೆರೆದಿದೆ. ಸುಳ್ಯ, ಪುತ್ತೂರು, ಬೆಳ್ತಂಗಡಿ, ಮೂಡುಬಿದಿರೆ, ಸುರತ್ಕಲ್ ತಾಲೂಕಿನ ಬಹುತೇಕ ಕಡೆ ಭಾರೀ ಗಾಳಿ, ಗುಡುಗು, ಸಿಡಿಲು ಸಹಿತ ಮಳೆ ಬಿದ್ದಿದೆ.

ಬೆಳ್ತಂಗಡಿ ತಾಲೂಕಿನಲ್ಲಿ ಅಪಾರ ಹಾನಿ

ಬೆಳ್ತಂಗಡಿ ತಾಲೂಕಿನ ಹೆಚ್ಚಿನ ಭಾಗಗಳಲ್ಲಿ ಮಧ್ಯಾಹ್ನ ಮೂರು ಗಂಟೆ ಬಳಿಕ ಆರಂಭವಾದ ಮಳೆಗೆ ಗಾಳಿ, ಗುಡುಗು, ಸಿಡಿಲು ಸಾಥ್ ನೀಡಿತ್ತು. ಸಂತೆಕಟ್ಟೆ ಪರಿಸರದಲ್ಲಿ ಗಾಳಿಗೆ ರಿಕ್ಷಾ ಸ್ಟ್ಯಾಂಡ್ ಧರಾಶಾಯಿಯಾಗಿ ರಿಕ್ಷಾವೊಂದು ಜಖಂಗೊಂಡಿದೆ. ಪೆರೊಡಿತ್ತಾಯನ ಕಟ್ಟೆ ಪರಿಸರದಲ್ಲಿ ಭಾರೀ ಗಾಳಿಗೆ 20ಕ್ಕೂ ಅಧಿಕ ಮನೆಗಳ ಮೇಲೆ ಮರಗಳು ಬಿದ್ದು, ಶೀಟುಗಳು ಹಾರಿ ಹೋಗಿ ನಷ್ಟ ಉಂಟಾಗಿದೆ.

ನೆರಿಯ ಗ್ರಾಮದ ಗಂಡಿಬಾಗಿಲು ಎಂಬಲ್ಲಿ ಭಾರೀ ಗಾಳಿಗೆ ಮನೆಗಳ ಶೀಟು ಹಾರಿಹೋಗಿವೆ. ಇದಲ್ಲದೆ ಅಲ್ಲಲ್ಲಿ ಮರಗಳು ಬಿದ್ದು ವಿದ್ಯುತ್ ಪೂರೈಕೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ.



ಮಂಗಳೂರು, ಸುರತ್ಕಲ್ ನೆಲಕ್ಕೂ ತಂಪೆರೆದ ವರುಣ

ಶನಿವಾರ ಸಂಜೆಯ ಬಳಿಕ ಮಂಗಳೂರು ನಗರ ಹಾಗೂ ಸುರತ್ಕಲ್ ಪರಿಸರದಲ್ಲಿಯೂ ಕೆಲಕಾಲ ಮಳೆಯಾಗಿದೆ. ಸಂಜೆ 5 ರ ವೇಳೆಗೆ ಏಕಾಏಕಿ ಮೋಡ ಕವಿದು ತುಂತುರು ಮಳೆ ಸುರಿಯತೊಡಗಿತು. ಕೆಲವೇ ಕ್ಷಣಗಳಲ್ಲಿ ಮಳೆ ತೀವ್ರತೆ ಹೆಚ್ಚಾಗಿ ವಾತಾವರಣ ತುಸು ತಂಪಾಗಿಸಿತು.

ಪುತ್ತೂರಿಗೆ ತುಸು ತಂಪೆರೆದ ಮಳೆ

ಶುಕ್ರವಾರ ತಡ ರಾತ್ರಿ ಪುತ್ತೂರು ತಾಲೂಕಿನಾದ್ಯಂತ ಮಳೆ ಸುರಿದ ಬಳಿಕ ಶನಿವಾರವೂ ಸಂಜೆಯ ಸಮಯದಲ್ಲಿ ಮತ್ತೆ ವಾಪಸ್ಸಾಗಿದ್ದು, ಸಾಧಾರಣವಾಗಿ ಸುರಿದು ತಂಪೆರೆದಿದೆ.

ಸುಳ್ಯದ ಗೂನಡ್ಕದಲ್ಲಿ ಮುತ್ತಿನಂತೆ ಧರೆಗೆ ಉರುಳಿತು ಆಲಿಕಲ್ಲು ಮಳೆ

ಸುಳ್ಯ: ಶನಿವಾರ ಸಂಜೆಯ ಬಳಿಕ ತಾಲೂಕಿನ ವಿವಿಧ ಕಡೆ ಉತ್ತಮ ಮಳೆಯಾಗಿದ್ದು, ಗೂನಡ್ಕ ಪರಿಸರದಲ್ಲಿ ಆಲಿಕಲ್ಲು ಸಹಿತ ಮಳೆ ಬಿದ್ದಿದೆ. ಸೆಕೆಯಿಂದ ಬಳಲುತ್ತಿದ್ದ ಮಂದಿ ನಿಟ್ಟುಸಿರು ಬಿಡುವಂತಾಯಿತು.

ಸಿಡಿಲಿನ ಆರ್ಭಟವಿತ್ತು...

ಶನಿವಾರ ಸಂಜೆ ಸುಮಾರು 4.30ರ ವೇಳೆಗೆ ಸುಳ್ಯ ತಾಲೂಕಿನಾದ್ಯಂತ ಗಾಳಿ ಗುಡುಗು ಸಿಡಿಲಿನ ಅಬ್ಬರದೊಂದಿಗೆ ಈ ಭಾಗದಲ್ಲಿ ಸುಮಾರು ಒಂದು ಗಂಟೆಗೂ ಹೆಚ್ಚು ಸಮಯ ಉತ್ತಮ ಮಳೆ ಸುರಿದಿದೆ.



ಆಗಸದಿಂದ ಆಲಿಕಲ್ಲು...

ಸಂಪಾಜೆ ಗ್ರಾಮದ ಗೂನಡ್ಕ ಸಮೀಪದ ದರ್ಖಾಸ್ತು ಎಂಬಲ್ಲಿ ಆಲಿಕಲ್ಲು ಸಹಿತ ಮಳೆ ಬಿದ್ದಿದೆ. ತಾಲೂಕಿನ ವಿವಿಧ ಕಡೆ ಉತ್ತಮ ಮಳೆಯಾಗಿದ್ದು, ಈ ಭಾಗದ ಕೃಷಿಕರು, ಜನತೆ ವಾರಾಂತ್ಯದ ವರುಣ ಕೃಪೆಗೆ ಸಂತಸಗೊಂಡಿದ್ದಾರೆ.

ಬೆಳ್ತಂಗಡಿ ಮೆಸ್ಕಾಂಗೆ ಅಪಾರ ನಷ್ಟ

ಬೆಳ್ತಂಗಡಿ: ಶನಿವಾರ ಸುರಿದ ಗಾಳಿ ಮಳೆಗೆ ಉಜಿರೆ ಮೆಸ್ಕಾಂ ಉಪ ವಿಭಾಗದಲ್ಲಿ 15ಕ್ಕಿಂತ ಅಧಿಕ, ಬೆಳ್ತಂಗಡಿ ಉಪವಿಭಾಗದಲ್ಲಿ ಐದು ವಿದ್ಯುತ್ ಕಂಬಗಳು ಗಾಳಿಗೆ ಉರುಳಿ ಬಿದ್ದು ವಿದ್ಯುತ್ ಪೂರೈಕೆಗೆ ಅಡಚಣೆ ಉಂಟಾಗಿದೆ.

ಹೆದ್ದಾರಿ ಸಂಚಾರಕ್ಕೆ ಪರದಾಟ

ಬೆಳ್ತಂಗಡಿ: ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು ಇಲ್ಲಿ ಇನ್ನೂ ಕೂಡ ಚರಂಡಿ ಕಾಮಗಾರಿ ಪೂರ್ಣಗೊಳ್ಳದೆ ಇರುವುದರಿಂದ ಹಲವೆಡೆ ರಸ್ತೆ ವ್ಯಾಪ್ತಿಯಲ್ಲಿ ಮಳೆ ನೀರು ಹರಿದು ವಾಹನ ಸವಾರರು ಪರದಾಡುವಂತಾಗಿದೆ.

ಬಂಟ್ವಾಳ: ತುಂತುರು ಮಳೆ ಸಿಂಚನ

ಬಂಟ್ವಾಳ: ಶನಿವಾರ ಸಂಜೆಯ ಬಳಿಕ ಬಂಟ್ವಾಳ ತಾಲೂಕಿನಲ್ಲಿ ಮೋಡ ಕವಿದ ವಾತಾವರಣ ಇತ್ತಾದರೂ ತುಂತುರು ಮಳೆಯಷ್ಟೇ ಸುರಿದಿದೆ. ಭಾರೀ ಮಳೆ ನಿರೀಕ್ಷೆ ಮಾತ್ರ ಹುಸಿಯಾಗಿದೆ.







ಉಪ್ಪಿನಂಗಡಿ ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿಯಿಂದ ಉಬಾರ್ ಕಂಬಳೋತ್ಸವಕ್ಕೆ ಚಾಲನೆ

ಕಂಬಳದಲ್ಲಿ ತುಳುವರ ಕೃಷಿ ಪ್ರಧಾನ ಬದುಕಿನ ನಂಟಿದೆ: ನ್ಯಾಕ್

ಉಪ್ಪಿನಂಗಡಿ: ಕಂಬಳ ತುಳುನಾಡ ಜಾನಪದ ಕ್ರೀಡೆಯಾಗಿದ್ದು ಈ ಕ್ರೀಡೆಯಲ್ಲಿ ತುಳುನಾಡ ಜನರ ಕೃಷಿ ಪ್ರಧಾನ ಬದುಕಿನ ನಂಟಿದೆ ಮತ್ತು ಸೊಬಗಿದೆ. ಈ ಹಿನ್ನೆಲೆಯಲ್ಲಿ ಕಂಬಳವನ್ನು ಪ್ರೋತ್ಸಾಹಿಸುವ ಮೂಲಕ ನಮ್ಮ ಸಂಸ್ಕೃತಿ ಸಂಸ್ಕಾರಗಳ ಶ್ರೀಮಂತಿಕೆಯನ್ನು ಜಗದಗಲಕ್ಕೆ ಪ್ರಸಹರಿಸುವ ಕಾರ್ಯ ನಡೆಯಬೇಕಾಗಿದೆ ಎಂದು ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ಹೇಳಿದರು.



ಅವರು ಉಪ್ಪಿನಂಗಡಿಯ ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿಯಿಂದ ನಡೆಯುವ 40ನೇ ವರ್ಷದ ಉಬಾರ್ ಕಂಬಳೋತ್ಸವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರವೀಂದ್ರ ಶೆಟ್ಟಿ ನುಳಿಯಾಲು, ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಮಾಜಿ ಅಧ್ಯಕ್ಷ ಕರುಣಾಕರ ಸುವರ್ಣ ಮಾತನಾಡಿ, ಕಂಬಳ ಮತ್ತು ತುಳುನಾಡಿನ ನಂಟನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಧಾರ್ಮಿಕ ಪರಿಷತ್‌ನ ಸದಸ್ಯೆ ಮಲ್ಲಿಕಾ ಪಕ್ಕಳ ಮಲಾರಬೀಡು ಮಾತನಾಡಿ, ಕಂಬಳವು ತುಳುನಾಡಿನ ರೈತಾಪಿ ವರ್ಗದ ಕ್ರೀಡೆಯಾಗಿದ್ದು ಕಂಬಳಕ್ಕೂ ಕೃಷಿಕರಿಗೂ ಅವಿನಾಭಾವ ಸಂಬಂಧವಿದೆ. ಕಂಬಳ ಕೋಣಗಳನ್ನು ಸಾಕುವವರೂ ಕಂಬಳ ಕೋಣಗಳಿಗೂ ತಾಯಿ-ಮಕ್ಕಳ ಬಾಂಧವ್ಯವಿದೆ. ಆದರೂ ಕಂಬಳವನ್ನು ನಿಲ್ಲಿಸುವ ಪ್ರಯತ್ನಗಳು ನಡೆದಿತ್ತು. ಆಗ ಕಂಬಳ ಸಮಿತಿ, ಕಂಬಳಾಭಿಮಾನಿಗಳ ಹೋರಾಟದೊಂದಿಗೆ ಅಶೋಕ್ ಕುಮಾರ್ ರೈಯವರು ಕೂಡಾ ವೈಯಕ್ತಿಕವಾಗಿ ಪೇಟಾದವರ ವಿರುದ್ಧ ಕಾನೂನು ಹೋರಾಟ ನಡೆಸಿದರು. ಅದೆಲ್ಲದರ ಫಲವಾಗಿ ಇಂದು ಕಂಬಳವು ನಿರಾಂತಕವಾಗಿ ನಡೆಯುತ್ತಿದೆ ಎಂದರು.

ವೇದಿಕೆಯಲ್ಲಿ ಶಾಸಕ, ಕಂಬಳ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ರೈ, ಶ್ರೀ ಮಹಿಷಮರ್ದಿನಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ನಿರಂಜನ್ ರೈ ಮಠಂತಬೆಟ್ಟು ಉಪ್ಪಿನಂಗಡಿ ಗ್ರಾ.ಪಂ. ಮಾಜಿ ಉಪಾಧ್ಯಕ್ಷೆ ವಿದ್ಯಾಲಕ್ಷ್ಮೀ ಪ್ರಭು, ಅಘೋರ ಟೀಮ್ ಉಬಾರ್‌ನ ಗೌರವಾಧ್ಯಕ್ಷ ಸಂತೋಷ್ ಶೆಟ್ಟಿ ಪುತ್ತೂರು ಬಂಟರ ಸಂಘದ ಮಾಜಿ ಸಂಚಾಲಕ ದಯಾನಂದ ರೈ ಮನವಳಿಕೆ, ಉಪ್ಪಿನಂಗಡಿ ಪೊಲೀಸ್ ಉಪನಿರೀಕ್ಷಕ ಸುತೇಶ್ ಕೆ.ಪಿ., ಪ್ರವೀಣ್ ಕುಮಾರ್ ಕದಿಕ್ಕಾರು ಬೀಡು, ಪುತ್ತೂರು ನಗರ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ, ಸುಮ ಅಶೋಕ್ ರೈ, ಶೈಲಜಾ ರಾಜೇಶ್, ಪುತ್ತೂರು ಮಹಿಳಾ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷೆ ಚಂದ್ರಪ್ರಭಾ ಗೌಡ ಕಂಬಳ ಸಮಿತಿಯ ಗೌರವಾಧ್ಯಕ್ಷ ಎನ್. ಉಮೇಶ್ ಶೆಣೈ, ಕೋಶಾಧಿಕಾರಿ ಸೀತಾರಾಮ ಶೆಟ್ಟಿ ಹೆಗ್ಡೆಹಿತ್ಲು ಉಪಾಧ್ಯಕ್ಷ ಚಂದ್ರಹಾಸ ರೈ ಮಠಂತಬೆಟ್ಟು ವಿದ್ಯಾಧರ ಜೈನ, ರಾಮಚಂದ್ರ ಮಣಿಯಾಣಿ, ದಾಸಪ್ಪ ಗೌಡ ಕೋಡಿಯಡ್ಕ ಸಂಘಟನಾ ಕಾರ್ಯದರ್ಶಿಗಳಾದ ಯೋಗೀಶ್ ಸಾಮಾನಿ ಸಂಪಿಗೆದಡಿ ಮಠಂತಬೆಟ್ಟು ಕೃಷ್ಣಪ್ರಸಾದ್ ಬೊಳ್ಳಾವು, ದಿಲೀಪ್ ಕರಾಯ ಮತ್ತಿತರರು ಉಪಸ್ಥಿತರಿದ್ದರು.


ಕಂಬಳ ಸಮಿತಿಯ ಕಾರ್ಯಾಧ್ಯಕ್ಷ ಅಶೋಕ್ ಕುಮಾರ್ ರೈ ಆರ್ಥಾನಗುತ್ತು ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಕೇಶವ ಭಂಡಾರಿ ಬೆಳ್ಳಿಪ್ಪಾಡಿ ಕೈಪ ವಂದಿಸಿದರು. ಬಾಲಕೃಷ್ಣ ಪೂಜಾರಿ ಕೊಡಿಪ್ಪಾಡಿ ನಿರ್ವಹಿಸಿದರು. ಉಪ್ಪಿನಂಗಡಿ ದೇವಾಲಯದ ಪ್ರಧಾನ ಅರ್ಚಕ ಹರೀಶ್ ಉಪಾಧ್ಯಾಯ ಧಾರ್ಮಿಕ ವಿಧಿ ವಿಧಾನ ನೆರವೇರಿಸಿದರು.

> ಕಂಬಳಕ್ಕೆ ಎಲ್ಲೆಡೆ ವಿಘ್ನ ಆವರಿಸಿದಾಗ ಕಾಡಿ, ಕಂಬಳವೇ ನಿಂತು ಹೋಗುತ್ತಿದೆ ಎನ್ನುವಾಗ ಏಕಾಂಗಿಯಾಗಿ ಹೋರಾಟಕ್ಕಿಳಿದ ಶಾಸಕ ಅಶೋಕ್ ಕುಮಾರ್ ರೈಯವರು ನ್ಯಾಯಾಲಯದಲ್ಲಿ ಸಮರ್ಥವಾಗಿ ಕಂಬಳ ಕ್ರೀಡೆಯಲ್ಲಿ ಅಡಗಿದ ಪ್ರಾಣಿ ಪ್ರೀತಿಯನ್ನು ಮನವರಿಕೆ ಮಾಡಿ ಕಂಬಳವನ್ನು ಗತ ವೈಭವದೊಂದಿಗೆ ನಡೆಸಲು ಕಾರಣೀಕರ್ತರಾಗಿದ್ದಾರೆ.
> ● ಕೆ. ರಾಧಾಕೃಷ್ಣ ನ್ಯಾಕ್

ಸುತ್ತಮುತ್ತ

ಅಂತರ್ ವಿವಿ ಮಟ್ಟಕ್ಕೆ ಆಯ್ಕೆ

ಪುತ್ತೂರು: ನಗರದ ವಿವೇಕಾನಂದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ (ಸ್ವಾಯತ್ತ) ಕಾಲೇಜಿನ ಪ್ರಥಮ ಬಿಕಾಂ ವಿದ್ಯಾರ್ಥಿ ನಿಶಾಂತ್ ಪಿ.



ಅವರು ಮಂಗಳೂರು ವಿಶ್ವವಿದ್ಯಾನಿಲಯದ ಖೋ ಖೋ ತಂಡಕ್ಕೆ ಆಯ್ಕೆಯಾಗಿದ್ದು ಮಾ.26 ರಿಂದ 29ರವರೆಗೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಜರುಗಲಿರುವ 2025-26ನೇ ಸಾಲಿನ ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾನಿಲಯ ಮಟ್ಟದ ಖೋ ಖೋ ಪಂದ್ಯಾಟದಲ್ಲಿ ಭಾಗವಹಿಸಲಿದ್ದಾರೆ. ಅವರಿಗೆ ಕಾಲೇಜಿನ ಯತೀಶ್ ಕುಮಾರ್ ಬಾರ್ತಿಕುಮೇರು ತರಬೇತಿ ಹಾಗೂ ಮಾರ್ಗದರ್ಶನ ನೀಡಿದ್ದಾರೆ. ಅಲ್ಲದೆ, ರಾಷ್ಟ್ರೀಯ ಖೋ ಖೋ ತರಬೇತುದಾರರಾದ ಪುತ್ತೂರಿನ ಕಾರ್ತಿಕ್ ಅವರಲ್ಲಿ ವಿಶೇಷ ತರಬೇತಿಯನ್ನು ಕೂಡ ಪಡೆದಿದ್ದಾರೆ. ಈ ಒಂದು ಮೆಗಾ ಅಂತರ್ ವಿಶ್ವವಿದ್ಯಾನಿಲಯ ಪಂದ್ಯಾಟದಲ್ಲಿ ದಕ್ಷಿಣ ಭಾರತದ 89 ವಿಶ್ವವಿದ್ಯಾನಿಲಯಗಳ ಖೋ ಖೋ ತಂಡಗಳು ಭಾಗವಹಿಸಲಿವೆ. ದೇಶದ ಉತ್ತಮ 8 ಖೋ ಖೋ ತಂಡಗಳಲ್ಲಿ ಒಂದಾಗಿರುವ ಮಂಗಳೂರು ವಿಶ್ವವಿದ್ಯಾನಿಲಯ ತಂಡವು ಕಳೆದ ಬಾರಿ ಚಿನ್ನದ ಪದಕ ಪಡೆದಿತ್ತು. ಇದೀಗ ಪ್ರತಿಷ್ಠಿತ ಮಂಗಳೂರು ವಿಶ್ವವಿದ್ಯಾನಿಲಯ ಖೋ ಖೋ ತಂಡವನ್ನು ವಿವೇಕಾನಂದ ಕಾಲೇಜಿನ ವಿದ್ಯಾರ್ಥಿ ನಿಶಾಂತ್ ಪ್ರತಿನಿಧಿಸುತ್ತಿದ್ದಾರೆ.

ಭಗವನ್ನಾಮ ಸಂಕೀರ್ತನೆ

ವಿಟ್ಲ: ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದಲ್ಲಿ ಶ್ರೀ ರಾಮನವಮಿಯಿಂದ ಮೊದಲ್ಗೊಂಡು ಏ.2 ಹನುಮಜ್ಜಯಂತಿಯ ತನಕ ಅಖಂಡ ಭಗವನ್ನಾಮ ಸಂಕೀರ್ತನೆ ಜರಗಲಿದೆ. ಮಾ.27ರಂದು ಶ್ರೀ ರಾಮನವಮಿಯ ದಿನ ಪ್ರಾತಃಕಾಲ ಶ್ರೀ ಗುರುದೇವಾನಂದ ಸ್ವಾಮೀಜಿಯವರು ಶ್ರೀ ರಾಮ ಪರಿವಾರ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ ಅಖಂಡ ನಾಮಸಂಕೀರ್ತನೆ ಆರಂಭಗೊಂಡಿತು. ಸಾಧ್ವಿ ಶ್ರೀ ಮಾತಾನಂದಮಯೀಯವರು ಸಂಕೀರ್ತನೆಗೈದರು. ಶ್ರೀ ಸಂಸ್ಥಾನದ ಎಲ್ಲಾ ಸಹಸಂಸ್ಥೆಗಳ ಪ್ರಮುಖರು, ಸದ್ಭಕ್ತರು ಉಪಸ್ಥಿತರಿದ್ದರು.

ಕಲ್ಲುಗುಡ ದೈವಸ್ಥಾನ ಜೀರ್ಣೋದ್ಧಾರಕ್ಕೆ ಶಿಲಾನ್ಯಾಸ

ಸುಳ್ಯ: ಸುಳ್ಯ ಕಲ್ಲುಗುಡ ದೈವಸ್ಥಾನ ಜೀರ್ಣೋದ್ಧಾರ ಹಿನ್ನಲೆಯಲ್ಲಿ ಶಿಲಾನ್ಯಾಸ ಕಾರ್ಯಕ್ರಮ ಬ್ರಹ್ಮಶ್ರೀ ವೇದಮೂರ್ತಿ ದೇಲಂಪಾಡಿ ಗಣೇಶ ತಂತ್ರಿ ನೇತೃತ್ವದಲ್ಲಿ ಗುರುವಾರ ನಡೆಯಿತು. ಅಕಾಡೆಮಿ ಆಫ್ ಲಿಬರಲ್ ಎಜುಕೇಶನ್ ಅಧ್ಯಕ್ಷ ಡಾ.ಕೆ.ವಿ. ಚಿದಾನಂದ ಶಿಲಾನ್ಯಾಸಗೈದರು. ಆಡಳಿತ ಸಮಿತಿ ಹಾಗೂ ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳು ಮತ್ತು ಭಕ್ತಾದಿಗಳು ಶಿಲಾ ಕಲ್ಲಿಗೆ ಕ್ಷೀರ ಮತ್ತು ಬೆಳ್ಳಿ ಬಂಗಾರ ಹಾಗೂ ನಾಣ್ಯಗಳನ್ನು ಸಮರ್ಪಿಸಿದರು. ಆಡಳಿತ ಧರ್ಮದರ್ಶಿ ಪಿ.ಕೆ. ಉಮೇಶ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೃಷ್ಣ ಕಾಮತ್ ಅರಂಬೂರು, ಡಾ. ಗಿರೀಶ್ ಭಾರಧ್ವಾಜ್, ಕಾರ್ಯದರ್ಶಿ ಅಶೋಕ ಪ್ರಭು ಸುಳ್ಯ, ಕೋಶಾಧಿಕಾರಿ ಅವಿನಾಶ್ ಕುರುಂಜಿ, ಪದಾಧಿಕಾರಿಗಳಾದ ರಾಮಚಂದ್ರ ಆಕ್ರೋ, ಎನ್.ಎ. ರಾಮಚಂದ್ರ, ಡಿ.ಎಸ್. ಗಿರೀಶ್ ದೇಂಗೋಡಿ, ಸೋಮನಾಥ ಪೂಜಾರಿ, ಭಾಸ್ಕರ ಐಡಿಯಲ್, ಚಂದ್ರಶೇಖರ, ಪ್ರಭಾಕರ ನಾಯರ್, ದೊಡ್ಡಣ್ಣ ಬರೆಮೇಲು, ಕೇಶವ ನಾಯಕ್, ಹರೀಶ್ ಬೂಡುಪನ್ನೆ, ಸತ್ಯಪ್ರಸಾದ್, ದಿನೇಶ್ ಮಡಪ್ಪಾಡಿ, ದಿನೇಶ್ ಕುಮಾರ್ ಕೆ.ಸಿ., ಸದಾನಂದ ಮೂಲೆಮಜಲು,ಪಿ.ಜಿ. ಜಯರಾಮ, ಪೂಜಾರಿಗಳಾದ ಮೋಹನ ಗೌಡ ಕೆರೆಮೂಲೆ, ತಿಮ್ಮಪ್ಪ ಗೌಡ ನಾವೂರು, ಜಯಕರ ಆಚಾರ್ಯ, ಶಿಲ್ಪಿ ವಿಜಯ, ಎಂ. ವೆಂಕಪ್ಪ ಗೌಡ ಮತ್ತಿತರರಿದ್ದರು.

ಕರ್ನಿರೆ ದೈವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ

ಮುಲ್ಕಿ: ಕರ್ನಿರೆ ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ಶುಕ್ರವಾರ ಬ್ರಹ್ಮಕಲಶೋತ್ಸವ ನಡೆಯಿತು. ಮಾ. 27 ಶುಕ್ರವಾರ ಕ್ಷೇತ್ರದ ಅರ್ಚಕರ ನೇತೃತ್ವದಲ್ಲಿ ಪ್ರಾತಃಕಾಲ ವಿಶೇಷ ಪ್ರಾರ್ಥನೆ ನಡೆದು ಬೆಳಿಗ್ಗೆ 7ಕ್ಕೆ ಆದ್ಯಗಣಯಾಗ, ಕಲಶ ಪ್ರತಿಷ್ಠೆ ಅಧಿವಾಸ ಹೋಮ, ಬೆಳಿಗ್ಗೆ 9.50ಕ್ಕೆ ದೈವಗಳ ಪ್ರತಿಷ್ಠೆ ಕುಂಭಾಭಿಷೇಕ ಪ್ರಸನ್ನ ಪೂಜೆ, 11ಕ್ಕೆ ದೈವ ದರ್ಶನ , 12:30ಕ್ಕೆ ಮಹಾ ಅನ್ನ ಸಂತರ್ಪಣೆ, ನಡೆಯಿತು. ಈ ಸಂದರ್ಭ ದೈವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು . ಮಾ.28ಕ್ಕೆ ಕ್ಷೇತ್ರದಲ್ಲಿ ಶ್ರೀ ಬಬ್ಬು ಸ್ವಾಮಿ ಮತ್ತು ತನ್ನಿಮಾನಿಗ ದೈವಗಳ ನೇಮ, ಮಾ. 29ಕ್ಕೆ ಶ್ರೀ ಧೂಮಾವತಿ ಬಂಟ ದೈವಗಳ ನೇಮೋತ್ಸವ ನಡೆಯಲಿದೆ.

ಸುಬ್ರಹ್ಮಣ್ಯ ವಿದ್ಯಾಪ್ರಸನ್ನ ತೀರ್ಥ ಶ್ರೀಗಳಿಗೆ ಆಮಂತ್ರಣ ನೀಡಿ ಆಹ್ವಾನ

ಕಡಬದಲ್ಲಿ ಏಕಾಹ ಭಜನೋತ್ಸವಕ್ಕೆ ಭರದ ಸಿದ್ಧತೆ

ಕಡಬ: ಇಲ್ಲಿನ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದಲ್ಲಿ ಏ.3 ಮತ್ತು 4ಕ್ಕೆ ಜರಗಲಿರುವ 65ನೇ ವರ್ಷದ ಏಕಾಹ ಭಜನಾ ಮಹೋತ್ಸವದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಲಿರುವ ಸುಬ್ರಹ್ಮಣ್ಯ ಮಠಾಧೀಶ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಅವರನ್ನು ಶ್ರೀ ಮಠದಲ್ಲಿ ಫಲಪುಷ್ಪ ಸಮರ್ಪಿಸಿ ಕಾರ್ಯಕ್ರಮಕ್ಕೆ ಆಮಂತ್ರಿಸಲಾಯಿತು.



ಕಡಬ ಶ್ರೀ ದುರ್ಗಾಂಬಿಕಾ ಅಮ್ಮನವರ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಕರ್ಕೆರ ಪೆಲತ್ತೋಡಿ, ಭಜನಾ ಮಂಡಳಿಯ ಅಧ್ಯಕ್ಷ ಸೋಮಪ್ಪ ನಾಯ್ಕ್, ಏಕಾಹ ಭಜನೋತ್ಸವ ಸಮಿತಿಯ ಅಧ್ಯಕ್ಷ ದಯಾನಂದ ಗೌಡ ಆರಿಗ, ಕಾರ್ಯದರ್ಶಿ ಜಯಂತ ಕುಕ್ಕಾಡಿ ಸಂಕೇಶ, ಮಾಜಿ ಅಧ್ಯಕ್ಷರುಗಳಾದ ಪ್ರಕಾಶ್ ಎನ್.ಕೆ., ಅಶೋಕ್ ಕುಮಾರ್ ಪಿ., ದೇವಸ್ಥಾನದ ಅರ್ಚಕ ಪ್ರಶಾಂತ ಕೆದಿಲಾಯ ಮತ್ತಿತರರು ಉಪಸ್ಥಿತರಿದ್ದರು.

ಉತ್ಸವಕ್ಕೆ ಭರದ ಸಿದ್ಧತೆ

ಏಕಾಹ ಭಜನಾ ಮಹೋತ್ಸವದ ಯಶಸ್ವಿಗಾಗಿ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ವ್ಯವಸ್ಥಾಪನ ಸಮಿತಿ, ಭಜನ ಮಂಡಳಿ ಹಾಗೂ ಏಕಾಹ ಭಜನೋತ್ಸವ ಸಮಿತಿ ನೇತೃತ್ವದಲ್ಲಿ ಭರದ ಸಿದ್ಧತೆಗಳು ನಡೆಯುತ್ತಿವೆ.

ಭಕ್ತಾದಿಗಳ ಅನುಕೂಲಕ್ಕಾಗಿ ದೇವಸ್ಥಾನದ ಸಭಾಂಗಣದ ಬಳಿ ಹಿರಿಯ ಧಾರ್ಮಿಕ ಮುಂದಾಳು ದಿವಂಗತ ಕೆ. ನಾರಾಯಣ ಭಂಡಾರಿ ಅವರ ಸ್ಮರಣಾರ್ಥ ಮಂಗಳೂರಿನಲ್ಲಿ ಉದ್ಯಮಿಯಾಗಿರುವ ಅವರ ಪುತ್ರ ಪ್ರಸಾದ್ ಎನ್.ಕೆ. ಅವರ ಕೊಡುಗೆಯಾಗಿ 7 ಲ. ರೂ. ವೆಚ್ಚದಲ್ಲಿ ಸುಸಜ್ಜಿತ ಕೈತೊಳೆಯುವ ವ್ಯವಸ್ಥೆ ಹಾಗೂ ಪಾಕಶಾಲಾ ಪುನರ್ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಕಡಬ ಬೆಡಿ

ದೇವಸ್ಥಾನ ಹಾಗೂ ನಗರವನ್ನು ಕೇಸರಿ ಪತಾಕೆಗಳು, ಬಂಟಿಂಗ್‌ಗಳು ಹಾಗೂ ವಿದ್ಯುದ್ದೀಪಗಳಿಂದ ಅಲಂಕರಿಸಲಾಗುತ್ತಿದೆ. ಈ ಬಾರಿ ವಿಶೇಷವಾಗಿ ಕಡಬ ಬೆಡಿ ಎನ್ನುವ ಹೆಸರಿನಲ್ಲಿ ಸಿಡಿಮದ್ದು ಪ್ರದರ್ಶನ ನಡೆಯಲಿದ್ದು, ಉಲ್ಪೆ ಮೆರವಣಿಗೆಯ ವೇಳೆ ಸ್ತಬ್ಧ ಚಿತ್ರಗಳು, ಕೀಲು ಕುದುರೆ, ಹುಲಿ ವೇಷ ಕುಣಿತ, ಚೆಂಡೆ ಮೇಳದೊಂದಿಗೆ ಕೊಳಲು, ವಯೊಲಿನ್ ವಾದನವೂ ಇರಲಿದೆ. ಕಡಬ ಪೇಟೆಯ ಶ್ರೀ ಜಯದುರ್ಗಾ ಪರಮೇಶ್ವರಿ ದೇವಸ್ಥಾನದ ಮೈದಾನದಲ್ಲಿ ಜೈಂಟ್ ವೀಲ್, ಕೊಲಂಬಸ್, ತಿರುಗುವ ತೊಟ್ಟಿಲು ಮುಂತಾದ ಮನೋರಂಜನೆಯ ವ್ಯವಸ್ಥೆಗಳ ಜೊತೆಗೆ ಆಹಾರ ಉತ್ಸವವನ್ನು ವ್ಯವಸ್ಥೆ ಮಾಡಲಾಗುವುದು ಎಂದು ಕಾರ್ಯಕ್ರಮದ ಸಂಘಟಕರು ತಿಳಿಸಿದ್ದಾರೆ.

ಬಪ್ಪನಾಡು ಜಾತ್ರಾ ಮಹೋತ್ಸವ | ವಿವಿಧ ಸಂಘ-ಸಂಸ್ಥೆಗಳು, ಅಧಿಕಾರಿಗಳ ಸಭೆ

ಜಾತ್ರಾ ಮಹೋತ್ಸವ ಯಶಸ್ವಿಗೊಳಿಸಿ: ಕೋಟ್ಯಾನ್

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಜಾತ್ರಾ ಮಹೋತ್ಸವದ ಪೂರ್ವಭಾವಿಯಾಗಿ ಮುಲ್ಕಿ ಮೂಡಬಿದ್ರೆ ಕ್ಷೇತ್ರದ ಶಾಸಕ ಉಮಾನಾಥ ಕೋಟ್ಯಾನ್ ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳ, ಆರಕ್ಷಕರ, ವೈದ್ಯರ, ಮೆಸ್ಕಾಂ ಅಧಿಕಾರಿಗಳ ಜೊತೆ ಜಂಟಿ ಸಭೆಯು ಬಪ್ಪನಾಡು ಜ್ಞಾನ ಮಂದಿರದ ಸಭಾಂಗಣದಲ್ಲಿ ನಡೆಯಿತು.



ಸಭೆಯಲ್ಲಿ ಕ್ಷೇತ್ರದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಪ್ರಾಸ್ತಾವಿಕ ನುಡಿಗಳನ್ನಾಡಿ, ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ದೇವಸ್ಥಾನದ ಜಾತ್ರಾ ಮಹೋತ್ಸವ ಏ.1ರಿಂದ 8ರ ವರೆಗೆ ನಡೆಯಲಿದ್ದು ಏ.1ರಂದು ಬೆಳಿಗ್ಗೆ 10ಕ್ಕೆ ಶ್ರೀ ದೇವರ ಸನ್ನಿಧಿಯಲ್ಲಿ ಕ್ಷೇತ್ರಕ್ಕೆ ನೂತನ ಬ್ರಹ್ಮರಥದ ವಿಜ್ಞಾಪನಾಪತ್ರ ಬಿಡುಗಡೆಗೊಳ್ಳಲಿದೆ. ಭಕ್ತಾದಿಗಳು ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಲು ಮನವಿ ಮಾಡಿದರು

ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ, ಬಪ್ಪನಾಡು ಜಾತ್ರಾ ಮಹೋತ್ಸವಕ್ಕೆ ಲಕ್ಷಾಂತರ ಮಂದಿ ಭಕ್ತಾದಿಗಳು ಆಗಮಿಸುವ ನಿರೀಕ್ಷೆಯಿದ್ದು ಅಧಿಕಾರಿಗಳು ವಿವಿಧ ಸಂಘ-ಸಂಸ್ಥೆಗಳು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿ ಒಗ್ಗಟ್ಟಿನಿಂದ ಹಬ್ಬವನ್ನು ಯಶಸ್ವಿಗೊಳಿಸಿ ಎಂದರು.

ಮುಲ್ಕಿ ಪೊಲೀಸ್ ಠಾಣೆಯ ಎಸ್ಐ ರಾಘವೇಂದ್ರ ನಾಯ್ಕ ಮಾತನಾಡಿ, ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಅಪರಾಧ ಕೃತ್ಯ ತಡೆಗೆ ಅಲ್ಲಲ್ಲಿ ಬ್ಯಾನರ್ ಗಳನ್ನು ಅಳವಡಿಸಿ ಜಾಗೃತಿ ಮೂಡಿಸುವುದರ ಜೊತೆಗೆ ಅಲ್ಲಲ್ಲಿ ಸಿಬ್ಬಂದಿಗಳನ್ನು ನೇಮಿಸಿ ಅಪರಾಧ ನಡೆಯದಂತೆ ಎಚ್ಚರಿಕೆ ವಹಿಸಲಾಗುವುದು ಎಂದರು.

ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸ್ ಎಎಸ್ಐ ಮಾಧವ ಮಾತನಾಡಿ, ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಪಾರ್ಕಿಂಗ್ ಬಗ್ಗೆ ಸ್ಥಳೀಯ ನಾಗರಿಕರ ಹಾಗೂ ಸಂಘ ಸಂಸ್ಥೆಗಳ ಸಹಕಾರ ಬೇಕು ಎಂದು ವಿನಂತಿಸಿದರು.

ಅಭಿವೃದ್ಧಿ ಸಮಿತಿಯ ಸುನಿಲ್ ಆಳ್ವ ಮಾತನಾಡಿ, ಜಾತ್ರಾ ಮಹೋತ್ಸವದ ಸಂದರ್ಭ ಕ್ಷೇತ್ರದಲ್ಲಿ ಆ್ಯಂಬುಲೆನ್ಸ್ ವ್ಯವಸ್ಥೆ ಮಾಡಬೇಕು. ವಿದ್ಯುತ್ ಲೋಡ್ ಶೆಡ್ಡಿಂಗ್ ನಿಯಂತ್ರಣ, ಕುಡಿಯುವ ನೀರಿನ ವ್ಯವಸ್ಥೆ 24X7 ಆಗಬೇಕು, ನಿತ್ಯ ಅನ್ನದಾನದ ತ್ಯಾಜ್ಯ ವಿಲೇವಾರಿ ವ್ಯವಸ್ಥಿತವಾಗಿ ನಡೆಯಬೇಕು, ಪ್ಲಾಸ್ಟಿಕ್ ತ್ಯಾಜ್ಯ ನಿಷೇಧ ಕಟ್ಟುನಿಟ್ಟಾಗಿ ನಡೆಯಬೇಕು, ಅನಾಹುತ ನಡೆಯದಂತೆ ಆರೋಗ್ಯ ಇಲಾಖೆ, ನಗರ ಪಂಚಾಯತ್, ಮೆಸ್ಕಾಂ, ಅಗ್ನಿಶಾಮಕದಳ ಘಟಕದ ಅಧಿಕಾರಿಗಳು ಜಾಗ್ರತರಾಗಿರಬೇಕು ಎಂದರು.

ದೇವಸ್ಥಾನದ ಶೌಚಾಲಯದಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸಿಬ್ಬಂದಿ ನೇಮಕ ಮಾಡಲಾಗುವುದು ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಅವರು ತಿಳಿಸಿದರು.

ಸಭೆಯಲ್ಲಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಡಾ.ಸುನಿಲ್ ಜತ್ತನ್ನ ಗುರುವಪ್ಪ ಕೋಟ್ಯಾನ್, ಸುಜಿತ್ ಸಾಲ್ಯಾನ್, ಮುಲ್ಕಿ ನ.ಪಂ ಮಾಜೀ ಅಧ್ಯಕ್ಷ ಸತೀಶ್ ಅಂಚನ್, ಮಾಜೀ ಸದಸ್ಯ ಶೈಲೇಶ್ ಕುಮಾರ್, ಕಿರಣ್ ಶೆಟ್ಟಿ ಕೊಲ್ನಾಡು ಗುತ್ತು, ಡಾ.ಹರಿಶ್ಚಂದ್ರ ಪಿ ಸಾಲ್ಯಾನ್ ವಿನೋದ್ ಸಾಲ್ಯಾನ್ ಬೆಳ್ಳಾಯರು,, ನಾಗಸ್ವರ ವಾದಕ ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್, ಕಾರ್ತಿಕ್ ಕೋಟ್ಯಾನ್ ಮತ್ತಿತರರಿದ್ದರು.

ಕನ್ಯಾಡಿ ಶ್ರೀಕ್ಷೇತ್ರದ ಬ್ರಹ್ಮರಥೋತ್ಸವ ಕಣ್ತುಂಬಿಕೊಂಡ ಸಾವಿರಾರು ಭಕ್ತರು



ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದ ನಿತ್ಯಾನಂದ ನಗರದಲ್ಲಿನ ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನಮ್‌ನಲ್ಲಿ ಜಗದ್ಗುರು ಶ್ರೀ ಆತ್ಮಾನಂದ ಸರಸ್ವತಿ ಸ್ವಾಮೀಜಿಯವರ ಸ್ಮರಣೆಯೊಂದಿಗೆ ಕ್ಷೇತ್ರದ ಪೀಠಾಧೀಶ ಮಹಾಮಂಡಲೇಶ್ವರ 1008 ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯುತ್ತಿರುವ 66ನೇ ವರ್ಷದ ಶ್ರೀ ರಾಮ ನಾಮ ಸಪ್ತಾಹ ಮತ್ತು ಪ್ರತಿಷ್ಠಾ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.27ಕ್ಕೆ ವಿವಿಧ ಕಾರ್ಯಕ್ರಮ ನಡೆಯಿತು.

ಬೆಳಿಗ್ಗೆ ಶ್ರೀರಾಮ ತಾರಕ ಮಂತ್ರ ಯಜ್ಞ ಮಂಗಳಂ, ವಾಗ್ದೇವಿ ಯಜ್ಞ, ಪ್ರಾಯಶ್ಚಿತ್ತ ಹೋಮ, ಶಾಂತಿ ಹೋಮ, ಮಧ್ಯಾಹ್ನ ಕ್ಷೇತ್ರದ ದೇವರಿಗೆ ವಿಶೇಷ ಅಲಂಕಾರಪೂಜೆ, ಮೂರ್ತಿ ಬಲಿ, ಪಾಲಕಿ ಬಲಿ, ಹಗಲು ಉತ್ಸವ ವಿಶೇಷ ಮಹಾ ಪೂಜೆ ನಡೆಯಿತು. ರಾತ್ರಿ ಭೂತ ಬಲಿ, ಶ್ರೀದೇವರ ಪಾಲಕಿ ಉತ್ಸವ, ಕ್ಷೇತ್ರದ ರಕೇಶ್ವರಿ ಮತ್ತು ಗುಳಿಗ ದೈವಗಳಿಗೆ ನೇಮ ಮಹಾಬ್ರಹ್ಮ ರಥೋತ್ಸವ ನಡೆಯಿತು. ಸಚಿವ ಮಾಂಕಾಳ್ ಎಸ್. ವೈದ್ಯ, ಶ್ರೀ ಗುರುದೇವ ಮಠದ ಟ್ರಸ್ಟಿಗಳು, ಶ್ರೀ ರಾಮ ಕ್ಷೇತ್ರ ರಿಲಿಜಿಯಸ್ ಟ್ರಸ್ಟ್‌ನ ಟ್ರಸ್ಟಿಗಳು, ಶ್ರೀ ರಾಮ ಕ್ಷೇತ್ರ ಅಭಿವೃದ್ಧಿ ಸಮಿತಿ ಸದಸ್ಯರು, ಶ್ರೀ ರಾಮ ಕ್ಷೇತ್ರ ಸೇವಾ ಸಮಿತಿ ಪದಾಧಿಕಾರಿ ಸದಸ್ಯರು ಭಾಗವಹಿಸಿದರು.

ಶರವೂರು ಬ್ರಹ್ಮಕಲಶ: ಗಂಗಾದೇವಿ ಪ್ರತಿಷ್ಠೆ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ



ಆಲಂಕಾರು: ಮನುಷ್ಯರ ಜೀವನ ಸುಂದರವಾಗಿರಬೇಕಾದರೆ ಧರ್ಮಹಾದಿಯಲ್ಲಿ ನಡೆಯಬೇಕು, ನಮ್ಮ ಆಚಾರ ವಿಚಾರ ನಡೆ ನುಡಿಗಳು ಧರ್ಮದ ರಕ್ಷಣೆಗೆ ಉಪಯೋಗವಾಗಬೇಕು. ಆಸ್ತಿಕ ಸಮಾಜದಿಂದ ಮಾತ್ರ ಧರ್ಮ ಉಳಿಯಲು ಸಾಧ್ಯ ಎಂದು ಸುಬ್ರಹ್ಮಣ್ಯ ಶ್ರೀ ಸಂಪುಟ ನರಸಿಂಹ ಮಠದ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಅವರು ಶರವೂರು ಶ್ರೀ ಶರವೂರು ದುರ್ಗಾಪರಮೇಶ್ವರಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಅಂಗವಾಗಿ ಶುಕ್ರವಾರ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು. ಡಾ.ಎಂ. ಪ್ರಭಾಕರ ಜೋಷಿ ಧಾರ್ಮಿಕ ಉಪನ್ಯಾಸ ನೀಡಿ, ನಮ್ಮ ದೇಶದ ಆತ್ಮ ಹಿಂದುತ್ವ ಪರಂಪರಗತವಾಗಿ ಬಂದಿರುವ ನಮ್ಮ ಸಂಸ್ಕಾರ ಸಂಸ್ಕೃತಿಗಳು ನಮ್ಮ ದೇಶವನ್ನು ಪರಮ ವೈಭವದಡೆಗ ಕೊಂಡೊಯ್ಯಿದೆ ಎಂದರು.

ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಕರ್ನಾಟಕ ಸಂಘ ಕತಾರಿನ ಅಧ್ಯಕ್ಷ ಡಾ. ರವಿ ಶೆಟ್ಟಿ ಮೂಡಂಬೈಲ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಿತ್ರಂಪಾಡಿ ಜಯರಾಮ ರೈ ಶುಭ ಹಾರೈಸಿದರು. ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಹೇಮಂತ್ ರೈ ಮನವಳಿಕೆಗುತ್ತು ಅಧ್ಯಕ್ಷತೆ ವಹಿಸಿದ್ದರು. ಎಸ್.ಡಿ.ಸಿ.ಸಿ. ಬ್ಯಾಂಕ್‌ನ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು, ಪ್ರಮುಖರಾದ ಸತೀಶ್ ಕುಮಾರ್ ಕೆಡೆಂಜಿ, ಮನವಳಿಕೆಗುತ್ತಿನ ಯಾಜಮಾನ ರಾಮನಾಥ ರೈ ಮನವಳಿಕೆಗುತ್ತು, ರಾಮಕುಂಜೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಗುರುಪ್ರಸಾದ ರಾಮಕುಂಜ, ಕೊಯಿಲ ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ನೀರಜ್ ಕುಮಾರ್ ರೈ ಆರುವಾರ, ಬೆಳ್ಳಾರೆ ಶ್ರೀ ಗೌರಿಪುರ ರಾಜರಾಜೇಶ್ವರಿ ದೇವಸ್ಥಾನ ಚಂದ್ರಹಾಸ ಮಣಿಯಾಣಿ ಮತ್ತಿತರರು ಜಿದ್ದರು. ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ ಸ್ವಾಗತಿಸಿ, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ನಗ್ರಿ ವಂದಿಸಿದರು. ಗಣರಾಜ್ ಕುಂಬ್ಳೆ ಮತ್ತು ಚಂದ್ರಹಾಸ ಕೆ.ಸಿ. ನಿರ್ವಹಿಸಿದರು.

ಆತೂರು ದೇವಳದ ವರ್ಷಾವಧಿ ಜಾತ್ರೆಗೆ ಇಂದು ಅದ್ದೂರಿ ಚಾಲನೆ

ಕಡಬ: ಕ್ವೊಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವ ಸ್ಥಾನದ ವಾರ್ಷಿಕ ಜಾತ್ರೆ ಮಾ.29ರಂದು ಆರಂಭಗೊಂಡು ಏ. 3ರ ತನಕ ನಡೆಯಲಿದೆ.

ಮಾ.29ಕ್ಕೆ ಬೆಳಿಗ್ಗೆ ಹಸಿರುವಾಣಿ ಸಮರ್ಪಣೆ, ಸಂಜೆ ಯಕ್ಷ ತೆಲಿಕೆ ಯಕ್ಷ ಹಾಸ್ಯ ವೈಭವ, ರಾತ್ರಿ ಧ್ವಜಾರೋಹಣ, ಬಲಿ ಹೊರಟು ಉತ್ಸವ, ಅನ್ನಸಂತರ್ಪಣೆ. 30ಕ್ಕೆ ರಾತ್ರಿ ಬಲಿ ಹೊರಟು ಉತ್ಸವ, ಆತೂರಿನಿಂದ ಗೋಕುಲನಗರ, ಕೆ.ಸಿ ಫಾರ್ಮ್ ತನಕ ಪೇಟೆ ಸವಾರಿ, ಕಟ್ಟೆ ಪೂಜೆಗಳು ನಡೆಯಲಿದೆ. ಸಂಜೆ ಯಕ್ಷಗಾನ ತಾಳ ಮದ್ದಳೆ ನೆರವೇರಲಿದೆ. 31ಕ್ಕೆ ಪೂರ್ವಾಹ್ನ 9:30ರಿಂದ ಉತ್ಸವ ಆರಂಭವಾಗಲಿದ್ದು ಮಧ್ಯಾಹ್ನ ದರ್ಶನ ಬಲಿ, ಬಟ್ಟಲು ಕಾಣಿಕೆ. ಮಹಾಪೂಜೆ, ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ ಬಲಿ ಹೊರಟು ಉತ್ಸವ, ಆನೆಗುಂಡಿಯವರೆಗೆ ಪೇಟೆ ಸವಾರಿ, ಆನೆಗುಂಡಿಯಲ್ಲಿ ಕೆರೆ ಉತ್ಸವ, ಕಟ್ಟೆ ಪೂಜೆ. ಆನೆಗುಂಡಿ ಬೂಡಿನಿಂದ ದುಗಲಾಯಿ ದೈವದ ಭಂಡಾರ ತರುವುದು, ಬಳಿಕ ದೇವಸ್ಥಾನದಲ್ಲಿ ರಂಗಪೂಜೆ ನಡೆಯಲಿದೆ. ರಾತ್ರಿ ಲಕುಮಿ ತಂಡದ ಕಲಾವಿದರಿಂದ ತುಳು ನಾಟಕ ಪ್ರದರ್ಶನಗೊಳ್ಳಲಿದೆ. ಏ. 1 ರಂದು ಪೂರ್ವಾಹ್ನ ಗಂಟೆ 9ರಿಂದ ಬಲಿ ಹೊರಟು ಉತ್ಸವ, ರಾತ್ರಿ ಬಲಿ ಹೊರಟು ಉತ್ಸವ, ರಕ್ತೇಶ್ವರಿ ಮತ್ತು ಹುಲಿ ದೈವಗಳ ನುಡಿಕಟ್ಟುಗಳು ರಾತ್ರಿ ಗಂಟೆ 9ರಿಂದ ಮಹಾ ರಥೋತ್ಸವ, ಬಳಿಕ ಅಶ್ವತ್ಥ ಕಟ್ಟೆಪೂಜೆಗಳು. ಸಂಜೆ ದೇವಗಿರಿ ಬಾಲಗೋಕುಲ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಗಾನ ಸುರಭಿ ಸಂಗೀತ ಕಾರ್ಯಕ್ರಮ, ರಾತ್ರಿ ಯಕ್ಷಗಾನ ಬಯಲಾಟ ನಡೆಯಲಿದೆ. 2ಕ್ಕೆ ಪೂರ್ವಾಹ್ನ ಗಂಟೆ 7.30ರಿಂದ ಬಾಗಿಲು ತೆರೆಯುವ ಮುಹೂರ್ತ, ಮಹಾಪೂಜೆ ರಾತ್ರಿ ಗಂಟೆ 7ರಿಂದ ಬಲಿ ಹೊರಟು ಉತ್ಸವ, ವಸಂತ ಕಟ್ಟೆಯಲ್ಲಿ ಕಟ್ಟೆಪೂಜೆಗಳು, ಕ್ವೊಲ ಶಾಲೆಯಿಂದಾಗಿ ನೀಲಮೆ ಶ್ರೀ ಮಹಾವಿಷ್ಣು ದೇವಸ್ಥಾನ, ಕುರೋಳಿಕೆ ಮೂಲಕ ಕುಮಾರಧಾರದ ಸುದೆಂಗಳದವರೆಗೆ ಕಟ್ಟೆಪೂಜೆಗಳು, ಗುಳಿಗ ಮತ್ತು ಪಂಜುರ್ಲಿ ದೈವಗಳ ನುಡಿಕಟ್ಟುಗಳು, ಅವಭೃತೋತ್ಸವ, ಧ್ವಜಾವರೋಹಣ, ಕ್ಕೆ ರಂದು ಶುಕ್ರವಾರ ಬೆಳಿಗ್ಗೆ ಸಂಪ್ರೋಕ್ಷಣೆ ಬಳಿಕ ದುಗಲಾಯಿ ದೈವದ ನೇಮ ನಡೆದು, ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್‌ನಲ್ಲಿ ಡಿಜಿಟಲ್ ಕ್ರಾಂತಿ | ಆಡಳಿತ ಮಂಡಳಿ ಸಭೆಯಲ್ಲಿ ಕ್ಯೂಆರ್ ಕೋಡ್ ಸೌಲಭ್ಯಕ್ಕೆ ಚಾಲನೆ

ಕಾಲಕ್ಕೆ ತಕ್ಕಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆ ಅನಿವಾರ್ಯ: ಕಿಶೋರ್ ಕೊಳತ್ತಾಯ

ಪುತ್ತೂರು: ಸಹಕಾರಿ ಕ್ಷೇತ್ರದಲ್ಲಿ 120 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಪುತ್ತೂರಿನ ಹೆಮ್ಮೆಯ 'ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್' ತನ್ನ ಗ್ರಾಹಕರಿಗೆ ಆಧುನಿಕ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಸಂಪೂರ್ಣ ಡಿಜಿಟಲೀಕರಣದತ್ತ ಮಹತ್ವದ ಹೆಜ್ಜೆ ಇಟ್ಟಿದೆ. ಇದರ ಭಾಗವಾಗಿ ಗ್ರಾಹಕರ ಖಾತೆಗೆ ನೇರವಾಗಿ ಹಣ ಪಾವತಿಸಲು ಅನುಕೂಲವಾಗುವ ಕ್ಯೂಆರ್ ಕೋಡ್ (ಕ್ಯೂಆರ್ ಕೋಡ್) ಸೌಲಭ್ಯವನ್ನು ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯಲ್ಲಿ ಅನಾವರಣಗೊಳಿಸಲಾಯಿತು.

ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮುಖ ಉದ್ಯಮಿ ಗ್ರಾಹಕರಿಗೆ ಕ್ಯೂಆರ್ ಕೋಡ್ ಕಾರ್ಡ್ ಮತ್ತು ಸೌಂಡ್ ಬಾಕ್ಸ್ ನೀಡಿ ಚಾಲನೆ ನೀಡಲಾಯಿತು. ಡಿಜಿಟಲ್ ಬ್ಯಾಂಕಿಂಗ್‌ನತ್ತ ದಾಪುಗಾಲು ಪುತ್ತೂರು ಕೋ-ಒಪರೇಟಿವ್ ಟೌನ್ ಬ್ಯಾಂಕ್ ಈಗಾಗಲೇ ಸಿಟಿಎಸ್ ಕ್ಲಿಯರಿಂಗ್ ಕ್ಷೇತ್ರಕ್ಕೆ ಕಾಲಿಟ್ಟಿದ್ದು ಇನ್‌ವರ್ಡ್ ಮತ್ತು ಔಟ್‌ವರ್ಡ್ ತ್ವರಿತ ಕ್ಲಿಯರಿಂಗ್ ವ್ಯವಸ್ಥೆ ಜಾರಿಯಲ್ಲಿದೆ. ನೇರ ಹಣ ವರ್ಗಾವಣೆಗಾಗಿ ಆರ್‌ಟಿಜಿಎಸ್ ಮತ್ತು ಎನ್‌ಇಎಫ್‌ಟಿ ವ್ಯವಸ್ಥೆ ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ ಹಾಗೂ ಮೊಬೈಲ್ ಬ್ಯಾಂಕಿಂಗ್ ಆಪ್ ಕೂಡ ಬಿಡುಗಡೆಯಾಗಿದೆ. ಇದೀಗ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಕ್ಯೂಆರ್ ಕೋಡ್ ಸೌಲಭ್ಯವನ್ನು ನೀಡಲಾಗಿದೆ.



ಕಾಲಕ್ಕೆ ತಕ್ಕಂತೆ ಬದಲಾವಣೆ ಅನಿವಾರ್ಯ

ಬ್ಯಾಂಕ್‌ನ ಅಧ್ಯಕ್ಷ ಕಿಶೋರ್ ಕೊಳತ್ತಾಯ ಮಾತನಾಡಿ, ಯಾವುದೇ ಬ್ಯಾಂಕಿಂಗ್ ವ್ಯವಹಾರ ಇಲ್ಲದ ಸಂದರ್ಭದಲ್ಲಿ ನಮ್ಮ ಹಿರಿಯರು ಸ್ಥಾಪಿಸಿದ ಪಾರಂಪರಿಕ ಬ್ಯಾಂಕ್ ಇದಾಗಿದೆ. ಆದರೆ, ಕಾಲಕ್ಕೆ ತಕ್ಕಂತೆ ಬದಲಾವಣೆ ಅನಿವಾರ್ಯ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪುತ್ತೂರು ಟೌನ್ ಬ್ಯಾಂಕ್ ಹಿಂದೆ ಬೀಳಲು ತಯಾರಿಲ್ಲ. ಯುವ ಪೀಳಿಗೆಯು ಸಮಯ ಉಳಿಸಲು ಡಿಜಿಟಲ್ ವ್ಯವಹಾರವನ್ನೇ ಬಯಸುತ್ತಿದ್ದು, ಅದಕ್ಕೆ ಪೂರಕವಾಗಿ ನಾವು ಡಿಜಿಟಲೀಕರಣಕ್ಕೆ ಒತ್ತು ನೀಡಿದ್ದೇವೆ. ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಖರ ಶೆಟ್ಟಿಯವರ ವಿಶೇಷ ಮುತುವರ್ಜಿ, ನಿರ್ದೇಶಕ ಮಂಡಳಿಯ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ಸಹಕಾರದಿಂದ ಈ ಸಾಧನೆ ಸಾಧ್ಯವಾಯಿತು ಎಂದರು.

ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಕಾರಿ ಬಿ. ಶೇಖರ್ ಶೆಟ್ಟಿ ಪ್ರಾಸ್ತಾವಿಸಿ, ಬ್ಯಾಂಕ್ ಡಿಜಿಟಲೀಕರಣದ ಪ್ರಗತಿ ತಿಳಿಸಿ, ಮುಂಬರುವ ದಿನಗಳಲ್ಲಿ ಇಂಟರ್‌ನೆಟ್ ಬ್ಯಾಂಕಿಂಗ್, ಡೋರ್ ಸ್ಟೆಪ್ ಬ್ಯಾಂಕಿಂಗ್, ಐ ಎಮ್‌ಪಿಎಸ್, ಯುಪಿಐ ಪಾವತಿ, ಎಟಿಎಮ್ ಕಾರ್ಡ್ ಸೌಲಭ್ಯಗಳನ್ನು ನೀಡಲಿದ್ದೇವೆ. ಕೇವಲ 10ರಿಂದ 11 ಮಂದಿ ಸಿಬ್ಬಂದಿಗಳೊಂದಿಗೆ ಇಷ್ಟೆಲ್ಲಾ ಡಿಜಿಟಲ್ ಸೇವೆಗಳನ್ನು ನೀಡುವ ಏಕೈಕ ಬ್ಯಾಂಕ್ ನಮ್ಮದಾಗಲಿದೆ. ಶೀಘ್ರದಲ್ಲಿಯೇ ಸಂಪೂರ್ಣ ಡಿಜಿಟಲೀಕರಣ ನಮ್ಮ ಗುರಿಯಾಗಿದೆ ಎಂದು ತಿಳಿಸಿದರು.

ಹಿರಿಯ ಗ್ರಾಹಕ ಮತ್ತು ಹೋಟೆಲ್ ಉದ್ಯಮಿ ಗೋಪಾಲಕೃಷ್ಣ ಹೇರಳೆ (ಶ್ರೀ ನ್ಯೂ ಗಣೇಶ್ ಪ್ರಸಾದ್), ಪ್ರದೀಪ್(ಶ್ರೀ ಆಟೋ ಮೊಬೈಲ್ಸ್), ರವಿ ಬಾಳಿಗ(ಬಾಳಿಗ ಫುಡ್ಸ್), ವನಿತಾ(ಭಾವನ ಕಲಾ ಆರ್ಟ್ಸ್), ಸಾಯಿ ದೀಕ್ಷಿತ್ ಮತ್ತು ಪವಿತ್ರ(ಶಾಂತಿ ಫ್ಯಾನ್ಸಿ) ಅವರಿಗೆ ಪ್ರಥಮ ಕ್ಯೂಆರ್ ಕೋಡ್ ಕಾರ್ಡ್ ಮತ್ತು ಯಂತ್ರವನ್ನು ವಿತರಿಸಲಾಯಿತು. ಬ್ಯಾಂಕ್‌ನ ಉಪಾಧ್ಯಕ್ಷ ಶ್ರೀಧರ ಗೌಡ, ನಿರ್ದೇಶಕರಾದ ಚಂದ್ರಶೇಖರ್ ರಾವ್ ಬಪ್ಪಳಿಗೆ, ರಾಮಚಂದ್ರ ಕಾಮತ್, ಸುಜೀಂದ್ರ ಪ್ರಭು, ಮಲ್ಲೇಶ್ ಕುಮಾರ್, ರಾಜು ಶೆಟ್ಟಿ ಕಿರಣ ಕುಮಾರ ರೈ, ಶ್ರೀಧರ ಪಟ್ಲ ವೀಣಾ, ಸೀಮಾ ನಾಗರಾಜ್, ಗಣೇಶ್ ಕೌಕ್ರಾಡಿ, ಹರೀಶ್ ಬಿಜತ್ರೆ, ಸಿ.ವಿ. ಅರವಿಂದ ಕೃಷ್ಣ ಕೆ. ವಿಶ್ವಾಸ ಶೆಣೈ, ಪುತ್ತೂರು ಶಾಖೆಯ ಮ್ಯಾನೇಜರ್ ಚಿದಂಬರ, ವಿಟ್ಲ ಶಾಖೆಯ ಮ್ಯಾನೇಜರ್ ಜ್ಯೋತಿ, ಬ್ಯಾಂಕಿನ ಸಿಬ್ಬಂದಿಗಳು ಮತ್ತು ಬಿಜಲಿ ಪೇ ಕಂಪೆನಿಯ ಪ್ರತಿನಿ ತೇಜಸ್ ಉಪಸ್ಥಿತರಿದ್ದರು.

ಸುತ್ತಮುತ್ತ

ಏ.1 : ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳ ವಿಜ್ಞಾಪನಾ ಪತ್ರ ಬಿಡುಗಡೆ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ನೂತನ ಬ್ರಹ್ಮರಥ ನಿರ್ಮಾಣ ಮತ್ತು ಕ್ಷೇತ್ರಪಾಲ ಗುಡಿಯ ನವೀಕರಣ ಹಾಗೂ ದೇವಳದ ವಿವಿಧ ಕಾಮಗಾರಿಗಳ ಬಗ್ಗೆ ವಿಜ್ಞಾಪನ ಪತ್ರ ಬಿಡುಗಡೆ ಸಮಾರಂಭ ಏ.1ರಂದು ಬೆಳಿಗ್ಗೆ 10 ಗಂಟೆಗೆ ಕ್ಷೇತ್ರದಲ್ಲಿ ನಡೆಯಲಿದೆ.ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಎಂದು ಕ್ಷೇತ್ರದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಹಾಗೂ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರಡ್ಕ ಕೋಳಿಯಡ್ಕ ಬ್ರಹ್ಮಮೊಗೇರ ಕ್ಷೇತ್ರ: ಸಾಧಕರಿಗೆ ಅಭಿನಂದನೆ

ಮುಳ್ಳೇರಿಯ: ಕಾರಡ್ಕ ಕೋಳಿಯಡ್ಕ ಬ್ರಹ್ಮಶ್ರೀ ಮೊಗೇರ ಶ್ರೀ ಧರ್ಮದೈವ ಕೊರಗ ತನಿಯ ಮೂಕಾಂಬಿಕಾ ಗುಳಿಗ ದೈವಸ್ಥಾನದಲ್ಲಿ ದೈವಗಳ ಪ್ರತಿಷ್ಠಾ ಮಹೋತ್ಸವ ಹಾಗೂ ಸ್ಥಳೀಯ ಸಾಧಕರಿಗೆ ಅಭಿನಂದನಾ ಕಾರ್ಯಕ್ರಮ ಜರಗಿತು. ಬೇರ್ಲ ಶ್ರೀ ಪಾಡಾರ್‌ಕುಳಂಗರ ಭಗವತೀ ಕ್ಷೇತ್ರದ ಅಧ್ಯಕ್ಷ ಪುರುಷೋತ್ತಮ ಉದ್ಘಾಟಿಸಿದರು. ಸಮಿತಿ ಅಧ್ಯಕ್ಷ ಚನಿಯ ಸಿ.ಎಚ್.ಅಧ್ಯಕ್ಷತೆ ವಹಿಸಿದ್ದರು.
'ಆಧುನಿಕ ತುಳು ನಾಟಕಗಳು' ಎಂಬ ವಿಷಯದಲ್ಲಿ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದ ವಾಣಿಶ್ರೀ, ಭೂಗರ್ಭ ಜಲ ಸಂಶೋಧನೆಯಲ್ಲಿ ಪಿಎಚ್‌ಡಿ ಪದವಿ ಗಳಿಸಿದ ಸಂಜಯನ್ ಎಂ.ಎಸ್. ಕಾರಡ್ಕ ಅವರನ್ನು ಗೌರವಿಸಲಾಯಿತು. ಉತ್ಸವ ಸಮಿತಿ ಮಾಜಿ ಅಧ್ಯಕ್ಷ ವಿನೋದನ್ ನಂಬ್ಯಾರ್, ಚಾಕಟೆ ಚಾಮುಂಡಿ ಬನದ ಅಧ್ಯಕ್ಷ ರವೀಂದ್ರ ಎಂ.ಕೆ. ಶುಭ ಕೋರಿದರು. ಮಾತೃ ಸಮಿತಿ ಅಧ್ಯಕ್ಷೆ ಜಾನಕಿ ಉಪಸ್ಥಿತರಿದ್ದರು. ಕೋಶಾಧಿಕಾರಿ ಸೋಮಶೇಖರ ಸ್ವಾಗತಿಸಿ, ಗೀತಾಂಜಲಿ ವಂದಿಸಿದರು.
ಇದೇ ವೇಳೆ ಮಾತೃಸಮಿತಿಯ ನೇತೃತ್ವದಲ್ಲಿ ನೂತನವಾಗಿ ನಿರ್ಮಿಸಿದ ಕಮಾನ್‌ನ್ನು ದೈವಸ್ಥಾನದ ದೈವಪಾತ್ರಿ ತೆಕ್ಕೇಕರೆ ಕೊರಗ ಉದ್ಘಾಟಿಸಿದರು.

ಶೆರಿಲ್ ಐಯೊನ ಐಮನ್‌ಗೆ ಪಿಎಚ್‌ಡಿ

ಮುಲ್ಕಿ: ಮಂಗಳೂರಿನ ಶ್ರೀದೇವಿ ಇಂಜಿನಿಯರಿಂಗ್



ಕಾಲೇಜ್ ನಲ್ಲಿ ಪ್ರೊಫೆಸರ್ ಆಗಿ ಕರ್ತವ್ಯ ಮಾಡುತ್ತಿರುವ ಶೆರಿಲ್ ಆಯೋನ ಐಮನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದಲ್ಲಿ ಸಲ್ಲಿಸಿದ 'ಡಿಸೈನ್ ಅಂಡ್ ಇಂಪ್ಲಿಮೆಂಟೇಶನ್ ಆಫ್ ಎಫಿಷಿಯೆಂಟ್ ನ್ಯಾನೋ ಮೆಟೀರಿ ಯಲ್ ಫಾರ್ ಎನರ್ಜಿ ಸ್ಟೋರೇಜ್ ಸೆನ್ಸ್ ಅಂಡ್ ಫೋಟೋ ಕೆಟಲೊಸಿಎಸ್ ಅಪ್ಲಿಕೇಶನ್ಸ್' ವಿಷಯಗಳಿಗೆ ಮಂಗಳೂರಿನ ಪ್ರತಿಷ್ಠಿತ ಶ್ರೀನಿವಾಸ ವಿವಿ ಸಂಸ್ಥೆ ಡಾಕ್ಟರ್ ಆಫ್ ಫಿಲೊಸಫಿ(ಪಿ ಎಚ್ ಡಿ) ಪದವಿ ನೀಡಿ ಗೌರವಿಸಿದರು. ಕಾಲೇಜಿನಲ್ಲಿ ನಡೆದ ಘಟಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇವರು ವಾಮಂಜೂರು ಸೈಂಟ್ ಜೋಸೆಫ್ ಪ್ರಸ್ತುತ ಮಂಗಳೂರಿನ ಶ್ರೀದೇವಿ ಎಂಜಿನಿಯರಿಂಗ್ ಕಾಲೇಜ್ ನಲ್ಲಿ ಪ್ರೊಫೆಸರ್ ಆಗಿ ಸೇವೆ ಮಾಡುತ್ತಿದ್ದಾರೆ. ಮೂಲತ ಮುಲ್ಕಿ ತಾ.ಹಳೆಯಂಗಡಿಯವರಾದ ಪ್ರಸ್ತುತ ಮಂಗಳೂರಿನ ನಿವಾಸಿಯಾಗಿದ್ದು ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗೋವಿಂದ ಭಟ್‌ಗೆ ನುಡಿನಮನ

ಉಡುಪಿ: ಹಿರಿಯ ಯಕ್ಷಗಾನ ಕಲಾವಿದ ಕೆ. ಗೋವಿಂದ ಭಟ್ಟರಿಗೆ ಯಕ್ಷಗಾನ ಕಲಾರಂಗದ ವತಿಯಿಂದ ಶ್ರದ್ಧಾಂಜಲಿ ಸಮರ್ಪಿಸಲಾಯಿತು. ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಾರ್ಯದರ್ಶಿ ಮುರಲಿ ಕಡೆಕಾರ್ ಗೋವಿಂದ ಭಟ್ಟರ ನಿಡುಗಾಲದ ಕಲಾಸೇವೆಯನ್ನು ಕೊಂಡಾಡಿ ಅವರೊಬ್ಬ ಸಾರ್ವಕಾಲಿಕ ಶ್ರೇಷ್ಠ ಕಲಾವಿದ. ತಮ್ಮ ಬದುಕನ್ನೇ ಕಲಾಸೇವೆಗೆ ಸಮರ್ಪಿಸಿಕೊಂಡಿದ್ದರು. ಸಂಸ್ಥೆಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದರು. ಸಂಸ್ಥೆ ಅವರಿಗೆ 'ಯಕ್ಷಗಾನ ಕಲಾರಂಗ' ಪ್ರಶಸ್ತಿ ನೀಡಿ ಗೌರವಿಸಿದೆ ಎಂದು ಹೇಳಿದರು. ಮೌನ ಶ್ರದ್ಧಾಂಜಲಿ ಯೊಂದಿಗೆ ಅಗಲಿದ ಯಕ್ಷಚೇತನಕ್ಕೆ ಗೌರವದ ನಮನ ಸಲ್ಲಿಸಲಾಯಿತು.

ಎಲ್‌ಪಿಜಿ ವಾರ್ ರೂಮ್ ಕಾರ್ಯನಿರ್ವಹಣೆ

ಕಾಸರಗೋಡು: ಅಡುಗೆ ಅನಿಲ ಪೂರೈಕೆ ಬಿಕ್ಕಟ್ಟಿಗೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಲು ಕಾಸರಗೋಡು ಜಿಲ್ಲಾ ಸರಬರಾಜು ಕಚೇರಿಯಲ್ಲಿ ಎಲ್‌ಪಿಜಿ ವಾರ್ ರೂಮ್‌ನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾ ಸರಬರಾಜು ಅಧಿಕಾರಿ ಪ್ರಕಟಿಸಿದ್ದಾರೆ. ಯಾವುದೇ ಮಾಹಿತಿಗೆ 9188527328 ಅಥವಾ 04994 255138 ಕರೆ ಮಾಡಬಹುದು.

28ನೇ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಸಂಭ್ರಮದ ತೆರೆ

ಗೋಷ್ಠಿ, ಉಪನ್ಯಾಸ, ಶಾಸ್ತ್ರೀಯ ಸಂಗೀತ , ಸಾಂಸ್ಕೃತಿಕ ಕಾರ್ಯಕ್ರಮ





ಬಂಟ್ವಾಳ: ದ.ಕ.ಜಿಲ್ಲೆಯ ಎರಡು ಜೀವ ನದಿಗಳದಾ ಕುಮಾರಧಾರ ಮತ್ತು ನೇತ್ರಾವತಿ ನದಿಗಳ ಮಧ್ಯಭಾಗವಾದ ಬಂಟ್ವಾಳದಲ್ಲಿ ಕಳೆದ ಮೂರುದಿನಗಳಿಂದ 28 ನೇ ದ.ಕ.ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಮೇಳೈಸಿದ್ದು, ಮೂರನೇ ದಿನವಾದ ಶನಿವಾರ ಬೆಳಿಗ್ಗೆ 8 ಗಂಟೆಗೆ ಪಂಜೆ ಮಂಗೇಶರಾಯರ ಸಭಾಂಗಣದ ರಾಣಿ ಅಬ್ಬಕ್ಕ ವೇದಿಕೆಯಲ್ಲಿ ಉದಯರಾಗದೊಂದಿಗೆ ಆರಂಭಗೊಂಡಿತು.
ಡಾ.ಎಂ.ಎಸ್.ಭಟ್,ಎಂ.ಎಸ್.ಮಹೇಶ ಮತ್ತು ಬಳಗದಿಂದ ಸುಮಾರು ಒಂದು ತಾಸುಗಳ ಕಾಲ ಬೆಳಗ್ಗಿನ ಶಾಸ್ತ್ರೀಯ ಸಂಗೀತ ಸಾಹಿತ್ಯಾಸಕ್ತರು, ಸಂಗೀತಪ್ರಿಯರ ಮನಸ್ಸಿಗೆ ಮುದ ನೀಡಿತು. ಬಳಿಕ ಮಧ್ಯಾಹ್ನದ ಬೋಜನದವರೆಗೆ ಒಂದು ಗೋಷ್ಠಿ ಐದು ಉಪನ್ಯಾಸ ನಡೆಯಿತು.ಇದರ ಮಧ್ಯೆ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಭಿಡೆ ಸಹೋದರಿಯರು ಕಲ್ಮಂಜ ಇವರಿಂದ ಭರತನಾಟ್ಯ, ಸಿದ್ದಕಟ್ಟೆ ಸರಕಾರಿ ಪ.ಪೂ.ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈಭವ ರಂಗೇರಿಸಿತು.
ಆದೇರೀತಿ 'ಶ್ರೀಕೃಷ್ಣ ಭಕ್ತಿ' ಗಮಕ ನಡೆಯಿತು. ಗಮಕಿ ಮಧೂರು ವಿಷ್ಣು ಪ್ರಸಾದ್ ಕಲ್ಲೂರಾಯ ಅವರು ವಾಚಿಸಿದರೆ, ಪ್ರೊ.ಮಧೂರು ಮೋಹನ ಕಲ್ಲೂರಾಯ ವ್ಯಾಖ್ಯಾನಿಸಿದರು. ಬಳಿಕ ಬಂಟ್ವಾಳ ಎಸ್ ವಿಎಸ್ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಗಮನಸೆಳೆಯಿತು.

ಅಧ್ಯಕ್ಷರ ಜೊತೆ ಜಿಲ್ಲೆ - ತಾಲೂಕು ಪತ್ರಕರ್ತ ಮಿತ್ರರ ಸಂವಾದ

ಮಧ್ಯಾಹ್ನ ನಿಗದಿತ ಸಮಯಕ್ಕೆ ಒಂದು ವಿಶೇಷ ಉಪನ್ಯಾಸ, ಹಿರಿಯ ಪತ್ರಕರ್ತರು, ಸಮ್ಮೇಳನಾಧ್ಯಕ್ಷರಾದ ಚಿದಂಬರ ಬೈಕಂಪಾಡಿ ಅವರೊಂದಿಗೆ ಜಿಲ್ಲೆ ಮತ್ತು ತಾಲೂಕಿನ ಪತ್ರಕರ್ತ ಮಿತ್ರರು ಸಂವಾದ ಕಾರ್ಯಕ್ರಮ ನಡೆಸಿದರು. ಮಾಧ್ಯಮಗಳು ಎದುರಿಸುವ ಸವಾಲು ಸಹಿತ ಹಲವು ವಿಷಯಗಳ ಬಗ್ಗೆ ಈ ಸಂದರ್ಭ ಸಂವಾದ ನಡೆಯಿತು.
ಬಳಿಕ ದ.ಕ.ಜಿಲ್ಲಾ ಕಸಾಪ ಅಧ್ಯಕ್ಷರಾದ ಡಾ.ಎಂ.ಪಿ.ಶ್ರೀನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಅವೇಶನದಲ್ಲಿ ಠರಾವುಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.
ಸಮ್ಮೇಳನದ ಸಮಾರೋಪ ಸಮಾರಂಭದ ನಡುವಿನ ಬಿಡುವಿನಲ್ಲಿ ಪುತ್ತೂರು ಶ್ರೀದೇವಿಕಲಾಕೇಂದ್ರದ ನೃತ್ಯಗುರು ವಿದುಷಿ ರೋಹಿಣಿ ಉದಯ್ ಅವರ ಬಿ.ಸಿ.ರೋಡು ಶಾಖೆಯ ಶಿಷ್ಯೆಯರಿಮನದ 'ನೃತ್ಯರಂಜಿನಿ' ಕಾರ್ಯಕ್ರಮ ನಡೆಯಿತು.

> **ಜಿಲ್ಲೆಗೊಂದು ರಂಗಮಂದಿರ ಇನ್ನೂ ಆಗಿಲ್ಲ: ವಿಷಾದ**
>
> ರಂಗಭೂಮಿಗೆ ಅವಿಭಜಿತ ದಕ್ಷಿಣ ಕನ್ನಡದ ಕೊಡುಗೆ ಅಪಾರವಾಗಿದೆ. ಆದರೆ ಜಿಲ್ಲೆಗೊಂದು ರಂಗ ಮಂದಿರ ನಿರ್ಮಿಸಿಕೊಳ್ಳಲು ಇಲ್ಲಿನವರಿಗೆ ಇನ್ನೂ ಸಾಧ್ಯವಾಗಿಲ್ಲ. ಮೂರು ನಾಲ್ಕು ಕೋಟಿ ರೂಪಾಯಿಗಳಲ್ಲಿ ಆಗುವಂತಹ ರಂಗಮಂದಿರ ಸರಕಾರಿ ವ್ಯವಸ್ಥೆಯಲ್ಲಿ ಅದರ ಎರಡು ಪಟ್ಟು ವೆಚ್ಚ ಬಯಸುವುದರಿಂದ ಇನ್ನೂ ಆಗಿಲ್ಲ. ಮಾಡಿದ ಹೋರಾಟಗಳೂ ಪ್ರಯತ್ನಗಳೂ ಕಳೆದ 40 ವರ್ಷಗಳಿಂದ ಚಾಲ್ತಿಯಲ್ಲಿವೆ. ಇನ್ನಾದರೂ ರಂಗಮಂದಿರ ಆಗಿ ರಂಗ ಚಟುವಟಿಕೆಗಳು ಹೆಚ್ಚಲಿ.
>
> ● ಶಶಿರಾಜ್ ಕಾವೂರು

ಹಳೇ ಬೇರು..ಹೊಸಚಿಗರು..

ಸಮ್ಮೇಳನದ ಕೊನೆಯ ದಿನವಾದ ಶನಿವಾರ ಸಮ್ಮೇಳನ ಸಬಾಂಗಣದಲ್ಲಿ ಹಳೇಬೇರು..ಹೊಸಚಿಗುರು..ಎಂಬಂತೆ ಒಂದಷ್ಟು ಹಿರಿಯ ಸಾಹಿತಿಗಳ ಜೊತೆಗೆ ಹೊಸಚಿಗರುಗಳು ಆಸಕ್ತ ಉತ್ಸಾಹಿ,ವಿದ್ಯಾರ್ಥಿ ಸಮೂಹ ಪಾಲ್ಗೊಂಡಿದ್ದರು. ಪುಸ್ತಕಗಳ ಮಳಿಗೆಗಳಿದ್ದರೂ ಕೊಂಡುಕೊಳ್ಳುವವರ ಸಂಖ್ಯೆ ಕಡಿಮೆ ಇತ್ತು ಎನ್ನುತ್ತಿದ್ದರು. ಮಳಿಗೆಯವರು...ಮೊದಲದಿನದಿಂದ ಎರಡನೇ ದಿನ ಸಾಹಿತ್ಯಾಸಕ್ತರು, ಸಾಹಿತಿಗಳು ಹೆಚ್ಚು ಸೇರಿದ್ದರು.
ಸಾಹಿತ್ಯ ಸಮ್ಮೇಳನದಲ್ಲಿ ದ. ಕ. ಜಿಲ್ಲೆಯ ರಂಗಭೂಮಿ ಮತ್ತು ಬದುಕು ಅವಲೋಕನದಲ್ಲಿ ಶಶಿರಾಜ್ ಕಾವೂರು ಮಾತನಾಡಿದರು.

ಸಾಹಿತ್ಯ ಸಮ್ಮೇಳನದಲ್ಲಿ ಐದು ಠರಾವುಗಳ ಮಂಡನೆ



ಬಂಟ್ವಾಳ: ಕೇರಳ ಸರಕಾರವು ಜಾರಿಗೆ ತಂದಿರುವ ಭಾಷಾ ಮಸೂದೆಯು ಕಾಸರಗೋಡು ಜಿಲ್ಲೆಯ ಭಾಷಾ ಅಲ್ಪಸಂಖ್ಯಾತ ಕನ್ನಡಿಗರ ಶಿಕ್ಷಣದ ಹಕ್ಕು ಹಾಗೂ ಭಾಷಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತಿದ್ದು ಕೇರಳ ಸರ್ಕಾರ ತಕ್ಷಣವೇ ಭಾಷಾ ಮಸೂದೆಯಲ್ಲಿ ಸೂಕ್ತ ತಿದ್ದುಪಡಿ ಮಾಡಿ ಗಡಿನಾಡ ಕನ್ನಡಿಗರ ಭಾಷಾ ಹಕ್ಕುಗಳನ್ನು ರಕ್ಷಿಸಬೇಕು ಎಂಬ ಒತ್ತಾಯ ಸೇರಿದಂತೆ ಒಟ್ಟು ಐದು ಠರಾವನ್ನು ಬಂಟ್ವಾಳದಲ್ಲಿ ನಡೆದ 28 ನೇ ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾಯಿತು.
ದ.ಕ.ಜಿಲ್ಲಾ ಕಸಾಪ ಅಧ್ಯಕ್ಷರಾದ ಡಾ.ಎಂ.ಪಿ.ಶ್ರೀನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಅಧಿವೇಶನದಲ್ಲಿದ. ಕ.ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರಾಜೇಶ್ವರೀ ಎಂ.ಅವರು 28 ನೇ ಜಿಲ್ಲಾ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯವನ್ನು ಮಂಡಿಸಿದರು.

ನಿಯಮ ಸಡಿಲಗೊಳಿಸಬೇಕು

ಕನ್ನಡ ಮಾಧ್ಯಮ ಶಾಲೆಗಳ ಸ್ಥಾಪನೆ ಮತ್ತು ಬೆಳವಣಿಗೆಗೆ ಸರಕಾರವು ಪ್ರೋತ್ಸಾಹಿಸಬೇಕು, ಈ ಹಿನ್ನೆಲೆಯಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಸ್ಥಾಪಿಸಲು ಇರುವ ನಿಯಮಗಳನ್ನು ಸರಕಾರ ಸಡಿಲಗೊಳಿಸಬೇಕು ಎಂದು ಸಮ್ಮೇಳನದಲ್ಲಿ ಆಗ್ರಹಿಸಲಾಯಿತು. ಕರ್ನಾಟಕದಲ್ಲಿ ಬೆಳೆದು ಬಂದಿರುವ ದೊಡ್ಡ ಶಿಕ್ಷಣ ಸಂಸ್ಥೆಗಳು ಕನಿಷ್ಠ ಒಂದಾದರೂ (ಒಂದರಿಂದ ಹತ್ತನೇ ತರಗತಿವರೆಗಿನ) ಕನ್ನಡ ಮಾಧ್ಯಮ ಶಾಲೆ ಸ್ಥಾಪಿಸಬೇಕೆಂಬುದನ್ನು ಸರಕಾರ ಕಡ್ಡಾಯಗೊಳಿಸಬೇಕು ಎಂದು ಸಮ್ಮೇಳನದಲ್ಲಿ ನಿರ್ಣಯ ಕೈಗೊಂಡು ಒತ್ತಾಯಿಸಿದೆ.

300 ಕನ್ನಡ ಪುಸ್ತಕ ಖರೀದಿ ವ್ಯವಸ್ಥೆ ಮಾಡಬೇಕು

ಕರ್ನಾಟಕ ಸರ್ಕಾರದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಮೂಲಕ ವಿವಿಧ ಭಾಷೆಗಳ ಕೃತಿಗಳನ್ನು ಸಗಟಾಗಿ ಖರೀದಿಸುವ ಕಾರ್ಯಕ್ರಮ ಕುಂಠಿತಗೊಂಡಿರುವುದು ಸಮ್ಮೇಳನದ ಗಮನಕ್ಕೆ ಬಂದಿರುವ ಹಿನ್ನಲೆಯಲ್ಲಿ ಈ ಪ್ರಕ್ರಿಯೆಗೆ ಯಾವುದೇ ತೊಡಕಾಗದಂತೆ ಕನಿಷ್ಠ 300 ಕನ್ನಡ ಪುಸ್ತಕಗಳನ್ನು ಖರೀದಿಸುವ ವ್ಯವಸ್ಥೆಯನ್ನು ಸರ್ಕಾರ ಜಾರಿಗೆ ತರಬೇಕು ಮತ್ತು ಈಗಾಗಲೇ ಬಾಕಿ ಇರುವ ಪ್ರಕ್ರಿಯೆಯನ್ನು ತಕ್ಷಣ ಪೂರ್ಣಗೊಳಿಸಬೇಕೆಂದು ಆಗ್ರಹಿಸಲಾಯಿತು.

ಅಗತ್ಯ ಕ್ರಮ ಕೈಗೊಳ್ಳಬೇಕು

ಕನ್ನಡ ಕಲಿಯುವ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಲ್ಲಿಯೇ ಸಾಹಿತ್ಯದ ಒಲವನ್ನು ಇನ್ನಷ್ಟು ಹೆಚ್ಚಿಸುವ ಬಗ್ಗೆ ಮತ್ತು ಬೋಧನಾ ವಿಧಾನವನ್ನು ಇನ್ನಷ್ಟು ನಾವೀನ್ಯಗೊಳಿಸುವ ಬಗ್ಗೆ ತಜ್ಞರ ಜೊತೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳ ಬೇಕು ಎಂದು ನಿರ್ಣಯ ಕೈಗೊಂಡು ಸರಕಾರವನ್ನು ಒತ್ತಾಯಿಸಲಾಯಿತು.
ಸಮ್ಮೇಳನಾಧ್ಯಕ್ಷ ಚಿದಂಬರ ಬೈಕಂಪಾಡಿ, ವಿವಿಧ ತಾಲೂಕು ಕಸಾಪ ಅಧ್ಯಕ್ಷರಾದ ವಿಶ್ವನಾಥ ಬಂಟ್ವಾಳ, ವೇಣುಗೋಪಾಲ ಶೆಟ್ಟಿ, ಗೌಡ,ಮಂಜುನಾಥ ಎಸ್.ರೇವಣ್ಕರ್, ಕೆ.ಸೇಸಪ್ಪ ರೈ ಕಡಬ, ಮಿಥುನ್ ಉಡುಪ ಮೂಲ್ಕಿ ಮತ್ತಿತರರಿದ್ದರು.

> **ಕನ್ನಡ ಕಡ್ಡಾಯಕ್ಕೆ ಒತ್ತಾಯ**
>
> ಖಾಸಗಿ ಹಾಗೂ ಪರಿಗಣಿತ ವಿವಿಗಳು ರಾಜ್ಯದ ಸೌಲಭ್ಯಗಳ ಬಳಸಿಕೊಂಡು ಬೆಳೆಯುತ್ತಿರುವುದಾದರೂ ಕನ್ನಡದ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಿದ್ದು, ಪದವಿ ಹಂತದಲ್ಲಿ ಕನ್ನಡ ಭಾಷೆಯ ಕಲಿಕೆ ಅವಧಿಯನ್ನು ಕುಂಠಿತಗೊಳಿಸಲಾಗಿದೆ. ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ 4 ಸೆಮಿಸ್ಟರ್‌ಗಳ ಕಾಲ ಕನ್ನಡ ಕಲಿಯುವುದನ್ನು ಕಡ್ಡಾಯಗೊಳಿಸಬೇಕು ಎಂದು ಆಗ್ರಹಿಸಲಾಯಿತು.

ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭ । ಸಾಧಕರಿಗೆ ಸನ್ಮಾನ, ಪ್ರಶಸ್ತಿ ಪ್ರದಾನ

ಗ್ರಾಂಥಿಕ ಕನ್ನಡ ಉಳಿಸಲು ಕನ್ನಡ ಮನಸುಗಳು ಒಂದಾಗಲಿ: ಆಸ್ರಣ್ಣ





ಬಂಟ್ವಾಳ: ಸಂಸ್ಕೃತ, ಕನ್ನಡ,ತುಳು ನಮ್ಮದೇ ಭಾಷೆಗಳಾಗಿದ್ದು, ಗ್ರಾಂಥಿಕ ಕನ್ನಡವನ್ನು ಉಳಿಸುವ ದೃಷ್ಟಿಯಲ್ಲಿ ಕನ್ನಡ ಮನಸುಗಳು ಒಂದಾಗಬೇಕಾಗಿದೆ ಎಂದು ಶ್ರೀ ಕ್ಷೇತ್ರ ಕಟೀಲಿನ ಆನುವಂಶಿಕ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ ಹೇಳಿದ್ದಾರೆ.
ಬಿ.ಸಿ.ರೋಡಿನ ಸ್ಪರ್ಶಾ ಕಲಾ ಮಂದಿರದ ಪಂಜೆಮಂಗೇಶರಾಯ ಸಭಾಂಗಣ, ರಾಣಿ ಅಬ್ಬಕ್ಕ ವೇದಿಕೆಯಲ್ಲಿ ಶನಿವಾರ ಸಂಜೆ ದ.ಕ. ಜಿಲ್ಲಾ 28ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಸಮಾರೋಪ ಭಾಷಣ ಮಾಡಿದರು. ಸಂಸ್ಕೃತವನ್ನು ಕಡೆಗಣಿಸುವ ಪ್ರಯತ್ನ ನಡೆಯುತ್ತಿದ್ದು, ಈ ಬೆಳವಣಿಗೆ ಕನ್ನಡಕ್ಕೂ ಅಪಾಯ ತಟ್ಟುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಜಾಗೃತಿಯ ಅಗತ್ಯವಿದೆ ಎಂದ ಅವರುಯಕ್ಷಗಾನದಿಂದಾಗಿಯೇ ನಮ್ಮಲ್ಲಿ ಕನ್ನಡ ಶುದ್ಧವಾಗಿ ಉಳಿದಿದೆ ಎಂದರು.
ಅತಿಥಿಯಾಗಿದ್ದ ಮಾಜಿ ಸಚಿವ ಬಿ.ರಮಾನಾಥ ರೈ ಮಾತನಾಡಿ, ಸರಕಾರಿ ಶಾಲೆಗಳಿಗೆ ಸರಕಾರ ಎಲ್ಲಾ ರೀತಿಯ ಸವಲತ್ತು ಒದಗಿಸಲಾ ಗುತ್ತಿದ್ದರೂ, ಕನ್ನಡ ಶಾಲೆಗಳು ಮುಚ್ಚುವುದಕ್ಕೆ ಎಲ್ಲರೂ ಕಾರಣರಾಗಿದ್ದಾರೆ ಎಂದರು. ನಾವು ಊಟ ಮಾಡುವ ಮೊದಲು ಶ್ಲೋಕ ಹೇಳಬೇಕಾಗಿತ್ತು. ಸಂಸ್ಕೃತ ಕನ್ನಡಕ್ಕೆ ಚಿನ್ನದ ಒಪ್ಪ ಹಾಕಿದಂತೆ. ನಮ್ಮಲ್ಲಿ ಮರಾಠಿ ಮಾತಾಡುವವರು ಇದ್ದರು ಈಗ ಮಾತಾಡುವವರಿಲ್ಲ, ಭಾಷೆ ಬಳಕೆ ಮಾಡದಿದ್ದರೆ ನಾಶ ಆಗುತ್ತದೆ. ಕನ್ನಡದ ಸ್ಥಿತಿ ಹೀಗೆ ಆಗದಂತೆ ನೋಡಬೇಕು ಎಂದರು.
ಉದ್ಯಮಿ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಬಿ.ರಘುನಾಥ ಸೋಮಯಾಜಿ ಎರಕಳ, ಕಾರ್ಯಾಧ್ಯಕ್ಷ ಪಿಯೂಸ್ ಎಲ್. ರಾಡ್ರಿಗಸ್ , ರೋಟರಿ ಮಾಜಿ ಗವರ್ನರ್ ಎನ್. ಪ್ರಕಾಶ ಕಾರಂತ, ಬಿ.ಸಿ.ರೋಡಿನ ಹಿರಿಯ ನ್ಯಾಯವಾದಿ ಜಯರಾಮ ರೈ, ಜಿ.ಪಂ.ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ಗಡಿನಾಡ ಕನ್ನಡಿಗ ಜಯಪ್ರಕಾಶ್ ಅತಿಥಿಗಳಾಗಿದ್ದರು.

ಮಹಾಸಾಧಕರಿಗೆ ಸನ್ಮಾನ

ಇದೇ ವೇಳೆ ಧಾರ್ಮಿಕ ಕ್ಷೇತ್ರದ ಸಾಧಕ, ಸಮಾಜ ಸೇವಕ ರವಿಶಂಕರ ಶೆಟ್ಟಿ ಬಡಾಜೆಗುತ್ತು ಮತ್ತು ಸಮಾಜ ಸೇವಕ ವಿನೋದ ಶೆಣೈ ಅವರನ್ನು ಸನ್ಮಾನಿಸಲಾಯಿತು.

ಸಾಧಕ ಸಿರಿ ಪ್ರಶಸ್ತಿ

ಜಗನ್ನಾಥ ಚೌಟ ಬದಿಗುಡ್ಡೆ (ಸದಸ್ಯರು, ಜಿಲ್ಲಾ ಧಾರ್ಮಿಕಪರಿಷತ್),ಜಗನ್ನಾಥ ಬಂಗೇರ ನಿರ್ಮಾಲ್ ನರಿಕೊಂಬು (ಸಮಾಜ ಸೇವಕರು) ಇವರಿಗೆ ಸಾಧಕ ಸಿರಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕನ್ನಡ ಸಿರಿ ಪ್ರಶಸ್ತಿ

ಪದ್ಮನಾಭ ಭಟ್ (ಸಾಹಿತ್ಯ),ಸದಾನಂದ ನಾರಾವಿ (ಸಾಹಿತ್ಯ),ಕೆ. ರಾಜಾರಾಮ ಶರ್ಮ ಬೆಳಾಲು, (ವಾಸ್ತುತಜ್ಞರು), ಕೇಶವ ಎ, ಕ್ಕೊಲ (ವಿಶೇಷ ಚೇತನರು, ಸಮಾಜಸೇವಕರು), ಡಾ. ಮುರಳೀಧರ ವೈ.ಕೆ., (ವೈದ್ಯಕೀಯ ಕ್ಷೇತ್ರ), ಅಬ್ದುಲ್ ಲತೀಫ್ ಗುರುಪುರ(ಸಮಾಜ ಸೇವಕರು), ದೇವಿಪ್ರಸಾದ್ ಬೆಳ್ತಂಗಡಿ,(ಮಾಧ್ಯಮ ಕ್ಷೇತ್ರ), ಲೂವಿಝಾ ಕುಟಿನ್ಹೊ (ಶಿಕ್ಷಣ), ಕೆ. ಟಿ. ವಿಶ್ವನಾಥ (ಸಹಕಾರಿ ರಂಗ), ಡಾ.ಈ.ಕೆ.ಎ.ಸಿದ್ದಿಕ್, ಅಡ್ಡೂರು (ವೈದ್ಯಕೀಯ, ಸಾಮಾಜಿಕ ಕ್ಷೇತ್ರ), ಡಾ.ರವೀಶ್ ಪಡುಮಲೆ (ದೈವನರ್ತಕರು), ಇಸ್ಮಾಯಿಲ್ ಶಾಫಿ, ಬಬ್ಬುಕಟ್ಟೆ (ಸಾಮಾಜಿಕ ಕ್ಷೇತ್ರ), ಗೋಪಾಲ ಅಂಚನ್ (ಮಾಧ್ಯಮ ಕ್ಷೇತ್ರ), ಶಂಕರ ಐತಾಳ, (ಪಾಕಶಾಸ್ತ್ರ ತಜ್ಞರು), ಎಚ್.ಕೆ.ನಯನಾಡು (ರಂಗಭೂಮಿ), ಡಾ.ಎಸ್.ಆರ್. ನರಹರಿ ಕಾಸರಗೋಡು ವೈದ್ಯಕೀಯ ಗಡಿನಾಡು ಸೇವೆಗಾಗಿ ಕನ್ನಡ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿ ಸಂಸ್ಥೆಗೆ ನೀಡಲಾದ ಕನ್ನಡ ಸಿರಿ ಪ್ರಶಸ್ತಿಯನ್ನು ಖ್ಯಾತ,ಹಿರಿಯ ಯಕ್ಷಗಾನ ಕಲಾವಿದ ಸುಣ್ಣಂಬಳ ವಿಶ್ವೇಶ್ವರ ಭಟ್ ಅವರು ಸ್ವೀಕರಿಸಿದರು.
ಸಮ್ಮೇಳನಾಧ್ಯಕ್ಷ ಚಿದಂಬರ, ಬೈಕಂಪಾಡಿ ದಂಪತಿಯನ್ನು ಸನ್ಮಾನಿಸಲಾಯಿತು. ಬಂಟ್ವಾಳ ತಾಲೂಕು ಕಸಾಪ ವಿಶ್ವನಾಥ್ ಬಂಟ್ವಾಳ, ವಿವಿಧ ತಾಲೂಕು ಕಸಾಪ ಅಧ್ಯಕ್ಷರಾದ ವೇಣುಗೋಪಾಲ ಶೆಟ್ಟಿ ಗೌಡ,ಮಂಜುನಾಥ ಎಸ್.ರೇವಣ್ಕರ್, ಕೆ.ಸೇಸಪ್ಪ ರೈ ಕಡಬ, ಮಿಥುನ್ ಉಡುಪ ಮೂಲ್ಕಿ, ಸಮ್ಮೇಳನ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಅಬೂಬಕ್ಕರ್ ಅಮ್ಮುಂಜೆ, ಕಾರ್ಯದರ್ಶಿ ದೇವಪ್ಪ ಕುಲಾಲ್, ಕೋಶಾಧಿ ಕಾರಿ ಸುಭಾಶ್ಚಂದ್ರ ಜೈನ್, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರಾಜೇಶ್ವರಿ ಎಂ.,ಪೂವಪ್ಪ ನೇರಳಕಟ್ಟೆ ಮೊದಲಾದವರು ವೇದಿಕೆಯಲ್ಲಿದ್ದರು.
ಇದೇ ವೇಳೆ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಬಿ.ರಘುನಾಥ ಸೋಮಯಾಜಿ ಎರಕಳ, ಕಾರ್ಯಾಧ್ಯಕ್ಷ ಪಿಯೂಸ್ ಎಲ್. ರಾಡ್ರಿಗಸ್,ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಂ.ಪಿ.ಶ್ರೀನಾಥ್ ಅವರನ್ನು ಅಭಿನಂದಿಸಲಾಯಿತು.
ದ.ಕ.ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಂ.ಪಿ. ಶ್ರೀನಾಥ್ ಸ್ವಾಗತಿಸಿದರು. ಸಮ್ಮೇಳನ ಸ್ವಾಗತ ಸಮಿತಿ ಕಾರ್ಯದರ್ಶಿ ರಾಮದಾಸ್ ಬಂಟ್ವಾಳ ವಂದಿಸಿದರು. ತುಂಬೆ ಪ.ಪೂ.ಕಾಲೇಜಿನ ಪ್ರಾಂಶುಪಾಲರಾದ ವಿ. ಸು. ಭಟ್ ಮತ್ತು ಪುತ್ತೂರು ಆಮಂತ್ರಣ ಸಾಹಿತ್ಯ ವೇದಿಕೆಯ ಅಧ್ಯಕ್ಷೆ ಆಶಾಮಯ್ಯ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ

ಬಳಿಕ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಜೀವನ್ ರಾಂ ಸುಳ್ಯ ತಂಡದಿಂದ ಕನ್ನಡ-ಗಾನ-ಗುಚ್ಛ, ವಿದುಷಿ ಶ್ರದ್ಧಾ ಕಲ್ಲಡ್ಕ -ಬಳಗದವರಿಂದ ನೃತ್ಯ ವೈಭವ , ಜಿಲ್ಲೆ ಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ ಯಕ್ಷಗಾನ ತಾಳಮದ್ದಳೆ ನಡೆಯಿತು.

> **ಯಶಸ್ವಿ ಸಂಪನ್ನ**
>
> 3 ದಿನಗಳ ಸಾಹಿತ್ಯ ಸಮ್ಮೇಳನ ಎಲ್ಲರ ಸಹಕಾರದಿಂದಾಗಿ ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿದೆ. ಮಾಧ್ಯಮಗಳು ಧನಾತ್ಮಕವಾದ ವಿಚಾರ ಪ್ರಕಟಿಸುವ ಮೂಲಕ ಸದಭಿಪ್ರಾಯ ವ್ಯಕ್ತವಾಗಿದೆ. ಸಾಹಿತ್ಯ ಪರಿಷತ್ತಿನೊಂದಿಗೆ ಮುಂದಿನ ದಿನಗಳಲ್ಲು ಅವಿನಾಭಾವ ಸಂಬಂಧ ಇಟ್ಟುಕೊಳ್ಳುತ್ತೇನೆ. ಸಮ್ಮೇಳನದ ಯಶಸ್ವಿಗೆ ಕಾರಣಕರ್ತರಾದವರಿಗೆ ಕೃತಜ್ಞತೆ.
>
> ● ಚಿದಂಬರ ಬೈಕಂಪಾಡಿ,

> **ಕನ್ನಡ ಅಧ್ಯಾಪಕರನ್ನು ನೇಮಿಸಬೇಕು**
>
> ಕಳೆದ ಮೂವತ್ತು ವರುಷಗಳಲ್ಲಿ ಸರಕಾರ ಯಾವ ಶಾಲೆಗೂ ಒಂದೇ ಒಂದು ಶಿಕ್ಷಕರಿಗೆ ನೇಮಿಸಿಲ್ಲ, ಕನ್ನಡ ಮಾಧ್ಯಮ ಶಾಲೆಯಲ್ಲಿ ಅಧ್ಯಾಪಕರು ಇಲ್ಲದೆ ಕನ್ನಡ ಭಾಷೆ ಸೊರಗಿದೆ ಹೊರತು ಇದಕ್ಕೆ ಹೆತ್ತವರು ಕಾರಣ ಅಲ್ಲ,ಅನುದಾನಿತ ಕನ್ನಡ ಮಾಧ್ಯಮ ಶಾಲೆಗಳಿಗೆ ಕನ್ನಡ ಅಧ್ಯಾಪಕರನ್ನು ಕೊಡಲೇ ಬೇಕೆಂದು ಸರಕಾರವನ್ನು ಸಮ್ಮೇಳನ ಒಕ್ಕೊರಲಿನಿಂದ ಆಗ್ರಹಿಸಬೇಕು.
>
> ● ಹರಿನಾರಾಯಣ ಆಸ್ರಣ್ಣ

ಬ್ರಾಹ್ಮಣ ಪರಿಷತ್ ರಜತ ಮಹೋತ್ಸವದ ಆಮಂತ್ರಣ ಬಿಡುಗಡೆ

ಕಾಸರಗೋಡು: ಬ್ರಾಹ್ಮಣ ಪರಿಷತ್ ಕಾಸರಗೋಡು ಇದರ ರಜತ ಮಹೋತ್ಸವದ ಅಂಗವಾಗಿ ಏ.3ರಂದು ಶ್ರೀಮದ್ ಎಡನೀರು ಮಠದಲ್ಲಿ ಜರಗುವ ಬ್ರಾಹ್ಮಣ ಸಮಾವೇಶದ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಯನ್ನು ಎಡನೀರು ಮಠದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಬಿಡುಗಡೆಗೊಳಿಸಿ ಅನುಗ್ರಹ ಮಂತ್ರಾಕ್ಷತೆಯನ್ನಿತ್ತು ಹರಸಿದರು.
ಈ ಸಂದರ್ಭ ಶ್ರೀ ಮಠದ ವ್ಯವಸ್ಥಾಪಕ ರಾಜೇಂದ್ರ ಕಲ್ಲೂರಾಯ ಎಡನೀರು, ಬ್ರಾಹ್ಮಣ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಸೂರ್ಯನಾರಾಯಣ ಭಟ್ ಮತ್ತು ಅವರ ಮನೆಯವರು, ಉಪಾಧ್ಯಕ್ಷ ಡಾ.ಎಂ.ಸತ್ಯನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ಡಿ.ಜಯನಾರಾಯಣ ತಾಯನ್ನೂರು ಹಾಗೂ ಪ್ರೊ.ಎ.ಶ್ರೀನಾಥ್ ಉಪಾಧ್ಯಾಯ ಮುಂತಾದವರು ಪಾಲ್ಗೊಂಡಿದ್ದರು.



ರಮೇಶ ಬೇಲ್ತೂರುಗೆ 'ಕಲಾಕೀರ್ತಿ' ಬಿರುದು ನೀಡಿ ಸನ್ಮಾನ

ಕುಂದಾಪುರ: ಕುಂದಾಪುರದ ಪೇಟೆ ವೆಂಕಟರಮಣ ದೇವರ ರಥೋತ್ಸವದ ಸಂದರ್ಭ ಉಪ್ಪಿನಕುದ್ರು ಶ್ರೀ ಗಣೇಶ ಯಕ್ಷಗಾನ ಮಂಡಳಿ ವತಿಯಿಂದ ನಡೆದ ಯಕ್ಷಗಾನ ಕಾರ್ಯಕ್ರಮದಲ್ಲಿ ಹಿರಿಯ ಯಕ್ಷಗಾನ ಕಲಾವಿದ ರಮೇಶ ಬೇಲ್ತೂರು ಅವರಿಗೆ 'ಕಲಾಕೀರ್ತಿ' ಬಿರುದು ನೀಡಿ ಸನ್ಮಾನಿಸಲಾಯಿತು.
ದೇವಳ ಆಡಳಿತ ಮಂಡಳಿ ಮೊಕ್ತೇಸರ ಕೆ.ರಾಧಾಕೃಷ್ಣ ಶೆಣೈ, ಜನಾರ್ದನ ಮಲ್ಯ, ತ್ರಿವಿಕ್ರಮ ಪೈ, ರೋಬೋಸಾಫ್ಟ್‌ನ ಜನರಲ್ ಮ್ಯಾನೇಜರ್ ರವಿರಾಜ ಶೆಟ್ಟಿ, ಬೈಂದೂರು ಪಿಯು ಕಾಲೇಜಿನ ಪ್ರಾಂಶುಪಾಲ ವೆಂಕಟರಮಣ ನಾಯಕ್, ಪುರೋಹಿತ ಪಾಂಡುರಂಗ ಭಟ್, ರಂಗಸ್ಥಳ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ರಾಘವೇಂದ್ರ ಉಡುಪ, ನಿವೃತ್ತ ಶಿಕ್ಷಕ ಗೋವಿಂದ ನಾಯಕ್ ಉಪಸ್ಥಿತರಿದ್ದರು. ವಿಠಲ ಕಾಮತ್ ಸ್ವಾಗತಿಸಿ, ವಸಂತರಾಜ್ ಶೆಟ್ಟಿ ನಿರೂಪಿಸಿದರು. ಕಾವ್ಯಶ್ರೀ ನಾಯಕ್ ಬಳಗದಿಂದ ಸೂರ್ಯರತ್ನ ಯಕ್ಷಗಾನ ಪ್ರದರ್ಶನ ನಡೆಯಿತು.



ಬಾಲಕಾರ್ಮಿಕ ನಿರ್ಮೂಲನೆ, ಪುನರ್ವಸತಿ ಸಮಿತಿ ಸಭೆ

ಮಡಿಕೇರಿ: ಮಡಿಕೇರಿ ತಾಲೂಕು ತಹಶೀಲ್ದಾರ್ ಶ್ರೀಧರ್ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಬಾಲಕಾರ್ಮಿಕ ನಿರ್ಮೂಲನೆ ಮತ್ತು ಪುನರ್ವಸತಿ ಸಮಿತಿ ಟಾಸ್ಕ್ ಫೋರ್ಸ್ ಸಭೆ ನಡೆಯಿತು.
ಈ ಸಂದರ್ಭ ಹಲವು ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಅದರಂತೆ ತಹಶೀಲ್ದಾರ್ ಮಾತನಾಡಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿರ್ದೇಶನ ಚಾಚುತಪ್ಪದೆ ಪಾಲಿಸುವಂತೆ ನಿರ್ದೇಶನ ನೀಡಿದರು. ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಹಾಗೂ ತಿದ್ದುಪಡಿ 2016ರ ರಡಿ ನೇಮಕಗೊಂಡಿರುವ ಹೆಚ್ಚುವರಿ ನಿರೀಕ್ಷಕರು ತಮ್ಮ ಕಾರ್ಯವ್ಯಾಪ್ತಿಯ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಹಾಗೂ ತೋಟಗಳ ಮಾಲಕರಿಂದ ಸ್ವಯಂ ಘೋಷಣಾ ಪತ್ರ ಪಡೆದು, ಬಾಲಕಾರ್ಮಿಕ ಮುಕ್ತ ತಾಲೂಕುಗಳನ್ನಾಗಿಸಲು ಶ್ರಮಿಸಬೇಕು ಮತ್ತು ಪ್ರತಿ ತಿಂಗಳು ಹೆಚ್ಚೆಚ್ಚು ತಪಾಸಣೆ ಹಾಗೂ ವ್ಯಾಪಕ ಪ್ರಚಾರ ಕೈಗೊಂಡು ಅದರ ವರದಿಯನ್ನು ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಗೆ ಅಥವಾ ಯೋಜನಾ ನಿರ್ದೇಶಕರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಕೊಡಗು ಜಿಲ್ಲೆ, ಮಡಿಕೇರಿವರೆಗೆ ಸಲ್ಲಿಸಲು ಸೂಚಿಸಿದರು.
ಮಡಿಕೇರಿ ವೃತ್ತ ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಎಂ.ಯತ್ನಟಿ, ಕೊಡಗು ಪೊಲೀಸ್ ಇಲಾಖೆ ವಿಶೇಷ ಮಕ್ಕಳ ಪೊಲೀಸ್ ಘಟಕದ ಸುಮತಿ, ಶಿಕ್ಷಣ ಇಲಾಖೆ ಎಜುಕೇಶನ್ ಕೋ ಆರ್ಡಿನೇಟರ್ ಜಾನೆಟ್, ಮಹಿಳಾ - ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸೀತಾಲಕ್ಷ್ಮಿ, ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ವಿರೂಪಾಕ್ಷ,ತಾ.ಹಿಂದುಳಿದವರ್ಗಗಳಕಲ್ಯಾಣಅಧಿಕಾರಿ ಶ್ರೀಕಾಂತ್, ನಗರಸಭೆಯ ಸುರೇಶ್, ತಾಲೂಕು ಆರೋಗ್ಯ-ಕುಟುಂಬ ಕಲ್ಯಾಣ ಇಲಾಖೆ ನಿರೀಕ್ಷಕ ಪಾಲಾಕ್ಷ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಆರ್.ಸಿರಾಜ್ ಅಹ್ಮದ್, ಸಿಬ್ಬಂದಿಗಳಾದ ರಕ್ಷಿತ್, ಶೋಭಾ, ಪ್ರಿಯಾಂಕ ಇದ್ದರು.



ಏ.9-12ರವರೆಗೆ ಮೂಡುಬಿದಿರೆಯಲ್ಲಿ 'ಬೆದ್ರ ಉತ್ಸವ'

ಮೂಡುಬಿದಿರೆ: ಮೂಡುಬಿದಿರೆ ಸ್ವರಾಜ್ಯ ಮೈದಾನದಲ್ಲಿ ಬೆದ್ರ ಉತ್ಸವ ಸಮಿತಿಯ ಆಶ್ರಯದಲ್ಲಿ 2026ರ ಏ.9ರಿಂದ 12ರ ವರೆಗೆ ನಾಲ್ಕು ದಿನಗಳ ಕಾಲ ವೈವಿಧ್ಯಮಯ ಸಾಂಸ್ಕೃತಿಕ ಮತ್ತು ಮನೋರಂಜನಾ ಕಾರ್ಯಕ್ರಮಗಳನ್ನೊಳಗೊಂಡ 'ಬೆದ್ರ ಉತ್ಸವ' ಜರಗಲಿದೆ ಎಂದು ಬೆದ್ರ ಉತ್ಸವ ಸಮಿತಿ ಅಧ್ಯಕ್ಷ, ಶಾಸಕ ಉಮಾನಾಥ ಕೋಟ್ಯಾನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಏಪ್ರಿಲ್ 9ರಂದು ಸಂಜೆ 4ಕ್ಕೆ ಆಹಾರ ಮಳಿಗೆ ಹಾಗೂ ಮನೋರಂಜನಾ ಆಟಗಳ ಉದ್ಘಾಟನೆ ನಡೆಯಲಿದೆ. ಅನಿಷಾ ಶೆಟ್ಟಿ ಕಾರ್ಕಳ ಕಾರ್ಯಕ್ರಮ ನಿರೂಪಿಸಲಿದ್ದಾರೆ. ನಂತರ ಝೀ ಕನ್ನಡ 'ಕಾಮಿಡಿ ಕಿಲಾಡಿ'ಗಳಿಂದ 'ಹಾಸ್ಯ ಸಂಗಮ' ಹಾಗೂ ರಾತ್ರಿ 9ಕ್ಕೆ ಪ್ರಸಾದ್ ಆಳ್ವ ಕೊಣಾಜೆ ಸಾರಥ್ಯದಲ್ಲಿ ತುಳು ನಾಟಕ 'ಯೇರ್...?' ಪ್ರದರ್ಶನಗೊಳ್ಳಲಿದೆ.
ಏ.10ರಂದುಸಂಜೆ 6ಕ್ಕೆ ಚೇತನ್ ಜೈನ್ ತಂಡದಿಂದ ನೃತ್ಯ ಪ್ರದರ್ಶನವಿದೆ. ರಾತ್ರಿ 7.30ಕ್ಕೆ ಉತ್ಸವದ ಅಧಿಕೃತ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಗಣೇಶ್ ಬಿ. ಅಳಿಯೂರು ನಿರೂಪಣೆ ಮಾಡಲಿದ್ದಾರೆ. ರಾತ್ರಿ 9ಕ್ಕೆ ಮೋಹನ್ ಹೊಸ್ಕಾರು ನಿರ್ದೇಶನದಲ್ಲಿ 'ಸಾಂಸ್ಕೃತಿಕ ವೈಭವ' ಜರಗಲಿದೆ.
ಏ.11ರಂದು ಸಂಜೆ 6ಕ್ಕೆ ಬಾಲಪ್ರತಿಭೆಗಳಾದ ಪ್ರಣತಿ ಜೋಶಿ, ಪ್ರಜೇತ ಜೋಶಿ ಅವರಿಂದ ಮ್ಯಾಜಿಕ್ ಪ್ರದರ್ಶನವಿದೆ. ಸಂಜೆ 7ಕ್ಕೆ ಝೀ ಕನ್ನಡ ಸರಿಗಮಪ ಕಲಾವಿದರಿಂದ 'ಸಂಗೀತ ರಸಮಂಜರಿ' ನಡೆಯಲಿದ್ದು, ವಿಶೇಷ ಆಕರ್ಷಣೆಯಾಗಿ ಬಿಗ್‌ಬಾಸ್ ಖ್ಯಾತಿಯ ರಕ್ಷಿತಾ ಶೆಟ್ಟಿ ಭಾಗವಹಿಸಲಿದ್ದಾರೆ.
ಏ12ರಂದು ಸಂಜೆ 6ಕ್ಕೆ ದಿನೇಶ್ ದೇವಾಡಿಗ ಅವರಿಂದ 'ನಾದ ವೈಭವ', ಸಂಜೆ 7ಕ್ಕೆ ಸಮಾರೋಪ ಸಮಾರಂಭ ಹಾಗೂ ರಾತ್ರಿ 9ಕ್ಕೆ ಅನೀಶ್ ಎಸ್. ನೇತೃತ್ವದ ಒ.ಎ. ತಂಡದಿಂದ ನೃತ್ಯ ಪ್ರದರ್ಶನ ನಡೆಯಲಿದೆ.
ಅಧ್ಯಕ್ಷತೆಯನ್ನು ಶಾಸಕ ಉಮಾನಾಥ ಎ. ಕೋಟ್ಯಾನ್ ವಹಿಸಲಿದ್ದು, ಸಂಸದ ಕ್ಯಾ.ಬ್ರಿಜೇಶ್ ಚೌಟ ಉದ್ಘಾಟಿಸಲಿದ್ದಾರೆ. ಸಮಾರೋಪದಲ್ಲಿಸಂಸದ ತೇಜಸ್ವಿಸೂರ್ಯ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಡಾ.ಎಂ. ಎನ್. ರಾಜೇಂದ್ರ ಕುಮಾರ್, ಡಾ.ಎಂ. ಮೋಹನ್ ಆಳ್ವ, ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

'ಬೆದ್ರ ಮಾಣಿಕ್ಯ' ಪ್ರಶಸ್ತಿ ಗೌರವ

ಡಾ.ಎಂ.ಎನ್. ರಾಜೇಂದ್ರ ಕುಮಾರ್, ಡಾ.ಎಂ. ಮೋಹನ್ ಆಳ್ವ, ಕಿಶೋರ್ ಆಳ್ವ ಮತ್ತು ಅಬ್ದುಲ್ ಅಹದ್ ಅವರಿಗೆ 'ಬೆದ್ರ ಮಾಣಿಕ್ಯ' ಪ್ರಶಸ್ತಿ ನೀಡಿ ಗೌರವಿಸಲಾಗುವುದೆಂದು ಕೋಟ್ಯಾನ್ ತಿಳಿಸಿದ್ದಾರೆ. ಸಮಿತಿ ಸಂಚಾಲಕ ಹರೀಶ್ ದೇವಾಡಿಗ, ಪ್ರಧಾನ ಕಾರ್ಯದರ್ಶಿ ಗೋಪಾಲ್ ಶೆಟ್ಟಿಗಾರ್,ಸಾಂಸ್ಕೃತಿಕ ಕಾರ್ಯಕ್ರಮ ಸಂಚಾಲಕ ಗಣೇಶ್ ಬಿ.ಅಳಿಯೂರು ಉಪಸ್ಥಿತರಿದ್ದರು.

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಭಾನುವಾರ 29, ಮಾರ್ಚ್ 2026

ಸುತ್ತ ಮುತ್ತ

ನ್ಯಾ. ನಾಗಮೋಹನ್‌ದಾಸ್ ವಿರುದ್ಧ ಮೊಕದ್ದಮೆ ದಾಖಲಿಸಲು ಆಗ್ರಹ

ಮಂಗಳೂರು: ದಲಿತ ದೌರ್ಜನ್ಯ ಎಸಗಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅವರ ವಿರುದ್ಧ ಪರಿಶಿಷ್ಟ ಜನರ ದೌರ್ಜನ್ಯ ತಡೆ ಕಾಯ್ದೆ ಅನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಸಂಘ- ಸಂಸ್ಥೆಗಳ ಮಹಾ ಒಕ್ಕೂಟ ಅಧ್ಯಕ್ಷ ಲೋಲಾಕ್ಷ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳ ಒಳಮೀಸಲಾತಿಗೆ ಸಂಬಂಧಿಸಿ ರಾಜ್ಯ ಸರಕಾರ ರಚಿಸಿದ ಏಕ ಸದಸ್ಯ ಆಯೋಗದ ಮುಖ್ಯಸ್ಥರಾಗಿದ್ದ ಎಚ್. ಎನ್. ನಾಗಮೋಹನ್‌ದಾಸ್ ಅವರು ಸಂದರ್ಶನವೊಂದರಲ್ಲಿ ಜಾತಿ ಸಮೀಕ್ಷೆಗೆ ಸಂಬಂಧಿಸಿದ ಕ್ರೈಸ್ತ ಅಥವಾ ಇಸ್ಲಾಂ ಧರ್ಮಗಳಿಗೆ ಮತಾಂತರಗೊಂಡ ಪರಿಶಿಷ್ಟರ ಕುರಿತಾದ ಪ್ರಶ್ನೆಗೆ ಉತ್ತರಿಸಿ, 'ಕ್ರೈಸ್ತ ಅಥವಾ ಇಸ್ಲಾಂಗೆ ಸೇರಿದ್ದೇವೆ' ಎಂದು ಪ್ರಮಾಣಪತ್ರ ತೆಗೆದುಕೊಂಡಿದ್ದರೆ 101 ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬರಲ್ಲ. ಒಂದು ವೇಳೆ, ಹೊರಗಡೆ ಆಚರಣೆಗೆ ನಾವು ಕ್ರೈಸ್ತರು, ಆದರೆ, ಸರಕಾರದ ಅನುಕೂಲಗಳನ್ನು ಪಡೆಯುವುದಕ್ಕೆ ಸರಕಾರಿ ದಾಖಲೆಗಳಲ್ಲಿ ನಾನು ಪರಿಶಿಷ್ಟ ಜಾತಿಯಂತಲೇ ಮುಂದುವರಿಸುತ್ತೇನೆ ಎಂದು ನಿಮ್ಮ ಉಪಜಾತಿಯನ್ನು ನೀವು ಬರೆಯಿಸಿದರೆ ನಿಮ್ಮನ್ನು ಸಮೀಕ್ಷೆಗೆ ಒಳಪಡಿಸುತ್ತೇವೆ' ಎಂದು ಹೇಳಿಕೆ ನೀಡಿದ್ದಾರೆ. ಈ ಹೇಳಿಕೆ ಅತ್ಯಂತ ಆಘಾತಕಾರಿ ಹಾಗೂ ಸಂವಿಧಾನ ವಿರೋಧಿ ಹಾಗೂ ಕಾನೂನಿನ ಸ್ಪಷ್ಟ ಉಲ್ಲಂಘನೆ. ಮತಾಂತರ ಕುರಿತು ಸುಪ್ರೀಂಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ನಾಗಮೋಹನ್‌ದಾಸ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ಈ ಬಗ್ಗೆ 2025ರ ಮೇ 5ರಂದು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಲಾಗಿತ್ತು. ಬುಧವಾರ ಮತ್ತೆ ಮರು ದೂರು ನೀಡಿದ್ದೇವೆ ಎಂದರು. ಪ್ರಮುಖರಾದ ಪದ್ಮನಾಭ, ಲಕ್ಷ್ಮಣ್ ಕಾಂಚನ್, ಅನಿಲ್‌ಕುಮಾರ್ ಕಂಕನಾಡಿ ಮತ್ತಿತರರು ಉಪಸ್ಥಿತರಿದ್ದರು.

ಕಿನ್ನಿಗೋಳಿ: ರಾಮ ನವಮಿ ಉತ್ಸವ

ಕಿನ್ನಿಗೋಳಿ: ಕಿನ್ನಿಗೋಳಿ ಶ್ರೀ ರಾಮ ಮಂದಿರದಲ್ಲಿ ರಾಮನವಮಿ ಪ್ರಯುಕ್ತ ಅಂಗಾರಾ ಬೆಳಿಗ್ಗೆ ಶ್ರೀ ರಾಮ ಮಂದಿರದಿಂದ ಶೋಭಾಯಾತ್ರೆ ಉತ್ಸವ ಹೊರಟು ಬಳಿಕ ರಾಮ ಮಂದಿರದಲ್ಲಿ ಶ್ರೀ ಬಾಲರಾಮ ದೇವರಿಗೆ ತೊಟ್ಟಿಲಿಗೆ ಹಾಕುವುದು, ಭಜನೆ, ಮಹಾಪೂಜೆ ಕಾರ್ಯಕ್ರಮ ಸಮಾರಾಧನೆ ನಡೆಯಿತು. ಮಂದಿರದ ಪ್ರಧಾನ ಅರ್ಚಕ ವೆ. ಮೂ. ಗಿರೀಶ್ ಭಟ್ ಅವರ ಮುತುವರ್ಜಿಯಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಮಂದಿರ ಅಧ್ಯಕ್ಷ ರಾಜೇಶ್ ನಾಯಕ್, ಉಪಾಧ್ಯಕ್ಷ ಅನಿಲ್ ಕಾಮತ್, ಕಾರ್ಯದರ್ಶಿ ರಾಘವೇಂದ್ರ ಪ್ರಭು, ಕೋಶಾಧಿಕಾರಿ ಸುಧೀರ್ ಶೆಣೈ, ಆಡಳಿತ ಮಂಡಳಿಯ ವಿನಾಯಕ ಮಲ್ಯ, ಅತುಲ ಪ್ರಭು, ಪ್ರಜ್ವಲ್ ನಾಯಕ್, ಗಣನಾಥ ಮಲ್ಯ , ನರೇಂದ್ರ ಪ್ರಭು , ರಾಧಾಕೃಷ್ಣ ನಾಯಕ್, ಅನಂತ ಕಾಮತ್ ಮತ್ತು ಮಂಡಳಿಯ ಸದಸ್ಯರು , ಯೂತ್ ಜಿ.ಎಸ್. ಬಿ. ಸದಸ್ಯರು, ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ವಿಶೇಷ ನಿಧಿ ಕಾಮಗಾರಿಗಳ ಪಟ್ಟಿ ಬಿಡುಗಡೆಗೆ ಆಗ್ರಹ

ಸುಳ್ಯ: ಮುಖ್ಯಮಂತ್ರಿ ರಾಜ್ಯ ಪ್ರತಿಯೊಬ್ಬ ಶಾಸಕರಿಗೆ ನೀಡಿದ ರೂ.25 ಕೋಟಿ ವಿಶೇಷ ಅನುದಾನದ ಕಾಮಗಾರಿಗಳು ಪಾರದರ್ಶಕವಾಗಿ ನಡೆಯಬೇಕಿದ್ದು ಈ ಹಿನ್ನೆಲೆಯಲ್ಲಿ ಸುಳ್ಯ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳ ಪಟ್ಟಿಯನ್ನು ಬಿಡುಗಡೆ ಗೊಳಿಸುವಂತೆ ಬ್ಲಾಕ್ ಕಾಂಗ್ರೆಸ್ ಆಗ್ರಹಿಸಿದೆ.

ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು, ಮುಖ್ಯಮಂತ್ರಿಗಳ ವಿಶೇಷ ನಿಧಿಯ ಅನುದಾನದಿಂದ ನಡೆಸುವ ಕಾಮಗಾರಿಗಳ ಪಟ್ಟಿಯನ್ನು ಶಾಸಕರು ಸಾರ್ವಜನಿಕವಾಗಿ ಕೂಡಲೇ ಬಿಡುಗಡೆ ಮಾಡಬೇಕು ಹಾಗೂ ಯಾವ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿದೆ ಎಂಬ ಬಗ್ಗೆ ಸಾರ್ವಜನಿಕರು ಕೇಳುತ್ತಿದ್ದಾರೆ. ಈ ಅನುದಾನದ ಕೆಲವು ಕಾಮಗಾರಿಗಳ ಗುದ್ದಲಿ ಪೂಜೆ ನಡೆಸಿರುವ ಬಗ್ಗೆ ಮಾಹಿತಿ ಇದೆ. ಆದರೆ, ಯಾವ ಕಾಮಗಾರಿಗೆ ಅನುದಾನ ಇರಿಸಿದೆ ಎಂಬ ಮಾಹಿತಿ ಯಾರಿಗೂ ಇಲ್ಲ. ಆದ್ದರಿಂದ ಕಾಮಗಾರಿಗಳ ವಿವರದ ಪಟ್ಟಿಯನ್ನು ಶಾಸಕರು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಶಾಸಕರು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜನರಿಗೆ ಅತೀ ಅಗತ್ಯ ಇರುವ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಬೇಕು. ಜೊತೆಗೆ ಸುಳ್ಯ ನಗರ ಹಾಗೂ ತಾಲೂಕಿನ ವಿವಿಧ ಭಾಗಗಳಲ್ಲಿ ಡ್ರೈನೇಜ್, ಚರಂಡಿ ಸೇರಿದಂತೆ ಮೂಲಭೂತ ವ್ಯವಸ್ಥೆಗಳ ಕೊರತೆ ಇದೆ. ನಗರದಲ್ಲಿ ಕುಡಿಯುವ ನೀರಿನ ಯೋಜನೆ ಅನುಷ್ಠಾನದ ಹೆಸರಿನಲ್ಲಿ ರಸ್ತೆಯ ಹಾನಿಗಳನ್ನು ಇದನ್ನು ಕೂಡಲೇ ಸರಿಪಡಿಸಬೇಕು ಎಂದು ಅವರು ಆಗ್ರಹಿಸಿದರು.

ವಾರದಲ್ಲಿ ನೂತನ ಬ್ಲಾಕ್ ಸಮಿತಿ


ಒಂದು ವಾರದಲ್ಲಿ ನೂತನ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಮಾಡುವುದಾಗಿ ಹೇಳಿದ ರಾಧಾಕೃಷ್ಣ ಬೊಳ್ಳೂರು, ಪಕ್ಷ ಸಂಘಟನೆಗೆ ಆದ್ಯತೆ ನೀಡಲಾಗುವುದು. ಬ್ಲಾಕ್ ಮಟ್ಟದ ಕಾರ್ಯಕರ್ತರ ಸಮಾವೇಶ ನಡೆಸುವ ಯೋಚನೆ ಇದೆ. ಗ್ರಾಮ ಮಟ್ಟದಲ್ಲಿ ಮತ್ತು ಬೂತ್ ಮಟ್ಟದಲ್ಲಿ ಸಭೆ ನಡೆಸಿ ಪಕ್ಷ ಸಂಘಟನೆಯನ್ನು ನಿರಂತರ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ಚೇತನ್ ಕಜೆಗದ್ದೆ ನಗರ ಕಾಂಗ್ರೆಸ್ ಅಧ್ಯಕ್ಷ ಶಶಿಧರ ಎಂ.ಜೆ., ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಭವಾನಿಶಂಕರ ಕಲ್ಲಡ್ಕ ಮುಖಂಡರಾದ ಎಸ್. ಸಂಶುದ್ದೀನ್, ಮಹೇಶ್ ಬೆಳ್ಳಾರ್ಕರ್, ಶಿವಕುಮಾರ್ ಕಂದಡ್ಕ, ಮಂಜುನಾಥ ಮಡ್ತಿಲ, ರಕ್ಷಿತ್ ದೊಡ್ಡಡ್ಕ, ಮಂಜುನಾಥ್ ಕಂದಡ್ಕ ಉಪಸ್ಥಿತರಿದ್ದರು.

ದುರ್ವಾಸನೆಯಿಂದ ತತ್ತರಿಸಿದ ಗ್ರಾಮಸ್ಥರು ಈಗ ನಿರಾಳ | 3.50 ಕೋ.ರೂ. ವೆಚ್ಚದ ಯಂತ್ರ ಅಳವಡಿಕೆ

ಕಸ ವಿಲೇ ಘಟಕದಲ್ಲಿರುವ ಹಳೆ ತ್ಯಾಜ್ಯಕ್ಕೆ ಕೊನೆಗೂ ಮುಕ್ತಿ!

■ ಕೆ.ಕೆ.ನಾಗರಾಜ ಶೆಟ್ಟಿ



ಸಂಗಮ ವಿಶೇಷ

ಕುಶಾಲನಗರ: ಇಲ್ಲಿಗೆ ಸಮೀಪದ ಭುವನಗಿರಿ ಗ್ರಾಮದಲ್ಲಿರುವ ಕುಶಾಲನಗರ ಪುರಸಭೆಯ ಕಸ ವಿಲೇವಾರಿ ಘಟಕದಲ್ಲಿರುವ ಪಾರಂಪರಿಕ (ಹಳೆಯ) ಕಸವನ್ನು ರೂ.3.50ಕೋಟಿ ವೆಚ್ಚದಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಕಾರ್ಯಕ್ಕೆ ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿದೆ.

ಆ ಮೂಲಕ ಘಟಕದ ಸಮೀಪದ ಗ್ರಾಮಗಳ ಗ್ರಾಮಸ್ಥರ ಬಹು ದಿನಗಳ ಬೇಡಿಕೆಗೆ ಶಾಶ್ವತ ಪರಿಹಾರ ಸಿಗುವ ನಿರೀಕ್ಷೆ ಇದೀಗ ಗಟ್ಟಿಯಾಗಿದೆ. ಈ ಕಸ ವಿಲೇವಾರಿ ಘಟಕದಿಂದಾಗಿ ಸುತ್ತಮುತ್ತಲಿನ ಪ್ರದೇಶಗಳ ಗ್ರಾಮಸ್ಥರು ಕಳೆದ 15 ವರ್ಷಗಳಿಂದ ತೊಂದರೆ ಅನುಭವಿಸುತ್ತಿದ್ದು, ದುರ್ವಾಸನೆಯಿಂ ದಾಗಿ ಅನೇಕ ಬಾರಿ ಗ್ರಾಮಸ್ಥರು ಪುರಸಭೆಯ ಅ ಕಾರಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಿದ್ದರು. ಅದರ ಅನ್ವಯ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರು, ಈ ಸಾಲಿನಲ್ಲಿ ಸ್ವಚ್ಛ ಭಾರತ್ ಯೋಜನೆಯಡಿ ಘಟಕದಲ್ಲಿ ಯಾವುದೇ ರೀತಿಯ ವಾಸನೆ ಹರಡದಂತೆ ಹಾಗೂ ಕಸ ವಿಲೇವಾರಿಗೆ ನಗರ ಪ್ರದೇಶಗಳಲ್ಲಿ ಅಳವಡಿಕೆ ಮಾಡಿರುವಂತೆ ಅಧುನಿಕ ತಂತ್ರಜ್ಞಾನದ ನೂತನ ಯಂತ್ರಗಳ ಬಳಕೆ ಮೂಲಕ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚನೆ ನೀಡಿದ್ದರು. ಅದಕ್ಕೆ ಪೂರಕವಾಗಿ ಕುಶಾಲನಗರ ಪುರಸಭೆಯ ಮುಖ್ಯಾಧಿಕಾರಿ ಗಿರೀಶ್ ಕುಮಾರ್ ಮತ್ತು ಆರೋಗ್ಯ ಅಧಿಕಾರಿ ಉದಯ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಪಾರಂಪರಿಕ ಕಸ ವಿಲೇವಾರಿಗೆ ಟೆಂಡರ್ ಪ್ರಕ್ರಿಯೆ ನಡೆದಿದ್ದು ಪ್ರಸಕ್ತ ಭುವನಗಿರಿ ಕಸ ವಿಲೇವಾರಿ ಘಟಕದಲ್ಲಿ ಈಗಾಗಲೇ ಟೆಂಡರ್ ಪಡೆದ ಗುತ್ತಿಗೆದಾರರು ನೂತನ ತಂತ್ರಜ್ಞಾನದ ಬೃಹತ್ ಯಂತ್ರ ರಾಜ್ಯ ಮತ್ತು ಹೊರ ರಾಜ್ಯಗಳಿಂದ ತರಿಸಿ ಅಳವಡಿಕೆ ಮಾಡಿದ್ದಾರೆ. ಅಲ್ಲದೆ ಅದರ ಪ್ರಾಯೋಗಿಕ ಪರೀಕ್ಷೆ ನಡೆಸಿ ಕಾರ್ಯಾರಂಭಕ್ಕೆ ಸಂಬಂಧಿಸಿದ ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

> ಪಾರಂಪರಿಕ ಕಸ ವಿಲೇವಾರಿ ಮಾಡುವ ಟೆಂಡರ್ ಪಡೆದಿರುವ ಗುತ್ತಿಗೆದಾರ ಹಳೆಯ ಕಸವನ್ನು ಸಂಪೂರ್ಣ ಘಟಕದಿಂದ ತೆಗೆದು ಅದರಲ್ಲಿರುವ ಪ್ಲಾಸ್ಟಿಕ್ ಸೇರಿದಂತೆ ಒಣ ಕಸ ಮತ್ತು ಹಸಿ ಕಸವನ್ನು ಬೇರೆ ಬೇರೆ ಹಂತಗಳಲ್ಲಿ ವಿಭಾಗ ಮಾಡಿ ಸಿಮೆಂಟ್ ಕಾರ್ಖಾನೆಗೆ ಕಳುಹಿಸುವ ವ್ಯವಸ್ಥೆ ಮತ್ತು ಘಟಕದ ಅಭಿವೃದ್ಧಿಗೆ ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
>
> ● ಉದಯ್ ಕುಮಾರ್, ಆರೋಗ್ಯ ಅಧಿಕಾರಿ

ಅಂದಾಜು 75ಲಕ್ಷ ವೆಚ್ಚದಲ್ಲಿ 4 ನೂತನ ಕಸ ವಿಲೇವಾರಿ ಯಂತ್ರಗಳು ಮತ್ತು 33 ಲಕ್ಷ ವೆಚ್ಚದಲ್ಲಿ ಅದಕ್ಕೆ ಸಂಬಂಧಿಸಿದ ಕಸ ಜಾರಣಿ, ಮತ್ತು ಹಸಿ ಕಸ, ಒಣ ಕಸ, ಮತ್ತು ಪ್ಲಾಸ್ಟಿಕ್ ಗಳನ್ನು ವಿಂಗಡಿಸುವ ನೂತನ ತಂತ್ರಜ್ಞಾನದ ಹಲವಾರು ಯಂತ್ರಗಳ ಅಳವಡಿಕೆ, ಮತ್ತು ದುರ್ವಾಸನೆ ತಡೆಯುವ ನಿಟ್ಟಿನಲ್ಲಿ ವಿವಿಧ ಯಂತ್ರಗಳ ಅಳವಡಿಕೆಯ ಕಾರ್ಯ ಕಸ ವಿಲೇವಾರಿ ಘಟಕದಲ್ಲಿ ನಡೆಯುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಕುಶಾಲನಗರ ಪುರಸಭೆಯ ಕಾರ್ಮಿಕರಿಗೆ ಬೆಂಗಳೂರು ಸೇರಿದಂತೆ ವಿವಿಧೆಡೆ ಅದಕ್ಕೆ ಸಂಬಂಧಿಸಿದ ತರಬೇತಿ ನೀಡಲಾಗಿದೆ.

> ಕುಶಾಲನಗರ ಪುರಸಭೆಯ ವ್ಯಾಪ್ತಿಯ ಕಸ ವಿಲೇವಾರಿ ಕೇಂದ್ರವಾದ ಕೂಡಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಭುವನಗಿರಿ ಗ್ರಾಮದಲ್ಲಿ ನೂತನ ತಂತ್ರಜ್ಞಾನದ ಯಂತ್ರಗಳ ಅಳವಡಿಕೆ ಮೂಲಕ ಸಮರ್ಪಕವಾಗಿ ಕಸ ವಿಲೇವಾರಿ ಮಾಡುವುದರೊಂದಿಗೆ, ಸ್ಥಳೀಯರಿಗೆ ಯಾವುದೇ ಅನಾನುಕೂಲತೆಗಳಾಗದಂತೆ ಪುರಸಭೆಯ ವತಿಯಿಂದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
>
> ● ಗಿರೀಶ್, ಪುರಸಭೆ ಮುಖ್ಯಾಧಿಕಾರಿ

ಮುಲ್ಕಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕುಂದುಕೊರತೆಗಳ ಸಭೆ

ಕುಡಿಯುವ ನೀರು, ಕಳಪೆ ಕಾಮಗಾರಿ ಬಗ್ಗೆ ಚರ್ಚೆ



ಮುಲ್ಕಿ: ತಾಲೂಕು ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡಗಳ ಕುಂದುಕೊರತೆಗಳ ಬಗ್ಗೆ ಸಭೆ ತಾಲೂಕು ಪ್ರಜಾಸೌಧದ ಸಭಾಂಗಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ತಾಲೂಕು ತಹಶಿಲ್ದಾರ್ ಶ್ರೀಧರ ಮುಂದಲಮನಿ ವಹಿಸಿದ್ದರು. ಸಭೆಯಲ್ಲಿ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ, ಮಾತಾ ಅಮೃತಾನಂದಮಯಿ ನಗರದಲ್ಲಿ ಅಂಬೇಡ್ಕರ್ ಭವನ ಕಳಪೆ ಕಾಮಗಾರಿ, ಹಳೆಯಂಗಡಿಯಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಆದ್ಯತೆ ಮತ್ತು ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಯಿತು.

ಸಭೆಯಲ್ಲಿ ಮುಲ್ಕಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ದೂರು ವ್ಯಕ್ತವಾದಾಗ ಟ್ಯಾಂಕರ್ ಮೂಲಕ ಸರಬರಾಜಿಗೆ ಟೆಂಡರ್ ಕರೆಯಲಾಗಿದ್ದು ಸಮಸ್ಯೆ ಬಗೆಹರಿಸುವುದಾಗಿ ಮುಲ್ಕಿ ಪಂಚಾಯತ್ ನ ಸಿಬ್ಬಂದಿಗಳು ತಿಳಿಸಿದರು.

ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯ ಕುದ್ಕಪಳ್ದದ ಮಾತಾ ಅಮೃತಾಮಯಿ ನಗರದಲ್ಲಿರುವ ಅಂಬೇಡ್ಕರ್ ಭವನವು ಕಳಪೆ ಕಾಮಗಾರಿಯಿಂದ ಮಳೆಗಾಲದಲ್ಲಿ ಸೋರುತ್ತಿದ್ದು ಜೊತೆಗೆ ಶೌಚಾಲಯವು ಉಪಯೋಗಿಸುವ ಸ್ಥಿತಿಯಲ್ಲಿಲ್ಲ, ಮಳೆಗಾಲದಲ್ಲಿ ಸೋರುವಿಕೆಯಿಂದ ಕಾರ್ಯಕ್ರಮ ನಡೆಸಲು ಅಸಾಧ್ಯವಾಗಿದೆ, ಅಮೃತಾನಂದಮಯಿ ನಗರದಲ್ಲಿ ಚರಂಡಿಯಲ್ಲಿ ಕಸ ತುಂಬಿದ್ದು ಸ್ವಚ್ಛಗೊಳಿಸಬೇಕು ಅಮೃತಾಮಯಿ ನಗರದ ವಿಶು ಕುಮಾರ್ ಪ್ರಸ್ತಾಪಿಸಿದರು. ಈ ಬಗ್ಗೆ ಪರಿಶೀಲಿಸುವುದಾಗಿ ಅಧಿ ಕಾರಿಗಳು ತಿಳಿಸಿದರು.

ಅನುದಾನದ ಅಗತ್ಯವಿದೆ

ಪಡುಪಣಂಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳಿಗೆ ಮನೆ ದುರಸ್ತಿಗೆ ರೂ 2,00,00 ನೀಡುತ್ತಿದ್ದು ಇದು ಸಾಕಾಗುವುದಿಲ್ಲ,ಹೆಚ್ಚು ನೀಡುವಂತೆ ಹಾಗೂ ಹಳೆಯಂಗಡಿಯ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚಿನ ಅನುದಾನದ ಅಗತ್ಯವಿದೆ ಎಂದು ಸ್ಥಳೀಯರು ಆಗ್ರಹಿಸಿದರು

ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಸುರೇಶ್ ಮಾಹಿತಿ ನೀಡಿ ಪಂಚಾಯತ್ ವ್ಯಾಪ್ತಿಯಲ್ಲಿ ಪಂಚಾಯತ್ ನ ಅನುದಾನ ಶೇ.25 ಮೀಸಲು ನಿಧಿಯಲ್ಲಿ ಹೆಚ್ಚು ನೀಡಲು ಸಾಧ್ಯವಿಲ್ಲ ಎಂದು ಮಾಹಿತಿ ನೀಡಿದರು.

ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯ ಚಿತ್ರಾಪುನಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು ನೀರಿನ ವ್ಯವಸ್ಥೆ ಮಾಡುವಂತೆ ಹಾಗೂ ಚಿತ್ರಾಪು ಕಟ್ಟೆಯ ಬಳಿ ಚರಂಡಿಗೆ ಡ್ರೈನೇಜ್ ನೀರು ಬಿಡುತ್ತಿದ್ದು ಇದರಿಂದ ಸಮಸ್ಯೆಯಾಗುತ್ತಿದೆ. ಕೆಲವು ಕಡೆ ಚರಂಡಿಯಲ್ಲಿ ಕುಡಿಯುವ ನೀರಿನ ಪೈಪ್ ಹಾದು ಹೋಗಿದ್ದು ಇದರಿಂದ ಚರಂಡಿಯ ನೀರು ಕುಡಿಯುವ ನೀರಿನೊಂದಿಗೆ ಸೇರುವ ಸಾಧ್ಯತೆಯಿದ್ದು ಸರಿಪಡಿಸುವಂತೆ ಚಿತ್ರಾಪುನ ಲೋಕೇಶ್ ಸಭೆಯಲ್ಲಿ ತಿಳಿಸಿದರು.

ಪಶು ಇಲಾಖೆಯ ಅಧಿಕಾರಿಗಳು ಕೋಳಿ ಸಾಕಣೆ, ಮೇಕೆ ಸಾಕಣೆ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ ತಾಲೂಕು ಕಾರ್ಯ ನಿರ್ವಹಣಾಧಿಕಾರಿ ಕುಸುಮಾಧರ್, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಸುರೇಶ್ ಮತ್ತಿತರ ಇಲಾಖೆಯವರು ಉಪಸ್ಥಿತರಿದ್ದು ಪ್ರಶ್ನೆಗಳಿಗೆ ಉತ್ತರಿಸಿದರು.

ಕುಂಪಲ ಶ್ರೀ ಬಾಲಕೃಷ್ಣ ಮಂದಿರದ ಪ್ರತಿಷ್ಠಾ ಮಹೋತ್ಸವ, ಏಕಾಹ ಭಜನೆ

ಸನಾತನ ಸಂಸ್ಕೃತಿ, ಸಂಸ್ಕಾರ ಪಸರಿಸಬೇಕಿದೆ: ಯತೀಶ್



ಉಳ್ಳಾಲ: ಹಿಂದುತ್ವದ ಅಜೆಂಡದಡಿ ಕಾರ್ಯಾಚರಿಸುತ್ತಿರುವ ಕುಂಪಲದ ಬಾಲಕೃಷ್ಣ ಮಂದಿರದಲ್ಲಿ ಸನಾತನ ಧರ್ಮದ ಸಂಸ್ಕೃತಿ, ಸಂಸ್ಕಾರಗಳನ್ನ ನಿರಂತರವಾಗಿ ಆಚರಿಸುತ್ತಾ ಬಂದಿರುವುದು ಶ್ಲಾಘನೀಯ. ಹಿಂದಿನ ಪೀಳಿಗೆಯು ಇಂತಹ ಆಚರಣೆಗಳನ್ನ ಪೋಷಿಸಿ, ಬೆಳೆಸಿ ಮುಂದಿನ ಪೀಳಿಗೆಗೂ ಪಸರಿಸಿದರೆ ಹಿಂದೂ ಧರ್ಮ ಜಾಗೃತಿಗೊಳ್ಳಲು ಸಾಧ್ಯವೆಂದು ಪಂಡಿತ್ ಹೌಸ್ನ ದಿವ್ಯ ಜ್ಯೋತಿ ಕ್ರಿಕೆಟರ್ಸ್ ನ ಅಧ್ಯಕ್ಷ ಯತೀಶ್ ಶೆಟ್ಟಿ ಪಂಡಿತ್ ಹೌಸ್ ಅಭಿಪ್ರಾಯಪಟ್ಟರು.

ಕುಂಪಲ ಶ್ರೀ ಬಾಲಕೃಷ್ಣ ಮಂದಿರದ ಹತ್ತೊಂಬತ್ತನೇ ವರ್ಷದ ಪ್ರತಿಷ್ಠಾ ಮಹೋತ್ಸವದ ಪ್ರಯುಕ್ತ ಶನಿವಾರದಂದು ಮುಂಜಾನೆ ಆರಂಭಗೊಂಡ ಏಕಾಹ ಭಜನೆಯ ನಂದಾದೀಪ ಪ್ರಜ್ವಲಿಸಿ ಅವರು ಮಾತನಾಡಿದರು.

ತೊಕ್ಕೊಟ್ಟು ಶ್ರೀ ಶಾಂಭವಿ ಅಸೋಸಿಯೇಟ್ಸ್ ಮಾಲಕ ಅವಿನಾಶ್ ಶೆಟ್ಟಿ ತೊಕ್ಕೊಟ್ಟು,ಯುವವಾಹಿನಿ ಕೇಂದ್ರ ಸಮಿತಿ ಮಂಗಳೂರಿನ ಸಂಘಟನಾ ನಿರ್ದೇಶಕಿ ಸುಧಾ ಮತ್ತು ಸುರೇಶ್ ಸುವರ್ಣ ಕೊಲ್ಯ ದಂಪತಿ, ನಡಾರ್ ಪೌರ್ಣಮಿ ಗ್ಲಾಸ್ ಹೌಸ್ ನ ಮಾಲಕರಾದ ಹರೀಶ್ ರಾವ್ , ಪಂಡಿತ್ ಹೌಸ್ ದಿವ್ಯಜ್ಯೋತಿ ಕ್ರಿಕೆಟರ್ಸ್ ಅಧ್ಯಕ್ಷ ಯತೀಶ್ ಶೆಟ್ಟಿ ಮತ್ತು ಶ್ವೇತ ದಂಪತಿ,ಕೊಲ್ಯ ಎಮ್.ಕೆ.ಟಯರ್ ರಿಟ್ರೇಡಿಂಗ್ ಮಾಲಕರಾದ ಅಂಬಿಕಾ ಮತ್ತು ಬಾಬು ದಂಪತಿ,ತೊಕ್ಕೊಟ್ಟು ಆರ್.ಕೆ. ಫ್ಯಾನ್ಸಿ ಮಾಲಕರಾದ ಶರ್ಮಿಳಾ ಮತ್ತು ಲಕ್ಷ್ಮಣ್ ಪಂಡಿತ್ ಹೌಸ್ ದಂಪತಿ, ಕುಂಪಲ ಚಿತ್ರಾಂಜಲಿ ನಗರದ ವೇದಾವತಿ ಮತ್ತು ಕಿರಣ್ ಕುಮಾರ್ ದಂಪತಿ, ಬೆಂಗಳೂರು ಕಾಮನ್ ವೆಲ್ತ್ ಬ್ಯಾಂಕಿನ ಉದ್ಯೋಗಿಗಳಾದ ರಂಜಿತ್ ಕುಮಾರ್ ಮತ್ತು ಕೃತಿ ಆರ್.ಎ ದಂಪತಿ ನಂದಾ ದೀಪ ಬೆಳಗಿಸಿದರು. ಮಂದಿರದ ಆಡಳಿತ ಸಮಿತಿ ಸದಸ್ಯ ರವೀಂದ್ರ ಕುಂಪಲ, ಚಂದ್ರಶೇಖರ್ ಬಿ.ಜೆ,ಗಣೇಶ್ ಅಂಚನ್, ಪ್ರಹ್ಲಾದ್ ಕುಮಾರ್ ಇಂದಾಜೆ,ದೀಕ್ಷಿತ್ ನಿಸರ್ಗ, ಆಕಾಶ್ ಉಳ್ಳಾಲ್, ಅಶೋಕ್ ಕೆ, ಚಂದ್ರಹಾಸ್ ಮೂರುಕಟ್ಟೆ ಜಗದೀಶ್ ಆಚಾರ್ಯ, ವೆಂಕಟೇಶ್ ಕುಂಪಲ, ಮಹಿಳಾ ಸಮಿತಿ ಅಧ್ಯಕ್ಷೆ ಜಯಲಕ್ಷ್ಮಿ ಬಿ.ಜೆ ಇದ್ದರು. ಸಂಘಟನಾ ಕಾರ್ಯದರ್ಶಿ ಪ್ರವೀಣ್ ಎಸ್.ಕುಂಪಲ ನಿರೂಪಿಸಿದರು.

> ಮಂದಿರದಲ್ಲಿ ಪ್ರತೀ ವರುಷವೂ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಾ ಬಂದಿರುತ್ತೇವೆ. 19ನೇ ವರುಷದ ಪ್ರತಿಷ್ಠಾ ಮಹೋತ್ಸವದ ಪ್ರಯುಕ್ತ ಈ ಸಲ ಹಮ್ಮಿಕೊಳ್ಳಲಾಗಿದ್ದ 9 ದಿನದ ನಗರ ಭಜನೆಯು ಯಶಸ್ವಿಯಾಗಿದೆ. ಈ ಭಾರಿಯ ಪ್ರತಿಷ್ಠಾ ಮಹೋತ್ಸವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಮಂದಿರದ ಸ್ವಂತ ಜಾಗದಲ್ಲಿ ನಡೆಯುತ್ತಿರುವುದು ಅತೀವ ಸಂತಸದಾಯಕ. ಭಕ್ತರು ಮತ್ತು ಮಂದಿರದ ಸರ್ವ ಸದಸ್ಯರ ಪರಿಶ್ರಮದಿಂದ ಸ್ವಂತ ಜಾಗ ಖರೀದಿಸಲು ಸಾಧ್ಯವಾಗಿದೆ.
>
> ● ಸತೀಶ್ ಕುಂಪಲ, ಭಜನಾ ಮಂದಿರದ ಅಧ್ಯಕ್ಷರು

ಬೇಟಿ ಬಚಾವೋ ಬೇಟಿ ಪಡಾವೋ ಮಾಹಿತಿ ಕಾರ್ಯಾಗಾರ ಉದ್ಘಾಟನೆ



ಬಂಟ್ವಾಳ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಸ್ತ್ರೀ ಶಕ್ತಿ ಒಕ್ಕೂಟ ಬಂಟ್ವಾಳ ಇದರ 2025-26 ನೇ ಸಾಲಿನ ವಾರ್ಷಿಕ ಮಹಾಸಭೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಬಂಟ್ವಾಳ ಇದರ ಸಂಯುಕ್ತ ಆಶ್ರಯದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಮಾಹಿತಿ ಕಾರ್ಯಾಗಾರ ಬಿ.ಸಿ.ರೋಡಿನ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯಿತು.

ಬಂಟ್ವಾಳ ಸಿ.ಡಿ.ಪಿ.ಒ. ಮಮ್ತಾಜ್ ಅವರು ಗಿಡಕ್ಕೆ ನೀರು ಎರೆಯುವ ಮೂಲಕ ಉದ್ಘಾಟಿಸಿ, ಸ್ತ್ರೀ ಶಕ್ತಿ ಗುಂಪು ಮಹಿಳೆಯರ ಬದುಕನ್ನು ಬದಲಿಸಿದೆ.ಮಹಿಳೆಯರು ಕೂಡ ಸ್ವಾವಲಂಬನೆಯ ಬದುಕು ನಡೆಸಿ ಆರ್ಥಿಕವಾಗಿ ಸದೃಡರಾಗಬೇಕೆಂಬ ನಿಟ್ಟಿನಲ್ಲಿ ಸರಕಾರ ಅನೇಕ ಸ್ವ ಉದ್ಯಮಗಳಿಗೆ ಅವಕಾಶಗಳನ್ನು ಒದಗಿಸಿದ್ದು,ಇದನ್ನು ಸದುಪಯೋಗಪಡಿಸಿಕೊಂಡಾಗ ಯಶಸ್ಸು ಸಾಧ್ಯ ಎಂದರು.

ಬ್ಲಾಕ್ ಸೊಸೈಟಿ ಅಧ್ಯಕ್ಷೆ ಜಯಂತಿ ಸಭೆಯ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು. ಉಪಾಧ್ಯಕ್ಷೆ ಜಯಂತಿ ಎಸ್ ಪೂಜಾರಿ, ಕೋಶಾಧಿಕಾರಿ ವಿದ್ಯಾ ಶೆಟ್ಟಿ,ಸದಸ್ಯರಾದ ಯೋಗ್ಯಲಕ್ಷ್ಮಿ, ಜಯಲಕ್ಷ್ಮಿ, ಹೆಚ್ ಸಿ ಜಯಾ, ಭವಾನಿ,ನಳಿನಿ, ಜಯಲಕ್ಷ್ಮಿ, ಸುವರ್ಣ ಕುಮಾರಿ ಇದ್ದರು. ಸೊಸೈಟಿಯ ಲೆಕ್ಕ ನಿರ್ವಾಹಕ ಮಾಲಿನಿ ಅವರನ್ನು ಈ ಸಂದರ್ಭ ಗೌರವಿಸಲಾಯಿತು. ಬಳಿಕ ನೂತನ ಕಾರ್ಯಕಾರಿಣಿ ಸಮಿತಿ ಸದಸ್ಯರ ಆಯ್ಕೆ ಪ್ರಕ್ರಿಯೆ ಯನ್ನು ನಡೆಸಲಾಯಿತು. ಎ.ಸಿ.ಡಿ.ಪಿ.ಒ. ಶಾಲಿನಿ ವರದಿ ವಾಚಿಸಿದರು. ಮೇಲ್ವಿಚಾರಕಿ ಗುಣವತಿ ಸ್ವಾಗತಿಸಿ, ವಿಟ್ಲ ಎಸಿಡಿಪಿಒ ಶಾರದಾ ವಂದಿಸಿದರು. ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಾಲಿನಿ ಹಾಗೂ ಹಿರಿಯ ಮೇಲ್ವಿಚಾರಕಿ ನೀತಾ ಕುಮಾರಿ ಕಾರ್ಯಕ್ರಮ ನಿರೂಪಿಸಿದರು.

ಮಜಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದು ದಿನದ ಕಾರ್ಯಾಗಾರ



ಬಂಟ್ವಾಳ: ವೀರಕಂಭ ಗ್ರಾಮದ ಮಜಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲ್ಲಡ್ಕ ಕ್ಲಸ್ಟರ್‌ನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಗುರುವಾರ ನಡೆಯಿತು.

ಕಲ್ಲಡ್ಕ ಮಾದರಿ ಶಾಲಾ ಪದವೀಧರ ಮುಖ್ಯ ಶಿಕ್ಷಕ ಅಬೂಬಕ್ಕರ್ ಅಶ್ರಫ್ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

ಅಭಿನಂದನಾ ಪತ್ರ ವಿತರಣೆ

ಮಜಿ ಹಿರಿಯ ಪ್ರಾಥಮಿಕ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಕೊರಗಪ್ಪ ನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಶಾಲಾಭಿವೃದ್ಧಿ ಸಮಿತಿಗೆ ಅಭಿನಂದನಾ ಪತ್ರ ವಿತರಿಸಲಾಯಿತು.


ಇದೇ ವೇಳೆ ಛಾಯಾಗ್ರಾಹಕ ಚಿನ್ನಾ ಕಲ್ಲಡ್ಕ ಅವರನ್ನು ಗೌರವಿಸಲಾಯಿತು. ನಂತರ ನಡೆದ ತರಬೇತಿ ಕಾರ್ಯದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷಕ ರತ್ನ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಸಂಗೀತ ಶರ್ಮ, ವಿಷಯ ಮಂಡಿಸಲಾಯಿತು.

ವಿಟ್ಲ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶಮನ್ .ಜೆ. ಶೆಟ್ಟಿ ರವರು 14 ವರ್ಷ ತುಂಬಿದ ಎಲ್ಲಾ ಹೆಣ್ಣು ಮಕ್ಕಳಿಗೆ ಸರ್ಕಾರದಿಂದ ಉಚಿತವಾಗಿ ನೀಡಲಾಗುವ ಹೆಚ್.ಪಿ.ವಿ ಲಸಿಕೆಯ ಬಗ್ಗೆ ಮಾಹಿತಿ ನೀಡಿದರು.ಆರೋಗ್ಯ ಸುರಕ್ಷಣಾಧಿ ಕಾರಿ ಜ್ಯೋತಿ ಮತ್ತು ಆಶಾ ಕಾರ್ಯಕರ್ತೆ ಕೋಮಲಾಕ್ಷಿಯವರು ಸಹಕರಿಸಿದರು.

ಮಜಿ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕಿ ಸುನೀತ ಉಪಸ್ಥಿತರಿದ್ದರು. ಶಾಲಾ ಮಕ್ಕಳು ಪ್ರಾರ್ಥಿಸಿ, ಕಲ್ಲಡ್ಕ ಕ್ಲಸ್ಟರ್ ಸಿಆರ್‌ಪಿ ಜ್ಯೋತಿ ಸ್ವಾಗತಿಸಿ, ಮಜಿ ಶಾಲಾ ಮುಖ್ಯ ಶಿಕ್ಷಕಿ ಬೆನೆಡಿಕ್ಟಾ ಆಗ್ನೇಸ್ ಮೆಂಡೋನ್ಸಾ ವಂದಿಸಿದರು. ಸಹ ಶಿಕ್ಷಕ ತೌಸೀಫ್ ಅಹಮದ್ ಕಾರ್ಯಕ್ರಮ ನಿರೂಪಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಇಂದುಶೇಖರ್ ಕಾರ್ಯಕ್ರಮಕ್ಕೆ ಸಹಕರಿಸಿದರು.



ಸೇವಾ ನಿವೃತ್ತಿ ಹೊಂದಲಿರುವ ಬೆಳ್ತಂಗಡಿ ತಾ.ಪಂ. ಅಧೀಕ್ಷಕ ಡಿ. ಪ್ರಶಾಂತ್ ಬಳಂಜ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಪಂಚ ಗ್ಯಾರಂಟಿ ಯೋಜನೆಯ ತಾಲೂಕು ಸಮಿತಿಯ ಅಧ್ಯಕ್ಷ ಪದ್ಮನಾಭ ಸಾಲ್ಯಾನ್, ಸದಸ್ಯರಾದ ಸೌಮ್ಯ ಲಾಯಿಲ, ಮೆರಿಟಾ ಪಿಂಟೋ, ವೀರಪ್ಪ ಮೊಯ್ಲಿ ವಾಸುದೇವ ರಾವ್, ವಿಜಯಗೌಡ ಬೆಳಾಲು, ಶರೀಫ್ ಸಬರಬೈಲ್, ಕೆ.ನೇಮಿರಾಜ್ ಕಿಲ್ಲೂರು, ವಂದನಾ, ಸತೀಶ್ ಹೆಗ್ಡೆ ಕೇಶವ ನಾಯ್ಕ್, ನೋಡೆಲ್ ಅಧಿಕಾರಿ ಹೆರಾಲ್ಡ್ ಸಿಕ್ವೇರ ಉಪಸ್ಥಿತರಿದ್ದರು.



ಬಂಟ್ವಾಳದ ವೀರಕಂಬ ಗ್ರಾಮ ಅರಣ್ಯ ಸಮಿತಿ ಹೊಸ ನಿರ್ವಹಣಾ ಸಮಿತಿ ರಚಿಸಲಾಗಿದ್ದು, ಮುಂದಿನ ಐದು ವರ್ಷಗಳ ಕಾಲಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ನಡೆಸಲಾಗಿದೆ. ನೂತನ ಅಧ್ಯಕ್ಷರಾಗಿ ವಿಶ್ವನಾಥ ಎಂ. ಅವರು ಪುನರಾಯ್ಕೆಯಾಗಿದ್ದಾರೆ. ಸಮಿತಿ ಸದಸ್ಯರಾಗಿಎಂ. ಆರ್.ನೋಣಯ್ಯ, ರೇವತಿ, ಅಬ್ದುಲ್ ಖಾದರ್, ಮೀನಾಕ್ಷಿ, ಸಂತೋಷ್ ಕಲ್ಲಲೆ, ಬೇಬಿ ಜೆ.ಆಳ್ವ, ಚಂದ್ರಶೇಖರ ಬಂಗೇರ,ಜಯಪ್ರಸಾದ್ ಶೆಟ್ಟಿ, ಗಿರಿಜಾ,ತೇಜಾಕ್ಷಿ ಅವರು ಆಯ್ಕೆಯಾಗಿದ್ದಾರೆ. ವಿಟ್ಲ ಕಂದಾಯ ನಿರೀಕ್ಷಕ ಎಂ.ಎಸ್.ರವಿ, ಅರಣ್ಯ ಇಲಾಖೆಯ ಉಪವಲಯ ಅರಣ್ಯಾಧಿಕಾರಿ ರವಿರಾಜ್ ಬಿ. ಗಸ್ತು ಅರಣ್ಯ ಪಾಲಕರಾದ ಶೋಭಿತ್ ಕುಮಾರ್, ದಯಾನಂದ, ರಾಘವೇಂದ್ರ, ಅರಣ್ಯ ವೀಕ್ಷಕ ಕಿರಣ್,ಪ್ರವೀಣ್ ಇದ್ದರು.

ಶ್ರೀರಾಮಾಂಜನೇಯ ವ್ಯಾಯಾಮ ಶಾಲೆಯಲ್ಲಿ ಒಂದು ಲಕ್ಷ ಶ್ರೀರಾಮ ತಾರಕ ಯಾಗ | ಡಾ. ಪ್ರಭಾಕರ್ ಭಟ್ ಆಶಯ

ಶ್ರೀ ರಾಮತಾರಕ ಯಜ್ಞದಿಂದ ಹಿಂದೂ ಸಮಾಜವನ್ನು ಒಗ್ಗೂಡಿಸಲು ಸಾಧ್ಯ



ಬಂಟ್ವಾಳ: ಶ್ರೀರಾಮ ನವಮಿಯ ಪ್ರಯುಕ್ತ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಶ್ರೀರಾಮ ತಾರಕ ಯಾಗ ಬಿ.ಸಿ.ರೋಡಿನ ಕಾಮಾಜೆ ದೈಪಲದ ಶಿವಾಜಿನಗರದಲ್ಲಿರುವ ಶ್ರೀರಾಮಾಂಜನೇಯ ವ್ಯಾಯಾಮ ಶಾಲೆ, ಶ್ರೀ ರಾಮ ಭಜನಾ ಮಂದಿರ ಟ್ರಸ್ಟ್ ವತಿಯಿಂದ ಶುಕ್ರವಾರ ಸಂಭ್ರಮ, ಸಡಗರದಿಂದ ನೆರವೇರಿತು.

ಮಂದಿರದ ವತಿಯಿಂದ 15ನೇ ವರ್ಷದ ಕಾರ್ಯಕ್ರಮದ ನಿಮಿತ್ತವಾಗಿ ವೇದಮೂರ್ತಿ ಶ್ರೀ ರಾಜಗೋಪಾಲಾಚಾರ್ಯರ ನೇತೃತ್ವದಲ್ಲಿ ನಡೆದ ಒಂದು ಲಕ್ಷ ಶ್ರೀರಾಮ ತಾರಕ ಯಾಗದಲ್ಲಿ ಅಪಾರ ಸಂಖ್ಯೆಯಲ್ಲಿ ಭಾಗವಹಿಸುವಿಕೆ ವಿಶೇಷ ಮೆರುಗು ಪಡೆದುಕೊಂಡಿತಲ್ಲದೆ ಪೂಜೆ, ಯಾಗ, ಭಜನೆಗಳೊಂದಿಗೆ ಮಂದಿರ ವಾತಾವರಣವೇ ಭಕ್ತಿಯ ಪರಕಾಷ್ಠೆಯಲ್ಲಿ ತೇಲಿತು.

ಇದಕ್ಕೂ ಮೊದಲು ದೇವತಾ ಪ್ರಾರ್ಥನೆ, ಆದ್ಯ ಗಣ ಯಾಗ, ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ, ಮಧ್ಯಾಹ್ನ ಮಹಾಪೂಜೆಯ ಬಳಿಕ ಅನ್ನಸಂತರ್ಪಣೆಯು ನೆರವೇರಿತು.

ಯಾಗದ ಪೂರ್ಣಾಹುತಿಯಲ್ಲಿ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಭಾಗವಹಿಸಿ ಮಾತನಾಡಿ, ಜಾತಿ, ಭಾಷೆ,ಪಕ್ಷದ ಹೆಸರಿನಲ್ಲಿ ಹಿಂದೂ ಸಮಾಜವನ್ನು ದುರ್ಬಲಗೊಳಿಸುವ ಈ ಕಾಲಘಟ್ಟದಲ್ಲಿ ರಾಮತಾರಕ ಪವಿತ್ರ ಯಜ್ಞ ಹಿಂದೂ ಸಮಾಜವನ್ನು ಒಟ್ಟುಗೂಡಿಸಲು ಶಕ್ತಿ ತುಂಬಿದೆ ಎಂದರು.

ರಾಮ ಎನ್ನುವುದು ನಮ್ಮ ಸಂಸ್ಕೃತಿ, ಧರ್ಮ, ಸಮರ್ಪಣೆ, ಜೀವನ ಮೌಲ್ಯ, ಅಸ್ಮಿತೆಯಾಗಿದ್ದಲ್ಲದೇ ಲೋಕ ಕಂಟಕ ಶಕ್ತಿಗಳಿಗೆ ವಿನಾಶಕನೂ ಆಗಿದ್ದಾನೆ ಎಂದು ಡಾ. ಭಟ್ ಅವರು ನಮ್ಮ ದೇಶದ ಮಣ್ಣು ಅತ್ಯಂತ ಪವಿತ್ರವಾದದ್ದು, ನಾವು ಮಾಡುವಂತಹ ಪ್ರತಿಯೊಂದು ಉತ್ತಮ ಕಾರ್ಯವು ದೇಶದ ಹಿತದೃಷ್ಟಿಯಿಂದಿರಬೇಕು, ದೇಶಕ್ಕೆ ಒಳಿತಾಗುವಂತಹ ಕಾರ್ಯಕ್ಕೆ ನಾವು ಸದಾ ಸಜ್ಜಾಗಿರಬೇಕು ಎಂದರು.

ಸ್ವದೇಶಿ ವಸ್ತುಗಳ ಬಳಕೆಗೆ ಹೆಚ್ಚು ಆದ್ಯತೆ ನೀಡುವಂತೆ ಕರೆ ನೀಡಿದ ಅವರು, ಸಂಘಟಿತ ಶಕ್ತಿಯ ಮೂಲಕ ಸಮಾಜದ ಬಲವರ್ಧನೆ ಸಾಧ್ಯ ಎಂದು ತಿಳಿಸಿದರು.

ಉದ್ಯಮಿ ಸಂದೇಶ್ ಶೆಟ್ಟಿ ಅರೆಬೆಟ್ಟು,ಸಂಸ್ಕಾರ ಭಾರತಿ ಉಪಾಧ್ಯಕ್ಷ ಅನಿಲ್ ಪಂಡಿತ್ ,ಮಾಜಿ ಪುರಸಭಾ ಸದಸ್ಯ ಗೋಪಾಲ ಸುವರ್ಣ, ಭಾಸ್ಕರ ಟೈಲರ್, ಶೋಭಾ ಹರೀಶಚಂದ್ರ, ನ್ಯಾಯವಾದಿ ಅಶ್ವನಿಕುಮಾರ್ ರೈ ಮೊದಲಾದ ಗಣ್ಯರು ಆಗಮಿಸಿ, ದೇವರ ಪ್ರಸಾದ ಸ್ವೀಕರಿಸಿದರು.

ಮಂದಿರದ ಗೌರವಾಧ್ಯಕ್ಷ ನೇಮಿರಾಜ ಶೆಟ್ಟಿ ಅಧ್ಯಕ್ಷ ಕೇಶವ ದೈಪಲ, ಸಮಿತಿ ಉಪಾಧ್ಯಕ್ಷ ಚಂದಪ್ಪ ರಾಜೀವಪಲ್ಕೆ, ಪ್ರಮುಖರಾದ ನಾರಾಯಣ ಮಾಸ್ಟರ್ ರಾಜೀವಪಲ್ಕೆ, ಅಶೋಕ್ ಕಾಮಾಜೆ, ಮಹಿಳಾ ಸಮಿತಿ ಅಧ್ಯಕ್ಷೆ ವಾಣಿ ಕೇಶವ,ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸಂಜೆ 18 ದಿನಗಳ ನಗರ ಭಜನೆಯ ಮಂಗಲೋತ್ಸವ, ರಾತ್ರಿ ದೇವರ ಮಹಾಪೂಜೆಯ ಬಳಿಕ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಬಾಲಗೋಕುಲ ಮಕ್ಕಳಿಂದ ಕುಣಿತ ಭಜನೆ,ವಿವಿಧ ವಿನೋದಾವಳಿಗಳು ಹಾಗೂ ಭಕ್ತಿಪ್ರಧಾನ ಪೌರಾಣಿಕ ನಾಟಕ ಪ್ರದರ್ಶನಗೊಂಡಿತು.

ಸುತ್ತ ಮುತ್ತ

ಎಡರಂಗ ಪ್ರಚಾರದ ಬೋರ್ಡ್‌ಗೆ ಹಾನಿ: ದೂರು

ಕಾಸರಗೋಡು: ಉದುಮ ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ಮೈಲಾಟಿ ರಾಷ್ಟ್ರೀಯ ಹೆದ್ದಾರಿ ಬಳಿ ಸ್ಥಾಪಿಸಲಾಗಿದ್ದ ಎಡರಂಗದ ಚುನಾವಣಾ ಪ್ರಚಾರ ಬೋರ್ಡ್‌ನ್ನು ದುಷ್ಕರ್ಮಿಗಳು ಹಾನಿಗೊಳಿಸಿದ್ದಾರೆ. ಇದೇ ಜಾಗದಲ್ಲಿ ಈ ಹಿಂದೆ ಸ್ಥಾಪಿಸಲಾಗಿದ್ದ ಎಡರಂಗದ ಚುನಾವಣಾ ಪ್ರಚಾರ ಬೋರ್ಡ್‌ನ್ನು ದುಷ್ಕರ್ಮಿಗಳು ಹಾನಿಗೊಳಿಸಿದ್ದರು. ಆದ್ದರಿಂದ ಅದನ್ನು ಬದಲಾಯಿಸಿ ಕಳೆದ ಬುಧವಾರ ಮತ್ತೆ ಹೊಸ ಬೋರ್ಡ್ ಸ್ಥಾಪಿಸಲಾಗಿತ್ತು. ಅದನ್ನು ಹಾನಿಗೊಳಿಸಲಾಗಿದೆ. ಈ ಬಗ್ಗೆ ಸಿಪಿಎಂನ ಪನೆಯಾಲ್ ಲೋಕಲ್ ಕಾರ್ಯದರ್ಶಿ ಒ.ನಾರಾಯಣನ್ ಬೇಕಲ ಪೊಲೀಸರಿಗೆ ದೂರು ನೀಡಿದ್ದು, ಅದರಂತೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಪನೆಯಾಲ್‌ನ ಇತರ ಹಲವು ಭಾಗಗಳಲ್ಲಿ ಎಡರಂಗದ ಚುನಾವನಾ ಪ್ರಚಾರ ಕಾರ್ಯಕ್ರಮಗಳನ್ನು ಅಲ್ಲೋಲ ಕಲ್ಲೋಲ ನಡೆಸುವ ಯತ್ನವೂ ನಡೆದಿದೆಯೆಂದು ಸಿಪಿಎಂ ನೇತಾರರು ಆರೋಪಿಸಿದ್ದಾರೆ.

ನಾಳೆ ಕಾಞಂಗಾಡು ನಗರಸಭೆ ನಗದು ಕೌಂಟರ್ ರಾತ್ರಿ 7 ವರೆಗೆ ಓಪನ್

ಕಾಸರಗೋಡು: ತೆರಿಗೆ ಸಂಗ್ರಹವನ್ನು ತ್ವರಿತಗೊಳಿಸುವ ಭಾಗವಾಗಿ ಕಟ್ಟಡ ತೆರಿಗೆ ಮತ್ತು ಉದ್ಯೋಗ ತೆರಿಗೆಯನ್ನು ಪಾವತಿಸಲು ಕಾಞಂಗಾಡು ನಗರಸಭೆ ಕಚೇರಿಯಲ್ಲಿನ ನಗದು ಕೌಂಟರ್ ಮಾ.30 ರಂದು ರಾತ್ರಿ 7 ರ ವರೆಗೆ ತೆರೆದಿರುತ್ತದೆ ಎಂದು ಕಾಞಂಗಾಡು ನಗರಸಭೆ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಮಾರು ಕ್ಷೇತ್ರ: ನಾಳೆ ಶ್ರೀ ಸತ್ಯನಾರಾಯಣ ಪೂಜೆ

ಬದಿಯಡ್ಕ: ಕಾರ್ಮಾರು ಶ್ರೀ ಮಹಾವಿಷ್ಣು ದೇವಾಲಯದಲ್ಲಿ ಮಾ.30ರಂದು ಮಧ್ಯಾಹ್ನ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರ ದಿವ್ಯ ಉಪಸ್ಥಿತಿಯೊಂದಿಗೆ ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ನೇತೃತ್ವದಲ್ಲಿ ಜರಗಲಿದೆ. ಸಂಜೆ 6.30 ರಿಂದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯವರಿಂದ ವೀರ ಅಭಿಮನ್ಯು ಗದಾಯುದ್ಧ ಗಿರಿಜಾ ಕಲ್ಯಾಣ ಎಂಬ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.

ಏ.1ರಂದು ಖಜಾನೆ ವಹಿವಾಟು ಇರುವುದಿಲ್ಲ

ಕಾಸರಗೋಡು: ಏಪ್ರಿಲ್ 1ರಂದು ಯಾವುದೇ ಖಜಾನೆ ವಹಿವಾಟು ಇರುವುದಿಲ್ಲ ಎಂದು ಕಾಸರಗೋಡು ಜಿಲ್ಲಾ ಖಜಾನೆ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನವೀಯತೆ ಮೇಲೆ ಯುದ್ಧ: ವಿಚಾರ ಸಂಕಿರಣ

ಕಾಸರಗೋಡು: ಪ್ರಗತಿಶೀಲ ಕಲಾ ಮತ್ತು ಸಾಹಿತ್ಯ ಸಂಘ ಕಾಸರಗೋಡು ಪ್ರದೇಶ ಸಮಿತಿ ಹಾಗೂ ಇಎಂಎಸ್ ಸ್ಮಾರಕ ಗ್ರಂಥಾಲಯ ನುಳ್ಳಿಪ್ಪಾಡಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಮಾನವೀಯತೆ ಮೇಲೆ ಯುದ್ಧ ಎಂಬ ವಿಷಯದ ಕುರಿತು ಸಮಗ್ರ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಪಿಲಿಕುಂಜೆ ಜಿಲ್ಲಾ ಗ್ರಂಥಾಲಯ ಸಭಾಂಗಣದಲ್ಲಿ ಶನಿವಾರ ನಡೆದ ಈ ವಿಚಾರ ಸಂಕಿರಣವನ್ನು ರವೀಂದ್ರನ್ ಕೊಡಕ್ಕಾಡ್ ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಾಲಕೃಷ್ಣನ್ ಚೆರ್ಕಳ, ಪಿ.ದಾಮೋದರನ್, ಎ.ಎಸ್.ಮುಹಮ್ಮದ್ ಕುಂಞ, ರಹಮಾನ್ ಮುಟ್ಟತ್ತೋಡಿ, ಕೆ.ವಿ.ಗೋವಿಂದನ್ ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಆಶ್ರಫ್ ಅಲಿ ಚೇರಂಗೈ, ಪುಷ್ಪಾಕರನ್ ಬೆಂಡಿಚ್ಚಾಲ್, ಕೆ.ಎಚ್.ಮಹಮ್ಮದ್ ಚರ್ಚೆಯಲ್ಲಿ ಭಾಗವಹಿಸಿದ್ದರು. ಬಿ.ಕೆ.ಸುಕುಮಾರನ್ ಸ್ವಾಗತಿಸಿ, ರವಿ ಬಂದಡ್ಕ ವಂದಿಸಿದರು.



ಪುಳಿಕುತ್ತಿ ಐಲ ಬ್ರಹ್ಮ ಶ್ರೀ ಮೊಗೇರ ಮಹಾಕಾಳಿ ದೈವಸ್ಥಾನದಲ್ಲಿ ನಡೆಯುತ್ತಿರುವ ವರ್ಷಾವಧಿ ನೇಮದ ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ರಾತ್ರಿ ನಡೆದ ಶ್ರೀ ಮಹಾಕಾಳಿ ದೈವದ ನೇಮ ಜರಗಿತು.

ಮಂಜೇಶ್ವರ ಮಂಡಲದ ವಿವಿಧೆಡೆ ಚುನಾವಣಾ ಸಮಾವೇಶ | ತಿರುವನಂತಪುರ ಮೇಯರ್ ಭರವಸೆ

ಗೆಲುವು ಸಾಧಿಸಿದರೆ 3 ತಿಂಗಳೊಳಗೆ ವಸತಿ ರಹಿತರಿಗೆ ಸೂರು







ಮಂಜೇಶ್ವರ: ಕೇರಳ ವಿಧಾನಸಭಾ ಚುನಾವಣೆಯ ಅಂಗವಾಗಿ ಮಂಜೇಶ್ವರ ವಿಧಾನಸಭಾ ಕ್ಷೇತ್ರಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಗೆಲುವು ಸಾಧಿಸಿದರೆ ಫಲಿತಾಂಶ ಪ್ರಕಟಗೊಂಡು 3 ತಿಂಗಳೊಳಗೆ ಮಂಡಲ ವ್ಯಾಪ್ತಿಯ ಎಲ್ಲಾ ವಸತಿ ರಹಿತರಿಗೆ ಸೂರು ಒದಗಿಸುವುದಾಗಿ ತಿರುವನಂತಪುರ ಮಹಾನಗರ ಪಾಲಿಕೆ ಮೇಯರ್ ವಿ.ವಿ.ರಾಜೇಶ್ ಮಹತ್ವದ ಘೋಷಣೆ ಮಾಡಿದ್ದಾರೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಪ್ರಚಾರಾರ್ಥವಾಗಿ ಮಂಡಲ ವ್ಯಾಪ್ತಿಯ ವಿವಿಧೆಡೆ ಆಯೋಜಿಸಲಾಗಿದ್ದ ಬೃಹತ್ ಚುನಾವಣಾ ಸಮಾವೇಶಗಳಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಂಜೇಶ್ವರ ಮಂಡಲ ಎಲ್ಲಾ ವಲಯಗಳಲ್ಲೂ ಸಂಪೂರ್ಣ ಹಿನ್ನಡೆ ಅನುಭವಿಸುತ್ತಿದೆ. ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳ ಕನ್ನಡಿಗರು ಅತಂತ್ರರಾಗಿದ್ದಾರೆ. ಈ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಆಯ್ಕೆಯಾದ ಶಾಸಕರು ಕನ್ನಡಿಗರ ಬಗ್ಗೆ ಯಾವುದೇ ಮಹತ್ತರ ನಿರ್ಣಯ ಕೈಗೊಳ್ಳಲಿಲ್ಲ ಎಂದು ಅವರು ವಿವರಿಸಿದರು.

ಮೇಯರ್ ವಿ.ವಿ.ರಾಜೇಶ್ ಎನ್‌ಡಿಎ ಚುನಾವಣಾ ಕಚೇರಿಯಾದ ಸೋಂಕಾಲಿನಲ್ಲಿ ಹಮ್ಮಿಕೊಳ್ಳಲಾಗಿದ್ದ ತ್ರಿಸ್ತರ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದ ಬಿಜೆಪಿ ಅಭ್ಯರ್ಥಿಗಳ ಸಮಾವೇಶವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್, ಮಂಗಳೂರು ಉತ್ತರ ಶಾಸಕ ಡಾ.ವೈ.ಭರತ್ ಶೆಟ್ಟಿ ಸೇರಿದಂತೆ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಲ್ಲದೆ ಪೈವಳಿಕೆಯಲ್ಲಿ ಜರಗಿದ ಕಾರ್ಯಕರ್ತರ ಸಮಾವೇಶ ಹಾಗೂ ಕುಂಬಳೆ ಪೇಟೆಯಲ್ಲಿ ನಡೆದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಬೃಹತ್ ರೋಡ್ ಶೋ ಕಾರ್ಯಕ್ರಮ ಹಾಗೂ ವಿವಿಧ ಪಂ.ಗಳಲ್ಲಿ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಭೆಗಳಲ್ಲಿ ವಿ.ವಿ.ರಾಜೇಶ್ ಪಾಲ್ಗೊಂಡು ಮಾತನಾಡಿದರು.

> **ತಾಲೂಕಿಗೆ ಇನ್ನೂ ಸ್ವಂತ ಕಟ್ಟಡವೇ ಇಲ್ಲ**
>
> ಮಂಜೇಶ್ವರ ತಾಲೂಕು ರಚನೆಯಾಗಿ ಅನೇಕ ವರ್ಷಗಳು ಕಳೆದರೂ ಈ ತಾಲೂಕಿಗೆ ಇನ್ನೂ ಸ್ವಂತ ಕಟ್ಟಡ ನಿರ್ಮಿಸಲಾಗಿಲ್ಲ. ಈ ನಿಟ್ಟಿನಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದ ಮುಸ್ಲಿಂಲೀಗ್ ಶಾಸಕರು ಜನರಿಗೆ ಉತ್ತರಿಸಬೇಕಾಗಿದೆ.
>
> ● ಕೆ.ಸುರೇಂದ್ರನ್ , ಎನ್‌ಡಿಎ ಅಭ್ಯರ್ಥಿ

> **ಕಾಡುತ್ತಿದೆ ಮೂಲಭೂತ ಸೌಕರ್ಯದ ಕೊರತೆ**
>
> ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ಗ್ರಾ.ಪಂ.ಗಳಲ್ಲಿ ಇಂದಿಗೂ ಸಮರ್ಪಕವಾಗಿ ಕುಡಿಯುವ ನೀರು ಲಭಿಸುತ್ತಿಲ್ಲ. ಆದೆಷ್ಟೋ ಕುಟುಂಬಗಳು ಮನೆಯಿಲ್ಲದೆ ಸಂಕಷ್ಟ ಅನುಭವಿಸುತ್ತಿವೆ. ಕೆಲವೆಡೆ ರಸ್ತೆ ಸಂಪರ್ಕ ಸಮರ್ಪಕವಾಗಿಲ್ಲ. ಮಾತ್ರವಲ್ಲದೆ ಮೂಲಭೂತ ಸೌಕರ್ಯಗಳ ಕೊರತೆ ಈ ಮಂಡಲದಲ್ಲಿ ಎದ್ದು ಕಾಣುತ್ತಿದೆ. ಇದೆಲ್ಲದಕ್ಕೂ ಒಂದೇ ಉತ್ತರ ಅಂದರೆ ಕೆ. ಸುರೇಂದ್ರನ್ ಅವರನ್ನು ವಿಧಾನಸಭೆಗೆ ಆರಿಸಿ ಕಳುಹಿಸುವುದಾಗಿದೆ. ಈ ನಿಟ್ಟಿನಲ್ಲಿ ಕಾರ್ಯಕರ್ತರು ಶಕ್ತಿಮೀರಿ ಶ್ರಮಿಸುತ್ತಿದ್ದಾರೆ. ಇದರೊಂದಿಗೆ ಪ್ರತೀ ಮನೆಗಳನ್ನು ಭೇಟಿಯಾಗಿ ಮತಯಾಚನೆ ನಡೆಸಬೇಕು.
>
> ● ರಾಜೇಶ್ , ತಿರುವನಂತಪುರ ಮೇಯರ್

ಐಕ್ಯರಂಗ ಒಕ್ಕೂಟದ ಕೈವಾಡವಿದೆ

ಎಸ್‌ಡಿಪಿಐ ಅಭ್ಯರ್ಥಿ ನಾಮಪತ್ರ ಹಿಂತೆಗೆದ ವಿಚಾರದಲ್ಲಿ ಐಕ್ಯರಂಗ ಒಕ್ಕೂಟದ ಕೈವಾಡವಿದೆ. ಈ ಬಗ್ಗೆ ಐಕ್ಯರಂಗದ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್‌ಗೆ ಬಹಿರಂಗ ಹೇಳಿಕೆ ನೀಡಲು ಸಾಧ್ಯವಿದೆಯೇ ಎಂದು ಅವರು ಪ್ರಶ್ನಿಸಿದರು. ಕೇವಲ ಕೋಮುಭಾವನೆ ಕೆರಳಿಸುವುದು ಮಂಜೇಶ್ವರ ಶಾಸಕರ ಅಜೆಂಡಾವಾಗಿದೆ. ಯಾವ ಕಾರಣಕ್ಕಾಗಿ ಕನ್ನಡಿಗರ ಹಕ್ಕು, ಸ್ವಾತಂತ್ರ್ಯ, ಸವಲತ್ತುಗಳು ಸಂರಕ್ಷಣೆ ಯಾಗಿಲ್ಲ ಹಾಗೂ ಮಂಜೇಶ್ವರ ಮಂಡಲದ ಸಮಗ್ರ ಅಭಿವೃದ್ಧಿ ಯಾಕಾಗಿ ಆಗಿಲ್ಲ ಮಾತ್ರವಲ್ಲದೆ ಆರೋಗ್ಯ, ಶಿಕ್ಷಣ, ಉದ್ಯೋಗ ಕ್ಷೇತ್ರಗಳು ಏತಕ್ಕಾಗಿ ಪ್ರಗತಿ ಹೊಂದಿಲ್ಲ ಎಂಬುದನ್ನು ಮುಸ್ಲಿಂಲೀಗ್ ಶಾಸಕರು ಮತದಾರರಿಗೆ ವಿವರಿಸಬೇಕಾಗಿದೆ ಎಂದು ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಸವಾಲೆಸೆದರು.

ತ್ಯಾಜ್ಯ ಹಾಕುವವರಿಗೆ ಬೀಳಲಿದೆ ದಂಡ: ಕಣ್ಗಾವಲಿಡಲಿದೆ ಸೋಲಾರ್ ಕ್ಯಾಮರಾ

ಕುಂಬಳೆ: ಕುಂಬಳೆಯಿಂದ ಸೀತಾಂಗೋಳಿ – ಬದಿಯಡ್ಕ ಮೂಲಕ ಮುಳ್ಳೇರಿಯಕ್ಕೆ ತೆರಳುವ ರೂಟ್‌ನಲ್ಲಿ ಶಾಂತಿಪಳ್ಳದಿಂದ ಭಾಸ್ಕರನಗರವರೆಗಿನ ರಸ್ತೆ ಬದಿಗಳಲ್ಲಿ ಮಾಲಿನ್ಯ ತಂದೆಸೆಯುವವರು ಇನ್ನು ಮುಂದೆ ಜಾಗರೂಕತೆ ವಹಿಸದಿದ್ದರೆ ಸಂಕಷ್ಟ ಎದುರಾಗಲಿದೆ. ಈ ಭಾಗದಲ್ಲಿ ರಸ್ತೆ ಬದಿಗಳಲ್ಲಿ ತ್ಯಾಜ್ಯ ಎಸೆಯುತ್ತಿರುವ ಹಿನ್ನಲೆಯಲ್ಲಿ ನವೋದಯ ಫ್ರೆಂಡ್ಸ್ ಕ್ಲಬ್‌ನ ವತಿಯಿಂದ ಆಧುನಿಕ ಮಾದರಿಯ ಸೋಲಾರ್ ಕ್ಯಾಮರಾ ಸ್ಥಾಪಿಸಿ ಹದ್ದಿನ ಕಣ್ಣಿರಿಸಲಾಗಿದೆ.



ಶಾಂತಿಪಳ್ಳದಿಂದ ಭಾಸ್ಕರನಗರ ತನಕದ ರಸ್ತೆ ಬದಿಗಳಲ್ಲಿ ಕ್ಲಬ್ ನೇತೃತ್ವದಲ್ಲಿ ಕ್ಯಾಮರಾ ಅಳವಡಿಸಲಾಗಿದ್ದು, ತ್ಯಾಜ್ಯ ತಂದೆಸೆಯುವವರು ಇದರಲ್ಲಿ ಸಿಲುಕುವ ಸಾಧ್ಯತೆಯಿದೆ. ರಸ್ತೆ ಬದಿಗಳನ್ನು ಕ್ಲಬ್ ಸದಸ್ಯರು ಇತ್ತೀಚೆಗೆ ಸಂಪೂರ್ಣವಾಗಿ ಶುಚಿಗೊಳಿಸಿದ್ದರು. ಅಲ್ಲದೆ ಎರಡು ಬಾರಿ ತ್ಯಾಜ್ಯ ತಂದೆಸೆದವರನ್ನು ಸೆರೆಹಿಡಿದು ದಂಡ ವಸೂಲಿ ಮಾಡಲಾಗಿತ್ತು. ಆದರೂ ತ್ಯಾಜ್ಯವನ್ನು ಈ ಪ್ರದೇಶದಲ್ಲಿ ಎಸೆಯುತ್ತಿರುವುದು ವಿಪರೀತಗೊಂಡ ಕಾರಣ ಕ್ಲಬ್‌ನಿಂದ ತನ್ನ ಸ್ವಂತ ವೆಚ್ಚದಲ್ಲಿ ಸೋಲಾರ್ ಕ್ಯಾಮರಾ ಸ್ಥಾಪಿಸಲಾಯಿತು.

> **ಎಚ್ಚರಿಕೆ**
>
> ಕೆಲವು ಕಡೆಗಳ ರಹಸ್ಯ ಸ್ಥಳಗಳಲ್ಲಿ ಕ್ಯಾಮರಾವಿದ್ದು ಮಾಲಿನ್ಯ ಎಸೆಯುವವರು ಇದರಲ್ಲಿ ಸೆರೆಯಾಗಿ ಮತ್ತೆ ಕಾನೂನಿನ ಕುಣಿಕೆಗೆ ಸಿಲುಕಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಇನ್ನಾದರೂ ಸಾರ್ವಜನಿಕ ಮತ್ತು ಖಾಸಗಿ ಪ್ರದೇಶಗಳ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರು ಗರಿಷ್ಠ ಎಚ್ಚರಿಕೆ ವಹಿಸುವುದೊಳಿತು. ಇಲ್ಲವಾದಲ್ಲಿ ಕಾನೂನು ಕ್ರಮಗಳಿಗೆ ಒಳಗಾಗಬೇಕಾದೀತು. ಮಾತ್ರವಲ್ಲದೆ ಸ್ವಚ್ಛ ನಾಡು ಎಂಬ ಧ್ಯೇಯದೊಂದಿಗೆ ಮುಂದುವರಿಯಬೇಕಾಗಿದೆ.

ಕಸಬಾ ಕಡಪ್ಪುರದಲ್ಲಿ ಬೀಚ್ ಫುಟ್‌ಬಾಲ್: ಯಶಸ್ಸಿಗೆ ಸಂಘಟನಾ ಸಮಿತಿಯ ರಚನೆ



ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಸ್ವೀಪ್ ಅಭಿಯಾನದ ಪ್ರಯುಕ್ತ ಕಾಸರಗೋಡು ಜಿಲ್ಲಾಡಳಿತದ ನೇತೃತ್ವದಲ್ಲಿ ಆಯೋಜಿಸಿರುವ ಬೀಚ್ ಫುಟ್‌ಬಾಲ್ ಪಂದ್ಯಾವಳಿಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ.

ಏಪ್ರಿಲ್ 2ರಂದು ಸಂಜೆ 4 ಗಂಟೆಗೆ ಕಾಸರಗೋಡು ಕಸಬಾ ಕಡಪ್ಪುರದಲ್ಲಿ ಜರಗಲಿರುವ ಈ ಕ್ರೀಡಾಕೂಟದ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ಸಂಘಟನಾ ಸಮಿತಿ ರಚಿಸಲಾಗಿದೆ. ಕಾಸರಗೋಡು ಕುಟುಂಬಶ್ರೀ ಸಿಡಿಎಸ್ ಅಧ್ಯಕ್ಷೆ ಆಯೇಷಾ ಸಮಿತಿ ರಚನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸ್ವೀಪ್ ಸಹಾಯಕ ನೋಡಲ್ ಅಧಿಕಾರಿ ಡಿ.ಹರಿದಾಸ್ ಪಾಲ್ಗೊಂಡು ಯೋಜನೆಯನ್ನು ವಿವರಿಸಿದರು.

ಏಪ್ರಿಲ್ 2 ರಂದು ಜಿಲ್ಲಾ ಚುನಾವಣಾಧಿಕಾರಿ ಜಿಲಾಧಿಕಾರಿ ಅರ್ಜುನ್ ಪಾಂಡ್ಯನ್ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ಕುಟುಂಬಶ್ರೀ ಸಿಡಿಎಸ್, ಎಡಿಎಸ್ ಸದಸ್ಯೆಯರು ಮತ್ತು ವಿವಿಧ ಕ್ರೀಡಾ ಕ್ಲಬ್‌ಗಳ ಪ್ರತಿನಿಧಿಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ.

ಸ್ವೀಪ್ ನೋಡಲ್ ಅಧಿಕಾರಿ ಕೆ.ರತೀಶ್ ಕುಮಾರ್ ನೇತೃತ್ವದ ಈ ಸಮಿತಿಯಲ್ಲಿ ಅವರು ಜನರಲ್ ಕನ್ವೀನರ್ ಆಗಿದ್ದಾರೆ. ಅಧ್ಯಕ್ಷೆಯಾಗಿ ಆಯೇಷಾ, ಕಾರ್ಯಾಧ್ಯಕ್ಷರಾಗಿ ಮನು ಮತ್ತು ಅನುಶ್ರೀ ಅವರನ್ನು ಆರಿಸಲಾಗಿದೆ. ಕಾರ್ಯಕ್ರಮ ಸಮಿತಿಯಲ್ಲಿ ಶೈಲಾ ಸಂಚಾಲಕಿಯಾಗಿದ್ದು, ಅಜಿತ್, ಸೇತು, ವಿಪಿನ್, ಶಿಬು ಮತ್ತು ರತೀಶ್ ಅವರು ಇತರ ಪದಾಧಿಕಾರಿಗಳಾಗಿ ಆಯ್ಕೆಯಾದರು. ಮನು ಮತ್ತು ಅನುಶ್ರೀ ವಿವಿಧ ವಿಷಯಗಳ ಕುರಿತು ಮಾತನಾಡಿದರು. ಶೈಲಾ ಸ್ವಾಗತಿಸಿ, ವಂದಿಸಿದರು.

> **ಶೇ.100 ಮತದಾನ ಜಿಲ್ಲಾಡಳಿತದ ಗುರಿ**
>
> ಮತದಾನದ ಹಕ್ಕುಗಳ ಮಹತ್ವವನ್ನು ಜನರಿಗೆ ತಿಳಿಸಲು ಕ್ರೀಡೆ ಮತ್ತು ಮನರಂಜನೆಯನ್ನು ಬಳಸಿಕೊಳ್ಳುವ ವಿಭಿನ್ನ ಪ್ರಚಾರ ಕಾರ್ಯಕ್ರಮಗಳನ್ನು ಸ್ವೀಪ್ ಆಶ್ರಯದಲ್ಲಿ ನಡೆಸಲಾಗುತ್ತಿದೆ. ಈ ಮೂಲಕ ಶೇ.100ರಷ್ಟು ಮತದಾನ ವಾಗುವಂತೆ ನೋಡಿಕೊಳ್ಳುವುದು ಜಿಲ್ಲಾಡಳಿತದ ಗುರಿಯಾಗಿದೆ.

ದೇವಳ ಜೀರ್ಣೋದ್ಧಾರದಿಂದ ಮನುಷ್ಯನ ಜೀವನ ಸಾರ್ಥಕತೆ: ಬ್ರಹ್ಮಶ್ರೀ ಗಣೇಶ ತಂತ್ರಿ



ಬದಿಯಡ್ಕ: ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವುದರಿಂದ ಮನುಷ್ಯನ ಜೀವನವು ಸಾರ್ಥಕತೆ ಪಡೆದು ಪರಿಪೂರ್ಣವಾಗುತ್ತದೆ. ಎಲ್ಲರೂ ಕೈಬಿಟ್ಟ ಪರಿಸ್ಥಿತಿಯಲ್ಲಿ ನಮ್ಮನ್ನು ಉದ್ಧರಿಸುವುದು ದೇವತಾ ಶಕ್ತಿಗಳು ಮಾತ್ರ ಎಂದು ಪಾತೇರಿ ಕ್ಷೇತ್ರದಲ್ಲಿ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿ ಹೇಳಿದ್ದಾರೆ.

ಅವರು ಪಾತೇರಿ ಶ್ರೀ ಶಂಕರನಾರಾಯಣ ಕ್ಷೇತ್ರದಲ್ಲಿ ಗರ್ಭಗುಡಿ ಹಾಗೂ ನಮಸ್ಕಾರ ಮಂಟಪದ ನಿರ್ಮಾಣಕ್ಕಾಗಿ ಕರ್ನಾಟಕದ ಶಿಲ್ಪಿಗಳಿಂದ ವಿಶೇಷವಾಗಿ ಕೆತ್ತಲ್ಪಟ್ಟ ಕೃಷ್ಣಶಿಲೆ ಶ್ರೀ ಕ್ಷೇತ್ರಕ್ಕೆ ಆಗಮಿಸಿದ ಸಂದರ್ಭ ಆಶೀರ್ವಚನ ನೀಡಿ ಮಾತನಾಡಿದರು.

ಬೀಳುವವನನ್ನು ಮೇಲ್ಮಟ್ಟಕ್ಕೆ ಏರಿಸುವವನು ಪಾತೇರಿ ಶಂಕರನಾರಾಯಣ ದೇವರು. ಭಕ್ತರ ಮನಸ್ಸು ದೇವರಿಗೆ ಸಮರ್ಪಿತವಾಗಲು ಎಲ್ಲಾ ರೀತಿಯಲ್ಲೂ ವೇದಿಕೆ ಸಿದ್ಧಗೊಂಡಿದೆ. ಹೊಸ ಸಂವತ್ಸರದ ಪ್ರಾರಂಭದಲ್ಲಿ ವಿಘ್ನವಿನಾಶಕ ಗಣಪತಿಯ ಚತುರ್ಥಿ ದಿನವೇ ಜೀರ್ಣೋದ್ಧಾರ ಕಾರ್ಯಕ್ಕಿರುವ ಶಿಲೆಯು ಶ್ರೀ ಕ್ಷೇತ್ರಕ್ಕೆ ಆಗಮಿಸಿದೆ. ದೇವಾಲಯದ ಜೀರ್ಣೋದ್ಧಾರ ಕಾರ್ಯಗಳು ಆದಷ್ಟು ಬೇಗ ಪೂರ್ತಿಗೊಳಿಸಿ ಬ್ರಹ್ಮಕಲಶೋತ್ಸವವನ್ನು ನಡೆಸುವ ಸೌಭಾಗ್ಯವನ್ನು ಭಗವಂತನು ಕರುಣಿಸಲಿ ಎಂದು ಅವರು ಪ್ರಾರ್ಥಿಸಿದರು.

ಶ್ರೀ ಕ್ಷೇತ್ರಕ್ಕೆ ತಲುಪಿದ ದೇಲಂಪಾಡಿ ಗಣೇಶ ತಂತ್ರಿ ಹಾಗೂ ದೇಲಂಪಾಡಿ ಶ್ರೀಧರ ತಂತ್ರಿಗಳನ್ನು ಶ್ರೀ ಕ್ಷೇತ್ರದ ಮೊಕ್ತೇಸರರು, ಜೀರ್ಣೋದ್ಧಾರ ಸಮಿತಿ ಸದಸ್ಯರು, ಪದಾಧಿಕಾರಿಗಳು ಹಾಗೂ ಊರ ಪರವೂರ ಭಕ್ತರು ಪೂರ್ಣಕುಂಭ ಸ್ವಾಗತ ನೀಡಿ ಶ್ರೀ ಕ್ಷೇತ್ರಕ್ಕೆ ಬರಮಾಡಿಕೊಂಡರು. ಇದೇ ಸಂದರ್ಭದಲ್ಲಿ ಶ್ರೀ ಕ್ಷೇತ್ರದ ಬಗ್ಗೆ ಬರೆದ ಭಕ್ತಿಪೂರಿತವಾದ ಕವನವನ್ನು ಕಾಸರಗೋಡಿನ ಕಿಮ್ಸ್ ಆಸ್ಪತ್ರೆಯ ಪ್ರಖ್ಯಾತ ಮೂಳೆ ತಜ್ಞರಾಗಿದ್ದ ಡಾ.ಅನಂತ ಪದ್ಮನಾಭ ಭಟ್ ಅವರು ವಾಚಿಸಿದರು.

ಬಳಿಕ ಪಾತೇರಿ ಕ್ಷೇತ್ರದಲ್ಲಿ ನಡೆದ ಧಾರ್ಮಿಕ, ವೈದಿಕ ಕಾರ್ಯಕ್ರಮಗಳಲ್ಲಿ ನೂರಾರು ಭಕ್ತ ಜನರು ಉಪಸ್ಥಿತರಿದ್ದರು.

ಏ.10ರಂದು ಬಾಲಾಲಯ ಪ್ರತಿಷ್ಠೆ

ಏ.10ರಂದು ಶ್ರೀ ಕ್ಷೇತ್ರದಲ್ಲಿ ಅನುಜ್ಞಾ ಕಲಶ ಹಾಗೂ ಬಾಲಾಲಯ ಪ್ರತಿಷ್ಠೆ ಮುಂತಾದ ಕಾರ್ಯಕ್ರಮಗಳು ನಡೆಯಲಿವೆ ಎಂದು ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಸಮಿತಿ ತಿಳಿಸಿದೆ.

> **ಗೌರವ**
>
> ಶ್ರೀಕ್ಷೇತ್ರಕ್ಕೆ ಕೃಷ್ಣಶಿಲೆಯ ಆಗಮನದ ಸಂದರ್ಭ ಎ.ಪಿ.ಸರ್ಕಲ್‌ನ ಶ್ರೀ ಧರ್ಮಶಾಸ್ತಾ ಭಜನಾ ಮಂದಿರದಲ್ಲಿ ನಡೆದ ಪುಷ್ಪಾರ್ಚನಾ ಕಾರ್ಯಕ್ರಮಕ್ಕಿಂತ ಮೊದಲು ಕಗ್ಗಲ್ಲಿನ ಶಿಲ್ಪಿ ಉಪ್ಪಿನಂಗಡಿ ವಿಜಯ ಅವರನ್ನು ಶಾಲು ಹೊದೆಸಿ ಗೌರವಿಸಲಾಯಿತು.

ಯಕ್ಷಗಾನ ಕಲಾವಿದ ಗೋವಿಂದ ಭಟ್‌ಗೆ ಶ್ರದ್ಧಾಂಜಲಿ ಕಾರ್ಯಕ್ರಮ



ಕುಂಬಳೆ: ಶ್ರೀ ಧೂಮಾವತೀ ಯಕ್ಷಗಾನ ಕಲಾಸಂಘ ಅಮೆತ್ತೋಡು ದಂಡೆಗೋಳಿ ಇದರ ವತಿಯಿಂದ ಇತ್ತೀಚೆಗೆ ನಿಧನರಾದ ಹಿರಿಯ ಯಕ್ಷಗಾನ ಮೇರು ಕಲಾವಿದ, ಸವ್ಯಸಾಚಿ ಯಕ್ಷದ್ರೋಣ ದಿ.ಸೂರಿಕುಮೇರು ಕೆ.ಗೋವಿಂದ ಭಟ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವು ಅಮೆತ್ತೋಡು ಶ್ರೀ ಧುಮಾವತೀ ಯಕ್ಷಗಾನ ನಾಟ್ಯ ಕಲಾಕೇಂದ್ರದಲ್ಲಿ ನಡೆಯಿತು.

ಯಕ್ಷಗಾನ ನಾಟ್ಯ ಕಲಾಕೇಂದ್ರದ ಗುರುಗಳಾದ ಡಿ.ಧರ್ಮೇಂದ್ರ ಮಾಸ್ಟರ್ ಬಾಯಾರು ನುಡಿನಮನ ಸಲ್ಲಿಸಿದರು. ಸಂಘದ ಅಧ್ಯಕ್ಷ ಚಂದ್ರಶೇಖರ ಶ್ರಾವಣಕೆರೆ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಧೂಮಾವತೀ ದೈವಸ್ಥಾನದ ಪಾತ್ರಿ ನಾರಾಯಣ ಪೂಜಾರಿ, ಸಂಘದ ಸದಸ್ಯ ಶಂಕರ ಟೈಲರ್ ಬೆಜಪ್ಪೆ, ಹವ್ಯಾಸಿ ಯಕ್ಷಗಾನ ಕಲಾವಿದ ರಾಮಕೃಷ್ಣ ಕಾರಿಂಜ ಮುಂತಾದವರು ಈ ಸಂದರ್ಭ ಉಪಸ್ಥಿತರಿದ್ದರು.

ಸಂಘದ ಕೋಶಾಧಿಕಾರಿ ರೋಶನ್‌ರಾಜ್ ಕಳತ್ತೂರು ಸ್ವಾಗತಿಸಿ, ಜೊತೆ ಕಾರ್ಯದರ್ಶಿ ರಮೇಶ್ ಶ್ರಾವಣಕೆರೆ ವಂದಿಸಿದರು. ಸಂಘದ ಸದಸ್ಯ ಚಂದ್ರಶೇಖರ ಬೆಜಪ್ಪೆ ಕಾರ್ಯಕ್ರಮ ನಿರೂಪಿಸಿದರು.

ಅಡೂರು ಶ್ರೀ ದೇವಳ ವಾರ್ಷಿಕ ಜಾತ್ರೆ: 'ವಾಲಿಮೋಕ್ಷ' ಯಕ್ಷಗಾನ ತಾಳಮದ್ದಳೆ



ಮುಳ್ಳೇರಿಯ: ಅಡೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ಮಹಾವಿಷ್ಣು ವಿನಾಯಕ ಕ್ಷೇತ್ರ ಜಾತ್ರಾ ಮಹೋತ್ಸವದ ಅಂಗವಾಗಿ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ 'ವಾಲಿಮೋಕ್ಷ' ಎಂಬ ಯಕ್ಷಗಾನ ತಾಳಮದ್ದಳೆ ಜರಗಿತು.

ಭಾಗವತರಾಗಿ ಹೇಮಾಸ್ವಾತಿ ಕುರಿಯಾಜೆ, ನಿತೇಶ್‌ಕುಮಾರ್, ವೆಂಕಣ ಮೂಲೆ ಮತ್ತು ವಿದ್ಯಾಶ್ರೀ ಈಶ್ವರಮಂಗಲ, ಚೆಂಡೆ ಮತ್ತು ಮೃದಂಗ ವಾದನದಲ್ಲಿ ವಿಷ್ಣು ಶರಣ ಬನಾರಿ, ಶ್ರೀಧರ ಆಚಾರ್ಯ ಈಶ್ವರಮಂಗಲ, ಪೆರಾಜೆ ಆನಂದ, ಚಕ್ರತಾಳದಲ್ಲಿ ಶ್ರೀದೇವ್ ಭಾಗವಹಿಸಿದ್ದರು.

ಪಾತ್ರವರ್ಗದಲ್ಲಿ ಶ್ರೀರಾಮನಾಗಿ ನಿವೃತ್ತ ಪ್ರಾಂಶುಪಾಲ ಗಣರಾಜ ಕುಂಬಳೆ, ವಾಲಿಯ ಪಾತ್ರದಲ್ಲಿ ಪ್ರೊ.ವೆಂಕಟ್ರಾಮ ಭಟ್ ಸುಳ್ಯ ಹಾಗೂ ಸುಗ್ರೀವನ ಪಾತ್ರದಲ್ಲಿ ಬೆಳ್ಳಿಪ್ಪಾಡಿ ಸದಾಶಿವ ರೈ ಭಾಗವಹಿಸಿದ್ದರು.

ಇದೇ ಸಂದರ್ಭ ಯಕ್ಷಗುರು ವಿಶ್ವವಿನೋದ ಬನಾರಿ ಅವರು ಉಪಸ್ಥಿತರಿದ್ದು, ಅವರು ರಚಿಸಿದ ಸೀಮೆಯ ಒಡೆಯ ಮಹಾಲಿಂಗೇಶ್ವರನ ಹಾಡನ್ನು ಉದಯೋನ್ಮುಖ ಭಾಗವತೆ ವಿದ್ಯಾಶ್ರೀ ಹಾಡಿದರು.

ಗಣರಾಜ ಕುಂಬಳೆ ಅವರನ್ನು ನೆನಪಿನ ಕಾಣಿಕೆ ನೀಡಿ ಉತ್ಸವ ಸಮಿತಿ ಪರವಾಗಿ ಬೆಳ್ಳಿಪ್ಪಾಡಿ ಸದಾಶಿವ ರೈ ಗೌರವಿಸಿದರು. ಕೃಷ್ಣಪ್ಪ ಮಾಸ್ತರ್ ಸ್ವಾಗತಿಸಿ, ವಿವೇಕ ಆಡೂರು ವಂದಿಸಿದರು.

ಸಂಸ್ಕೃತ ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಿ ಪ್ರಥಮ



ಕಾಸರಗೋಡು: ಕೇರಳ ಸರಕಾರದ ಶಿಕ್ಷಣ ಇಲಾಖೆ 2025-26ನೇ ಸಾಲಿನಲ್ಲಿ ನಡೆಸಿದ ಸಂಸ್ಕೃತ ಸ್ಕಾಲರ್ ಶಿಪ್ ಪರೀಕ್ಷೆಯಲ್ಲಿ ಕಾರಡ್ಕ ಸರಕಾರಿ ಹೈಸ್ಕೂಲ್‌ನ 6ನೇ ತರಗತಿ ವಿದ್ಯಾರ್ಥಿಯಾದ ಅನಿರುದ್ಧಕೃಷ್ಣ ಪಾಣೂರು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರಿಗೆ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ರಮೇಶ್ ಚೆನ್ನಿತ್ತಲ ಅವರು ಶನಿವಾರ ಕಾಸರಗೋಡಿನಲ್ಲಿ ಶಾಲು ಹೊದೆಸಿ ಶುಭಹಾರೈಸಿದರು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಐಕ್ಯರಂಗ ಒಕ್ಕೂಟದ ಅಭ್ಯರ್ಥಿ ಮುಸ್ಲಿಂಲೀಗ್‌ನ ಕಲ್ಲಟ್ರ ಮಾಹಿನ್ ಹಾಜಿ ಅವರು ಶುಕ್ರವಾರ ಬದಿಯಡ್ಕ ಗ್ರಾ.ಪಂ. ವ್ಯಾಪ್ತಿಯ ಮಾನ್ಯ ಪರಿಸರದಲ್ಲಿ ಮತಯಾಚಿಸಿದರು.

ಕಾಸರಗೋಡು ಜಿಲ್ಲಾ ಮಟ್ಟದ ಕ್ಲಿಯರಿಂಗ್ ಕೇಂದ್ರದಲ್ಲಿ ಕಾರ್ಯಾಚರಣೆ

ಅಂಚೆ ಮತಪತ್ರಗಳಿಗೆ 3358 ಅರ್ಜಿಗಳ ಸ್ವೀಕಾರ





ಕಾಸರಗೋಡು: ವಿದ್ಯಾನಗರದ ಸಿವಿಲ್ ಸ್ಟೇಷನ್‌ನಲ್ಲಿರುವ ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಟ್ಟದ ಅಂಚೆ ಮತಪತ್ರ ವಿಲೇವಾರಿ ಕೇಂದ್ರದಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ 3358 ಆಗಿದೆ. ಅದರಲ್ಲಿ 1952 ಅರ್ಜಿಗಳನ್ನು ವಿವಿಧ ಕಂದಾಯ ಅಧಿಕಾರಿಗಳಿಗೆ ಶನಿವಾರ ಹಸ್ತಾಂತರಿಸಲಾಗಿದೆ.

ಸಾಫ್ಟ್‌ವೇರ್ ಮೂಲಕ ಚುನಾವಣಾ ಕರ್ತವ್ಯ ಮತ್ತು ಆದೇಶ ಪಡೆದ ಅಧಿಕಾರಿಗಳು ನಮೂನೆ ಸಂಖ್ಯೆ 12 ರಲ್ಲಿ ಅಂಚೆ ಮತಪತ್ರಕ್ಕಾಗಿ ಅರ್ಜಿ ಸಲ್ಲಿಸಬಹುದು. ಅವರು ಚುನಾವಣಾ ಕರ್ತವ್ಯ ಆದೇಶದ ಪ್ರತಿ ಮತ್ತು ಮತದಾರರ ಗುರುತಿನ ಚೀಟಿಯ ಪ್ರತಿಯೊಂದಿಗೆ ಚುನಾವಣಾ ತರಬೇತಿ ಕೇಂದ್ರ ಅಥವಾ ಜಿಲ್ಲಾ ಮಟ್ಟದ ಮತಪತ್ರ ವಿತರಣೆ ಕೇಂದ್ರದಲ್ಲಿ ಅಂಚೆ ಮತಪತ್ರಕ್ಕಾಗಿ ಅರ್ಜಿ ಸಲ್ಲಿಸಬಹುದು. ಜಿಲ್ಲೆಯ ಒಳಗೆ ಮತ್ತು ಹೊರಗೆ ಮತಗಳನ್ನು ಹೊಂದಿರುವ ಅಧಿಕಾರಿಗಳು ಆಯಾ ಜಿಲ್ಲೆಗಳಲ್ಲಿರುವ ತರಬೇತಿ ಕೇಂದ್ರಗಳು ಮತ್ತು ಜಿಲ್ಲಾ ಮಟ್ಟದ ಮತಪತ್ರ ವಿತರಣೆ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದವರಿಗೆ ಏಪ್ರಿಲ್ 1 ರಿಂದ ಆಯಾ ತರಬೇತಿ ಕೇಂದ್ರದಲ್ಲಿರುವ ಮತದಾರರ ಸೌಲಭ್ಯ ಕೇಂದ್ರದಲ್ಲಿ ಮತ ಚಲಾಯಿ ಸುವ ವ್ಯವಸ್ಥೆ ಒದಗಿಸಲಾಗುವುದು.

ಮತದಾರರ ಸೌಲಭ್ಯ ಕೇಂದ್ರವು 13ಎ ಘೋಷಣೆಯನ್ನು ದೃಢೀಕರಿಸಲು ಗೆಜೆಟೆಡ್ ಅಧಿಕಾರಿಯ ಸೇವೆಗಳು, ಮತಗಟ್ಟೆ ಅಧಿಕಾರಿಯ ಸೇವೆಗಳು, ವಿಡಿಯೋಗ್ರಫಿ ಮತ್ತು ಅಭ್ಯರ್ಥಿಗಳ ಏಜೆಂಟ್‌ಗಳಿಗೆ ಆಸನ ವ್ಯವಸ್ಥೆಗಳನ್ನು ಹೊಂದಿರುತ್ತದೆ.

ಏಪ್ರಿಲ್ 1 ರಿಂದ ಕಾರ್ಯನಿರ್ವಹಣೆ

ಕಾಸರಗೋಡು ಜಿಲ್ಲೆಯಲ್ಲಿ ಚುನಾವಣಾ ಕೆಲಸಕ್ಕಾಗಿ ನಿಯೋಜಿಸಲಾದ ಮತದಾನ ಮಾಡದ ಸಿಬ್ಬಂದಿಗೆ ಮತದಾನ ಸೇವೆಗಳ ಒದಗಿಸಲು ಏಪ್ರಿಲ್ 1 ರಿಂದ ಸಿವಿಲ್ ಸ್ಟೇಷನ್ ಕಾಂಪೌಂಡ್‌ನಲ್ಲಿರುವ ಅಕ್ಷರ ಗ್ರಂಥಾಲಯದಲ್ಲಿ ಗೊತ್ತುಪಡಿಸಿದ ಮತದಾರರ ಸೌಲಭ್ಯ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

> **ಅರ್ಜಿ ಸಲ್ಲಿಸಬಹುದು**
>
> ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ ವಿವಿಧ ಕರ್ತವ್ಯಗಳನ್ನು ನಿರ್ವಹಿಸುವ ಅಧಿಕಾರಿಗಳು ಜಿಲ್ಲಾ ಮಟ್ಟದ ಕ್ಲಿಯರಿಂಗ್ ಕೇಂದ್ರದಲ್ಲಿ ಚುನಾವಣಾ ಅಧಿಕಾರಿಯ ಆದೇಶದ ಪ್ರತಿ , ಮತದಾರರ ಗುರುತಿನ ಚೀಟಿ ಪ್ರತಿಯೊಂದಿಗೆ ನಮೂನೆ 12 ಅರ್ಜಿಯೊಂದಿಗೆ ಅಂಚೆ ಮತಪತ್ರಕ್ಕೆ ಅರ್ಜಿ ಸಲ್ಲಿಸಬಹುದು.

ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಕಚೇರಿಗೆ ಅಘೋರಿ ಸನ್ಯಾಸಿಗಳ ಭೇಟಿ: ಚುನಾವಣೆ ಗೆಲುವಿಗೆ ಹಾರೈಕೆ



ಕಾಸರಗೋಡು: ತಿರುವನಂತಪುರ ಜಿಲ್ಲೆಯ ನೇಮಂ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಬಿಜೆಪಿ ಕೇರಳ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರನ್ನು ಅಘೋರಿ ಸನ್ಯಾಸಿಗಳು ಭೇಟಿಯಾಗಿ ವಿಧಾನಸಭಾ ಚುನಾವಣೆ ಯಲ್ಲಿ ಜಯಭೇರಿ ಸಾಧಿಸಿ ಎಂದು ಆಶೀರ್ವಾದ ಮಾಡಿದರು.

ಈ ಅಘೋರಿ ಸನ್ಯಾಸಿಗಳು ತಮಿಳುನಾಡಿನಿಂದ ಕೇರಳಕ್ಕೆ ನಡೆಸಿದ ಯಾತ್ರೆ ಮಧ್ಯೆ ರಾಜೀವ್ ಚಂದ್ರಶೇಖರ್ ಅವರ ಕಚೇರಿಗೆ ಆಗಮಿಸಿ ಅವರನ್ನು ಅನುಗ್ರಹಿಸಿದರು.

ಅಘೋರಿ ಸನ್ಯಾಸಿಗಳು ಬಿಜೆಪಿ ಅಭ್ಯರ್ಥಿಯನ್ನು ಸಂದರ್ಶಿಸಿದ ಬೆನ್ನಲ್ಲೇ ಅವರ ವಿರುದ್ಧ ನೇಮಂ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿರುವ ಎಡರಂಗದ ಅಭ್ಯರ್ಥಿ, ಶಿಕ್ಷಣ ಸಚಿವ ವಿ.ಶಿವನ್ ಕುಟ್ಟಿ ಮತ್ತು ಐಕ್ಯರಂಗದ ಅಭ್ಯರ್ಥಿ ಕೆ.ಎಸ್.ಶಬರೀನಾಥ್ ಅವರು ರಂಗಕ್ಕಿಳಿದಿದ್ದಾರೆ.

ರಾಜಕೀಯದಲ್ಲಿ ಧರ್ಮ ಹಸ್ತಕ್ಷೇಪ ನಡೆಸಬಾರದು ಎಂದು ವಿ.ಶಿವನ್ ಕುಟ್ಟಿ ತಿಳಿಸಿದ್ದಾರೆ. ಸನ್ಯಾಸಿಗಳು ಬಿಜೆಪಿ ಅಭ್ಯರ್ಥಿಯನ್ನು ಭೇಟಿಯಾದುದು ಸಮಂಜಸವಲ್ಲ ಎಂದು ಶಬರೀನಾಥ್ ಹೇಳಿದ್ದಾರೆ.

ಒಟ್ಟಾರೆಯಾಗಿ ನೇಮಂ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿರುವ ರಾಜೀವ್ ಚಂದ್ರಶೇಖರ್ ಅವರ ಗೆಲುವು ಸಾಧ್ಯತೆಯ ಬಗ್ಗೆ ಮತದಾರರು ಅತೀ ಹೆಚ್ಚು ನಂಬಿಕೆ ವ್ಯಕ್ತಪಡಿಸಿದ್ದಾರೆ.

ನೇಮಂ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯ ಗೆಲುವಿಗೆ ಕಾರ್ಯಕರ್ತರು ಮನೆ ಮನೆ ಸಂಪರ್ಕ ನಡೆಸುತ್ತಿದ್ದಾರೆ. ತಿರುವನಂತಪುರಂ ಜಿಲ್ಲೆ ಹೊರತು ಪಡಿಸಿ ಇತರ ಜಿಲ್ಲೆಯ ಬಿಜೆಪಿ ಪ್ರಮುಖರು , ಕಾರ್ಯಕರ್ತರು ರಾಜೀವ್ ಚಂದ್ರಶೇಖರ್‌ರ ಗೆಲುವಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಕುಂದಾಪುರ-ಬೈಂದೂರು ಹೆದ್ದಾರಿಯ ಅವ್ಯವಸ್ಥೆಗೆ ಹೆಚ್ಚಿದ ಆಕ್ರೋಶ | ಸರ್ವಿಸ್ ರಸ್ತೆಯೂ ಅಸಮರ್ಪಕ

ವಾಹನಗಳ ಯೂ ಟರ್ನ್‌ಗೆ ಸಾಗಬೇಕು 3 ಕಿ.ಮೀ. ದೂರ!



ಸಂಗಮ ವಿಶೇಷ

ಕುಂದಾಪುರ: ಕುಂದಾಪುರದಿಂದ ಬೈಂದೂರು ವರೆಗೆ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿ ಅವೈಜ್ಞಾನಿಕತೆಯಿಂದ ಕೂಡಿದ ಪರಿಣಾಮ ಅಪಘಾತಗಳು ಹೆಚ್ಚುತ್ತಿದ್ದು, ವಾಹನಗಳು ಯೂ ಟರ್ನ್ ಗೆ ಕಿಲೋ ಮೀಟರ್ ಗಟ್ಟಲೇ ಸಂಚರಿಸಬೇಕಾದ ಅನಿವಾರ್ಯತೆ ಇದ್ದು, ಕೆಲ ವಾಹನಗಳು ಹೆದ್ದಾರಿಯಲ್ಲಿ ವಿರುದ್ಧ ದಿಕ್ಕಿನಲ್ಲಿ ರಾಜರೋಷವಾಗಿ ಸಂಚಾರ ಮಾಡುತ್ತಿದೆ.

ಕುಂದಾಪುರ ನಗರಕ್ಕೆ ತಾಗಿಕೊಂಡಿರುವ ತಲ್ಲೂರಿನಲ್ಲಿ ಸರ್ಕಲ್ ಅತ್ಯಂತ ಅಪಾಯಕಾರಿಯಾಗಿದೆ. ತಲ್ಲೂರು ಪ್ರವಾಸಿಯಿಂದ ತಲ್ಲೂರು ಬಸ್ ನಿಲ್ದಾಣದ ತನಕ ಹೆದ್ದಾರಿ ಬಿಟ್ಟರೆ ಚರಂಡಿ ಕೂಡ ಇಲ್ಲ, ಹೆದ್ದಾರಿ ಬಿಟ್ಟು ಪಾದಚಾರಿಗಳಿಗೆ ನಡೆದುಕೊಂಡು ಹೋಗಲು ಸರಿಯಾದ ಸ್ಥಳವಿಲ್ಲ. ಹೀಗಾಗಿ ಲಘು ವಾನಹಗಳು ಹೆದ್ದಾರಿ ಬಿಟ್ಟು ಕೆಳಗೆ ಇಳಿಯುವಂತಿಲ್ಲ, ಪಾದಚಾರಿಗಳು ಹಿಂದೆ ಮುಂದೆ ನೋಡುತ್ತಾ ಭಯದಲ್ಲೇ ಸಂಚರಿಸಬೇಕಿದೆ.

ಯೂ ಟರ್ನ್ ಇಲ್ಲದೇ ಅಡ್ಡಾದಿಡ್ಡಿ ಸಂಚಾರ

ತಲ್ಲೂರು ಪ್ರವಾಸಿ ಪೆಟ್ರೋಲ್ ಬಂಕ್ ಹತ್ತಿರ ರಸ್ತೆಯ ಇನ್ನೊಂದು ಕಡೆ ಬರಲು ಯೂ ಟರ್ನ್ ಅವಕಾಶ ಇತ್ತು. ಎರಡು ವರ್ಷಗಳ ಹಿಂದೆ ಅದನ್ನು ಬಂದ್ ಮಾಡಿರುವುದರಿಂದ ತಲ್ಲೂರಿನ ಪ್ರವಾಸಿ ಬಳಿ ಇರುವ ಪೆಟ್ರೋಲ್ ಬಂಕ್ ಕಡೆ ಬರಲು ಜನರು ಸುಮಾರು 3 ಕಿ.ಮೀ. ದೂರದ ಕುಂದಾಪುರದ ಸಂಗಮ್ ತನಕ ಹೋಗಿ ಯೂ ಟರ್ನ್ ತೆಗೆದುಕೊಂಡು ಬರಬೇಕಿದೆ. ಇದೇ ಕಾರಣಕ್ಕೆ ವಾಹನ ಸವಾರರು ವಿರುದ್ಧ ದಿಕ್ಕಿನಲ್ಲಿ ಅಡ್ಡಾದಿಡ್ಡಿಯಾಗಿ ವಾಹನವನ್ನು ಚಲಾಯಿಸುತ್ತಿದ್ದಾರೆ. ಸರ್ವಿಸ್ ರಸ್ತೆ ಅಥವಾ ಹೆದ್ದಾರಿಯ ಇಕ್ಕೆಲಗಳಲ್ಲಿ ಕನಿಷ್ಠ ದ್ವಿಚಕ್ರ ವಾಹನ ಓಡಿಸಲು ಸ್ಥಳಾವಕಾಶ ಇಲ್ಲದ ಕಾರಣ ವಿರುದ್ಧ ದಿಕ್ಕಿನಲ್ಲಿ ವಾಹನಗಳನ್ನು ಓಡಿಸುವುದು ಇಲ್ಲಿ ಸಾಮಾನ್ಯವಾಗಿದೆ.

ಚತುಷ್ಪಥ ಹೆದ್ದಾರಿಯಲ್ಲಿ ನಾಗಾಲೋಟದಲ್ಲಿ ಬೈಂದೂರು ಕಡೆ ಸಾಗುವ ವಾಹನಗಳ ನಡುವೆ ತಲ್ಲೂರಿನಿಂದ ಪ್ರವಾಸಿ ಪೆಟ್ರೋಲ್ ಬಂಕ್ ಕಡೆಗೆ ವಿರುದ್ಧ ದಿಕ್ಕಿನಲ್ಲಿ ಬೈಕ್, ರಿಕ್ಷಾ, ಕಾರು ಮತ್ತಿತರ ವಾಹನಗಳು ಸಂಚರಿಸುತ್ತಾ ಇರುತ್ತದೆ. ಇದರಿಂದ ತಲ್ಲೂರು ಬಸ್ ನಿಲ್ದಾಣದಿಂದ ಪ್ರವಾಸಿವರೆಗೆ ಅನೇಕ ಅಪಘಾತಗಳು ನಡೆದು ಅದೆಷ್ಟೋ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

> ತಲ್ಲೂರು ಬಸ್ ನಿಲ್ದಾಣದಿಂದ ಪ್ರವಾಸಿ ಪೆಟ್ರೋಲ್ ಬಂಕ್ ವರೆಗೆ ಸರ್ವಿಸ್ ರಸ್ತೆ ನಿರ್ಮಿಸಬೇಕೆನ್ನುವ ಬೇಡಿಕೆಗೆ ಮನ್ನಣೆ ದೊರೆತಿಲ್ಲ, ಅಂಡರ್‌ಪಾಸ್ ಕಾಮಗಾರಿ ಭರವಸೆಯಾಗಿಯೇ ಉಳಿದಿದೆ. ತಲ್ಲೂರು, ಹೆಮ್ಮಾಡಿ, ಮುಳ್ಳಿಕಟ್ಟೆ ಹಾಗೂ ತ್ರಾಸಿಯಲ್ಲಿ ಕನಿಷ್ಠ ಸರ್ವಿಸ್ ರಸ್ತೆಯನ್ನಾದರೂ ತುರ್ತು ನಿರ್ಮಿಸಬೇಕಿದೆ. ಇಲ್ಲದಿದ್ದರೆ ಇನ್ನಷ್ಟು ಅಮಾಯಕ ಜೀವಗಳು ಬಲಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.
> ● ನಾಗರಾಜ್, ನಿತ್ಯ ಪ್ರಯಾಣಿಕ, ವಂಡ್ಸೆ

ಸರ್ವಿಸ್ ರಸ್ತೆ ಇಲ್ಲ

ಹೆಮ್ಮಾಡಿ ಬಸ್ ನಿಲ್ದಾಣದಿಂದ ಸಂತೋಷ ನಗರ, ಜಾಲಾಡಿ ಕಡೆ ಹೋಗುವ ವಾಹನಗಳು ಕೂಡ ಸರ್ವಿಸ್ ರಸ್ತೆ ಇಲ್ಲದಿರುವುದರಿಂದ ಮತ್ತು ತಲ್ಲೂರು ತನಕ ಹೋಗಿ ಯೂ ಟರ್ನ್ ಪಡೆದು ಬರಬೇಕಿರುವುದರಿಂದ ಹೆದ್ದಾರಿಯಲ್ಲಿ ವಿರುದ್ಧ ದಿಕ್ಕಿನಲ್ಲಿ ವಾಹನಗಳು ಸಂಚರಿಸುತ್ತಿವೆ. ಮೂವತ್ತು ಮುಡಿಯಿಂದ ಹೆಮ್ಮಾಡಿ ಲಾಸ್ಟ್ ಸ್ಟಾಪ್‌ಗೆ ಹೋಗುವವರು ಹಾಗೂ ತ್ರಾಸಿ ಬೀಚ್‌ನಿಂದ ತ್ರಾಸಿ ಬಸ್ ನಿಲ್ದಾಣದ ಕಡೆಗೆ ಬರುವ ವಾಹನಗಳು ಮರವಂತೆ ದೇವಳ ಬಳಿ ಯೂಟರ್ನ್ ತೆಗೆದುಕೊಳ್ಳಬೇಕಿರುವ ಕಾರಣ ದಿಕ್ಕಿನಲ್ಲಿ ಸಂಚರಿಸುತ್ತಿರುವುದು ಇಲ್ಲಿ ಮಾಮೂಲಾಗಿದೆ.

ಇನ್ನೂ ಈಡೇರದ ಅಂಡರ್‌ಪಾಸ್ ಬೇಡಿಕೆ

ತ್ರಾಸಿ, ಮುಳ್ಳಿಕಟ್ಟೆ, ಹೆಮ್ಮಾಡಿ ಹಾಗೂ ತಲ್ಲೂರಿನಲ್ಲಿ ಅಂಡರ್‌ಪಾಸ್ ಮಂಜೂರಾಗಿ ಎಂದು ಹೇಳಿ ವರ್ಷಗಳೇ ಕಳೆದಿದ್ದರೂ, ಕಾಮಗಾರಿ ಮಾತ್ರ ಮಂಚೀಕೆಯಾಗಿ ಉಳಿದಿದೆ. ಜನಪ್ರತಿನಿಧಿಗಳ ನೀಡಿದ ಭರವಸೆ ಕಡತದಲ್ಲಿ ಮಾತ್ರ ಉಳಿದುಕೊಂಡಿದ್ದು, ಅಂಡರ್‌ಪಾಸ್ ಮತ್ತು ಸರ್ವಿಸ್ ರಸ್ತೆ ನಿರ್ಮಾಣವಾಗದಿರುವುದರಿಂದ ಅನೇಕ ಅಪಘಾತಗಳು ನಡೆಯುತ್ತಿದೆ.

ಸುತ್ತಮುತ್ತ

ಉಡುಪಿ ಜಿಲ್ಲೆಯಾದ್ಯಂತ ವಿವಿಧೆಡೆ ಮಳೆ

ಉಡುಪಿ: ಉಡುಪಿ ಜಿಲ್ಲೆಯ ಹಲವೆಡೆ ಶನಿವಾರ ಸಾಧಾರಣ ಮಳೆಯಾಗಿದ್ದು ಕಳೆದ ಕೆಲವು ದಿನಗಳಿಂದ ಬಿಸಿಲಿನ ಬೇಗೆಗೆ ತತ್ತರಿಸಿದ ಜನತೆ ಇದೀಗ ನಿರಾಳರಾಗಿದ್ದಾರೆ. ಮಧ್ಯಾಹ್ನದ ಬಳಿಕ ಜಿಲ್ಲೆಯ ವಿವಿಧೆಡೆ ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು. ಉಡುಪಿ ನಗರ, ಮಣಿಪಾಲ, ಮಲ್ಪೆ ಬ್ರಹ್ಮಾವರ ಸೇರಿದಂತೆ ಕರಾವಳಿ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಕಾರ್ಕಳ, ಹೆಬ್ರಿ, ಕುಂದಾಪುರ ಮತ್ತು ಬೈಂದೂರು ತಾಲೂಕುಗಳಲ್ಲಿ ಸಿಡಿಲು ಸಹಿತ ಭರ್ಜರಿ ಮಳೆಯಾಗಿದೆ. ಕಾಪು ಮತ್ತು ಶಿರ್ವ ಸುತ್ತಮುತ್ತಲಿನ ಪ್ರದೇಶಗಳಲ್ಲೂ ಉತ್ತಮ ಮಳೆಯಾಗಿದ್ದು ಕೃಷಿಕರಲ್ಲಿ ಸಂತಸ ಮೂಡಿಸಿದೆ.

ಶಾಸಕರ ಅವಹೇಳನ ಸಹಿಸಲ್ಲ: ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ

ಉಡುಪಿ: 'ವ್ಯಕ್ತಿಗಿಂತ ಪಕ್ಷ ಮೇಲು. ಪಕ್ಷಕ್ಕಿಂತ ದೇಶ ಮೇಲು' ಎಂಬ ಉದಾತ್ತ ಚಿಂತನೆಯುಳ್ಳ



ಭಾರತೀಯ ಜನತಾ ಪಾರ್ಟಿ ಕಾರ್ಯಕರ್ತ ಆಧಾರಿತ ರಾಜಕೀಯ ಪಕ್ಷ. ಓರ್ವ ಸಾಮಾನ್ಯ ಕಾರ್ಯಕರ್ತನೂ ಪಕ್ಷ ನಿಷ್ಠೆ ಹಾಗೂ ಬದ್ಧತೆಯಿಂದ ಹಂತ ಹಂತವಾಗಿ ಎತ್ತರಕ್ಕೇರುವ ಅವಕಾಶಗಳು ಪಕ್ಷದ ಚೌಕಟ್ಟಿನಲ್ಲಿದೆ. ಈ ನಿಟ್ಟಿನಲ್ಲಿ ಕೆಲವು ಪ್ರಚಲಿತ ವಿದ್ಯಮಾನಗಳಲ್ಲಿ ನಡೆಯುತ್ತಿರುವ ನಮ್ಮ ಪಕ್ಷದ ಶಾಸಕರ ಅವಹೇಳನವನ್ನು ಸಹಿಸಲಾಗದು ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ನಡುವೆ ಗೊಂದಲದ ಗೂಡಾಗಿರುವ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ ಏಕ ವಿನ್ಯಾಸದ ಅನುಮೋದನೆಗೆ ಧರಣಿ ನಡೆಸಿದ ಮಾಜಿ ಶಾಸಕರಿಗೆ ತುರ್ತಾಗಿ ಸ್ಪಂದಿಸಿದ ರೀತಿಯಲ್ಲೇ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಸಾವಿರಾರು ಕಡತಗಳ ವಿಲೇವಾರಿಗೆ ತುರ್ತು ಕ್ರಮ ವಹಿಸಿ ಜನ ಸಾಮಾನ್ಯರ ಸಂಕಷ್ಟವನ್ನೂ ಪರಿಹರಿಸಬೇಕು ಎಂದು ಕುತ್ಯಾರು ನವೀನ್ ಶೆಟ್ಟಿ ಪತ್ರಿಕಾ ಪ್ರಕಟಣೆಯ ಮೂಲಕ ಆಗ್ರಹಿಸಿದ್ದಾರೆ.

ಉಡುಪಿ ಸಾಹಿತ್ಯ ಸಮ್ಮೇಳನ: ಸ್ವಾಗತ ಸಮಿತಿಗೆ ಆಯ್ಕೆ

ಉಡುಪಿ: ಉಡುಪಿ ತಾಲೂಕು 16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷರಾಗಿ ಜಯಕರ ಶೆಟ್ಟಿ ಇಂದ್ರಾಳಿ, ಕಾರ್ಯದರ್ಶಿಯಾಗಿ ಸತೀಶ್ ಕೊಡವೂರು, ಜೊತೆ ಕಾರ್ಯ ದರ್ಶಿಯಾಗಿ







ಪೂರ್ಣಿಮಾ ಜನಾರ್ದನ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ತಾಲೂಕು ಘಟಕದ ಅಧ್ಯಕ್ಷ ರವಿರಾಜ್ ಹೆಚ್. ಪಿ. ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ತಾಲೂಕು 16ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ಉಡುಪಿಯ ರಾಜಾಂಗಣದ ಮಥುರಾ ಕಂಫರ್ಟ್ಸ್ ಸಭಾಂಗಣದಲ್ಲಿ ನೆರವೇರಿತು. ಹಿರಿಯರು, ಸಾಹಿತ್ಯಾಭಿಮಾನಿಗಳು, ಸಾಹಿತಿಗಳು, ಕಲಾವಿದರು, ಭಾಗವಹಿಸಿದ್ದ ಈ ಸಭೆಯಲ್ಲಿ ಸಮ್ಮೇಳನದ ಸ್ವಾಗತ ಸಮಿತಿಯನ್ನು ಹಾಗೂ ವಿವಿಧ ಸಮಿತಿಗಳನ್ನು ರಚಿಸಲಾಯಿತು. ಮೇ 3ರಂದು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉಡುಪಿಯ ಯಕ್ಷಗಾನ ಕಲಾರಂಗದ ಐವೈಸಿ ಹವಾನಿಯಂತ್ರಿತ ಸಭಾಂಗಣದಲ್ಲಿ ಅದ್ದೂರಿಯಾಗಿ ನಡೆಸಲಾಗುವುದು. ಸಮ್ಮೇಳನ ಸರ್ವಾಧ್ಯಕ್ಷರಾಗಿ ಈಗಾಗಲೇ ಖ್ಯಾತ ವೈದ್ಯ, ಸಾಹಿತಿ, ಕಲಾವಿದ ಡಾ. ಭಾಸ್ಕರಾನಂದ ಕುಮಾರ್ ಇವರನ್ನು ಆಯ್ಕೆಮಾಡಲಾಗಿದೆ. ಈ ಸಂದರ್ಭದಲ್ಲಿ ಉಡುಪಿ ವಿಶ್ವನಾಥ್ ಶೆಣೈ, ವಿಶ್ರಾಂತ ಬ್ಯಾಂಕ್ ಅಧಿಕಾರಿ ಸಿ .ಎಸ್ . ರಾವ್ , ತಾಲೂಕು ಗೌರವ ಕಾರ್ಯದರ್ಶಿಗಳಾದ ಜನಾರ್ದನ ಕೊಡವೂರು, ರಂಜಿನಿ ವಸಂತ್ ಕೋಶಾಧ್ಯಕ್ಷ ರಾಜೇಶ್ ಭಟ್ ಪಣಿಯಾಡಿ ಉಪಸ್ಥಿತರಿದ್ದರು.

ಉಪ್ಪುಂದ ಶ್ರೀ ಲಕ್ಷ್ಮೀವೆಂಕಟರಮಣ ದೇವರಿಗೆ ಅಲಂಕಾರ

ಬೈಂದೂರು: ಉಪ್ಪುಂದ ಜಿಎಸ್‌ಬಿ ಸಮಾಜದ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದಲ್ಲಿ ಶುಕ್ರವಾರ ಶ್ರೀ ರಾಮನವಮಿ ಉತ್ಸವವನ್ನು ವೈಭವದಿಂದ ಆಚರಿಸಲಾಯಿತು. ಮುಂಜಾನೆ ವಿವಿಧ ಧಾರ್ಮಿಕ



ಕಾರ್ಯಗಳ ಮೂಲಕ ಆರಂಭಗೊಂಡ ಉತ್ಸವ, ಪ್ರದೀಪ ಪ್ರತಿಷ್ಠಾಪನೆ, ವಿವಿಧ ಭಜನಾ ತಂಡಗಳಿಂದ ಅಹೋರಾತ್ರಿ ಭಜನೆ, ರಾತ್ರಿ ದೇವರಿಗೆ ಪರ್ಯಾಯ ಅರ್ಚಕ ಹರೀಶ್ ಭಟ್ ಇವರಿಂದ ವಿಶೇಷ ಹೂವಿನ ಅಲಂಕಾರದೊಂದಿಗೆ ಮಹಾಪೂಜೆ ನಡೆಯಿತು. ಸಂಜೆ ದೇವರ ಪಲ್ಲಕ್ಕಿ ಉತ್ಸವ ಜರುಗಿತು.

ಶನಿವಾರ ಮಧ್ಯಾಹ್ನ ದೀಪ ವಿಸರ್ಜನೆ ಮಾಡಲಾಯಿತು. ಶುಕ್ರವಾರದ ಉತ್ಸವದ ಸೇವಾದಾರರಾದ ಯು. ಕಾಶೀನಾಥ ಪಡಿಯಾರ್ ಮತ್ತು ಸಹೋದರರು, ಶನಿವಾರದ ಸೇವಾದಾರರಾದ ದಾಮೋದರ್ ಶೆಣೈ ದಂಪತಿಗಳಿಂದ ಮಹಾ ಅನ್ನಸಂತರ್ಪಣೆ ನಡೆಯಿತು. ದೇವಸ್ಥಾನ ಟ್ರಸ್ಟ್‌ನ ರಾಜೇಶ ಪೈ ನೇತೃತ್ವದಲ್ಲಿ ಸಮಿತಿ ಸರ್ವ ಸದಸ್ಯರು ಉತ್ಸವವನ್ನು ಯಶಸ್ವಿಗೊಳಿಸಿದರು.

ಪಿಂಚಣಿದಾರರ ಬಗ್ಗೆ 2025ರ ಕಾಯ್ದೆ ರದ್ದತಿಗೆ ಪ್ರಧಾನಿಗೆ ಮನವಿ



ಬೈಂದೂರು: ಪಿಂಚಣಿದಾರರ ಬಗ್ಗೆ ಕೇಂದ್ರ ಸರ್ಕಾರದ 2025ರ ಕಾಯ್ದೆಯನ್ನು ಖಂಡಿಸಿ, ಅದರ ರದ್ದತಿಗೆ ಆಗ್ರಹಿಸಿ ನೌಕರರ ರಾಜ್ಯ ಸಂಘದ ಸಲಹೆಯ ಮೇರೆಗೆ ಬೈಂದೂರು ತಾಲೂಕು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಐ. ನಾರಾಯಣ ನೇತೃತ್ವದಲ್ಲಿ ತಹಶಿಲ್ದಾರರ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಲಾಯಿತು.

ಕೇಂದ್ರ ಸರ್ಕಾರದಡಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಎಲ್ಲಾ ವರ್ಗದ ನೌಕರರಿಗೆ ಅನ್ವಯಿಸಲಿರುವ ಊರ್ಜಿತ ಕಾಯಿದೆ (ವ್ಯಾಲಿಡೇಷನ್ ಆಕ್ಟ್) ಜಾರಿಗೆ ತಂದು ನಂತರದಲ್ಲಿ 8ನೇ ವೇತನ ಆಯೋಗಕ್ಕೆ ಉಲ್ಲೇಖಿಸಿರುವ ನಿಯಮಗಳಲ್ಲಿ ಪಿಂಚಣಿದಾರರಿಗೆ ದಿನಾಂಕ 2026 ಜನವರಿ 1ರಿಂದ ಪೂರ್ವಾನ್ವಯವಾಗುವಂತೆ ಪಿಂಚಣಿದಾರರನ್ನು ವಿಭಜಿಸಿ ಹಾಲೀ ನಿವೃತ್ತಿ ಹೊಂದಿರುವ ನೌಕರರಿಗೆ ಇನ್ನೂ ಮುಂದೆ ವೇತನ ಪರಿಷ್ಕರಣೆಯಾಗಲಿ, ಒಂದು ಆರ್ಥಿಕ ವರ್ಷದಲ್ಲಿ ನೀಡುವ ಎರಡು ತುಟ್ಟಿಭತ್ಯೆಯಾಗಲಿ ಮಂಜೂರು ಮಾಡಲಾಗುವುದಿಲ್ಲ ಎಂದು ಕೇಂದ್ರ ಸರ್ಕಾರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸಂಸದಿನಲ್ಲಿ ಕಾಯಿದೆಯನ್ನು ಮಂಡಿಸಿ ಅಭಿಪ್ರಾಯಿಸಿರುತ್ತಾರೆ. ಈ ಕಾಯಿದೆ ಅಂಗೀಕರಿಸಿದಲ್ಲಿ (ಕೇಂದ್ರ ಸರ್ಕಾರದ ಸಿಸಿಎಸ್, ಸಿವಿಲ್ ಸರ್ವೀಸ್ ನಿಯಮಗಳನ್ನೇ ಅನುಸರಿಸುತ್ತಿರುವುದರಿಂದ) ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಒಟ್ಟಾಗಿ ಸಂಘಟನೆ ಮುಖೇನ ಪ್ರತಿಭಟಿಸುವ ಅನಿವಾರ್ಯತೆ ಸೃಷ್ಟಿಸುವಂತಾಗುತ್ತದೆ ಎಂದು ಸಂಘದ ಅಧ್ಯಕ್ಷ ಐ. ನಾರಾಯಣ ಹೇಳಿದರು.

ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಇದ್ದರು.

ಉಚ್ಚಿಲ ಬಡಾ ಗ್ರಾಮ ಪಂಚಾಯತ್: ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ



ಪಡುಬಿದ್ರಿ: ಕಾಪು ಕ್ಷೇತ್ರದ ಉಚ್ಚಿಲ ಬಡಾ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ಕಾಮಗಾರಿಯ ಅಭಿವೃದ್ಧಿಗೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ 55 ಲ.ರೂ. ಅನುದಾನ ಮಂಜೂರಾಗಿದ್ದು ಇದರ ಗುದ್ದಲಿ ಪೂಜೆಯ ಹಾಗೂ ಉದ್ಘಾಟನೆಯನ್ನು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಶನಿವಾರ ನೆರವೇರಿಸಿದರು.

ಬಡಾ ಗ್ರಾ.ಪಂ. ವ್ಯಾಪ್ತಿಯ 4ನೇ ವಾರ್ಡಿನ ಬ್ರಹ್ಮಬೈದರ್ಕಳ ಗರೋಡಿ ಹತ್ತಿರದ ನಾರಾಯಣ ಪೂಜಾರಿ ಮನೆಯಿಂದ ವಾರಿಜಾ ಶೆಟ್ಟಿ ಮನೆ ರಸ್ತೆ ಕಾಂಕ್ರೀಟೀಕರಣ – 10 ಲಕ್ಷ, 1ನೇ ವಾರ್ಡಿನ ಗೋಪಾಲ ಸಾಲ್ಯಾನ್ ಮನೆಯಿಂದ ವೆಂಕಟೇಶ್ ನಾವಡರ ಗದ್ದೆ ತನಕ ರಸ್ತೆ ಕಾಂಕ್ರೀಟೀಕರಣ – 10 ಲಕ್ಷ, 6ನೇ ವಾರ್ಡಿನ ಶೈಲಾ ರವರ ಮನೆಯಿಂದ ಮುಖ್ಯ ರಸ್ತೆ ತನಕ ರಸ್ತೆ ಕಾಂಕ್ರೀಟೀಕರಣ – 10 ಲಕ್ಷ 3ನೇ ವಾರ್ಡಿನ ಗರಡಿ ಮನೆ ನಾರಾಯಣ ಶೆಟ್ಟಿ ಮನೆಯಿಂದ ಕುಟ್ಟಿ ಪೂಜಾರಿ ಮನೆ ತನಕ ಕಾಂಕ್ರೀಟೀಕರಣ – 10 ಲಕ್ಷ, 8ನೇ ವಾರ್ಡಿನ ಉಚ್ಚಿಲ ಮೊಗವೀರ ಮಹಾಸಭೆಯ ಸಭಾಂಗಣ ಹಿಂಭಾಗ ಅಂಗನವಾಡಿ ಕಟ್ಟಡ ನಿರ್ಮಾಣ – 5 ಲಕ್ಷ, ಎರ್ಮಾಳ್ ಕೊಳದ ಬದಿಯಿಂದ ನೆಬಿಸ ಅಕ್ಕನವರ ಮನೆ ವರೆಗೆ ರಸ್ತೆ ಕಾಂಕ್ರೀಟೀಕರಣ – 5 ಲಕ್ಷ ಸೇರಿದಂತೆ ಒಟ್ಟು 50 ಲಕ್ಷ ರೂಪಾಯಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ 5 ಲಕ್ಷ ರೂಪಾಯಿ ಅನುದಾನದಲ್ಲಿ ಕುದ್ರೊಟ್ಟು ಬ್ರಹ್ಮ ಬೈದರ್ಕಳ ದೈವಸ್ಥಾನದಿಂದ ರಾಜೀವ ಶೆಟ್ಟಿ ಮನೆ ತನಕ ಅಭಿವೃದ್ಧಿಗೊಂಡ ರಸ್ತೆಯ ಉದ್ಘಾಟನೆ ನೆರವೇರಿಸಲಾಯಿತು. ಗ್ರಾ.ಪಂ. ನಿಕಟ ಪೂರ್ವ ಅಧ್ಯಕ್ಷ ಶಿವಕುಮಾರ್ ಮೆಂಡನ್, ನಿಕಟ ಪೂರ್ವ ಉಪಾಧ್ಯಕ್ಷ ದೀಪಕ್, ಮಾಜಿ ಸದಸ್ಯರಾದ ಚಂದ್ರಶೇಖರ್, ಇಂದಿರಾ ಶೆಟ್ಟಿ ಹರಿಪ್ರಸಾದ್, ಶಕುಂತಳಾ, ಮೋಹಿನಿ, ಕಲಾವತಿ, ಸ್ಥಳೀಯ ವಸಂತ ದೇವಾಡಿಗ, ಕಮಲಾಕ್ಷ ಶೆಣೈ ಮತ್ತಿತರರು ಇದ್ದರು.

ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಳ: ಚಂದ್ರಮಂಡಲ ರಥದ ಹಸ್ತಾಂತರ



ಪಡುಬಿದ್ರಿ: ಉಚ್ಚಿಲ ದ.ಕ ಮೊಗವೀರ ಮಹಿಳಾ ಮಹಾಜನ ಸಂಘ ಮತ್ತು ಬೆಳ್ಳಿರಥ ಸಮಿತಿಯ ವತಿಯಿಂದ ಶ್ರೀ ಮಹಾಲಕ್ಷ್ಮೀ ದೇವಾಲಯಕ್ಕೆ ಸಮರ್ಪಣೆ ಮಾಡಲಿರುವ ಚಂದ್ರ ಮಂಡಲ ರಥವನ್ನು ಪ್ರಧಾನ ಅರ್ಚಕ ರಾಘವೇಂದ್ರ ಉಪಾಧ್ಯಾಯ ಅವರ ಪೌರೋಹಿತ್ಯದಲ್ಲಿ ಶಿಲ್ಪಿ ಮಾಧವ ಆಚಾರ್ಯ ಹಸ್ತಾಂತರಿಸುವ ಕಾರ್ಯಕ್ರಮ ಶ್ರೀ ಮಹಾಲಕ್ಷ್ಮೀ ದೇವಾಲಯಲ್ಲಿ ನಡೆಯಿತು.

ಸುಮಾರು ರೂ.ಮೂವತ್ತೈದು ಲಕ್ಷ ವೆಚ್ಚದಲ್ಲಿ ತಯಾರಿಸಿದ ಚಂದ್ರ ಮಂಡಲ ರಥವನ್ನು ದ.ಕ ಮೊಗವೀರ ಮಹಿಳಾ ಮಹಾಜನ ಸಂಘ ಮತ್ತು ಬೆಳ್ಳಿ ರಥ ಸಮಿತಿಯವರಿಗೆ ಶಿಲ್ಪಿ ಮಾಧವ ಆಚಾರ್ಯರು ಹಸ್ತಾಂತರಿಸುವ ಕಾರ್ಯಕ್ರಮ ಶ್ರೀ ಮಹಾಲಕ್ಷ್ಮೀ ದೇವಾಲಯದ ಸನ್ನಿಧಿಯಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಕ್ಷೇತ್ರಾಡಳಿತ ಸಮಿತಿಯ ಅಧ್ಯಕ್ಷ ಗಿರಿಧರ್ ಸುವರ್ಣ, ದ.ಕ ಮಹಿಳಾ ಮಹಾಜನ ಸಂಘದ ಅಧ್ಯಕ್ಷೆ ಕವಿತಾಶರತ್, ಕಾರ್ಯದರ್ಶಿ ಪೂರ್ಣಿಮಾ ಚಂದ್ರಶೇಖರ್, ಬೆಳ್ಳಿ ರಥ ಸಮಿತಿಯ ಅಧ್ಯಕ್ಷೆ ಉಷಾರಾಣಿ, ಕಾರ್ಯದರ್ಶಿ ಶುಭಾ ದಿನೇಶ್, ಮತ್ತು ಸರ್ವ ಸದಸ್ಯರು, ಕ್ಷೇತ್ರ ಸಮಿತಿಯವರಿಂದ ನಾರಾಯಣ ಕರ್ಕೇರಾ, ಸಂಜೀವ ಬಂಗೇರ ಮೋಹನ್ ಬಂಗೇರ, ಕಾಪು ನಾಲ್ಕು ಪಟ್ನ ಅಧ್ಯಕ್ಷ ಮನೋಜ್ ಕಾಂಚನ್, ನಿಕಟ ಪೂರ್ವ ಅಧ್ಯಕ್ಷ ವಾಸುದೇವ ಸಾಲ್ಯಾನ್, ಮೆಂಡನ್ ಸುಜಿತ್ ಸಾಲ್ಯಾನ್, ನಿಶಾನ್ ಕುಂದರ್ ಎರ್ಮಾಳು, ಶೇಖರ್ ಪುತ್ರನ್ ಮತ್ತಿತರರು ಇದ್ದರು. ಕೊಡುಗೆಯಾಗಿ ನೀಡಿರುವ ರಥದ ಶಿಖರಕ್ಕೆ ದಿನೇಶ್ ಎರ್ಮಾಳು ಚಿನ್ನದ ಛತ್ರಿಯನ್ನು ಈ ಸಂದರ್ಭ ಸಮರ್ಪಿಸಿದರು.

ಆತ್ಮನಿರ್ಭರ ಭಾರತ ಘೋಷಣೆಯಲ್ಲ, ಚಳುವಳಿ: ನವೀನ್‌ಚಂದ್ರ ಅಭಿಪ್ರಾಯ



ಪಡುಬಿದ್ರಿ: ಆತ್ಮನಿರ್ಭರ ಭಾರತವು ಕೇವಲ ಘೋಷಣೆ ಅಲ್ಲ ಜನರ ಚಳುವಳಿಯಾಗಿದೆ. ಪ್ರತಿಯೊಬ್ಬ ನಾಗರಿಕನು ಸ್ಥಳೀಯವಾಗಿ ಉತ್ಪಾದಿಸಿದ ಉತ್ಪನ್ನಗಳನ್ನು ಬಳಸುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆಯಾಗಬೇಕಾಗಿದೆ ಎಂದು ಪಡುಬಿದ್ರಿ ಬಂಟರ ಸಂಘದ ಮಾಜಿ ಅಧ್ಯಕ್ಷ ನವೀನ್ ಚಂದ್ರ ಜೆ. ಶೆಟ್ಟಿ ಹೇಳಿದರು..

ಅವರು ಪಡುಬಿದ್ರಿ ರೋಟರಿ ಕ್ಲಬ್ ಓಂಕಾರ್ ಕಾಸ್ಟೋಮ್ಸ್ ಮತ್ತು ಕಲಾ ಸಂಗಮ ಸರ್ವ ಕಾಲೇಜು ವಿದ್ಯಾರ್ಥಿ ಶಕ್ತಿ ಬೆನಕ ಇವೆಂಟ್ಸ್ ಸಹಭಾಗಿತ್ವದಲ್ಲಿ ಮಾ. 27ರಿಂದ ಮಾ.29ರ ವರಗೆ ಪಡುಬಿದ್ರಿ ಬಂಟರ ಸಂಘದಲ್ಲಿ 3 ದಿನಗಳ ಕಾಲ ನಡೆಯುವ ಬೃಹತ್ ಆಹಾರ ಮತ್ತು ಸ್ವದೇಶಿ ಉತ್ಪನ್ನಗಳ ಮಾರಟ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ರೋಟರಿ ಅಧ್ಯಕ್ಷ ಸುನಿಲ್ ಕುಮಾರ್ ವಹಿಸಿದ್ದರು. ಪಡುಬಿದ್ರಿ ಬಂಟರ ಸಂಘದ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ಅವರು, ಭಾಗವಹಿಸಿ, ಯುವ ಸಮೂಹಕ್ಕೆ ಶುಭಹಾರೈಸಿದರು.

ಪಡುಬಿದ್ರಿ ಬಂಟರ ವೇಲ್ ಫೇರ್ ಟ್ರಸ್ಟ್ ಅಧ್ಯಕ್ಷ ಡಾ. ವೃಂದ ಎನ್. ಶೆಟ್ಟಿ ಪಡುಬಿದ್ರಿ ಕಾಡಿಪಟ್ನ ಮೊಗವೀರ ಮಹಾಸಭಾ ಅಧ್ಯಕ್ಷ ಅಶೋಕ್ ಸಾಲ್ಯಾನ ಬೆನಕ ಇವೆಂಟ್ಸ್ ನ ಆಡಳಿತ ನಿರ್ದೇಶಕರಾದ ಗಣೇಶ್ ಶೆಟ್ಟಿ ಹಾಗೂ ಭಾಸ್ಕರ್ ಪೂಜಾರಿ ಪಡುಬಿದ್ರಿ ಓಂಕಾರ ಕಾಸ್ಟೋಮ್ಸ್ ಕಲಾ ಸಂಗಮ ಆಡಳಿತ ನಿರ್ದೇಶಕಿ ಗೀತಾ ಅರುಣ್, ಪಡುಬಿದ್ರಿ ಗ್ರಾ.ಪಂ ಮಾಜಿ ಉಪಾಧ್ಯಕ್ಷೆ ಯಶೋಧ ಪಡುಬಿದ್ರಿ, ಸರ್ವ ಕಾಲೇಜು ವಿದ್ಯಾರ್ಥಿ ಶಕ್ತಿ ರಾಜ್ಯಾಧ್ಯಕ್ಷ ರಚನ್ ಸಾಲ್ಯಾನ್, ಪಡುಬಿದ್ರಿ ರೋಟರಿ ಕಾರ್ಯದರ್ಶಿ ಪವನ್ ಸಾಲ್ಯಾನ್ ಇದ್ದರು. ಸಂತೋಷ್ ಪಡುಬಿದ್ರಿ ವಂದಿಸಿದರು. ಸಂತೋಷ್ ನಂಬಿಯಾರ್ ನಿರೂಪಿಸಿದರು.

ಏ.3ರಂದು 840 ಚದರ ಅಡಿ ಸ್ಥಳದಲ್ಲಿ ಮಿಯಾವಾಕಿ ವನ ನಿರ್ಮಾಣಕ್ಕೆ ಚಾಲನೆ

ಕಾಪು: ಹೊಸ ಪೀಳಿಗೆಯಲ್ಲಿ ಪರಿಸರ ಜಾಗೃತಿಯನ್ನು ಮೂಡಿಸುವುದು ಅತ್ಯಗತ್ಯವಾಗಿದ್ದು, ಅದಕ್ಕಾಗಿ ಕಟಪಾಡಿ ಮೂಡುಬೆಟ್ಟಿನ ಪೊಸಾರಿನಲ್ಲಿ ಯುವ ಜನತೆಯನ್ನು ಪರಿಸರದೊಂದಿಗೆ ಬೆರೆಸುವ ವಿಶೇಷ ಪ್ರಯೋಗ ನಡೆಯಲಿದೆ ಎಂದು ವ್ಯಕ್ತಿತ್ವ ವಿಕಸನ ತರಬೇತುದಾರ ಕೆ. ಮಹೇಶ್ ಶೆಣೈ ಹೇಳಿದರು.

ಅವರು ಶನಿವಾರ ಕಾಪು ಪ್ರೆಸ್‌ಕ್ಲಬ್ ನಲ್ಲಿ ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಕಟಪಾಡಿಯಲ್ಲಿ 840 ಚದರ ಅಡಿ ಸ್ಥಳದಲ್ಲಿ ಮಿಯಾವಾಕಿ ವನವನ್ನು 7 ವರ್ಷಗಳ ಹಿಂದೆ ನಿರ್ಮಿಸಿದ್ದು, ಇದೀಗ ಯುವ ಜನರನ್ನು ಪರಿಸರ ಜಾಗೃತಿಯತ್ತ ಸೆಳೆಯಲು 2026 ನೇ ಕ್ರಿಕೆಟ್ ವಿಶ್ವಕಪ್ ಗೆದ್ದ ಸಂದರ್ಭದಲ್ಲಿ, ಯುವಜನರು ಇಷ್ಟಪಡುವ ಕ್ರಿಕೆಟ್ ಬ್ಯಾಟ್ ನ ಮಾದರಿಯಲ್ಲಿ 30 ಸೆಂಟ್ಸ್ ಜಾಗದಲ್ಲಿ ಮಿಯಾವಾಕಿ ವನ ನಿರ್ಮಿಸಲಾಗುವುದು ಮತ್ತು ಇದನ್ನು ಕ್ರಿಕೆಟ್ ಜಗತ್ತಿನ ದೇವರು ಎಂದು ಕರೆಸಿಕೊಳ್ಳುವ ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿಯೇ ಸಚಿನ್ ತೆಂಡೂಲ್ಕರ್ ಮಿಯಾವಾಕಿ ವನ ಎಂದು ಹೆಸರಿಸಲಾಗುವುದು. ಇದರ ಮೊದಲ ಹಂತವಾದ ಮಣ್ಣಿನ ಪದರವನ್ನು ನಿರ್ಮಿಸುವ ಕೆಲಸಕ್ಕೆ ಏ.3ರ ಬೆಳಗ್ಗೆ 9ಕ್ಕೆ ರೈಸಿಂಗ್ ರೂಸಾ ಕ್ರಿಕೆಟ್ ಅಕಾಡೆಮಿ ಆಸ್ಟ್ರೇಲಿಯದ ಅಧ್ಯಕ್ಷ ಸುಧೀರ್ ನಾಯಕ್ ಅವರು ಚಾಲನೆ ನೀಡಲಿದ್ದಾರೆ. ಆಸ್ಟ್ರೇಲಿಯಾದ ಖ್ಯಾತ ಕ್ರಿಕೆಟ್ ಕೋಚ್‌ಗಳಾದ ರಿಚರ್ಡ್ ಕ್ಲಿಪ್ಪನ್, ಜೆಸನ್ ಕಾಕಸ್, ಮಿಚ್ ಡೇವಿ ಇವರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಿಯವಾಕಿ ವನವನ್ನು ಬೆಳೆಸುವ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸಲು ಸರಕಾರದ ಗಮನಕ್ಕೆ ಕೆಲವು ವಿಚಾರಗಳನ್ನು ತರಲಿದ್ದೇವೆ. ಅದೇ ರೀತಿ ಸರಕಾರದ ವತಿಯಿಂದ ಕೇವಲ ಮಳೆಗಾಲದ ಹೊತ್ತಿನಲ್ಲಿ ಮಾತ್ರ ಈ ಸಸಿಗಳು ಲಭ್ಯವಿದ್ದು ಮಿಯವಾಕಿ ವನವನ್ನು ಯಾವುದೇ ಸಮಯದಲ್ಲಿ ಮಾಡಬಹುದಾದದರಿಂದ ಈ ಸಸಿಗಳು ಎಲ್ಲಾ ಸಂದರ್ಭದಲ್ಲಿ ಲಭ್ಯವಿರಬೇಕು ಎಂದು ಆಗ್ರಹಿಸಲಿದ್ದೇವೆ. ಈಗಾಗಲೇ ಬಹಳಷ್ಟು ಜನರು ಮಿಯಾವಾಕಿ ವನವನ್ನು ಮಾಡಲು ಆಸಕ್ತರಾಗಿದ್ದು, ಸರಕಾರದ ವತಿಯಿಂದ ರೈತರಿಗೆ ಮಾತ್ರ ಬೆಳೆಯಲು ಸಸಿಗಳು ಸಿಗುತ್ತಿವೆ. ಈ ಸಸಿಗಳನ್ನು ಅರಣ್ಯ ಬೆಳೆಸುವ ಜವಾಬ್ದಾರಿಯುತ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳಿಗೆ ಅದೇ ದರದಲ್ಲಿ ಕೊಡಬೇಕೆಂದು ಸರಕಾರವನ್ನು ಆಗ್ರಹಿಸಲಿದ್ದೇವೆ. ಅಲ್ಲದೇ ಅರಣ್ಯ ಸಚಿವ, ನಗರ ಅಭಿವೃದ್ಧಿ ಸಚಿವ, ಡಿಸಿ, ನಗರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಮನವಿ ಮಾಡಲಾಗುವುದು ಎಂದರು.

ಅವಿನಾಶ್ ಕಾಮತ್, ಶರಾವತಿ ರವಿರಾಜ್, ಆಲ್ಫ್ರೆಡ್ ಮೋನಿಸ್ ಬಂಟಕಲ್ ಇದ್ದರು.

ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಳ: ಮಾ.30ರಿಂದ ವರ್ಷಾವಧಿ ಉತ್ಸವ

ಪಡುಬಿದ್ರಿ: ದಕ ಮೊಗವೀರ ಮಹಾಜನ ಸಂಘದ ಆಡಳಿತಕ್ಕೊಳಪಟ್ಟ ಉಚ್ಚಿಲ ಶ್ರೀ ಕ್ಷೇತ್ರ ಉಚ್ಚಿಲ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ವರ್ಷಾವಧಿ ಉತ್ಸವ ಮಾ.30ರಿಂದ ಏ.5ರ ವರೆಗೆ ನಡೆಯಲಿದೆ.

30ರಂದು ಬೆಳಗ್ಗೆ 6ರಿಂದ ಪ್ರಾತಃ ಕಾಲ ಪೂಜೆ, ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ಸಂಜೆ 4 ಗಂಟೆಗೆ ಉಚ್ಚಿಲ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಿಂದ ಕಾಪು ನಾಲ್ಕುಪಟ್ಟ ಮೊಗವೀರ ಮಹಿಳಾ ಮಂಡಳಿಗಳ ವತಿಯಿಂದ ಹೊರೆಕಾಣಿಕೆ ಸಮರ್ಪಣೆ ಹಾಗೂ ದ.ಕ. ಮತ್ತು ಉಡುಪಿ ಮೊಗವೀರ



ಮಹಿಳಾ ಮಹಾಜನ ಸಂಘ ಉಚ್ಚಿಲ ವತಿಯಿಂದ ನಿರ್ಮಿಸಲ್ಪಟ್ಟ ನೂತನ ಚಂದ್ರಮಂಡಲ ರಥ ಸಮರ್ಪಣಾ ಮೆರವಣಿಗೆ ನಡೆಯಲಿದೆ.

31ರಂದು ವಿವಿಧ ಧಾರ್ಮಿಕ ಕಾರ್ಯಕ್ರಮ, ಏ.1ರಂದು ಬೆಳಗ್ಗೆ ಧ್ವಜಾರೋಹಣ, ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ. 2ರಂದು ಧಾರ್ಮಿಕ ಕಾರ್ಯಕ್ರಮ, 3ರಂದು ಮಧ್ಯಾಹ್ನ 12ಕ್ಕೆ ರಥಾರೋಹಣ, ರಾತ್ರಿ 7.30ಕ್ಕೆ ಮಹಾರಥೋತ್ಸವ, ಸುಡುಮದ್ದು ಪ್ರದರ್ಶನ, ಭದ್ರಕಾಳಿ ಅಮ್ಮನವರ ದರ್ಶನ ಸೇವೆ ನೆರವೇರಲಿದೆ.

4ರಂದು ಬೆಳಗ್ಗೆ 9.30ರಿಂದ ತುಲಾಭಾರಾದಿ ಸೇವೆಗಳು, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ರಾತ್ರಿ 7.30ರಿಂದ ಕೆರೆ ದೀಪೋತ್ಸವ, ಧ್ವಜಾವರೋಹಣ, 5ಕ್ಕೆ ಬೆಳಗ್ಗೆ ಮಹಾ ಸಂಪ್ರೋಕ್ಷಣೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ರಾತ್ರಿ ಭದ್ರಕಾಳಿ ಕುರುಜಿ ತರ್ಪಣ ನಡೆಯಲಿದೆ ಎಂದು ದ.ಕ. ಮೊಗವೀರ ಮಹಾಜನ ಸಂಘ ಉಚ್ಚಿಲ, ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಕ್ಷೇತ್ರಾಡಳಿತ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

4 ಕೋ.ರೂ. ವೆಚ್ಚದಲ್ಲಿ 1.5 ಕಿ.ಮೀ. ವ್ಯಾಪ್ತಿಯಲ್ಲಿ ಕೊಡವೂರು ಇಂದ್ರಾಣಿ ನದಿದಂಡೆ ಸಂರಕ್ಷಣಾ ಕಾಮಗಾರಿಗೆ ಶಿಲಾನ್ಯಾಸ

ಇಂದ್ರಾಣಿ ನದಿ ಮಲಿನ ಸಮಸ್ಯೆಗೆ ಶೀಘ್ರ ಪರಿಹಾರ: ಶಾಸಕ ಯಶ್‌ಪಾಲ್



ಉಡುಪಿ: ನಗರಸಭೆ ಕೊಡವೂರು ವಾರ್ಡಿನ ವಿಪ್ರ ಭವನದ ಬಳಿ ಸಣ್ಣ ನೀರಾವರಿ ಇಲಾಖೆಯ ಮೂಲಕ ಸುಮಾರು 4 ಕೋಟಿ ರೂ. ವೆಚ್ಚದಲ್ಲಿ 1.5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಇಂದ್ರಾಣಿ ನದಿದಂಡೆ ಸಂರಕ್ಷಣಾ ಕಾಮಗಾರಿಗೆ ಶಾಸಕ ಯಶ್‌ಪಾಲ್ ಸುವರ್ಣ ಗುದ್ದಲಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಕೊಡವೂರು ಭಾಗದ ಜನತೆಯ ಬಹುದಿನದ ಬೇಡಿಕೆಯಾಗಿರುವ ನದಿದಂಡೆ ಸಂರಕ್ಷಣಾ ಕಾಮಗಾರಿಗೆ ವಿಶೇಷ ಆದ್ಯತೆ ನೀಡಿ ಸಣ್ಣ ನೀರಾವರಿ ಇಲಾಖೆಯ ಮೂಲಕ 4 ಕೋಟಿ ಅನುದಾನ ಒದಗಿಸಿ ಕಾಮಗಾರಿ ಆರಂಭಗೊಂಡಿದ್ದು, ಇಂದ್ರಾಣಿ ನದಿ ತ್ಯಾಜ್ಯ ನೀರಿನಿಂದ ಮಲಿನಗೊಂಡು ಸ್ಥಳೀಯ ಜನರು ಗಂಭೀರ ಸಮಸ್ಯೆ ಎದುರಿಸುತ್ತಿದ್ದು ಈಗಾಗಲೇ 30 ಕೋಟಿ ವೆಚ್ಚದಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಉನ್ನತೀಕರಣ ಕಾಮಗಾರಿ ಪ್ರಗತಿಯಲ್ಲಿದ್ದು ಶೀಘ್ರದಲ್ಲಿಯೇ ಈ ಸಮಸ್ಯೆಗೆ ಪರಿಹಾರ ಒದಗಿಸುವ ಭರವಸೆ ನೀಡಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ನಿಕಟಪೂರ್ವ ನಗರಸಭಾ ಸದಸ್ಯವಿಜಯ ಕೊಡವೂರು ಮಾತನಾಡಿ, ಶಾಸಕ ಯಶ್‌ಪಾಲ್ ಸುವರ್ಣ ಕೊಡವೂರು ವಾರ್ಡಿನ 3 ಕೆರೆಗಳ ಅಭಿವೃದ್ಧಿಗೆ ಸುಮಾರು 2.25 ಕೋಟಿ ಅನುದಾನ ಒದಗಿಸಿದ್ದು ಹಲವು ರಸ್ತೆಗಳ ಅಭಿವೃದ್ಧಿ, ದಾರಿ ದೀಪ ವ್ಯವಸ್ಥೆ ನಮ್ಮ ಕ್ಲಿನಿಕ್ ಸಹಿತ ವಿವಿಧ ಯೋಜನೆಗಳಿಗೆ ವಿಶೇಷ ಸಹಕಾರ ನೀಡಿದ್ದು, ಇಂದ್ರಾಣಿ ನದಿದಂಡೆ ಸಂರಕ್ಷಣಾ ಕಾಮಗಾರಿಗೆ 4 ಕೋಟಿ ಅನುದಾನ ಮಂಜೂರು ಮಾಡಿರುವ ಶಾಸಕರಿಗೆ ವಾರ್ಡಿನ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಈ ಸಂದರ್ಭ ಉಡುಪಿ ನಗರಸಭೆ ನಿಕಟಪೂರ್ವ ಅಧ್ಯಕ್ಷರಾದ ಪ್ರಭಾಕರ ಪೂಜಾರಿ, ಸ್ಥಳೀಯ ಮುಖಂಡರಾದ ರವಿರಾಜ್ ಹೆಗ್ಡೆ, ಕಾಳು ಸೇರಿಗಾರ, ರಾಘವೇಂದ್ರ ರಾವ್, ಹರೀಶ್ ಕೆ. ಕೋಟ್ಯಾನ್, ನಾರಾಯಣ ಬಲ್ಲಾಳ್, ವಿನಯ ಪಡುಕರೆ, ಹರೀಶ್ ಪಾಳೆಕಟ್ಟೆ ಅಮಿತ್ ಗರ್ಡೆ, ವಿನಯ ಗರ್ಡೆ ಉಪಸ್ಥಿತರಿದ್ದರು. ಪ್ರಭಾತ್ ಕೊಡವೂರು ಸ್ವಾಗತಿಸಿ, ರವಿ ಸಾಲ್ಯಾನ್ ಪಾಳೆಕಟ್ಟೆ ವಂದಿಸಿದರು.

> **ಮತ್ತಷ್ಟು ಯೋಜನೆ**
> ಸಣ್ಣ ನೀರಾವರಿ ಇಲಾಖೆಯ ಮೂಲಕ ಸುಮಾರು 4 ಕೋ. ರೂ. ವೆಚ್ಚದಲ್ಲಿ ನದಿ ಸಂರಕ್ಷಣೆಯ ನಿಟ್ಟಿನಲ್ಲಿ ಕಾಮಗಾರಿ ಆರಂಭಗೊಂಡಿದ್ದು, ಶೀಘ್ರ ನದಿಯ ರಕ್ಷಣೆಗೆ ಮತ್ತಷ್ಟು ಯೋಜನೆ ಜಾರಿಗೊಳಿಸಲಾಗುವುದು.
> ● ಯಶ್‌ಪಾಲ್ ಸುವರ್ಣ, ಶಾಸಕ